ಬಲ್ಲಕುಂದೆ ನಾಡಿನ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ ಹಂಪಿ ಶಾಸನಶಾಸ್ತ್ರ ವಿಭಾಗಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಎನ್.ಎಸ್.ಜೈರಾಬಿ

ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ನಿವೃತ್ತ ಪ್ರಾಧ್ಯಾಪಕರು

ಶಾಸನ ಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಶಾಸನ ಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ ೫೮೩ ೨೭೬.

೨೦೦೯

315

ಬಲ್ಲಕುಂದೆ ನಾಡಿನ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ. ಶಾಸನಶಾಸ್ತ್ರ ವಿಭಾಗಕ್ಕೆ ಪಿ.ಹೆಚ್‌ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಎನ್.ಎಸ್.ಜೈರಾಬಿ



ಮಾರ್ಗದರ್ಶಕರು

ಡಾ|| ದೇವರಕೊಂಡಾರೆಡ್ಡಿ

ನಿವೃತ್ತ ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬.

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ,

ಕನ್ನಡವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ – ೫೮೩ ೨೭೬.

೨೦೦೯

ಯೋಗ್ಯತಾ ಪತ್ರ

"ಬಲ್ಲಕುಂದೆ ನಾಡಿನ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿಗೆ ಅರ್ಪಿಸಲೆಂದು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದುದಾಗಿದೆ. ಈ ನಿಬಂಧವು ಸಂಶೋಧಕರು ತಮ್ಮ ಸ್ವಂತ ಸಂಶೋಧನೆಯ ಮೂಲಕ ರೂಪುಗೊಳಿಸಿದುದಾಗಿದೆ. ಈ ನಿಬಂಧದ ವಿಷಯವನ್ನಾಗಲಿ ಅಥವಾ ಇದರ ಯಾವುದೇ ಭಾಗವನ್ನಾಗಲೀ ಈ ಮೊದಲು ಬೇರೆ ಯಾವುದೇ ಪದವಿಗಾಗಲೀ, ಉದ್ದೇಶಗಳಿಗಾಗಲೀ ಒಪ್ಪಿಸಿದ್ದಿಲ್ಲ.

ದೇವರಕೊಂಡಾರೆಡ್ಡಿ

ಸ್ಥಳ : ಕನ್ನಡ ವಿಶ್ವವಿದ್ಯಾಲಯ

ಹಂಪಿ -- ವಿದ್ಯಾರಣ್ಯ.

ದಿನಾಂಕ : 29.10.09

ಪ್ರಮಾಣ ಪತ್ರ

"ಬಲ್ಲಕುಂದೆ ನಾಡಿನ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲಾಗಿದೆ. ಇದು ಡಾ॥ ದೇವರಕೊಂಡಾರೆಡ್ಡಿ ಅವರ ಸಲಹೆ, ಮಾರ್ಗದರ್ಶನ ಮತ್ತು ಸಂಶೋಧನೆಯ ಫಲವಾಗಿ ರೂಪುಗೊಂಡಿದೆ. ಈ ನಿಬಂಧದ ವಿಷಯವನ್ನು ಅಥವಾ ಅದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣ ಮಾಡುತ್ತೇನೆ.

N.S. Jairabi

(ಎನ್.ಎಸ್.ಜೈರಾಬಿ)

ಸ್ಥಳ : ಕನ್ನಡ ವಿಶ್ವವಿದ್ಯಾಲಯ

ಹಂಪಿ – ವಿದ್ಯಾರಣ್ಯ

ದಿನಾಂಕ :

ಮುನ್ನುಡಿ

ಈ ನಿಬಂಧ ರಚನೆಯಲ್ಲಿ ಮಾರ್ಗದರ್ಶಕರಾಗಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿರುವ ಡಾ.ದೇವರಕೊಂಡಾರೆಡ್ಡಿಯವರ ಮಾರ್ಗದರ್ಶನದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ನನ್ನ ಅಧ್ಯಯನದಲ್ಲಿ ಬರೆದಿದ್ದನ್ನು ಓದಿ, ತಿದ್ದಿ, ಅನೇಕ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ನನ್ನ ಅಧ್ಯಯನಕ್ಕೆ ಮಾರ್ಗದರ್ಶನ ಮಾಡಲು ಒಪ್ಪಿ ನಿಬಂಧ ಸಿದ್ಧಪಡಿಸಲು ಶ್ರಮಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ವಿಷಯದ ಆಯ್ಕೆಯಲ್ಲಿ ಸಹಕರಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಡಾ.ವಿ.ಎಸ್.ಬಡಿಗೇರ, ಡಾ. ಸಿ. ಮಹಾದೇವ ಇವರು ಹಾಗೂ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಹಕರಿಸಿದ ಶಾಸನಶಾಸ್ತ್ರ ವಿಭಾಗದ ಡಾ. ಕೆ.ಜಿ.ಭಟ್‌ಸೂರಿ, ಡಾ. ಕಲವೀರ ಮನ್ವಾಚಾರ್, ಡಾ. ಪರಮಶಿವಮೂರ್ತಿ, ಡಾ. ಎಂ.ಕೊಟ್ರೇಶ್, ಕುವೆಂಪು ವಿಶ್ವವಿದ್ಯಾಲಯದ ಪ್ರೊ. ಎಸ್.ಎ.ಬಾರಿ, ಡಾ. ರಾಜಾರಾಮ್ ಹೆಗಡೆ, ಮೈಸೂರು ವಿಶ್ವವಿದ್ಯಾಲಯದ ಡಾ. ಎಂ.ಎಸ್.ಕೃಷ್ಣಮೂರ್ತಿ ಹಾಗೂ ಹಿರಿಯರಾದ ಡಾ. ಅ. ಸುಂದರ ಅವರ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ನಿಬಂಧ ರಚನೆಯಲ್ಲಿ ಅಮೂಲ್ಯ ಸಲಹೆ ಸೂಚನೆ ನೀಡಿ ಬರವಣಿಗೆಯನ್ನು ತಿದ್ದಿದ ಡಾ.ತಿಪ್ಪೇಸ್ವಾಮಿಯವರಿಗೆ ನನ್ನ ಕೃತಜ್ಞತೆಗಳು.

ನನ್ನ ತಂದೆ ಸಾಬ್ಜಾನ್‌ಸಾಬ್, ತಾಯಿ ಅಮೀನಾಬಿ ಇವರ ಆಶೀರ್ವಾದದಿಂದ, ತಮ್ಮಂದಿರಾದ ಆದಮ್ ಮತ್ತು ಅಷಾದುಲ್ಲಾ ಹಾಗೂ ತಂಗಿಯಾದ ರಂಶಾನ್ ಇವರ ಬೆಂಬಲದಿಂದ, ಹಾಗೂ ನನ್ನ ಗಂಡನಾದ ಮೋಹಿನ್ ಇವರ ಬೆಂಬಲದಿಂದ, ನನ್ನ ಮಗಳಾದ ಹಿಮಾಂಷು (ಚಿನ್ನು) ಇವಳ ಪ್ರೀತಿಯ ಸಹಕಾರದಿಂದ ಹಾಗೂ ನನ್ನ ಗೆಳತಿಯಾದ ಜಾಹೆದಾಳ ಸಹಕಾರದಿಂದ ಈ ಅಧ್ಯಯನ ಪೂರ್ಣಗೊಂಡಿದೆ.

ಹಿರಿಯರಾದ ಕಾರ್ಕಳ ಶ್ರೀನಿವಾಸ್ ರವರು ನನ್ನ ಅಧ್ಯಯನಕ್ಕೆ ಸಂಪೂರ್ಣ ಬೆಂಬಲ ನೀಡಿದ್ದಾರೆ. ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ಈ ನಿಬಂಧ ರಚನೆಯಲ್ಲಿ ಇತ್ತೀಚೆಗೆ ದಿವಂಗತರಾದ ಹಾಗೂ ನನ್ನ ಗುರುಗಳಾದ ಡಾ. ಸದ್ಯೋಜಾತ ಸ್ವಾಮೀಜಿ, ದಾವಣಗೆರೆ ಇವರು ನೀಡಿದ ಪ್ರೋತ್ಸಾಹ ಹಾಗೂ ಅವರ ಸಹಾಯಕ್ಕಾಗಿ ಅವರಿಗೆ ನಾನು ಋಣಿಯಾಗಿದ್ದೇನೆ. ಈ ನಿಬಂಧ ರಚನೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನಗೆ ಸಹಾಯ ಮಾಡಿದ ಕಂಪ್ಲಿಯ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಹಾಬಲೇಶ್ವರಪ್ಪ, ಉಪನ್ಯಾಸಕರಾದಂತಹ ಪಂಪಾಪತಿ, ಶಶಿಧರ, ಸತ್ಯನಾರಾಯಣರಾವ್, ಶ್ರೀನಿವಾಸ್‌ಮೂರ್ತಿ, ಶಂಭುಲಿಂಗ, ರಾಜಶೇಖರ, ಪಂಪಾಪತಿ, ಕಂಪ್ಲಿಯ ಪ್ರತಿಭಾವಂತ ಶಿಕ್ಷಕರಾದ ಜಿ.ಸೈಯದ್ ಹುಸೇನ್, ಶಿಕ್ಷಣಪ್ರೇಮಿಗಳಾದ ಬಳ್ಳಾರಿ ಬಸಪ್ಪ ಕಂಪ್ಲಿ, ಪುಷ್ಪಲತ, ಶ್ರೀರಮೇಶ್, ಸಂಶೋಧಕರಾದ ಸರ್ವೋತ್ತಮ ಆಚಾರ್ಯ, ನಿರಂಜನ, ಪ್ರಭು, ಹಾಗೂ ಕಂಪ್ಲಿಯ ಅಕ್ಕಿ ಗಿರಣಿಯ ಮಾಲಿಕರಾದ ಸತ್ಯನಾರಾಯಣ ಬಾಬು, ಎಮ್ಮಿಗನೂರು ಸ್ವಾಮೀಜಿ ಹಾಗೂ ಗಂಗಾವತಿಯ ಶ್ರೀ ಮುಜೀಬುರ್ ರಹೀಮಾನ್ ಇವರಿಗೆ ನನ್ನ ಕೃತಜ್ಞತೆಗಳನ್ನು

ಸಲ್ಲಿಸುತ್ತೇನೆ. ನನ್ನ ಅಧ್ಯಯನಕ್ಕೆ ಸಹಾಯಕರಾದಂತಹ ನಿವೃತ್ತ ರೆವೆನ್ಯೂ ಇನ್ಸ್‌ಪೆಕ್ಟರ್ ಕೆ.ವೆಂಕಟರಾವ್ ಹಾಗೂ ಅವರ ಕುಟುಂಬದವರಿಗೆ ನನ್ನ ಕೃತಜ್ಞತೆಯನ್ನು ತಿಳಿಸುತ್ತೇನೆ.

ಕ್ಷೇತ್ರ ಕಾರ್ಯಗಳಲ್ಲಿ ಸಹಕಾರಿಯಾದಂತಹ ಕುರುಗೋಡಿನ ನಿವೃತ್ತ ಶಿಕ್ಷಕರಾದ ಶ್ರೀ ಕೊಟ್ರಪ್ಪ ಇವರಿಗೆ ಹಾಗೂ ಕಂಪ್ಲಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ರಾಘವೇಂದ್ರ, ಬೀರಪ್ಪ, ಲಾಲ್‌ಸಾಬ್ ಇವರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನಕ್ಕೆ ಪ್ರೋತ್ಸಾಹ ಕೊಟ್ಟಂತಹ ನನ್ನ ನೆಚ್ಚಿನ ಗೆಳತಿಯರಾದ ವನಮಾಲ, ಲಕ್ಷ್ಮಣರಾವ್, ಡಾ॥ ಶೈಲಜಾ, ನಗೀನ, ಖಾದ್ರಿ ಇವರಿಗೆ ನನ್ನ ಕೃತಜ್ಞತೆಗಳು.

ಈ ನಿಬಂಧದ ಬರವಣಿಗೆಯಲ್ಲಿ ಮೈಸೂರಿನ ಸ್ಟೇಟ್ ಆರ್ಕಿಯಾಲಜಿ ಮ್ಯೂಸಿಯಂ ಲೈಬ್ರರಿ, ಮಾನಸ ಗಂಗೋತ್ರಿ ಗ್ರಂಥಾಲಯ, ಬೆಂಗಳೂರಿನ ಮಿಥಿಕ್ ಸೊಸೈಟಿ, ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯದ ಗ್ರಂಥ ಭಂಡಾರಗಳ ನೆರವನ್ನು ಪಡೆಯುವಾಗ ಅಲ್ಲಿನ ಸಿಬ್ಬಂದಿ ನೀಡಿದ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ನಿಬಂಧವನ್ನು ಅಂದವಾಗಿ ಡಿ.ಟಿ.ಪಿ. ಮಾಡಿದ ಗಂಗಾವತಿಯ ದರ್ಪಣ ಕಂಪ್ಯೂಟರ್ಸ್ ಕೇಂದ್ರದ ರವಿರಾಜ್ ವಸ್ತ್ರದ್ ಹಾಗೂ ನರಸಿಂಗರಾವ್ ಕುಲಕರ್ಣಿ ಇವರಿಗೆ ನನ್ನ ಕೃತಜ್ಞತೆಗಳು.

ವಿಷಯ ಸೂಚಿ

ಅಧ್ಯಾಯ ೧

ಅಧ್ಯಯನದ ಅವಶ್ಯಕತೆ

ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಅಂದಿನ 'ನಾಡು'ಗಳು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಿವೆ. ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಅಸ್ತಿತ್ವದಲ್ಲಿದ್ದ ಹಲವಾರು ನಾಡುಗಳ ವಿವರವನ್ನು ನಮ್ಮ ನಾಡಿನ ಶಾಸನಗಳು ಉಲ್ಲೇಖಿಸುತ್ತವೆ. ಅವುಗಳಲ್ಲಿ ಮುಖ್ಯವಾಗಿ ನೊಳಂಬವಾಡಿ ೩೨೦೦೦, ಬನವಾಸೆ ೧೨೦೦೦, ಬಲ್ಲಕುಂದೆ ೩೦೦, ಬಲ್ಲವಾಡಿ ೭೦, ದೊರವದಿ ೭೦, ಕದಂಬಳಿಗೆ ೧೦೦೦, ಕಣೆಯಕಲ್ಲು ೩೦, ಉಚ್ಚಂಗಿ ೩೦, ಕಲ್ಕುಣಿ ನಾಡು, ಕೋಗಳಿ ೫೦೦, ಕೊಟ್ಟೂರು ೧೨, ಪಾಂಡ್ಯನಾಡು, ಬೆಣ್ಣೆಕಲ್ಲು ೧೨, ಜಿಕ್ಕಿಗ ೭೦, ನಾಗರಖಂಡ ಮುಂತಾದವು ಪ್ರಮುಖವಾಗಿವೆ. ಈ ಮೇಲಿನ ನಾಡುಗಳು ನಾಡಿನ ಜನಜೀವನದಲ್ಲಿ ತಮ್ಮದೇ ಆದ ಸಕ್ರಿಯ ಪಾತ್ರವನ್ನು ನಿರ್ವಹಿಸಿವೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಿಗೆ ಇವುಗಳು ನೀಡಿರುವ ಕೊಡುಗೆ ಸ್ಮರಣಾರ್ಹವಾಗಿದ್ದು ಅಧ್ಯಯನ ಯೋಗ್ಯವೆನಿಸಿವೆ.

ಇತರ ನಾಡುಗಳಂತೆ ಬಲ್ಲಕುಂದೆನಾಡು ಸಹಾ ಚರಿತ್ರೆಯಲ್ಲಿ ತನ್ನದೇ ಆದ ವಿಶಿಷ್ಠ ಸ್ಥಾನಮಾನವನ್ನು ಗಳಿಸಿದೆ. ಈ ನಾಡಿನ ಭೌಗೋಳಿಕ ಮೇರೆಗಳು ಇಂದಿನ ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ಗಡಿ ಭಾಗಗಳನ್ನು ಒಳಗೊಂಡಿತ್ತು. ಅಂದರೆ ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳ ಹಾಗೂ ಕರ್ನೂಲ್ ಜಿಲ್ಲೆಯ ಕೆಲ ಭಾಗಗಳನ್ನು ಒಳಗೊಂಡಿತ್ತು. ದಕ್ಕನ್ ಪ್ರಸ್ಥಭೂಮಿಯ ಒಂದು ಭಾಗವಾಗಿರುವ ಈ ಪ್ರದೇಶ ಹೇರಳವಾಗಿ ಧಾರವಾಡ ಶಿಲಾಸ್ತೋಮವನ್ನೊಂದಿದ್ದು ನೈಸರ್ಗಿಕವಾಗಿ ಸಾಕಷ್ಟು ಸುರಕ್ಷಿತವಾದ ಪ್ರದೇಶವಾಗಿದೆ. ಅಲ್ಲದೇ ಬಹು ಫಲವತ್ತಾದ ಈ ಭೂಪ್ರದೇಶದಲ್ಲಿ ಹಾಗೂ ನೈಸರ್ಗಿಕವಾಗಿ ಸುರಕ್ಷಿತವಾಗಿರುವ ಈ ತಾಣದಲ್ಲಿ ಮನುಷ್ಯ ಹಿಂದಿನ ಕಾಲದಿಂದಲೂ ಜೀವಿಸುತ್ತಾ ಬಂದಿದ್ದಾನೆ. ಪ್ರಾಗೈತಿಹಾಸಿಕ ಯುಗದಿಂದ ಐತಿಹಾಸಿಕ ಯುಗದವರೆಗೆ ಬಲ್ಲಕುಂದೆನಾಡಿನ ವಿವಿಧ ಭಾಗಗಳಲ್ಲಿ ಮನುಷ್ಯ ಜೀವಿಸಿ ತನ್ನ ಪಳೆಯುಳಿಕೆಗಳನ್ನು ಬಿಟ್ಟು ಹೋಗಿರುವುದು ಉಲ್ಲೇಖನಾರ್ಹ. ಹಂಪಿ, ಆನೆಗುಂದಿ, ಕುಡತಿನಿ, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಪಳೆಯುಳಿಕೆಗಳು ದೊರೆತಿದ್ದು, ಪ್ರಾಚೀನ ಮಾನವ ಇತಿಹಾಸಕ್ಕೆ ಪುಷ್ಟಿನೀಡುತ್ತವೆ. ಅದೇ ರೀತಿ ಆದಿ ಐತಿಹಾಸಿಕ ಯುಗದಲ್ಲಿ ಆಳ್ವಿಕೆ ಮಾಡಿದ ಎಲ್ಲಾ ರಾಜವಂಶಗಳು ಅಂದರೆ, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಸೇವುಣರು, ಸಿಂಧರು, ವಿಜಯನಗರದ ಅರಸರು, ಪಾಳೇಗಾರರು ಬಲ್ಲಕುಂದೆನಾಡಿನಲ್ಲಿ ಈ ನಾಡಿನ ವಿವಿಧ ಭಾಗಗಳನ್ನು ವಿವಿಧ ಕಾಲಗಳಲ್ಲಿ ಆಳ್ವಿಕೆ ಮಾಡಿ ತಮ್ಮದೇ ಕಾಣಿಕೆಗಳನ್ನು ಬಿಟ್ಟುಹೋಗಿದ್ದಾರೆ. ಆದ್ದರಿಂದ ಬಲ್ಲಕುಂದೆನಾಡಿನ ಸಮಗ್ರ ಅಧ್ಯಯನದ ಚರಿತ್ರೆಯ ವಿವಿಧ

ಕಾಲಘಟ್ಟಗಳಲ್ಲಿ ಬಲ್ಲಕುಂದೆನಾಡು ತನ್ನದೇ ಆದ ಪಾತ್ರ ನಿರ್ವಹಿಸಿದೆ. ಆದ್ದರಿಂದ ಈ ನಾಡಿನ ಸಮಗ್ರ ಅಧ್ಯಯನದ ಅವಶ್ಯಕತೆ ಇದೆ.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ:

ಒಂದು ದೇಶದ ಇತಿಹಾಸವನ್ನು ಒಬ್ಬ ವ್ಯಕ್ತಿ ವಿವರವಾಗಿ, ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟ ಸಾಧ್ಯ. ಆ ಕಾರಣದಿಂದ ಸಂಸ್ಕೃತಿಯನ್ನು ಬಿಡಿಬಿಡಿಯಾಗಿ ತೋರಿಸುವ ನಿಟ್ಟಿನಲ್ಲಿ ಇತಿಹಾಸವನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಲಾಗಿದೆ. ಕರ್ನಾಟಕದ ಚರಿತ್ರೆಯನ್ನು ಅಧ್ಯಯನ ಮಾಡಿರುವ ವಿದ್ವಾಂಸರ ಪ್ರಯತ್ನವನ್ನು ಗಮನಿಸಿದರೆ ಮುಖ್ಯವಾಗಿ ಮೂರು ವಿಧಗಳನ್ನು ಗಮನಿಸಬಹುದು.

೧. ರಾಜ ವಂಶಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ರಾಜಕೀಯ ಇತಿಹಾಸ.

೨. ಕಾಲವನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಇತಿಹಾಸ.

೩. ಸಂಸ್ಕೃತಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಇತಿಹಾಸ.

ಬಲ್ಲಕುಂದೆನಾಡಿನ ಪ್ರಪ್ರಥಮ ಉಲ್ಲೇಖವು ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿ ಕಂಡುಬರುತ್ತದೆ. ರಾಷ್ಟ್ರಕೂಟರ ನಂತರ ಆಳ್ವಿಕೆ ಮಾಡಿದ ಎಲ್ಲಾ ರಾಜವಂಶಗಳು ಪರೋಕ್ಷವಾಗಿ ಇಲ್ಲವೆ ನೇರವಾಗಿ ಈ ಪ್ರದೇಶವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಆಳ್ವಿಕೆ ನಡೆಸಿವೆ. ಒರವಾಯಿ, ಬಳ್ಳಾರಿ, ಕಲ್ಲುಕಂಬ, ಕೊಳಗಲ್ಲು, ಕುಡುತಿನಿ, ನೆಲ್ಲುಡಿ, ಬಲ್ಲಕುಂದೆ, ಮಲ್ಲಯ್ಯನಗುಡ್ಡ, ಸಿರುಗುಪ್ಪ, ತೆಕ್ಕಲಕೋಟೆ, ಕಂಪ್ಲಿ, ಕುರುಗೋಡು, ದರೋಜಿ, ಹಂಪಿ, ಕುಮ್ಮಟದುರ್ಗ, ಆನೆಗುಂದಿ, ರಾರಾವಿ, ಮೊದಲಾದ ಪ್ರದೇಶಗಳು ಬಲ್ಲಕುಂದೆನಾಡಿನ ಪ್ರಮುಖ ಕೇಂದ್ರಗಳಾಗಿದ್ದು ಈ ಪ್ರದೇಶಗಳಲ್ಲಿ ಮತ್ತು ಇತರೆಡೆ ದೊರೆತಿರುವ ಶಾಸನಗಳು ಬಲ್ಲಕುಂದೆನಾಡಿನ ವಿವರಗಳನ್ನು ದಾಖಲಿಸಿವೆ. ಬಲ್ಲಕುಂದೆನಾಡಿಗೆ ಮಾತ್ರ ಸೀಮಿತವಾಗಿರುವ ಈ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

೧. ಬಲ್ಲಕುಂದೆ ನಾಡಿನ ಭೌಗೋಳಿಕ ಮೇರೆಗಳನ್ನು ಗುರುತಿಸುವುದು ಹಾಗೂ ಇಲ್ಲಿನ ಭೌಗೋಳಿಕ ವೈಶಿಷ್ಟ್ಯತೆಗಳು ಮತ್ತು ಪ್ರಭಾವವನ್ನು ಪತ್ತೆಹಚ್ಚುವುದು ವಿಶ್ಲೇಷಿಸುವುದು).

೨. ಈ ನಾಡಿನ ವಿವಿಧ ಭಾಗಗಳಲ್ಲಿರುವ ಪ್ರಾಗೈತಿಹಾಸಿಕ ನೆಲೆಗಳನ್ನು ಒಂದೆಡೆ ದಾಖಲಿಸುವುದು.

೩. ಈ ನಾಡಿನಲ್ಲಿ ರಾಷ್ಟ್ರಕೂಟರಿಂದ ವಿಜಯನಗರದ ಆರಂಭದವರೆಗೆ ಆಳ್ವಿಕೆ ಮಾಡಿದ ವಿವಿಧ ರಾಜ ಮನೆತನಗಳನ್ನು, ಹಾಗೂ ಅವರ ಕಾಲಾವಧಿ, ಅವರ ಸಾಂಸ್ಕೃತಿಕ ಕೊಡುಗೆಗಳನ್ನು ಗುರುತಿಸುವುದು.

೪. ಬಲ್ಲಕುಂದೆ ನಾಡಿನ ಆಡಳಿತ ವ್ಯವಸ್ಥೆ ಆಡಳಿತ ವಿಭಾಗಗಳು ಮತ್ತು ಅವುಗಳ ಮಹತ್ವವನ್ನು ಗುರುತಿಸುವುದು.

೫. ಬಲ್ಲಕುಂದೆ ನಾಡನ್ನು ಕುರಿತು ಲಭ್ಯವಿರುವ ಮಾಹಿತಿಯನ್ನು ಹಾಗೂ ಈ ನಾಡನ್ನು ಉಲ್ಲೇಖಿಸುವ ಶಾಸನಗಳನ್ನು ಪ್ರಾಥಮಿಕವಾಗಿ ಒಂದೆಡೆ ಸಮಗ್ರವಾಗಿ ದಾಖಲಿಸುವುದು ಈ ಸಂಶೋಧನೆಯ ಬಹುಮುಖ್ಯ ಉದ್ದೇಶವಾಗಿದೆ.

೬. ಪ್ರಾಚೀನ ಕಾಲದಿಂದ ವಿಜಯನಗರ ಆರಂಭದ ಕಾಲದವರೆಗಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಪರಿಸ್ಥಿತಿಗಳನ್ನು ಲಭ್ಯ ಆಧಾರಗಳಿಂದ ವಿಶ್ಲೇಷಿಸುವುದು ಈ ಪ್ರಬಂಧದ ಮತ್ತೊಂದು ಮುಖ್ಯ ಉದ್ದೇಶವಾಗಿದೆ. ಸಾಂಸ್ಕೃತಿಕ ಕ್ಷೇತ್ರದ ಭಾಗಗಳಾದ ಕಲೆ ಮತ್ತು ವಾಸ್ತುಶಿಲ್ಪ, ಮೂರ್ತಿಶಿಲ್ಪ, ಈ ನಾಡಿನಲ್ಲಿ ಕಾಲದಿಂದ ಕಾಲಕ್ಕೆ ಯಾವ ರೀತಿ ಬೆಳವಣಿಗೆ ಹೊಂದಿದವು ಮತ್ತು ಅವುಗಳ ಮಹತ್ವವೇನು ಎಂಬುದನ್ನು ದಾಖಲಿಸುವುದು ಸಹಾ ಈ ಸಂಶೋಧನೆಯ ಮತ್ತೊಂದು ಉದ್ದೇಶವಾಗಿದೆ. ಅಲ್ಲದೆ ಸ್ಮಾರಕಗಳ ಅವಿಭಾಜ್ಯ ಅಂಗಗಳಾದ ಕೋಟೆ ಕೊತ್ತಲುಗಳು, ಶಿಲ್ಪಗಳು, ಮೊದಲಾದವುಗಳನ್ನು ಗುರುತಿಸುವುದು. ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

ಈ ಮೇಲಿನ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಬಲ್ಲಕುಂದೆ ನಾಡಿನ ವಿವಿಧ ಭಾಗಗಳಲ್ಲಿ ದೊರೆಯುವ ಶಿಲಾಶಾಸನಗಳನ್ನು ಮತ್ತು ತಾಮ್ರಶಾಸನಗಳನ್ನು ಅಧ್ಯಯನ ಮಾಡಲಾಗಿದೆ. ಅವುಗಳು ಕಂಪ್ಲಿ, ಕುಮ್ಮಟದುರ್ಗ, ದರೋಜಿ, ನಲ್ಲುಡಿ, ಬಳ್ಳಾರಿ, ಸಂಡೂರು, ಕುಡತಿನಿ, ಹಂಪಿ, ಮೊದಲಾದೆಡೆ ದೊರೆಯುತ್ತದೆ. ಇವುಗಳು ನೀಡುವ ಮಾಹಿತಿಯ ಆಧಾರದ ಮೇಲೆ ಬಲ್ಲಕುಂದೆ ನಾಡಿನ ಸಮಗ್ರ ವಿವರವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಪ್ರಾಚೀನ ಕರ್ನಾಟಕದ ಆಡಳಿತದ ವಿಭಾಗಗಳನ್ನು ಕುರಿತು ಕೆಲವಾರು ಅಧ್ಯಯನಗಳು ನಡೆದಿದ್ದರೂ ಬಲ್ಲಕುಂದೆ ನಾಡನ್ನು ಕುರಿತು ಇಲ್ಲಿಯವರೆಗೆ ವ್ಯವಸ್ಥಿತ ಮತ್ತು ಸಮಗ್ರ ಅಧ್ಯಯನ ನಡೆದಿಲ್ಲ. ಸಂಶೋಧಕರಿಂದ ವಿದ್ವಾಂಸರಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಬಲ್ಲಕುಂದೆ ನಾಡನ್ನು ಕುರಿತು ವ್ಯವಸ್ಥಿತ ಅಧ್ಯಯನವು ವಿವಿಧ ದೃಷ್ಟಿಕೋನಗಳಿಂದ ನಡೆಯಬೇಕಾದ ಅಗತ್ಯ ಮತ್ತು ಅವಶ್ಯಕತೆ ಇದೆ. ಬಲ್ಲಕುಂದೆ ನಾಡಿನ ಭೌಗೋಳಿಕ ವಿವರ ಅಲ್ಲಿನ ಅರಸು ಮನೆತನಗಳು ಅಂದಿನ ಆಡಳಿತ ವಿಭಾಗಗಳು ಮತ್ತು ಆ ನಾಡಿನ ಸಂಸ್ಕೃತಿಯ ಮಹತ್ವವನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಈ ಹಿಂದೆಯೇ ಹೇಳಿದಂತೆ ಬಲ್ಲಕುಂದೆ ನಾಡನ್ನು ಕುರಿತು ನಡೆದಿರುವ ಅಧ್ಯಯನಗಳು ಅತ್ಯಲ್ಪ. ನ್ಯೂಬೊಲ್ಡ್, ಫ್ರೆಜರ್, ರಾಬರ್ಟ್‌ಬ್ರೂಸ್‌ಫ್ರೂಟ್, ಯಾಜ್ದಾನಿ, ಜಿ.ಸುಬ್ಬರಾವ್, ಶೇಷಾದ್ರಿಯವರು ಈ ನಾಡಿನ ವಿವಿಧ ಪ್ರಾಗೈತಿಹಾಸಿಕ ನೆಲೆಗಳ ಕುರಿತು ಅನ್ವೇಷಣೆ ಮತ್ತು ಉತ್ಖನನ ಕೈಗೊಂಡು ಅವುಗಳನ್ನು ರಾಜ್ಯ ಮತ್ತು ಪುರಾತತ್ವಇಲಾಖೆಯ ವಾರ್ಷಿಕ ವರದಿಗಳಲ್ಲಿ ಮತ್ತು ಪ್ರತ್ಯೇಕವಾಗಿ ಪುಸ್ತಕಗಳ ಸ್ವರೂಪದಲ್ಲಿ

ಪ್ರಕಟಿಸಿದ್ದಾರೆ. ಅಲ್ಲದೆ ಆಂಧ್ರದ ಗಡಿಭಾಗದ ಶಾಸನಗಳನ್ನು ಹೈದರಾಬಾದ್ ಆರ್ಕಿಯಾಲಾಜಿಕಲ್ ಸಿರೀಸ್ ಮತ್ತು ಆಂಧ್ರಪ್ರದೇಶದ ಗೌರ್ನಮೆಂಟ್ ಆರ್ಕಿಯಾಲಾಜಿಕಲ್ ಸಿರೀಸ್‌ಗಳಲ್ಲಿ ಪ್ರಕಟಿಸಲಾಗಿದೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿಯ ಈ ಭಾಗದ ಶಾಸನಗಳನ್ನು ಡಾ. ದೇವರಕೊಂಡಾರೆಡ್ಡಿಯವರು ಸಂಪಾದಿಸಿ ಕನ್ನಡ ವಿಶ್ವವಿದ್ಯಾಲಯ ಹೊರ ತಂದಿರುವ ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಯ ಶಾಸನ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಅದೇ ರೀತಿ ಡಾ.ಸಿ.ಎಸ್.ಪಾಟೀಲ್ ಮತ್ತು ವಿನೋದಾ ಪಾಟೀಲ್ ರಚಿಸಿರುವ ರಾಯಚೂರು ಜಿಲ್ಲೆಯ ಶಾಸನಗಳು ಎಂಬ ಗ್ರಂಥದಲ್ಲಿ ಕೆಲ ಶಾಸನಗಳ ಸಾರಾಂಶವನ್ನು ಪ್ರಕಟಿಸಲಾಗಿದೆ. ಹಾಗೆಯೇ ಅನ್ನ್ಯೂಯಲ್ ರಿಪೋರ್ಟ ಆಫ್ ಸೌತ್ ಇಂಡಿಯನ್ ಎಫಿಗ್ರಫಿ, ಹಾಗೂ ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ ಮತ್ತು ಇಂಡಿಯನ್ ಆಂಟಿಕ್ವೇರಿಯಲ್ಲಿ ಕೆಲ ಶಾಸನಗಳನ್ನು ಪ್ರಕಟಿಸಲಾಗಿದೆ. ಡಾ.ಬಾಲಸುಬ್ರಮಣ್ಯ ಮತ್ತು ಇತರರು ಸೇರಿ ಸಂಪಾದಿಸಿರುವ 'ಕುರುಗೊಡು' ಕೃತಿಯಲ್ಲಿ ಕುರುಗೋಡಿನ ವಿವರಗಳಿವೆ. ಅಲ್ಲದೇ 'ಕುರುಗೋಡುಸಿಂಧ'ರು ಕೃತಿಯಲ್ಲಿ ಸಿಂಧರ ಕುರಿತು ವಿವರಿಸಲಾಗಿದೆ. ಇವುಗಳಲ್ಲದೆ ಪತ್ರಿಕೆಗಳಲ್ಲಿ ಸಂಸ್ಮರಣಗ್ರಂಥಗಳಲ್ಲಿ, ಇತಿಹಾಸದರ್ಶನ, ಕರ್ನಾಟಕ ಭಾರತಿ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಗಳಲ್ಲಿ ಬಲ್ಲಕುಂದೆ ನಾಡಿಗೆ ಸಂಬಂಧಿಸಿದಂತೆ ಅಪರೋಕ್ಷ ಮಾಹಿತಿ ನೀಡುವ ಕೆಲ ಲೇಖನಗಳಿವೆ. ಇವುಗಳನ್ನು ಹೊರತುಪಡಿಸಿದರೆ ಮತ್ತೆಲ್ಲಿಯೂ ಈ ನಾಡಿನ ಕುರಿತು ವ್ಯವಸ್ಥಿತ ಅಧ್ಯಯನ ನಡೆದಿಲ್ಲ. ಬಲ್ಲಕುಂದೆ ನಾಡು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ್ದು, ವ್ಯಾಪಕ ಸಮೀಕ್ಷೆ ನಡೆಯಬೇಕಿದೆ. ಇತರೆ ಆಡಳಿತ ವಿಭಾಗಗಳಿಗೆ ಹೋಲಿಸಿದರೆ ಬಲ್ಲಕುಂದೆ ನಾಡು ಸ್ವಲ್ಪಮಟ್ಟಿಗೆ ಭಿನ್ನತೆ ಹೊಂದಿದ್ದು, ಈ ವಿಭಿನ್ನತೆಯ ಕಾರಣಗಳನ್ನು ಹುಡುಕುವ ಅಗತ್ಯವಿದೆ. ಈ ನಾಡು ಕಾಲದಿಂದ ಕಾಲಕ್ಕೆ ಯಾವ ರೀತಿ ಬೆಳವಣಿಗೆಯಾಯಿತು ಎಂಬುದನ್ನು ತಾರ್ಕಿಕವಾಗಿ ವಿಶ್ಲೇಷಿಸಬೇಕಾದ ಆವಶ್ಯಕತೆ ಇದೆ.

ವರದಿಗಳು, ಗೆಜೆಟಿಯರ್‌ಗಳು ಹಾಗೂ ಪ್ರಕಟಿತ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ವಿದ್ವಾಂಸರ ಸಲಹೆಯ ಮೇರೆಗೆ ಕ್ಷೇತ್ರಕಾರ್ಯ ಮಾಡಬೇಕಾದ ಬಲ್ಲಕುಂದೆ ನಾಡಿನ ಸ್ಥಳಗಳನ್ನು ಮೊದಲಿಗೆ ಗುರುತಿಸಿಕೊಳ್ಳಲಾಯಿತು. ಅದರಲ್ಲಿ ಊರು, ತಾಲೂಕು, ಜಿಲ್ಲೆ, ಶಾಸನವಿವರ, ದೇವಾಲಯ ಮೂರ್ತಿಶಿಲ್ಪದವಿವರ, ಇತರೆ ಸ್ಮಾರಕಗಳ ವಿವರ, ಪ್ರಕಟಿತವಿವರ ಮೊದಲಾದ ವಿವರವಿರುವ ಪ್ರ-ಪತ್ರವೊಂದನ್ನು ತಯಾರಿಸಿಕೊಂಡು ವಿವಿಧ ಸ್ಥಳಗಳಿಗೆ ಭೇಟಿನೀಡಿ ಅದರಲ್ಲಿ ಮಾಹಿತಿಯನ್ನು ಭರ್ತಿಮಾಡಿಕೊಳ್ಳಲಾಯಿತು. ಹಾಗೂ ಅಪ್ರಕಟಿತವಾಗಿರುವ ಕೆಲ ಶಾಸನಗಳನ್ನು ಗಮನಿಸಲಾಗಿದೆ. ಅಲ್ಲದೆ ಕ್ಷೇತ್ರ ಕಾರ್ಯದ ವೇಳೆ ಅವಶ್ಯಕವಾಗಿರುವ ಶಾಸನಗಳು ಮತ್ತು ಸ್ಮಾರಕಗಳು ದೇವಾಲಯ ಕೋಟೆ, ಮೂರ್ತಿ, ಶಿಲ್ಪ ಇತರೆ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಪ್ರಕಟಿತ ಗ್ರಂಥಗಳಿಂದ ಈ ಮೊದಲು ಸಂಗ್ರಹಿಸಲಾಗಿದ್ದು ಹೆಚ್ಚಿನ ಮಾಹಿತಿಯನ್ನು ಕ್ರೋಢೀಕರಿಸಿ ತಾತ್ವಿಕವಾಗಿ

ಚರ್ಚಿಸಿ ಈ ಪ್ರಬಂಧವನ್ನು ಅಂತಿಮವಾಗಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಅಂತ್ಯದಲ್ಲಿ ಇದಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರಗಳನ್ನು, ನಕ್ಷೆಗಳನ್ನು ನೀಡಲಾಗಿದೆ.

ಅಧ್ಯಾಯ ೨

ಬಲ್ಲಕುಂದೆ ನಾಡಿನ ಭೂಮೇಲ್ಮೈ ಲಕ್ಷಣ ಮತ್ತು ಪರಿಸರ

ಅಧ್ಯಾಯ ೨

ಬಲ್ಲಕುಂದೆ ನಾಡಿನ ಭೂ ಮೇಲ್ಮೈ ಲಕ್ಷಣ ಮತ್ತು ಪರಿಸರ

ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳಲ್ಲಿ ಬಲ್ಲಕುಂದೆ ನಾಡು ಒಂದಾಗಿದ್ದು, ಅತ್ಯಂತ ಪ್ರಮುಖವೆನಿಸಿದೆ. ಅದನ್ನು ಸುತ್ತಲಿನ ಪ್ರಾದೇಶಿಕ ಇತಿಹಾಸದ ಚೌಕಟ್ಟಿನಲ್ಲಿಟ್ಟು ನೋಡಿದಾಗ ಅದರ ಚಾರಿತ್ರಿಕ ಮಹತ್ವವನ್ನು ತಿಳಿಯಬಹುದಾಗಿದೆ. ಬಲ್ಲಕುಂದೆ ನಾಡು ರಾಷ್ಟ್ರಕೂಟರ ಕಾಲಾವಧಿಯಲ್ಲಿ ಅಸ್ತಿತ್ವಕ್ಕೆ ಬಂದು ವಿಜಯನಗರದ ಆರಂಭದ ವರೆಗೆ ತನ್ನದೇ ಆದ ಪಾತ್ರ ನಿರ್ವಹಿಸಿದೆ. ಬಲ್ಲಕುಂದೆಯು ಪ್ರಸ್ತುತ ಒಂದು ಸಣ್ಣ ಹಳ್ಳಿಯಾಗಿದ್ದು ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಸಮೀಪದಲ್ಲಿದೆ. ಈ ಕುಗ್ರಾಮವು ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಬಲ್ಲಕುಂದೆ-೩೦೦ರ ಆಡಳಿತದ ಕೇಂದ್ರವಾಗಿ ಕಾರ್ಯನಿರ್ವಹಿಸಿರುವುದು ಗಮನಾರ್ಹ. ಇದು ನೊಳಂಬವಾಡಿ ೩೨೦೦೦ ಪ್ರದೇಶದಲ್ಲಿ ಅಂತರ್ಗತವಾಗಿತ್ತು. ಬಲ್ಲಕುಂದೆ ಎಂಬ ಹೆಸರು ಹೇಗೆ ಪ್ರಾಪ್ತವಾಯಿತು ಎಂಬುದರ ಕುರಿತು ಸ್ಥಳೀಯರಲ್ಲಿ ಅನೇಕ ಐತಿಹ್ಯಗಳು ಮತ್ತು ಕಥೆಗಳು ಪ್ರಚಲಿತದಲ್ಲಿವೆ. ಅವುಗಳಲ್ಲಿ ಒಂದು ಇಂತಿದೆ. 'ಬಲ್ಲಯ್ಯ' ಎಂಬಾತನು ಹಿಂದೆ ಗ್ರಾಮಕ್ಕೆ ನುಗ್ಗಿದ ದರೋಡೆಕೋರರನ್ನು ತನ್ನ ಯುಕ್ತಿಯಿಂದ ಕೊಂದುಹಾಕಿ ಆ ಗ್ರಾಮದ ಜನರ ಮಾನ ಪ್ರಾಣಗಳನ್ನು ರಕ್ಷಿಸಿದನಂತೆ! ಆತನ ನೆನಪಿಗಾಗಿ ಬಲ್ಲಕುಂದೆ ಎಂಬ ಹೆಸರನ್ನು ಆ ಗ್ರಾಮಕ್ಕೆ ಇಡಲಾಗಿದೆ.[೧]

ಪ್ರಸ್ತುತ ಬಲ್ಲಕುಂದೆಯು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆಯ ಸಮೀಪವಿದ್ದು ಸಮುದ್ರಮಟ್ಟಕ್ಕಿಂತ ೬೦೭.೨೬ ಮೀಟರ್ ಎತ್ತರದಲ್ಲಿದೆ. ಹಗರಿ ನದಿ ದಡದಲ್ಲಿದ್ದು ೧೫.೨೮° ಅಕ್ಷಾಂಶ ಮತ್ತು ೭೫.೫೯° ರೇಖಾಂಶದಲ್ಲಿದೆ. ಈ ಗ್ರಾಮವು ಬಯಲು ಹಾಗೂ ಸಮತಲದಲ್ಲಿರುವುದರಿಂದ ವರ್ಷದ ಬಹುಕಾಲ ಒಣ ಹವೆಯಿಂದ ಕೂಡಿರುತ್ತದೆ. ಜನವರಿ ಕೊನೆಯಿಂದ ಪ್ರಾರಂಭವಾಗುವ ಬೇಸಿಗೆಯ ತಾಪಮಾನ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಅತಿ ಹೆಚ್ಚು ಇರುತ್ತದೆ. ೮೮.೩° ಫ್ಯಾರನ್‌ಹೀಟ್‌ನಷ್ಟು ವರ್ಷದ ಸರಾಸರಿ ಉಷ್ಣಾಂಶವಿರುತ್ತದೆ. ಇಲ್ಲಿ ೫೦% ಸಾಪೇಕ್ಷ ಆದ್ರತೆಯು ಮಾರ್ಚ್ ತಿಂಗಳಿನಲ್ಲಿರುತ್ತದೆ. ಆದರೆ ಜುಲೈ, ಆಗಸ್ಟ್‌ನಲ್ಲಿ ೮೦% ವರೆಗೂ ಏರುತ್ತದೆ. ಜೂನ್ ತಿಂಗಳಿಂದ ಮಳೆಗಾಲ ವಾಸ್ತವಿಕವಾಗಿ ಆರಂಭವಾದರೂ ಜುಲೈ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಮಳೆಯಾಗಿ ಅಕ್ಟೋಬರ್ ವರೆಗೆ ಸಾಮಾನ್ಯವಾಗಿ ಮಳೆ ಬರುತ್ತದೆ.

ಸುಮಾರು ೬೫೦ ಗ್ರಾಮಗಳನ್ನು ಇಂದು ಒಳಗೊಂಡಿರುವ ಬಲ್ಲಕುಂದೆ ನಾಡನ್ನು ಪೂರ್ವದಲ್ಲಿ ಹಗರಿನದಿಯೂ ಅಥವಾ ಸಿಂಧವಾಡಿ ನಾಡು, ಆದವಾನಿ ೫೦೦ ನಾಡು, ಕೊಪ್ಪಳ ಜಿಲ್ಲೆಯ ಗಂಗಾವತಿ, ಸಿಂಧನೂರು ಪ್ರದೇಶ ಅಥವಾ ತುಂಗಭದ್ರಾ ನದಿ; ದಕ್ಷಿಣಕ್ಕೆ ಕದಂಬಳಿಗೆ

೧೦೦೦, ಹಡವಗಳೆ ೫೦೦, ಪಶ್ಚಿಮಕ್ಕೆ ಕೋಗಳಿ ೫೦೦ ರ ಗಡಿ ಅಥವಾ ಲೋಹಾದ್ರಿ ಸಾಲು; ಉತ್ತರಕ್ಕೆ ರಾಯಚೂರು ಗಡಿಭಾಗಗಳಿಂದ ಸುತ್ತುವರೆದಿದೆ.[೨]

ಪ್ರಾಚೀನ ಬಲ್ಲಕುಂದೆ ನಾಡಿನ ಭೌಗೋಳಿಕ ಪ್ರದೇಶದಡಿಯಲ್ಲಿ ಇಂದು ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕು, ಹೊಸಪೇಟೆ ತಾಲೂಕು ಹಾಗೂ ಸಂಡೂರು ತಾಲೂಕು, ಸಿರುಗುಪ್ಪ ತಾಲೂಕು ಮತ್ತು ಕೂಡ್ಲಿಗಿ ತಾಲೂಕಿನ ಕೆಲ ಆಯ್ದ ಭಾಗಗಳು ಹಾಗೂ ಇಂದಿನ ಆಂದ್ರಪ್ರದೇಶದ ರಾಯದುರ್ಗ ತಾಲೂಕುಗಳು ಬರುತ್ತವೆ. ಈ ನಾಡಿನ ಪ್ರಮುಖ ನದಿ ತುಂಗಭದ್ರ ಆಗಿದ್ದರೂ ಸಹ ಹಗರಿ ನದಿಯು ತನ್ನದೇ ಆದ ಚಿಕ್ಕ ಹಗರಿ ಎಂಬ ಉಪನದಿಗಳನ್ನು ಹೊಂದಿದೆ. ಅಲ್ಲದೆ ದೊಡ್ಡ ಹಳ್ಳಗಳಾದ "ಪೆದ್ದವಂಕ, ಹಗರಿ, ನಾರಿಹಳ್ಳಗಳು ರೈತರ ಜೀವನಾಡಿಗಳಾಗಿವೆ. ತುಂಗಭದ್ರಾನದಿ ಮತ್ತು ಆ ಆಣೆಕಟ್ಟೆಯಿಂದ ಪ್ರವಹಿಸುವ ಬಲದಂಡೆ ಮತ್ತು ಇತರೆ ವಿಜಯನಗರದ ಕಾಲುವೆಗಳಿಂದ ಹೊಸಪೇಟೆ ಮತ್ತು ಸಿರಗುಪ್ಪ ತಾಲೂಕಿನ ಭೂಮಿಗೆ ನೀರು ಸಿಗುತ್ತದೆ. ತುಂಗಭದ್ರ ನದಿಯ ಯೋಜನೆಗೆ ಒಳಪಟ್ಟ ಈ ಪ್ರದೇಶದಲ್ಲಿ ಆ ನದಿಯ ಕಾಲುವೆಗಳು ಕೆಲವು ಆಯ್ದ ಭಾಗಗಳಲ್ಲಿ ಹರಿಯುತ್ತವೆ. ಅಲ್ಲದೆ ಇಲ್ಲಿರುವ ಪ್ರಾಚೀನ ಮತ್ತು ಆಧುನಿಕ ಕೆರೆಗಳು ಇಲ್ಲಿನ ಭೂಮಿಗೆ ನೀರು ಒದಗಿಸುತ್ತಿವೆ. ಈ ಭಾಗದಲ್ಲಿ ಕಮಲಾಪುರ, ದರೋಜಿ, ಕುಡತಿನಿ, ಕಣೇಕಲ್, ರಾಯದುರ್ಗ, ತೆಕ್ಕಲಕೋಟೆ, ಮುಂತಾದೆಡೆ ಪ್ರಾಚೀನ ಕೆರೆಗಳಿದ್ದು ಅವು ರೈತರಿಗೆ ಸಹಕಾರಿಯಾಗಿವೆ.

ಇಷ್ಟೆಲ್ಲ ಜಲಸಂಪತ್ತನ್ನು ಹೊಂದಿದ ಈ ಪ್ರದೇಶ ಪ್ರಾಗೈತಿಹಾಸಿಕ ಕಾಲದಿಂದಲೂ ಜನರಿಗೆ ಅವಶ್ಯಕವಾಗಿದ್ದ ನೀರನ್ನು (ಜೀವಸೆಲೆ) ಒದಗಿಸುತ್ತ ಬಂದಿದೆ. ಪರಿಣಾಮವಾಗಿ ಇಲ್ಲಿನ ನದಿ, ಹಳ್ಳ, ಕೆರೆಗಳ ಸನಿಹದಲ್ಲಿ ಪ್ರಾಗೈತಿಹಾಸಿಕ ಕಾಲದ ಜನವಸತಿ ತಾಣಗಳೂ ಕಂಡುಬಂದಿವೆ. ಪ್ರಕೃತಿಯ ಅಧೀನದಲ್ಲಿ ಬದುಕುತ್ತಿದ್ದ ಮಾನವನಿಗೆ ಶಿಲಾಯುಧಗಳನ್ನು ತಯಾರಿಸಲು ಉಪಯುಕ್ತವಾದ ಹುಂಡೆ ಕಲ್ಲುಗಳು ಸಹ ನದಿಯ ಇಕ್ಕೆಲಗಳಲ್ಲಿ ಸ್ವಾಭಾವಿಕವಾಗಿ ದೊರೆಯುತ್ತಿದ್ದುದರಿಂದಾಗಿ ಪ್ರಾಗೈತಿಹಾಸಿಕ ಕಾಲದ ಮನುಷ್ಯ ನದಿ ದಂಡೆಗಳಲ್ಲಿ ಇಲ್ಲವೇ ಹಳ್ಳ ಕೊಳ್ಳಗಳ ದಡದಲ್ಲಿ ಸಹಜವಾಗಿ ವಾಸಿಸಲು ಆರಂಭಿಸಿದನು. ಈ ನಾಡಿನ ವಿವಿದೆಡೆ ಈ ಕುರಿತು ಮಾಹಿತಿಗಳು ದೊರೆಯುತ್ತವೆ.[೩] ಹಾಗೆಯೇ ಈ ಭಾಗದಲ್ಲಿ ಅನೇಕ ರಾಜವಂಶಗಳು ಆಳ್ವಿಕೆ ನಡೆಸಿ ಅಳಿದು ಹೋಗಿವೆ. ಅಲ್ಲದೆ ಸಂಸ್ಕೃತಿಯ ಪ್ರತೀಕಗಳಾದ ದೇವಾಲಯಗಳನ್ನು ನದಿಯ ಇಲ್ಲವೆ ಕೆರೆಯ ದಂಡೆಯ ಮೇಲೆ ಕಟ್ಟಿಸಿ ಮುಂದಿನ ಜನಾಂಗಕ್ಕೆ ಕಲಾ ಕಾಣಿಕೆಯಾಗಿ ಬಿಟ್ಟುಹೋಗಿದ್ದಾರೆ.

ಹೊಸಪೇಟೆ ಮತ್ತು ಸಂಡೂರು ತಾಲೂಕುಗಳಲ್ಲಿ ಸಂಡೂರು ಬೆಟ್ಟ ಶ್ರೇಣಿ ಮತ್ತು ಕಂಪ್ಲಿ ಬೆಟ್ಟ ಶ್ರೇಣಿಗಳು ಇದ್ದು ಸರಳ ರೇಖೆಯಂತಿವೆ. ಸಂಡೂರು ತಾಲೂಕಿನ ಕುಮಾರಸ್ವಾಮಿ ಬೆಟ್ಟವು ಸಮುದ್ರ ಮಟ್ಟಕ್ಕಿಂತ ೩೪೦೦ ಅಡಿ ಅಷ್ಟು ಎತ್ತರವಾಗಿದೆ. ಅದೇ ರೀತಿ ಇಲ್ಲಿರುವ ರಾಮನಮಲೆ ಬೆಟ್ಟವು ೩೨೫೬ ಅಡಿ ಎತ್ತರದಲ್ಲಿದೆ. ಜಂಬುನಾಥ ಗುಡ್ಡವು ೨೯೮೦ ಅಡಿ ಎತ್ತರದಲ್ಲಿದೆ. ಅದೇ ರೀತಿ

ಮಲ್ಲಪ್ಪನ ಬೆಟ್ಟ ೩೧೭೭ ಅಡಿ ಎತ್ತರವಿದ್ದರೆ, ಕಲ್ಲಹಳ್ಳಿ ಗುಡ್ಡವು ೨೮೦೦ ಅಡಿ ಎತ್ತರವಿದೆ. ಬಳ್ಳಾರಿ ಬಳಿ ಕಾಪರ್ ಬೆಟ್ಟ (Copper Mountain) ೩೨೮೫ ಅಡಿಯಷ್ಟು ಎತ್ತರವಿದ್ದು, ಹೊಸಪೇಟೆ ತಾಲೂಕಿನ ದರೋಜಿ ಮಾರ್ಗವಾಗಿ ಮುಂದುವರೆಯುತ್ತದೆ. ಆಲೂರು ತಾಲೂಕಿನ ಕೆಂಚನ ಗುಡ್ಡವು ಹಳೆಕೋಟೆ ಮಾರ್ಗವಾಗಿ ಮುಂದುವರೆಯುತ್ತದೆ. ಇಲ್ಲಿರುವ ಹರೀಕೇರ ಬೆಟ್ಟವು ೨೧೨೭ ಅಡಿ ಎತ್ತರವಾಗಿದ್ದು, ರಾಮದುರ್ಗ ಬೆಟ್ಟ ಶ್ರೇಣಿಗೆ ಹೊಂದಿಕೊಂಡಂತಿದೆ. ಇವುಗಳಲ್ಲದೆ 'ಕೂಸಗಿ' ಬೆಟ್ಟ ಶ್ರೇಣಿ, ಕೆಂಚಗಾರಗುಡ್ಡ, ಕೆಂಚಗಾರ ಬೆಳಗಲ್ಲು ಗುಡ್ಡ, ಹತ್ತಿ ಬೆಳಗಲ್ಲು ಗುಡ್ಡ, ಹೊಳಲುಗುಂದಿ ಬೆಟ್ಟ, ರಾಮದುರ್ಗ, ಚಿಪ್ಪರಗೀ ಹಿಸನ ಬೆಟ್ಟಗಳಿವೆ. ಅಲ್ಲದೇ ನೈಸರ್ಗಿಕವಾಗಿ ಇಷ್ಟೆಲ್ಲ ಬೆಟ್ಟಗುಡ್ಡಗಳನ್ನು ಹೊಂದಿರುವ ಈ ಭಾಗವು ಪ್ರಾಚೀನ ಆರ್ಕಿಯನ್ ಪ್ರದೇಶಕ್ಕೆ ಸೇರಿದ್ದು [೪] ಹಲವು ರೀತಿಯ ಖನಿಜ ಸಂಪತ್ತು ಹಾಗೂ ಶಿಲಾಸಂಪತ್ತನ್ನು ಹೊಂದಿದೆ. ಇಲ್ಲಿನ ಶಿಲೆಯನ್ನು ಧಾರವಾಡ ಶಿಲಾವರ್ಗ ಮತ್ತು 'ಜಿರಾಸಿಕ್' ಶಿಲಾವರ್ಗವೆಂದು ಎರಡು ಭಾಗ ಮಾಡಬಹುದು.[೫]

ಈ ಮೇಲಿನ ಬೆಟ್ಟಗಳಲ್ಲಿ ಗ್ರಾನೈಟ್ ಶಿಲೆ ಹೇರಳವಾಗಿ ದೊರೆಯುತ್ತಿದೆ. ಹೊಸಪೇಟೆ ತಾಲೂಕಿನ ಹಂಪಿ, ದರೋಜಿ ಮುಂತಾದೆಡೆ ಕಂದು ಗ್ರಾನೈಟ್ ಹೆಚ್ಚಾಗಿ ದೊರೆಯುತ್ತದೆ. ಬಳ್ಳಾರಿ ಬಳಿಯ ಬೆಟ್ಟಗಳಲ್ಲಿ ಸಿರುಗುಪ್ಪದ ಆಸುಪಾಸಿನಲ್ಲಿ ಉತ್ತಮ ಗ್ರಾನೈಟ್ ದೊರೆಯುತ್ತದೆ. ಕಲ್ಲಹಳ್ಳಿ ಮತ್ತು ಕುಂಚೂರುಗಳಲ್ಲಿ ಸ್ಪಟಿಕಾಂತರ ಅಥವಾ ಬೆಣಚುಶಿಲೆ (Quartzite) ದೊರೆಯುತ್ತದೆ. ಆದೋನಿ, ಆಲೂರು, ಕಣೆಕಲ್ಲು, ರಾಯದುರ್ಗಗಳಲ್ಲಿ ಕಾಂಗ್ಲಾಮರೈಟ್, ಡೊಲರೈಟ್ ಡೈಕ್ (ಕಪ್ಪು ಶಿಲೆ) ದೊರೆಯುತ್ತವೆ. ಅದೇ ರೀತಿ ಕೊಳೂರು, ಸಿರಿಗೇರಿ, ಕೊಂಚಿಗೇರಿ, ಕೊತ್ತಲಚಿಂತೆ, ಕಣೆಕಲ್, ವೀರಾಪುರ, ಹರಿವರಂ, ಬಂದರಾಳ, ಹೆಬಟ್ಟಂ, ಕುರುಕುಂದ, ಕರಡಿಗುಡ್ಡಗಳಲ್ಲಿ ವಾಲ್ಕಾನಿಕ್‌ರಾಕ್ಸ್ (ಅಗ್ನಿಜನ್ಯಶಿಲೆ), ಸುಣ್ಣದ ಕಲ್ಲು, ಸೋಫು ಸ್ಟೋನ್ಸ್ (ಬಳಪಕಲ್ಲಿನ ಜಾತಿಶಿಲೆ) ಅಲ್ಲದೆ ಉತ್ತಮ ಗುಣಮಟ್ಟದ ಜೇಡಿ ಮಣ್ಣು ದೊರೆಯುತ್ತದೆ.

ಸಂಡೂರು ಸಮೀಪದ ರಾಮದುರ್ಗ, ತುಣಸಿಗೇರಿ, ಕಣಿವಿಹಳ್ಳಿ, ಕುಮಾರಸ್ವಾಮಿ ಬೆಟ್ಟದ ಆಸುಪಾಸುಗಳಲ್ಲಿ ತಾಮ್ರ ನಿಕ್ಷೇಪವಿದೆ. ಅಲ್ಲದೆ ಮ್ಯಾಂಗನೀಸ್ ಡೈಆಕ್ಸೈಡ್, ಟೈಟಾನಿಯಂ ಅದಿರು ದೊರೆಯುತ್ತದೆ. ಅಲ್ಲದೆ ಇದರ ಸಮೀಪವೆ ಸುರಂಗ ಭರಡಿಯಲ್ಲಿ ಬಂಗಾರದ ನಿಕ್ಷೇಪವಿದೆ.[೬]

ಇದೇ ತಾಲೂಕಿನ ತೋರಣಗಲ್ಲು, ವಡ್ಡರಹಳ್ಳಿ, ವಲ್ಲಭಾಪುರ, ಕಲ್ಲಿಹಳ್ಳಿ ಹಾಗೂ ಹೊಸಪೇಟೆ ತಾಲೂಕಿನ ಜಂಬುನಾಥ ಬೆಟ್ಟ, ಕಾರಿಗನೂರ, ಸಂಕಲಾಪುರ, ಮರಿಯಮ್ಮನಹಳ್ಳಿ, ಕಣಿವೆ ವೀರಭದ್ರ ಬೆಟ್ಟ ಮೊದಲಾದೆಡೆ ಕಬ್ಬಿಣದ ಅದಿರು ಹೇರಳವಾಗಿ ದೊರೆಯುತ್ತದೆ.

ಬಲ್ಲಕುಂದೆ ನಾಡಿನ ಬಹುತೇಕ ಭಾಗವು ಬಯಲು ಪ್ರದೇಶದಿಂದ ಕೂಡಿದ್ದರು ಸಹ ಸುಮಾರು ೧೫ ಸಾವಿರ ಹೆಕ್ಟೇರ್‌ನಷ್ಟು ಅರಣ್ಯವಿದೆ. ಸಂಡೂರು ತಾಲೂಕು ಕರ್ನಾಟಕದ

ಕಾಶ್ಮೀರವೆಂದು ಹೆಸರು ಪಡೆದಿದ್ದು, ಈ ಭಾಗದ ಅರಣ್ಯದಲ್ಲಿ ಬೀಟೆ, ತೇಗ, ಹೊನ್ನೆ, ಬಿದಿರು, ದಿಂಡಿಗ ಮತ್ತು ಅಲ್ಪಸ್ವಲ್ಪ ಶ್ರೀಗಂಧ ಮರಗಳು ಬೆಳೆಯುತ್ತವೆ. ಉಳಿದಂತೆ ಬೇವು, ಕುರುಚಲಗಿಡಗಳು, ಹುಲ್ಲು ಹೆಚ್ಚಾಗಿ ಈ ಭಾಗದಲ್ಲಿ ಬೆಳೆಯುತ್ತವೆ. ಈ ನಾಡಿನ ಅರಣ್ಯವು ಕಾಗದ, ಗಂಧ, ಬೆಂಕಿಕಡ್ಡಿ ಕಾರ್ಖಾನೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಪೂರೈಸುತ್ತವೆ. ಅಲ್ಲದೆ ಕಟ್ಟಡ ನಿರ್ಮಾಣಕ್ಕೆ ಬೇಕಾದ ಮರ ಮುಟ್ಟು, ಉರುವಲು ಕಟ್ಟಿಗೆ, ಬಂಬುಗಳು ಮತ್ತು ಬೆತ್ತಗಳು ಇಲ್ಲಿನ ಅರಣ್ಯದ ಇತರೆ ಪ್ರಮುಖ ಉತ್ಪಾದನೆಗಳು ಆಗಿವೆ. ಬೀಡಿ ಎಲೆ, ಎಣ್ಣೆ ಬೀಜ, ಹುಣಸೆ ಹಣ್ಣು, ಹಾಲುವಣ, ಸಿಗೇಕಾಯಿ, ಅಂಟುವಾಳದ ಕಾಯಿ, ಗೇರುಬೀಜಗಳು, ಸಣ್ಣ ಪ್ರಮಾಣದ ಅರಣ್ಯ ಉತ್ಪಾದನ ವಸ್ತುಗಳಾಗಿವೆ.

ಪ್ರಕೃತಿ ಮಾನವನಿಗೆ ಸದಾ ಉಪಕಾರವನ್ನು ಮಾಡುತ್ತಲೇ ಬಂದಿದೆ. ಇಲ್ಲಿನ ಭೌಗೋಳಿಕ ಪರಿಸರದಲ್ಲಿ ದೊರೆಯುವ ಶಿಲೆ (ಗ್ರಾನೈಟ್, ಸೋಫ್‌ಸ್ಟೋನ್ ಇತ್ಯಾದಿ), ಮರ (ಹೊನ್ನೆ, ಬೀಟೆ, ಶ್ರೀಗಂಧ ಇತ್ಯಾದಿ), ಸುಣ್ಣದ ಕಲ್ಲು, ಜೇಡಿ ಮಣ್ಣು ಇವುಗಳು ಒಂದಲ್ಲಾ ಒಂದು ರೀತಿ ದೇವಾಲಯ ನಿರ್ಮಾಣದಲ್ಲಿ ಸಹಕಾರಿಯಾಗಿವೆ. ಹಾಗೆ ಅನೇಕ ದೇವಾಲಯ ಮತ್ತು ಮೂರ್ತಿ ಶಿಲ್ಪಗಳನ್ನು ನಿರ್ಮಿಸಲು ಈ ಭೌತಿಕ ಪರಿಸರವೇ ಸ್ಫೂರ್ತಿನೀಡಿದೆ. ಅಂದಿನಿಂದ ಇಂದಿನವರೆಗೂ ಪರಿಸರವನ್ನು ಅವಲಂಬಿಸಿಯೇ ಮಾನವ ಜೀವನ ಸಾಗಿಸುತ್ತಿದ್ದಾನೆ. ಬಲ್ಲಕುಂದೆ ನಾಡಿನ ವ್ಯಾಪ್ತಿಯಲ್ಲಿ ಇರುವ ಅಸಂಖ್ಯಾತ ದೇವಾಲಯಗಳು ಹಾಗೂ ಮೂರ್ತಿಗಳ ನಿರ್ಮಾಣಕ್ಕೆ ರಾಜರು, ಶಿಲ್ಪಿಗಳು, ಕೂಲಿಗಳು ನೇರವಾಗಿ ಕಾರಣಕರ್ತರಾದರೆ, ಅದಕ್ಕಿಂತಲೂ ಹೆಚ್ಚಾಗಿ ಪರೋಕ್ಷವಾಗಿ ಪ್ರಕೃತಿ ತನ್ನಲ್ಲಿನ ಕಚ್ಚಾವಸ್ತುಗಳನ್ನು ಇಂತಹ ಕೆಲಸಕ್ಕಾಗಿ ಒದಗಿಸಿದೆ. ಈ ಭೌಗೋಳಿಕ ಪರಿಸರದ ಪ್ರಭಾವ ಇಲ್ಲಿನ ವಾಸ್ತುಕಲೆ ಮತ್ತು ಮೂರ್ತಿಶಿಲ್ಪದಲ್ಲಿ ಬಿಂಬಿತವಾಗಿರುವುದನ್ನು ನಾವು ಕಾಣಬಹುದು.

ಅಡಿಟಿಪ್ಪಣಿ

೧. ಹನುಮಂತಯ್ಯ (೭೨) ಕರುಗೋಡು ಇವರು ನೀಡಿ ಮಾಹಿತಿ.

೨. ಬಲ್ಲಕುಂದೆ ನಾಡು ಪ್ರಾಚೀನ ಕಾಲದಲ್ಲಿ ತುಂಗಭದ್ರ ನದಿ ತೀರದಿಂದ ಹೊಸಪೇಟೆ, ಸಂಡೂರು, ಬಳ್ಳಾರಿ, ಸಿರುಗುಪ್ಪ, ಕೂಡ್ಲಿಗಿ ತಾಲೂಕಿನ ಕೆಲ ಆಯ್ದ ಭಾಗಗಳನ್ನು ಹೊಂದಿತ್ತು.

೩. ನಾಗರಾಜರಾವ್ ಎಂ.ಎಸ್. ೧೯೭೧ ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರ ವ್ಯಾಲಿ ಪು. ೧೪-೧೫.

೪. ಕರ್ನಾಟಕ ಭೌಗೋಳಿಕ ಪ್ರದೇಶಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸಿದ ಭಾಗ ಇದನ್ನೂ ಭೂಗರ್ಭ ಇತಿಹಾಸದ ಪ್ರಥಮ ಯುಗ ಎನ್ನುತ್ತಾರೆ. ನೋಡಿ; ಕರ್ನಾಟಕ ಚರಿತ್ರೆ,

೫. ಎ.ಫ್ರಾನ್ಸಿಸ್.ಡಬ್ಲು. ಬಳ್ಳಾರಿ ಡಿಸ್ಟ್ರಿಕ್ಟ್ ಮ್ಯಾನ್ಯುಯಲ್ ೧೯೦೪ ಪು. ೧೪-೧೫.

೬. ಸಂಕಾಲಿಯಾ .ಹೆಚ್.ಡಿ.; ೧೯೭೯; ಮೆಸೋಲಿಥಿಕ್ ಆ್ಯಂಡ್ ಪ್ರೀಮೆಸೋಲಿಥಿಕ್ ಕಲ್ಚರ್ಸ್ ಇನ್ ಸಂಗನಕಲ್. ಪು-೧೬.

ಅಧ್ಯಾಯ ೩

ಐತಿಹಾಸಿಕ ಹಿನ್ನೆಲೆ

ಅಧ್ಯಾಯ ೩

ಐತಿಹಾಸಿಕ ಹಿನ್ನೆಲೆ

ಮನುಷ್ಯ ಬರವಣಿಗೆಯನ್ನು ಕಂಡುಕೊಳ್ಳದೇ ಇದ್ದ ಹಾಗೂ ಅವನ ಜೀವನದ ರೀತಿ ನೀತಿಗಳು ಅಷ್ಟೇನು ಸುಧಾರಿಸದೇ ಇದ್ದ ಕಾಲಾವಧಿಯನ್ನು ಪ್ರಾಗೈತಿಹಾಸಿಕ ಕಾಲವೆಂದು (Pre-History) ಕರೆಯಲಾಗುತ್ತದೆ. ಬಲ್ಲಕುಂದೆ ನಾಡಿನ ವ್ಯಾಪ್ತಿಯಲ್ಲಿ ಕೆಲವು ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿದ್ದು ಅವುಗಳಲ್ಲೂ ಆ ಕಾಲದ ಮನುಷ್ಯ ಉಪಯೋಗಿಸಿ ಬಿಟ್ಟುಹೋದ ಕೆಲವು ಅವಶೇಷಗಳು ದೊರೆತಿವೆ. ಇದೇ ನಾಡಿನ ವ್ಯಾಪ್ತಿಯಲ್ಲಿ ಕಾಲಕ್ರಮೇಣ ಹಲವು ರಾಜಮನೆತನಗಳು ಹಾಗೂ ಸಾಮಂತರು ಆಳ್ವಿಕೆ ನಡೆಸಿದ್ದಾರೆ. ಇವರ ಆಳ್ವಿಕಾವಧಿಯಲ್ಲಿ ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡು ಚಾರಿತ್ರಿಕ ಕಾಲಘಟ್ಟದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನಗಳನ್ನು ಗಳಿಸಿಕೊಂಡಿದ್ದಾರೆ. ಈ ಎಲ್ಲ ವಿವರಗಳನ್ನು ಕೆಳಗಿನ ಶಿರೋನಾಮೆಗಳಲ್ಲಿ ವಿಶ್ಲೇಷಿಸಲಾಗಿದೆ.

೩.೧ ಪ್ರಾಗೈತಿಹಾಸಿಕ ಕಾಲ

ಸೃಷ್ಟಿಯಲ್ಲಿ ಮಾನವನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಮೂಲತಃ ಮಾನವ ಪ್ರಕೃತಿಯನ್ನು ಅವಲಂಬಿಸಿಕೊಂಡು ಜೀವಿಸಲೇ ಬೇಕಾದ ಪರಿಸ್ಥಿತಿ ಅವನಿಗಿತ್ತು. ಇಂದಿಗೆ ಸುಮಾರು ನಾಲ್ಕು ಮಿಲಿಯನ್ ವರ್ಷಗಳ ಹಿಂದೆ ಮನುಷ್ಯ ಜೀವಿಸಿದ್ದ ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ.[೧]

ಅಂದಿನಿಂದಲೂ ಮನುಷ್ಯ ಶಿಲೆಯೊಡನೆ ನಿಕಟ ಸಂಬಂಧ ಹೊಂದಿದ್ದಾನೆ. ಪ್ರಕೃತಿ ಮಾನವನಿಗೆ ಮೊದಲು ನೀಡಿದ ಕೊಡುಗೆಗಳಲ್ಲಿ ಶಿಲೆಯೂ ಒಂದಾಗಿದೆ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವನಿಗೆ ಗಡ್ಡೆ ಗೆಣಸುಗಳನ್ನು, ಕಂಟಿಗಳನ್ನು ಅಗೆದು ತೆಗೆಯಲು, ಗಿಡಗಳನ್ನು ಕಡಿಯಲು, ಬೇಟೆಯಾಡಲು, ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ತುಂಡು ಮಾಡಲು, ಮೃತ ಪ್ರಾಣಿಗಳ ಚರ್ಮವನ್ನು ಬೇರ್ಪಡಿಸಲು, ಕಟ್ಟಿಗೆಯ ಉಪಕರಣಗಳನ್ನು, ಆಯುಧಗಳನ್ನು ತಯಾರಿಸಲು ಶಿಲೆ ಮಾನವನಿಗೆ ನೆರವಾಗಿವೆ. ಒಟ್ಟಿನಲ್ಲಿ ಅಂದು ಮಾನವನ ಜೀವನದ ಒಂದು ಭಾಗವಾಗಿ ಶಿಲೆ ಬಳಕೆಯಾಗುತ್ತಿತ್ತು. ಅಂದರೆ ಲೋಹದ ಬಳಕೆ ಆರಂಭವಾಗುವವರೆಗೆ ಶಿಲೆಯನ್ನೇ ಮಾನವ ಅವಲಂಬಿಸಿದ್ದ. ಈ ಕಾಲಘಟ್ಟವನ್ನು 'ಶಿಲಾಯುಗ' (Stone Age) ಎಂದು ಕರೆಯಲಾಗುತ್ತದೆ. ಅತ್ಯಂತ ದೀರ್ಘವಾದ ಈ ಯುಗವನ್ನು ಕ್ರಮವಾಗಿ

೧. ಹಳೆ ಶಿಲಾಯುಗ (Paleolithic Age)

೨. ಸೂಕ್ಷ್ಮ ಶಿಲಾಯುಗ (Mesolithic Age)

೩. ನವ ಶಿಲಾಯುಗ (Neolithic Age)

೪. ಬೃಹತ್ ಶಿಲಾಯುಗ (Megalithic Age) ಎಂದು ಮತ್ತು

ಹಳೇಶಿಲಾಯುಗವನ್ನು ಪುನಃ ಅ) ಹಳೇ ಶಿಲಾಯುಗ, ಆ) ಮಧ್ಯ ಹಳೇ ಶಿಲಾಯುಗ, ಇ) ಅಂತಿಮ ಹಳೇ ಶಿಲಾಯುಗ ಎಂಬ ಮೂರು ಹಂತಗಳಾಗಿ ವಿಭಾಗಿಸಲಾಗಿದೆ.[೨]

ಶಿಲಾಯುಗದ ಪ್ರತಿಯೊಂದು ಹಂತದಲ್ಲಿ ಜನರು ತಮ್ಮ ಉಪಕರಣಗಳನ್ನು ತಯಾರಿಸಿದರು. ಅಲ್ಲಿ ಬಳಸಿದ ತಂತ್ರಗಳ ಮತ್ತು ಅವುಗಳ ಮೂಲಕ ಸಿದ್ಧಮಾಡಿದ ಉಪಕರಣಗಳನ್ನು ಆಕೃತಿಗಳಿಗನುಗುಣವಾಗಿ ನಿರ್ಧರಿಸಲಾಗಿದೆ. ಅವರು ರೂಪಿಸಿಕೊಂಡ ತಂತ್ರ, ಅವರು ಉತ್ಪಾದಿಸಿದ ಉಪಕರಣಗಳ ಆಕೃತಿಗಳನ್ನು ಹಾಗೂ ಲಕ್ಷಣಗಳನ್ನು ನಿರ್ಧರಿಸುತ್ತಿದ್ದವು. ಮಾನವನ ಸಾಂಸ್ಕೃತಿಕ ಪ್ರಗತಿಪಥದಲ್ಲಿ ಸ್ಪಷ್ಟವಾದ ಕ್ರಮಬದ್ಧ ಹಂತಗಳನ್ನು ನಿರ್ದೇಶಿಸುತ್ತ ಮಾನವ ಸಂಸ್ಕೃತಿ ಬೆಳೆವಣಿಗೆಯಲ್ಲಿರುವ ವಿವಿಧ ಘಟ್ಟಗಳನ್ನು ಸ್ಪಷ್ಟಗೊಳಿಸುತ್ತದೆ.[೩]

ಶಿಲಾಯುಗ ಕಾಲದಲ್ಲಿ 'ಲಿಪಿ' ಬಳಕೆ ಇರಲಿಲ್ಲ ಹಾಗೂ ಅಂದಿನ ಮಾನವನ ಜೀವನಕ್ರಮವು ಅಷ್ಟೇನು ಪ್ರಗತಿಯಲ್ಲಿರಲಿಲ್ಲ. ಆದುದರಿಂದ ಈ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆಂದು ಕರೆಯಲಾಗುತ್ತದೆ. ಬಲ್ಲಕುಂದೆ ನಾಡಿನ ವ್ಯಾಪ್ತಿಯಲ್ಲಿ ಪ್ರಾಗೈತಿಹಾಸಿಕ ಕಾಲದ ಹಲವು ಕುರುಹುಗಳು ನಮಗೆ ದೊರೆತಿವೆ. ಅವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಗೈತಿಹಾಸಿಕ ಕಾಲದ ಜನ ಜೀವನದ ಮೇಲೆ ಬೆಳಕು ಚೆಲ್ಲಬಹುದು.

ರಾಬರ್ಟ್ ಬ್ರೂಸ್‌ಫ್ರೂಟ್‌ರವರು ೧೮೮೭ ರಲ್ಲಿ ಈ ನಾಡಿನ ವಿವಿಧ ಪ್ರಾಗೈತಿಹಾಸಿಕ ನೆಲೆಗಳನ್ನು ಮೊದಲ ಬಾರಿಗೆ ಗುರುತಿಸಿದ್ದಾರೆ. ಅವುಗಳಲ್ಲಿ ಬಳ್ಳಾರಿ ಸಮೀಪದ ಕಪ್ಪುಗಲ್ಲು, ಸೌಡಮ್ಮಕೊಂಡ, ಸನ್ನರಸಮ್ಮಕೊಂಡ[೪], ಹಳೆಕೋಟೆ, ಬೇಡರ ಬೆಳಗಲ್ಲು, ಕೊಳಗಲ್ಲು, ಬಾದನಹಟ್ಟಿ, ರೂಪನಗುಡಿ ಹಾಗೂ ಆಲೂರು ತಾಲೂಕಿನ ರಾಮದುರ್ಗ, ಮಸಿಕುರ್ತಿ, ಹೊಸಪತ್ತಿ ದೇವರ ಗುಡ್ಡ, ಹತ್ತಿ ಬೆಳಗಲ್ಲು, ನಾಗರದೋಣಿ, ಚಿಪ್ಪರಗಿ ಮತ್ತು ಹೊಸಪೇಟೆ ತಾಲೂಕಿನ ದರೋಜಿ, ಗಾದಿಗನೂರು, ಕುರಿಕುಪ್ಪೆ, ತೋರಣಗಲ್ಲುಗಳು ಪ್ರಮುಖವಾಗಿವೆ.

ಬ್ರೂಸ್‌ಫ್ರೂಟ್‌ರವರು ಬಾದನಹಟ್ಟಿ, ಬೆಳಗಲ್ಲು, ರೂಪನಗುಡಿ, ನಿಟ್ಟೂರು, ದರೋಜಿ, ಗಾದಿಗನೂರುಗಳಲ್ಲಿ ಹಳೇಶಿಲಾಯುಗ ಕಾಲದ ಕೈಕೊಡಲಿಗಳನ್ನು ಪತ್ತೆ ಹಚ್ಚಿ ಪ್ರಪ್ರಥಮವಾಗಿ ಪ್ರಾಗೈತಿಹಾಸಿಕ ಯುಗದ ಮೇಲೆ ಬೆಳಕು ಚೆಲ್ಲಿದರು. ನಂತರ ನಡೆದ ಹಲವು ಸಂಶೋಧನೆಗಳ ಪರಿಣಾಮವಾಗಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದಂತೆ ಮತ್ತಷ್ಟು ನೆಲೆಗಳು ಬೆಳಕಿಗೆ ಬಂದವು[೫].

ಸಂಗನಕಲ್ಲು ಮತ್ತು ಕಪ್ಪುಗಲ್ಲು, ನಿಟ್ಟೂರುಗಳಲ್ಲಿ ನಾಗರಾಜರಾವ್, ಅನ್ಸಾರಿ.ಝುಡ್, ಸಂಕಾಲಿಯಾ ಸುಬ್ಬರಾವ್.ಬಿ., ಶೇಷಾದ್ರಿಯವರು ನಡೆಸಿದ ಉತ್ಖನನಗಳು ಸೂಕ್ಷ್ಮ ಶಿಲಾಯುಗ ಕಾಲ ಘಟ್ಟದಲ್ಲಿ ಪ್ರಾಗೈತಿಹಾಸಿಕ ಮಾನವ ಇಲ್ಲಿ ಜೀವಿಸಿದ್ದನ್ನು ದೃಢಪಡಿಸಿವೆ[೬]. ಇಲ್ಲಿ ದೊರೆತ ಮಡಿಕೆಗಳು ಹಾಗೂ ಚರ್ಟ್ ಮತ್ತು ಕ್ವಾರ್ಟಜ್ ಶಿಲೆಗಳಿಂದ ತಯಾರಿಸಿದ ಎರೆಯುವ, ಮೊನೆಯಾಕಾರದ ಬ್ಲೇಡ್ ಆಕಾರದ ಆಯುಧಗಳು, ತಿರಳುಗಲ್ಲು ಚಕ್ಕೆಗಳನ್ನು ಅಂದಿನ ಮಾನವ ದಿನನಿತ್ಯಕ್ಕಾಗಿ ಬಳಸಿಕೊಂಡಿರುವುದನ್ನು ಗಮನಿಸಿದರೆ ಈ ಸಂಸ್ಕೃತಿಯ ಮಹತ್ವ ನಮ್ಮ ಅರಿವಿಗೆ ಬರುತ್ತದೆ[೭]. ಇದೇ ರೀತಿಯ ಕೆಲ ಆಯುಧ ಉಪಕರಣಗಳು ಕೂಡ್ಲಿಗಿ ತಾಲೂಕಿನ ಸಿಡೆಗಲ್ಲು ಮುಂತಾದೆಡೆ ದೊರೆತಿದ್ದು, ಈ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಸಹಾಯಕವಾಗಿವೆ[೮].

ನವಶಿಲಾಯುಗಕ್ಕೆ (ಕ್ರಿ.ಪೂ. ३೦೦೦-೧೫೦೦) ಸಂಬಂಧಿಸಿದಂತೆ ಬಲ್ಲಕುಂದೆ ನಾಡಿನ ವಿವಿಧ ಭಾಗಗಳಲ್ಲಿ ಹಲವಾರು ಕುರುಹುಗಳು ದೊರೆತಿವೆ. ಅವುಗಳಲ್ಲಿ ಬಳ್ಳಾರಿ ತಾಲೂಕಿನ ಸಂಗನಗಲ್ಲು, ಕಪ್ಪುಗಲ್ಲು, ನಿಟ್ಟೂರು, ಕುಡತಿನಿ, ಬೇಡರ ಬೆಳಗಲ್ಲು, ಕುರುಗೋಡು, ಹೊಸಪೇಟೆ ತಾಲೂಕಿನ ಗಾದಿಗನೂರು, ತೋರಣಗಲ್ಲು, ಹಂಪಿಯ ಮೊಸಳಯ್ಯನಗುಡ್ಡ, ಬುಕ್ಕಸಾಗರ, ಕಾರಿಗನೂರು, ಇಂಗಳಗಿ, ದರೋಜಿ, ವೆಂಕಟಾಪುರ, ಸಿರಗುಪ್ಪ ತಾಲೂಕಿನ ತೆಕ್ಕಲಕೋಟೆ, ಸಿರಗುಪ್ಪ, ಕೂಡ್ಲಿಗಿ ತಾಲೂಕಿನ ಹುಲಿಕೆರೆ, ಜರ್ಮಲಿ, ಗಂಗಾವತಿ ತಾಲೂಕಿನ ಹಿರೇಜಂತಕಲ್, ಆನೆಗೊಂದಿ, ಮಲ್ಲಾಪುರ ಮುಂತಾದೆಡೆ, ಸಂಡೂರು ತಾಲೂಕಿನ ಕುಮಾರಸ್ವಾಮಿ ಬೆಟ್ಟ, ಹೊಸಮಲೆದುರ್ಗಗಳಲ್ಲಿ ಈ ಸಂಸ್ಕೃತಿಗೆ ಸೇರಿದ ಮಡಿಕೆ ಚೂರುಗಳು, ನುಣುಪುಗೊಳಿಸಿದ ಕೈಗೊಡಲಿಗಳು, ಬಣ್ಣದ ರೇಖಾಚಿತ್ರಗಳು, ಕುಟ್ಟಿದ ಚಿತ್ರಗಳು, ಕೊರೆದ ಚಿತ್ರಗಳು ದೊರೆತಿದ್ದು ಅಂದಿನ ಜೀವನದ ಕ್ರಮ ಅರಿಯಲು ಸಹಾಯಕವಾಗಿವೆ[೯].

ಹೊಸಪೇಟೆ ತಾಲೂಕಿನ ವೆಂಕಟಾಪುರದ ಬಳಿ ಹಾಗೂ ಬಳ್ಳಾರಿ ತಾಲೂಕಿನ ಕುಡುತಿನಿ ಬಳಿ ವಾಲಿದಿಬ್ಬ (ವಾಲಿಕಿಲಾ) ಎಂದು ಪ್ರಸಿದ್ಧಿಯಾಗಿರುವ ಬೂದಿದಿಬ್ಬ (Ash mounds) ಗಳಿವೆ. ಇವು ಸಹ ನವಶಿಲಾಯುಗದ ಕಾಲಘಟ್ಟಕ್ಕೆ ಸೇರಿದ್ದು, ಅಂದು ದನಗಳ ಸಗಣಿಯನ್ನು ಒಂದು ಕಡೆ ಸಂಗ್ರಹಿಸಿ ಹೆಚ್ಚಿನ ಉಷ್ಣತೆಯಲ್ಲಿ ಬೆಂಕಿಯಲ್ಲಿ ಸುಟ್ಟಾಗ ಅವು ನಿರ್ಮಾಣವಾಗಿವೆ ಎಂಬುದನ್ನು ನಾವು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ. ಈ ದಿಬ್ಬಗಳ ಆಧಾರದ ಮೇಲೆ ಈ ಕಾಲದ ಮನುಷ್ಯ ಹಸು ಮೊದಲಾದ ಪ್ರಾಣಿಗಳನ್ನು ಸಾಕುತ್ತಿದ್ದ ಎಂಬುದನ್ನು ಗ್ರಹಿಸಬಹುದಾಗಿದೆ. ಅಲ್ಲದೆ ಸಂಗನಕಲ್ಲು, ನಿಟ್ಟೂರು ಮುಂತಾದೆಡೆ ನಡೆದ ಭೂ ಉತ್ಖನನಗಳು ನವಶಿಲಾಯುಗದ ಮಾನವ ಜೀವನ ಕ್ರಮ ಅರಿಯಲು ಸಹಾಯಕವಾಗಿವೆ[೧೦]. ಈ ಉತ್ಖನನಗಳಲ್ಲಿ ವೃತ್ತಾಕಾರದ ಮನೆಗಳ ಅವಶೇಷಗಳು ಕಂಡುಬಂದಿವೆ. ಇಂದಿಗೂ ಬಳ್ಳಾರಿ, ಸಿರುಗುಪ್ಪ ಭಾಗದ ಬೊಯಾ (ಬೇಡ) ಜನಾಂಗದವರು ಮತ್ತು ಇತರೆ

ಪಶುಪಾಲಕ ಸಮುದಾಯಗಳು (ಗೊಲ್ಲ) ಇದೇ ರೀತಿಯ ವೃತ್ತಾಕಾರದ ಮನೆಗಳನ್ನು ಕಟ್ಟಿಕೊಳ್ಳುತ್ತಿರುವುದನ್ನು ತುಲನಾತ್ಮಕವಾಗಿ ಗಮನಿಸಿದರೆ ಪ್ರಾಯಶಃ ಇದು ಪ್ರಾಚೀನ ಪರಂಪರೆಯ ಮುಂದುವರಿಕೆ ಎಂದು ಹೇಳಬಹುದು.

ಬೃಹತ್ ಶಿಲಾಯುಗ ಕಾಲಕ್ಕೆ ಸಂಬಂಧಿಸಿದಂತೆ ಬಲ್ಲಕುಂದೆ ನಾಡಿನ ವಿವಿಧ ಭಾಗಗಳಲ್ಲಿ ಹೇರಳ ನೆಲೆಗಳು ದೊರೆತಿವೆ. ಅವುಗಳಲ್ಲಿ ಗಂಗಾವತಿ ತಾಲೂಕಿನ ಹಿರೇಬೆನಕಲ್, ಮಲ್ಲಾಪುರ, ಬಳ್ಳಾರಿ ತಾಲೂಕಿನ ಸಂಗನಕಲ್ಲು, ಹೊಸಪೇಟೆ ತಾಲೂಕಿನ ಬುಕ್ಕಸಾಗರ, ವೆಂಕಟಾಪುರ, ಕೂಡ್ಲಿಗಿ ತಾಲೂಕಿನ ಕುಮತಿ, ಹುಲಿಕುಂಟೆ ಮುಂತಾದವು ಪ್ರಮುಖವಾಗಿವೆ. ಈ ನೆಲೆಗಳಲ್ಲಿ ಮೋರಿಯರ ಮನೆಗಳೆಂದು ಕರೆಯಲ್ಪಡುವ ಈ ಕಾಲದ ಶಿಲಾಸಮಾಧಿಗಳು ಹೇರಳವಾಗಿ ದೊರೆತಿವೆ. ಅವುಗಳಲ್ಲಿ ಸ್ವಸ್ತಿಕ, ಆಯತಾಕಾರದ ಕಿಂಡಿ ಕೋಣೆಯ ಕಲ್ಗೋರಿಗಳು ಹಾಗೂ ಮಾನವಾಕೃತಿಯ ಕಲ್ಗೋರಿಗಳು, ಶಿಲಾವೃತ್ತಗಳು ಮುಖ್ಯವಾಗಿವೆ. ಹುಲಿಕುಂಟೆ ಮತ್ತು ಕುಮತಿಗಳಲ್ಲಿ ಭಾರತದಲ್ಲೇ ಪ್ರಸಿದ್ಧವಾದ ಏಕಶಿಲಾ ಮಾನವ ಕೃತಿಗಳು ಮತ್ತು ಶಿಲಾವೃತ್ತದೊಳಗಿರುವ ಮಾನವಾಕೃತಿಗಳು ಪ್ರಪ್ರಥಮವಾಗಿ ದೊರೆತಿದ್ದು, ಈ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕನ್ನು ಬೀರುತ್ತವೆ[೧೧]. ಈ ಸಂಸ್ಕೃತಿಯಲ್ಲಿಯೇ ಮೊದಲ ಬಾರಿಗೆ ಕಬ್ಬಿಣ ಬೆಳಕಿಗೆ ಬಂದಿದ್ದರಿಂದ ಈ ಯುಗವನ್ನು ಕಬ್ಬಿಣ ಯುಗವೆಂದು ಸಹ ಕರೆಯುತ್ತಾರೆ. ಬಲ್ಲಕುಂದೆ ನಾಡಿನ ವಿವಿಧೆಡೆ ಕಬ್ಬಿಣದ ಅವಶೇಷಗಳು ದೊರೆತಿದ್ದು ಇದನ್ನು ಮತ್ತಷ್ಟು ಧೃಢ ಪಡಿಸಿವೆ.

ಈ ನಾಡಿನ ವಿವಿಧೆಡೆ ದೊರೆತ ಮಡಿಕೆ ಚೂರುಗಳು, ಆಯುಧೋಪಕರಣಗಳು ಮತ್ತು ಇತರ ಅವಶೇಷಗಳು ಸಮೀಪದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಜಟ್ಟಿಂಗರಾಮೇಶ್ವರ ಹಾಗೂ ಶಿವಮೊಗ್ಗ, ಧಾರವಾಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆತ ಅವಶೇಷಗಳಿಗೆ ಸಾಮ್ಯವಿದ್ದು ಹೋಲಿಕೆಯಾಗುತ್ತದೆ. ಆದ್ದರಿಂದ ಬಲ್ಲಕುಂದೆ ನಾಡು ಪ್ರಾಗೈತಿಹಾಸಿಕ ಸಂಸ್ಕೃತಿಯ ಜನರ ಆವಾಸಸ್ಥಾನವಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಮುಂದೆ ಈ ನಾಡಿನ ಪ್ರಾಗೈತಿಹಾಸಿಕ ಸಂಸ್ಕೃತಿಯ ಕುರಿತು ಹೆಚ್ಚಿನ ಅಧ್ಯಯನ ನಡೆದಲ್ಲಿ ಮತ್ತಷ್ಟು ಹೊಸ ಹೊಸ ಅಂಶಗಳು ಬೆಳಕಿಗೆ ಬರುವ ಸಾಧ್ಯತೆ ಇದೆ.

ಪ್ರಾಗೈತಿಹಾಸಿಕ ಕಾಲದ ಮಾನವನ ಜೀವನಕ್ಕೆ ಸಹಕಾರಿಯಾದ ಇಲ್ಲಿನ ಭೌಗೋಳಿಕ ಪರಿಸರ ಮುಂದೆ ತಮ್ಮ ರಾಜ್ಯ ವಿಸ್ತರಿಸಿದ ರಾಜರಿಗೂ ಸಹಕಾರಿಯಾಯಿತು. ಈ ಹಿನ್ನೆಲೆಯಲ್ಲಿ ಚಾರಿತ್ರಿಕ ಕಾಲಘಟ್ಟದಲ್ಲಿ ಇಲ್ಲಿನ ರಾಜರು, ರಾಣಿಯರು, ಸಾಮಂತರು ಯಾವ ರೀತಿ ಅಧಿಕಾರ ನಡೆಸಿ ರಾಜಕೀಯಕ್ಕೆ ಅಸ್ತಿಭಾರ ಹಾಕಿದರು ಮತ್ತು ಅವರು ಕೈಗೊಂಡ ಸುಧಾರಣಾ ಕ್ರಮಗಳನ್ನು ಹಾಗೂ ಸಾಧನೆಗಳನ್ನು ಈ ಮುಂದೆ ಸಂಕ್ಷಿಪ್ತವಾಗಿ ವಿವರಿಸಿದೆ.

ಚಾರಿತ್ರಿಕ ಹಿನ್ನೆಲೆ

ಐತಿಹಾಸಿಕ ಯುಗ ಆರಂಭದಿಂದ ಆಧುನಿಕ ಯುಗದ ಆರಂಭದ ವರೆಗೆ ವಿವಿಧ ರಾಜಮನೆತನಗಳು ಬಲ್ಲಕುಂದೆ ನಾಡಿನಲ್ಲಿ ಆಡಳಿತ ನಡೆಸಿವೆ. ಅವರಲ್ಲಿ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯರು, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಟಿಪ್ಪು ಮತ್ತು ಹೈದರ್, ವಿವಿಧ ಪಾಳೆಗಾರರು, ಬ್ರಿಟೀಷರು, ಆಳ್ವಿಕೆ ಕುರಿತು ವಿವರ ನಮೂದಿಸಿರುವ ಲಿಖಿತ ದಾಖಲೆಗಳ ಆಧಾರದಿಂದ ಪ್ರಾರಂಭವಾಗುವ ಆರಂಬಘಟ್ಟ ಇದಾಗಿದೆ. ಬಲ್ಲಕುಂದೆ ನಾಡಿನಲ್ಲಿ ದೊರೆತ ಪ್ರಾಚೀನ ಲಿಖಿತ ದಾಖಲೆಗಳೆಂದರೆ ಅಶೋಕನ ಶಾಸನಗಳು ಅಂದರೆ ಮೌರ್ಯರ ಆಳ್ವಿಕೆಯಿಂದ ಇದರ ಇತಿಹಾಸ ಪ್ರಾರಂಭವಾಗುತ್ತದೆ. ಆದರೆ ಕೋಳೂರಿನ[೧೨] ಕ್ರಿ.ಶ. ೧೧೪೭ ಡಿಸೆಂಬರ್ ೨೫ ರ ಶಾಸನ ಈ ನಾಡನ್ನು ಆಳಿದ ಚಕ್ರವರ್ತಿಗಳ ವಂಶದ ವಿವರವನ್ನು ಈ ರೀತಿ ದಾಖಲಿಸಿದೆ.

"ವಸುಧಾಕಾಂತೆಯ ಕುಂತಪ್ರತಿಮಮಾದೀ ಕುಂತಳಕ್ಷೋಣಿಯಂ
ವಸುಧಾನಂದನ ನಂದ ಗುಪ್ತಕುಲ ಮೌರ್ಯಕ್ಷ್ಮಾ ಪರಾಳ್ದರ್ಬ್ಬ ೞ
ಕ್ಕೆಸೆಯಲು ರಾಷ್ಟ್ರ ನೃಪಾಳರಾಳ್ದರವರಿಂದಂ ಮತ್ತೆ ಚಾಳುಕ್ಯವಂ
ಶ ಸಮುದ್ಭೂತರನೇಕರಾಳ್ದವರೊಳ್ತಾಂ ಚಕ್ರಿ ಸೋಮೇಶ್ವರಂ ॥"

ಈ ಪದ್ಯ ನಂದರು, ಗುಪ್ತರು, ಮೌರ್ಯರು, ರಾಷ್ಟ್ರಕೂಟರು, ಚಾಲುಕ್ಯರು ಚಕ್ರವರ್ತಿಗಳಾಗಿ ಆಳಿದರೆಂದು ತಿಳಿಸುತ್ತದೆ.

ನಂದರು:

ಭಾರತೀಯ ಇತಿಹಾಸದ ಆರಂಭದ ಘಟ್ಟದಲ್ಲಿ ನಂದರದು ಪ್ರಮುಖ ಸ್ಥಾನ. ಚಾಣಕ್ಯನಿಂದಾಗಿ ಈ ನಂದರು ಪ್ರಭುತ್ವ ಕಳೆದುಕೊಳ್ಳುತ್ತಾರೆ. ಉತ್ತರ ಭಾರತದಲ್ಲಿ ಚಕ್ರವರ್ತಿಗಳಾಗಿದ್ದ ನಂದವಂಶದವರ ಒಡೆತನಕ್ಕೆ ಬಲ್ಲಕುಂದೆ ನಾಡು ಒಳಪಟ್ಟಿತ್ತೆಂದು ೧೨ ನೇ ಶತಮಾನದ ಶಾಸನಗಳಲ್ಲಿ ನಿರೂಪಿಸುತ್ತದೆ. ಅಲ್ಲದೆ ಕ್ರಿ.ಶ. ೧೫೦೦ ರಲ್ಲಿ ರಚಿಸಲ್ಪಟ್ಟಿರುವ ಸಿಂಗೀರಾಜ ಪುರಾಣದಲ್ಲಿ[೧೩] ಪಟ್ಟದಕಲ್ಲಿನ ಇತಿಹಾಸವನ್ನು ತಿಳಿಸುತ್ತ ಇಲ್ಲಿ ಪಟ್ಟ ಹೊಂದಿದ ರಾಜವಂಶಗಳ ಯಾದಿಯನ್ನು ಹೀಗೆ ಕೊಡಲಾಗಿದೆ.

ನಂದ ನಂದರ್ಗಳೊಂಬತ್ತು ಪೀಳಿಗೆಯಾಳ್ದು
ಹಿಂದೆ ಗುಪ್ತರ್ಗುಪ್ತರೆಂಬರಸುಗಳು ಹತ್ತ
ಜೆಂದ ಮೋರೆಯ ಮೋರೆಯರ್ಗಳಿಪ್ಪತ್ತೊಂದು ಸಿಂಹಾಸನಗಳಿಂದ

ಬಂದುದಿಪ್ಪತ್ತೇಳು ಕಾದಂಬನಾಡು ರಾ
ಚೇಂದ್ರರಲ್ಲಿಂ ಬಳಿಕ ಚಾಳೋಕ್ಯ ಚಕ್ರೇಶ
ವೃಂದ ವಿಪ್ಪತ್ತೆಂಟು ಪಟ್ಟವಡೆದಾ ಪಟ್ಟಕಲ್ಲೆನಿಪ ಪುರವರದಲಿ

ನಂದರು, ಗುಪ್ತರು, ಮೌರ್ಯರು, ಕದಂಬರು, ಚಾಲುಕ್ಯರು ಪಟ್ಟಹೊಂದಿದ ಪಟ್ಟದಕಲ್ಲು ಎಂದು ಹೇಳುವುದರಿಂದ ಉತ್ತರ ಭಾರತದ ಚಕ್ರವರ್ತಿಗಳಾದ ನಂದರು, ಮೌರ್ಯರು ಮತ್ತು ಗುಪ್ತರು ಆಳ್ವಿಕೆಗೆ ಉತ್ತರ ಕರ್ನಾಟಕದ ಭಾಗ ಒಳಗೊಂಡಿದ್ದು ಬಲ್ಲಕುಂದೆನಾಡು ಇದಕ್ಕೆ ಹೊರತಾಗಿಲ್ಲವೆಂದು ಹೇಳಬಹುದು. ನಂದರ ಆಳ್ವಿಕೆಯನ್ನು ನಿರೂಪಿಸುವ ಶಾಸನಗಳು ಇಲ್ಲಿ ಲಭ್ಯವಾಗಿಲ್ಲ. ಆದರೆ ಪರಂಪರಾಗತವಾಗಿ ಬಂದ ನಂಬಿಕೆಗಳನ್ನು ಆಧರಿಸಿ ನಂದರ ಆಳ್ವಿಕೆಗೆ ಈ ನಾಡು ಒಳಪಟ್ಟಿತ್ತೆಂದು ಹೇಳಬಹುದಾಗಿದೆ.

ಮೌರ್ಯರು

ಚಾಣಕ್ಯನ ಮುತ್ಸದ್ದಿತನದಿಂದ ಚಂದ್ರಗುಪ್ತಮೌರ್ಯನು ನಂದರನ್ನು ಉಚ್ಚಾಟಿಸಿ ಮೌರ್ಯ ವಂಶವನ್ನು ಚಕ್ರಾಧಿಪತ್ಯದ ಸ್ಥಾನಕ್ಕೇರಿಸುತ್ತಾನೆ. ಈ ಮೌರ್ಯರ ಆಳ್ವಿಕೆಗೆ ಬಲ್ಲಕುಂದೆನಾಡು ಒಳಪಟ್ಟಿದ್ದನ್ನು ಶಾಸನಗಳು ನಿರೂಪಿಸುತ್ತವೆ. ಅಶೋಕ ಚಕ್ರವರ್ತಿಯ ಶಾಸನಗಳು ಈ ನಾಡಿನ ನಿಟ್ಟೂರು ಉಡೆಗೊಳಗಳಲ್ಲಿ ದೊರೆತಿವೆ. ಚಂದ್ರಗುಪ್ತಮೌರ್ಯನು ಜಿನದೀಕ್ಷೆ ತೊಟ್ಟು ಭದ್ರಬಾಹುವಿನೊಂದಿಗೆ ಶ್ರವಣಬೆಳಗೊಳಕ್ಕೆ ಬಂದು ಅಲ್ಲಿಯೇ ಐಕ್ಯನಾದನೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಶ್ರವಣಬೆಳಗೊಳದ ೭ನೇಯ ಶತಮಾನದ ಶಾಸನ[೧೪] ಈ ಅಂಶವನ್ನು ಹೀಗೆ ನಿರೂಪಿಸುತ್ತದೆ.

ಶ್ರೀ ಭದ್ರಬಾಹು ಸಚನ್ದ್ರಗುಪ್ತ ಮುನೀನ್ದ್ರಯುಗ್ಮದಿನೊಪ್ಪಿದಲ್
ಭದ್ರವಾಗಿದ ಧರ್ಮನ್ದುವಜಿಕ್ಕೆ ವನ್ದಿನಿಸಳ್ಕಲೋ
ವಿದ್ರುಮಾಧರ ಶಾನ್ತಿಸೇನ ಮುನೀಶನಾಕ್ಕಿ ಎ ವೆಳ್ಗೊ (೪)
ಆದ್ರಿ ಮೇಲಸನಾದಿವಿಟ್ಟ ಪುನರ್ಭವಕ್ಕೆ ಜೆ ಆಗಿ ॥

ಅಂದರೆ ಶಾಂತಿಸೇನ ಮುನಿಯು ಸಲ್ಲೇಖನ ವ್ರತ ಹಿಡಿದು ಮೋಕ್ಷ ಹೊಂದಿರುವ ಸ್ಥಳವಾದ ಈ ಬೆಟ್ಟಕ್ಕೆ ಹಿಂದೆ ಭದ್ರಬಾಹು ಚಂದ್ರಗುಪ್ತನೊಂದಿಗೆ ಬಂದಿದ್ದರು. ಹೀಗಾಗಿ ಪ್ರಸಿದ್ಧವಾದ ಈ ಬೆಟ್ಟದ ಮೇಲೆ ಶಾಂತಿಸೇನಮುನಿ ಸಲ್ಲೇಖನ ವ್ರತದಿಂದ ಮೋಕ್ಷ ಹೊಂದಿ ಈ ಬೆಟ್ಟದ ಕೀರ್ತಿಯನ್ನು ಇಮ್ಮಡಿಸಿದನು. ಇಲ್ಲಿ ಬರುವ ಚಂದ್ರಗುಪ್ತನ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಈತನು ಚಂದ್ರಗುಪ್ತ ಮೌರ್ಯನೆಂದರೆ ಮತ್ತೆ ಕೆಲವರು ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನೆಂದು ಹೇಳುತ್ತಾರೆ.

ವಡ್ಡಾರಾಧನೆಯಲ್ಲಿ ಇವನನ್ನು ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನೆಂದು ಸ್ಪಷ್ಟವಾಗಿ ಹೇಳಲಾಗಿದೆ. ಒಟ್ಟಾರೆ ಬಲ್ಲಕುಂದೆ ನಾಡಂತೂ ನೇರವಾಗಿ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿಪೂ. ೩೨೬ ರ ಸುಮಾರಿನಿಂದ ಮೌರ್ಯರ ಆಳ್ವಿಕೆಗೆ ಇದು ಒಳಪಟ್ಟಿತ್ತೆಂದು ಹೇಳಬಹುದು. ಅಶೋಕನ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ, ಜಂಟಿಗರಾಮೇಶ್ವರ, ಬ್ರಹ್ಮಗಿರಿ, ಕೊಪ್ಪಳ ಜಿಲ್ಲೆಯ ಕೊಪ್ಪಳ, ಪಾಲ್ಕಿಗುಂಡು, ರಾಯಚೂರು ಜಿಲ್ಲೆಯ ಮಸ್ಕಿಗಳಲ್ಲಿ ದೊರೆತಿವೆ. ಮಸ್ಕಿ, ಜಟಿಂಗ ರಾಮೇಶ್ವರ ಇವು ಬಲ್ಲಕುಂದೆ ನಾಡಿಗೆ ಸಮಿಪದ ಸ್ಥಳಗಳು. ಬಲ್ಲಕುಂದೆ ನಾಡಿನ ಉಡೆಗೊಳಂ, ನಿಟ್ಟೂರುಗಳಲ್ಲಿ ಅಶೋಕನ ಲಘು ಶಿಲಾಶಾಸನಗಳು ಲಭಿಸಿದ್ದು, ಅವುಗಳ ಕಾಲ ಕ್ರಿಪೂ. ೨೫೯-೨೫೮ ಎಂದು ನಿರ್ಧರಿಸಲಾಗಿದೆ. ಇವು ಬ್ರಾಹ್ಮಿಲಿಪಿಯಲ್ಲಿದ್ದು ಪ್ರಾಕೃತ ಭಾಷೆಯಲ್ಲಿವೆ. ಈ ಶಾಸನಗಳನ್ನು ಡಾ॥ ಎಸ್.ಶೆಟ್ಟರ್, ಡಾ॥ ಎಸ್.ರಾಜಶೇಖರ ಅವರು ಶೋಧಿಸಿದ್ದು ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ' ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ. ಈ ಎರಡೂ ಶಾಸನಗಳು ಧರ್ಮ ಸಂದೇಶ ಸಾರುತ್ತ ಉಪದೇಶ ನೀಡುತ್ತವೆ. ನಿಟ್ಟೂರಿನ ಶಾಸನ ಅಶೋಕನ ಧರ್ಮಪ್ರಚಾರ ಮಾಡುತ್ತ ೨೫೬ ದಿನ ಕಳೆದನೆಂದೂ ತನ್ನ ಗಡಿನಾಡಿನ ಉಚ್ಚ ಹಾಗೂ ಕೆಳವರ್ಗದ ಜನರೆಲ್ಲರೂ ಧರ್ಮಾಸಕ್ತರಾಗಬೇಕೆಂದೂ ಹೇಳಿದುದನ್ನು ನಿರೂಪಿಸುತ್ತದೆ. ಅದೇ ಗ್ರಾಮದ ಸಮೀಪದ ನಿಟ್ಟೂರಿನ ಇನ್ನೊಂದು ಶಾಸನ 'ರಾಜಾ ಅಸೋಕೋ' ಎಂದು ಪ್ರಾರಂಭವಾಗುತ್ತಿದ್ದು ಮಾತಾ, ಪಿತ, ಗುರುಗಳಿಗೆ ಬ್ರಾಹ್ಮಣರಿಗೆ ಶುಶ್ರೂಷೆ ಒದಗಿಸಿದುದನ್ನು ತಿಳಿಸುತ್ತದೆ. ಎರಡೂ ಶಾಸನಗಳಲ್ಲಿ ನೀತಿ ಬೋಧನೆ ಕಾಣುತ್ತೇವೆ. ಹೀಗೆ ಮೌರ್ಯರ ಆಡಳಿತ ಕಾಲದಲ್ಲಿ ಬಲ್ಲಕುಂದೆ ಪ್ರದೇಶವೂ ಅವರಿಗೆ ಒಳಪಟ್ಟಿತ್ತು.

ಸನ್ನತಿಯಲ್ಲಿ ಅಶೋಕನ ಶಿಲಾಶಾಸನ ಮಾಲಿಕೆಯನ್ನು ಹೊಂದಿರುವ ಚಪ್ಪಡಿಗಲ್ಲಿನ ಶಾಸನವೊಂದು ದೊರೆತಿದ್ದು ಮೌರ್ಯರ ಆಡಳಿತ ಕರ್ನಾಟಕದಲ್ಲಿ ಭದ್ರವಾಗಿ ನೆಲೆಯೂರಿತ್ತೆಂಬ ಅಂಶವನ್ನು ಇದು ತೋರಿಸುತ್ತದೆ. ಅತಿಹೆಚ್ಚು ಲಘು ಶಿಲಾಶಾಸನಗಳು ಕರ್ನಾಟಕದಲ್ಲಿ ದೊರೆತಿರುವುದೂ ಇದನ್ನು ಸಮರ್ಥಿಸುತ್ತದೆ.

ಮೌರ್ಯರ ನಂತರ ಪಾಟಲಿಪುತ್ರವನ್ನು ಕ್ರಮವಾಗಿ ಶುಂಗರು ಮತ್ತು ಕಾಣ್ವರು ಆಳಿದರು. ಕಾಣ್ವ ವಂಶದ ಕೊನೆಯ ಅರಸ ಸುಶರ್ಮನನ್ನು ಶುಂಗವಂಶದ ಶಿಶುಕನು ಸೋಲಿಸುತ್ತಾನೆ. ಈ ಶಿಶುಕನ ವಂಶದಲ್ಲಿ ೪೬೦ ವರ್ಷ ಕಾಲ ೧೯ ಜನ ರಾಜರು ಆಳಿದರೆಂದು ಮತ್ಸ್ಯಪುರಾಣ[೧೫] (ಅಧ್ಯಾಯ ೨೭೩) ತಿಳಿಸುತ್ತವೆ. ಹುಲ್ಲೂರು ಶ್ರೀನಿವಾಸ ಜೋಯಿಸರು[೧೬] ಮೌರ್ಯರ ಆಡಳಿತ ಕ್ರಿಪೂ. ೧೮೦ ಕ್ಕೆ ಕೊನೆಯಾಯಿತು. ಶುಂಗರು ೧೧೨ ವರ್ಷ ಆಳಿದರು ನಂತರ ಕಣ್ವರು ೪೫ ವರ್ಷ ಆಳಿದರು ಎಂದು ಹೇಳಿ ಕದಂಬ ಮಯೂರ ಶರ್ಮನ ಚಂದ್ರವಳ್ಳಿಯ ಶಾಸನ ಕ್ರಿ.ಶ. ೨೪೦ ಕ್ಕೆ ಸಂಬಂಧಪಟ್ಟಿದ್ದು ಇದರ ಹಿಂದೆ ಮೂರು ಶತಮಾನಗಳ ಕಾಲ ಶಾತವಾಹನರು ಆಳಿದರೆಂದು ತಿಳಿಸುತ್ತಾರೆ. ಆದರೆ ಇತ್ತೀಚಿನ ಶೋಧಗಳಿಂದ ಮಯೂರವರ್ಮನ ಕಾಲವನ್ನು ಕ್ರಿ.ಶ. ೩೫೦ ಎಂದು

ವಿದ್ವಾಂಸರು ನಿರ್ಧರಿಸಿದ್ದಾರೆ. ಹೀಗಾಗಿ ಕದಂಬರಿಗೂ ಶಾತವಾಹನರಿಗೂ ಮಧ್ಯದ ಅವಧಿಯಲ್ಲಿ ಕರ್ನಾಟಕದ ಮಧ್ಯಭಾಗವನ್ನು ಚುಟುವಂಶದವರು ಆಳಿದರು. ಇವರ ನಂತರ ಪಲ್ಲವರು ಈ ಭಾಗವನ್ನು ತಮ್ಮ ವಶಕ್ಕೆ ಪಡೆದಿದ್ದರು.

ಶಾತವಾಹನರು

ಕ್ರಿ.ಪೂ. ೨೨೦ ರಿಂದ ಕ್ರಿ.ಶ. ೨೩೦ ವರೆಗೆ ಆಳಿದ 'ಶಾತವಾಹನರ' ಮೂಲನೆಲೆ ಬಳ್ಳಾರಿ ಜಿಲ್ಲೆ ಎಂಬುದು ಕೆಲವು ವಿದ್ವಾಂಸರ ಹೇಳಿಕೆ. ಅಲ್ಲದೆ ಶಾತವಾಹನರು ಕರ್ನಾಟಕದವರೋ ಆಂಧ್ರದವರೋ ಎಂಬುದಕ್ಕೆ ವಿದ್ವಾಂಸರಲ್ಲಿ ವಾದ ವಿವಾದಗಳಿವೆ. ಪುರಾಣಗಳಲ್ಲಿ ಇವರನ್ನು 'ಆಂಧ್ರ ಭೃತ್ಯರು' ಎಂದು ಕರೆದಿರುವುದು ಈ ವಾದಗಳಿಗೆ ಕಾರಣವಾಗಿದೆ. ಈ ವಂಶದ ಅರಸರು ವೈಜಯಂತಿ (ಬನವಾಸಿ) ಮತ್ತು ಪ್ರತಿಷ್ಠಾನ (ಪೈಠಣ) ನಗರಗಳಿಂದ ಆಳುತ್ತಿದ್ದರೆಂದು ತಿಳಿದು ಬರುತ್ತದೆ. ಕನ್ನಡ ಪ್ರದೇಶವನ್ನು ಆಳಿದ ಇವರು ಕನ್ನಡಿಗರೆಂಬ ಅಭಿಪ್ರಾಯವಿದೆ.

ಆಂಧ್ರಪ್ರದೇಶದ ಶ್ರೀಕಾಕುಳ ಮತ್ತು ಧನಕಟಗಳಲ್ಲಿ ಈ ವಂಶದ ಕೆಲವರು ಆಳುತ್ತಿದ್ದುದು ತಿಳಿದು ಬರುವುದರಿಂದ ಹಾಗೂ ಕೊಂಡಾಪುರದಲ್ಲಿ ಶಾತವಾಹನರ ನಾಣ್ಯಗಳು ಇತರ ಕುರುಹುಗಳು ದೊರೆತಿರುವುದರಿಂದ ಇವರು ಆಂಧ್ರದವರೆಂಬ ಇನ್ನೊಂದು ವಾದವಿದೆ.

ವಾದಗಳೇನೇ ಇರಲಿ ಬಲ್ಲಕುಂದೆ ನಾಡು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು. ಆದೋನಿ ತಾಲೂಕಿನ ಮ್ಯಾಕಡೋಣಿಯ ಶಾತವಾಹನ ಶ್ರೀ ಪುಲಿಮಾಯಿಯ ಶಾಸನದಲ್ಲಿ ಈ ಪ್ರಾಂತ ಶಾತವಾಹನರದೆಂದು ಉಕ್ತವಾಗಿದೆ. ಹರವು ಎಂದರೆ ವಿಸ್ತಾರವಾದ ಪ್ರದೇಶ ಬಡಾವಣೆ, ರಾಷ್ಟ್ರ, ಬೀಡು ಮುಂತಾದ ಅರ್ಥಗಳಿವೆ. ಹಿರೇಹಡಗಲಿ ತಾಮ್ರ ಶಾಸನದಲ್ಲಿ 'ಸಾತಾಹನಿರಟ್ಟ' 'ಶಾತವಾಹನೀಹಾರ' ಎಂದಿದೆ. ಇದರಿಂದ ಶಾತವಾಹನರ ಪ್ರದೇಶವೆಂದು ಈ ಭಾಗವನ್ನು ಕರೆಯುತ್ತಿದ್ದುದು ಗೊತ್ತಾಗುತ್ತದೆ. ಡಾ॥ ವಿ.ಎಸ್.ಸುಖ್ತನಕರರಂಥ ವಿದ್ವಾಂಸರು ಶಾತವಾಹನರು ಬಲ್ಲಕುಂದೆ ನಾಡಿನವರೆಂದು ಹೇಳಿದ್ದಾರೆ. ಮ್ಯಾಕಡೋಣಿ ಮತ್ತು ಹಿರೇಹಡಗಲಿಯಲ್ಲಿ ದೊರೆತ ತಾಮ್ರ ಪತ್ರಗಳಲ್ಲಿ ಬಲ್ಲಕುಂದೆ ನಾಡಿನ ಪ್ರದೇಶವನ್ನು 'ಶಾತಹನಿಹಾರ' 'ಸಾತವನಿರಠ್ಠವೆಂದು ಕರೆದುದನ್ನು ಇವರು ಆಧಾರವಾಗಿ ಕೊಡುತ್ತಾರೆ.

ಸೀಮುಖ (ಶ್ರೀಮುಖ) ಶಾತವಾಹನ ವಂಶ ಸ್ಥಾಪಕ. ಕುಂತಳ ಶಾತಕರಣಿ ಹಾಲರಾಜರು ಉತ್ತರಕನ್ನಡ, ಬಳ್ಳಾರಿ, ಧಾರವಾಡ ಜಿಲ್ಲೆಗಳ ಪ್ರದೇಶವನ್ನು ಆಳುತ್ತಿದ್ದರು. ವಾತ್ಸಾಯನನ ಕಾಮಸೂತ್ರದಲ್ಲಿ ಕುಂತಳ ಶಾತಕರ್ಣಿಯ ಉಲ್ಲೇಖವಿದೆ. ಶಾತವಾಹನರ ೧೭ ನೆಯ ರಾಜ ಹಾಲ ಪ್ರಸಿದ್ಧ ಅರಸ, 'ಗಥಾಸಪ್ತಸತಿ' ಎಂಬ ಕೃತಿಯನ್ನು ರಚಿಸಿದ್ದು, ಇದರಲ್ಲಿ ೭೦೦ ಶೃಂಗಾರ ಪದ್ಯಗಳಿವೆ. ಈ ಹಾಲನಿಗೆ ಶಾಲಿವಾಹನನೆಂಬ ಹೆಸರಿತ್ತೆಂದು ಕ್ರಿ.ಶ. ೭೮ ರಿಂದ ಪ್ರಾರಂಭಗೊಂಡ ಶಾಲಿವಾಹನ ಶಕವನ್ನು ಹಾಲನೇ ಪ್ರಾರಂಭಿಸಿದನೆಂದು ಅನೇಕ ವಿದ್ವಾಂಸರ ಅಭಿಪ್ರಾಯ. ನಂತರ ಬಂದ

ಗೌತಮೀಪುತ್ರ ಶಾತಕರ್ಣಿ (ಕ್ರಿ.ಶ. ೧೦೫-೧೩೦) ಸಮರ್ಥ ಅರಸ. ಈತನಿಗೆ 'ತ್ರಿಸಮುದ್ರತೋಯ ಶಾತವಾಹನ' ಎಂಬ ಬಿರುದು ಇತ್ತು. ಇವನ ಮಗ ವಾಸಿಷ್ಠ ಪುತ್ರ ಪುಳಮಾಯಿ (ಕ್ರಿ.ಶ. ೧೩೦-೧೫೯) ಈತನು ಔರಂಗಾಬಾದ್ ಜಿಲ್ಲೆಯ ಪೈಠಾಣ(ಪ್ರತಿಷ್ಠಾನ)ದಲ್ಲಿ ನೂತನ ರಾಜಧಾನಿಯನ್ನು ಕಟ್ಟಿಸುತ್ತಾನೆ. ಒಟ್ಟಾರೆ ಈ ಶಾತವಾಹನರು ಬಲ್ಲಕುಂದೆ ಪ್ರದೇಶವನ್ನು ಆಳಿದ್ದರೆಂದು ಮಾತ್ರ ಹೇಳಬಹುದು. ಇದಕ್ಕಿಂತ ಹೆಚ್ಚಿನ ಅಂಶಗಳು ತಿಳಿದುಬರುವುದಿಲ್ಲ.

ಗುಪ್ತರು

ಉತ್ತರಭಾರತದಲ್ಲಿ ಚಕ್ರವರ್ತಿಗಳಾಗಿದ್ದ ಗುಪ್ತರ ಆಳ್ವಿಕೆ ಕೆಲವು ವರ್ಷಗಳ ಕಾಲವಾದರೂ ಈ ಬಲ್ಲಕುಂದೆ ನಾಡಿಗೆ ಒಳಪಟ್ಟಿತ್ತು. ಕೋಟೂರಿನ ಶಾಸನ ಬಲ್ಲಕುಂದೆ ಪ್ರದೇಶವನ್ನು ಗುಪ್ತರು ಆಳಿರುವರೆಂದು ಹೇಳಿರುವುದನ್ನು ಹಿಂದೆಯೇ ನೋಡಲಾಗಿದೆ. ಸಮುದ್ರಗುಪ್ತನು ಕ್ರಿ.ಶ. ೩೪೦ ರಲ್ಲಿ ದಕ್ಷಿಣ ಭಾರತಕ್ಕೆ ದಂಡಯಾತ್ರೆ ಕೈಗೊಂಡು ಕಂಚಿಯ ವಿಷ್ಣುಗೋಪನನ್ನು ಸೋಲಿಸಿದ ವಿವರ ಅಲಹಾಬಾದ್ ಸ್ತಂಭಶಾಸನದಲ್ಲಿದೆ. ದಕ್ಷಿಣ ಭಾರತವನ್ನು ಸೋಲಿಸಿದ ಸಮುದ್ರಗುಪ್ತನಿಗೆ ಎಲ್ಲರೂ ಅಧೀನರಾಗಿ ಇರಬೇಕಾಯಿತು. ಇದಕ್ಕೆ ಬಲ್ಲಕುಂದೆ ಪ್ರದೇಶವೇನೂ ಹೊರತಾಗಿಲ್ಲ. ಈ ಸಂದರ್ಭದಲ್ಲಿ ಸಮುದ್ರಗುಪ್ತನು ತನ್ನ ವಂಶಸ್ಥರನ್ನು ಈ ಭಾಗಕ್ಕೆ ಒಡೆಯರನ್ನಾಗಿ ನೇಮಿಸಿರಬೇಕು. ಹೀಗೆ ನೇಮಿಸಲ್ಪಟ್ಟ ಗುಪ್ತ ವಂಶಕ್ಕೆ ಸಂಬಂಧಪಟ್ಟ ಶಾಖೆಯೊಂದು ಬಲ್ಲಕುಂದೆ ನಾಡಿನ ಗಡಿಭಾಗದಲ್ಲಿ ಆಳುತ್ತಿದ್ದುದು ಶಾಸನಗಳು ಹೇಳುತ್ತಿವೆ. ಅವರೆಂದರೆ 'ಗುತ್ತರು' 'ಗುಪ್ತ'ವೆಂಬುದು ರೂಢಿಯಲ್ಲಿ ಗುತ್ತಿ ಎಂದಾಗಿದೆ. ಇದರ ರಾಜಧಾನಿ 'ಗುತ್ತಪೊಳಲ್' 'ಗುತ್ತವೊಳಲ್' ಇದು ಈಗಿನ ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ಗುತ್ತಲಗ್ರಾಮವಾಗಿದೆ. ಇವರು ತಾವು ಉತ್ತರೇಯ ಚಂದ್ರಗುಪ್ತ ಮತ್ತು ವಿಕ್ರಮಾದಿತ್ಯನ ವಂಶದವರೆಂದು ಹೇಳಿಕೊಂಡಿದ್ದಾರೆ. ಅಲ್ಲದೆ ತಾವು 'ಪಾಟಲೀಪುರವರಾಧೀಶ್ವರ ಉಜ್ಜೈನಿಮಹಾಕಾಳ ದೇವ ಲಬ್ಧವರಪ್ರಸಾದ'ರೆಂದು ಕರೆದುಕೊಂಡಿದ್ದಾರೆ. ಗುಪ್ತರ ರಾಜಧಾನಿ ಪಾಟಲೀಪುತ್ರ ವಾಗಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಗುಪ್ತರು ಮಹಾಮಂಡಳೇಶ್ವರರಾಗಿದ್ದರು. ಈ ವಂಶದ ಅರಸರು ಬಲ್ಲಕುಂದೆ ನಾಡಿನ ಕೆಲವು ದೇವಾಲಯಗಳಿಗೆ ದತ್ತಿ ನೀಡಿದ್ದಾರೆ. ಗುತ್ತಲಕ್ಕೂ ಬಳ್ಳಾರಿ ಜಿಲ್ಲೆಯ ಪ್ರದೇಶ ಸಮೀಪವಾಗಿರುವುದರಿಂದ ಇವರಿಗೂ ಬಲ್ಲಕುಂದೆ ಪ್ರದೇಶಕ್ಕೂ ಹೆಚ್ಚಿನ ಸಂಬಂಧ ಉಂಟಾಯಿತು. ಕುರುವತ್ತಿಯ ಕ್ರಿ.ಶ. ೧೧೮೧ ಡಿಸೆಂಬರ್ ೨೫ ರ ಶಾಸನದಲ್ಲಿ ಈ ವಂಶದ ವಿಕ್ರಮಾದಿತ್ಯದೇವ[೬] ಬೆಳಹುಗೆ ೭೦ ಬೆಣ್ಣೆವೂರು ೧೨ಗಳನ್ನು ಆಳುತ್ತಿರುವಾಗ ಇವನಲ್ಲಿ ಸುಸಂಗದ ದಣ್ಣಾಯಕ ಮಹಾಮಂಡಳೇಶ್ವರ ವಿಜಯಪಾಂಡ್ಯನ ಆಜ್ಞೆಯ ಮೇರೆಗೆ ಬೆಣ್ಣೆವೂರಿನ ಬಾಚರಸ ಮತ್ತು ಕುರುವೊತ್ತಿ ಮಹಾಜನರ ಸನ್ನಿಧಿಯಲ್ಲಿ ಪೂರ್ವಕಾಲದಲು ವಿಕ್ರಮಾದಿತ್ಯ ಕೊಟ್ಟ ಸ್ಥಳ ವೃತ್ತಿಸಹಿತ ೭೦ ಮತ್ತರು ಭೂಮಿಯನ್ನು ಆಹವಮಲ್ಲೇಶ್ವರ ದೇವರಿಗೆ ದಾನ ಬಿಡುತ್ತಾನೆ. ಬೆಣ್ಣೆವೂರು ಹನ್ನೆರಡು ಗುತ್ತರ ಆಳ್ವಿಕೆಗೊಳಪಟ್ಟಿದುದು ಮೇಲಿನ ಶಾಸನದಿಂದ ಗೊತ್ತಾಗುತ್ತದೆ. ಗುಪ್ತರು ಮತ್ತು ಕದಂಬರ ನಡುವೆ

ವೈವಾಹಿಕ ಸಂಬಂಧವಿದ್ದುದು ಶಾಸನ ಕಾವ್ಯಗಳಿಂದ ಗೊತ್ತಾಗುತ್ತದೆ. ತಾಳಗುಂದ ಸ್ತಂಭಶಾಸನವು ಬನವಾಸಿಯ ಕಾಕುಸ್ಥವರ್ಮನ ಮಗಳನ್ನು ಗುಪ್ತಕುಲದರಸನಿಗೆ ಕೊಟ್ಟು ವಿವಾಹಮಾಡಲಾಗಿತ್ತೆಂದು ತಿಳಿಸುತ್ತದೆ. ಚಂದ್ರಗುಪ್ತನ ಆಸ್ಥಾನಕವಿ ಕಾಳಿದಾಸನ ನಾಟಕಗಳಲ್ಲಿ ಹಂಪಿಯ ಪ್ರದೇಶವಾದ ಹೇಮಕೂಟದ ಪ್ರಸ್ತಾಪ ಬರುತ್ತಿದ್ದು ಸಮುದ್ರಗುಪ್ತನ ಪುತ್ರರಾದ ರಾಮಗುಪ್ತ ಮತ್ತು ಚಂದ್ರಗುಪ್ತ ವಿಕ್ರಮಾದಿತ್ಯರು ಯುದ್ಧಕ್ಕಾಗಿ ಬಲ್ಲಕುಂದೆಗೆ ಬಂದಿದ್ದರೆಂಬ ಅಂಶವನ್ನು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು[೧೮] ಕಾವ್ಯಗಳ ಆಧಾರಗಳಿಂದ ಹೀಗೆ ನಿರೂಪಿಸುತ್ತಾರೆ.

"ಪಾಟಲೀಪುತ್ರದ ಚಕ್ರವರ್ತಿ ಸಮುದ್ರಗುಪ್ತನಿಗೆ ರಾಮಗುಪ್ತ ಹಿರಿಯ ಮಗ ಚಂದ್ರಗುಪ್ತ ವಿಕ್ರಮಾದಿತ್ಯ ಕಿರಿಯಮಗ. ಕಾಲಕ್ರಮದಲ್ಲಿ ರಾಮಗುಪ್ತನು ಸಿಂಹಾಸನವನ್ನು ಏರಿದನು. ಚಂದ್ರಗುಪ್ತನು ಯುವರಾಜನಾದನು. ಆಗ ಚಕ್ರಾಧಿಪತ್ಯದ ನೆರೆಯಲ್ಲಿ ಆಳುತ್ತಿದ್ದ ಖಾಸಾಧಿಪತಿ ಎಂಬ ಶಕರಾಜನು ಗುಪ್ತ ರಾಜ್ಯದ ಮೇಲೆ ದಾಳಿ ಮಾಡಿದನು. ಸೋದರರಿಬ್ಬರು ಸೇನಾ ಸಮೇತರಾಗಿ ದಾಳಿ ಎದುರಿಸಲು ಹೊರಟರು. ರಾಮಗುಪ್ತನ ರಾಣಿವಾಸದವರೂ ಇವರೊಡನೆ ಬಂದು ಅನತಿ ದೂರದಲ್ಲಿ ಬಿಡಾರ ಮಾಡಿದರು. ಸೋದರರು ಸೋತುಹೋಗಿ ಇರುಪಿನಲ್ಲಿ ಸಿಕ್ಕಿದರು. ಶಕಾಧಿಪತಿಯು ರಾಮಗುಪ್ತನ ರಾಣಿ ದೃವಸ್ವಾಮಿಣಿಯನ್ನು ತನಗೆ ಒಪ್ಪಿಸಬೇಕೆಂದು ಬಲಾತ್ಕರಿಸಿದನು. ಆತ್ಮರಕ್ಷಣೆಗಾಗಿಯೂ, ರಾಜ್ಯಾಡಳಿತದ ಹಿತಕ್ಕಾಗಿಯೂ ತನ್ನ ರಾಣಿಯನ್ನು ಶಕಾಧಿಪತಿಯ ಬಿಡಾರಕ್ಕೆ ಕಳುಹಿಸಲು ಸಿದ್ಧನಾದನು. ದೃವದೇವಿಯು ಅವಮಾನ ಸಹಿಸಲಾರದೆ ಶೋಕಿಸಿದಳು. ಯುವರಾಜನಾದ ಚಂದ್ರಗುಪ್ತನು ತನ್ನ ಅಣ್ಣನ ಹೇಡಿತನವನ್ನು ನೋಡಿ ಸಹಿಸಲಾಗದೆ ಆಗ ಒಂದು ಉಪಾಯ ಮಾಡಿದನು. ತಾನು ತನ್ನ ಕೆಲವರು ಅನುಯಾಯಿಗಳು ತರುಣಿಯರ ವೇಶ ಧರಿಸಿ ಶತ್ರುವಿನ ವಶವಾಗುವಂತೆ ನಟಿಸಿ, ಶಕಾಧಿಪತಿಯನ್ನು ಅವನ ಧಳವಾಯಿಗಳನ್ನು ಜಡೆಯಲ್ಲಿ ಧರಿಸಿದ್ದ ಆಯುಧಗಳಿಂದ ಕೊಂದುಹಾಕಿದರು. ಗುಪ್ತರಿಗೆ ಜಯವಾಯಿತು. ರಾಣಿವಾಸದವರು ರಕ್ಷಿಸಲ್ಪಟ್ಟರು. ಸಾಮ್ರಾಜ್ಯದ ಗೌರವವೂ ಉಳಿಯಿತು. ಈ ಇತಿಹಾಸ ಘಟನೆಯು ಅರಿಪುರ ಬೀಡಿನಲ್ಲಿ ನಡೆಯಿತೆಂದು ಬಾಲಕವಿಯು ಅಲಿಪುರಂ ಸ್ಕಂದವಾರಂ ಎಂದು ಭೋಜಕವಿಯು ಹೇಳಿರುವನು ತರುಣಿಯರು ಕಾರ್ತಿಕೇಯಪುರದಲ್ಲಿ ಬಿಡದಿ ಮಾಡಿದ್ದರೆಂದು ಒಂದು ಈತಿವೃತ್ತದಲ್ಲಿ ಹೇಳಿದೆ.

ಶಕರಾಜನಾದ ಖಾಸಾಧಿಪತಿ ಯಾರು? ಅರಿಪುರ ಮತ್ತು ಕಾರ್ತಿಕೇಯ ನಗರ ಯಾವುದು? ಎಂಬ ವಿಷಯದಲ್ಲಿ ಚರಿತ್ರೆಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಬಳ್ಳ + ಅರಿಪುರ = ಬಳ್ಳಾರಿಪುರವೇ ಬಾಣ ಅರಿಪುರವಾಗಿರಬೇಕು. ಬಲ್ಲಕುಂದೆಯಲ್ಲಿ ಸೆರೆಮನೆ ಇರುವ ಪ್ರದೇಶಕ್ಕೆ ಅಲಿಪುರ ಎಂದು ಹೆಸರಿದೆ. ಇದೇ ಭೋಜಕವಿಯ ಅಲಿಪುರವಾಗಿರಬೇಕು.

ಸೊಂಡೂರು ಅಥವಾ ಕುಡಿತಿನಿ ಬಳಿಯ ಕಾರ್ತಿಕೇಯಸ್ವಾಮಿಯ ನಿವಾಸವೇ ರಾಣಿವಾಸದವರು ಇಳಿದಿದ್ದ ಬಿಡಾರ. ಚಿತ್ರದುರ್ಗ ಬಳಿ 'ಖಾಸಾವರಹಟ್ಟಿ' ಎಂಬ ಗ್ರಾಮವಿದೆ. 'ಖಾಸಾ'

ಎಂಬ ರೆಡ್ಡಿಯವರ ಬೆಡಗಿನವರು ಇರುವರು. ಇವರ ಹೆಂಗಸರು ಉಡುಪು ಧರಿಸುವುದರಲ್ಲಿಯೂ ವೈವಿಧ್ಯವಿದೆ. ಅಂದಿನ ಖಾಸಾಗುಂಪಿನ ಅಧಿಪತಿಯೇ ಶಕಾಧಿಪತಿಯಾಗಿರಬೇಕು. ಘಟನೆ ನಡೆದ ಸ್ಥಳ ಬಳ್ಳಾರಿದುರ್ಗ. ಘಟನೆ ನಡೆದ ಕಾಲ ಕ್ರಿ.ಶ. ೩೮೮ ಕ್ಕೆ ಕೊಂಚ ಕಾಲ ಮುಂಚೆ. ಆಗಲೇ ಬಲ್ಲಕುಂದೆ ನಾಡು ಪ್ರಸಿದ್ಧವಾದ ದುರ್ಗವಾಗಿದ್ದಂತೆ ವ್ಯಕ್ತವಾಗುತ್ತದೆ. ಒಟ್ಟಾರೆ ಗುಪ್ತರ ನೇರ ಆಳ್ವಿಕೆಯನ್ನು ಕೆಲವು ವರ್ಷಗಳ ಮಟ್ಟಿಗಾದರೂ ಬಲ್ಲಕುಂದೆ ನಾಡು ಕಂಡಿತ್ತೆಂಬುದು ಮೇಲಿನ ಅಂಶಗಳಿಂದ ಗೊತ್ತಾಗುತ್ತದೆ.

ಕದಂಬರು

ಕದಂಬರು ಕನ್ನಡಿಗರಾಗಿದ್ದು, ಕನ್ನಡದ ಪ್ರಥಮ ಚಕ್ರವರ್ತಿಗಳೆಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ. ಶಿವ ಪಾರ್ವತಿಯರಿಂದ ಜನಿಸಿದ ಕದಂಬನೆಂಬುವವನೇ ಈ ವಂಶದ ಮೂಲಪುರುಷನೆಂದು ದಂತಕಥೆ ಹೇಳುತ್ತದೆ. ಶಾಂತಿವರ್ಮನ ಸುಮಾರು ಕ್ರಿ.ಶ. ೪೫೦ ರ ತಾಳಗುಂದ ಶಾಸನದ ಪ್ರಕಾರ ಈ ವಂಶದ ಸ್ಥಾಪಕ ಮಯೂರಶರ್ಮ. ಅವನ ಮನೆಯ ಬಳಿ ಕದಂಬವೃಕ್ಷವಿದ್ದುದರಿಂದ ಆ ಮನೆತನಕ್ಕೆ ಕದಂಬರು ಎಂಬ ಹೆಸರು ಬಂತೆಂದು ಹೇಳುತ್ತಾ ಆತನ ಗುರು ವೀರಶರ್ಮನೆಂದು ತಿಳಿಸುತ್ತದೆ. ಗುಡ್ನಾಪುರ ಶಾಸನ ವೀರಶರ್ಮನನ್ನು ಮಯೂರನ ಅಜ್ಜನೆಂದು ಹೇಳುತ್ತದೆ. ರವಿವರ್ಮನ ಹಲಸಿ ತಾಮ್ರಪಟಗಳಿಂದ ಬಂಧುಷೇಣ ಮಯೂರಶರ್ಮನ ತಂದೆಯೆಂದು ಗೊತ್ತಾಗುತ್ತದೆ. ತನ್ನ ಅಜ್ಜ ಮತ್ತು ಗುರು ವೀರಶರ್ಮನ ಜೊತೆ ಮಯೂರನು ಕಂಚಿಗೆ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಾನೆ. ಅಲ್ಲಿ ಪಲ್ಲವರ ಅಶ್ವದಳದವರಿಂದ ಅವಮಾನಿತನಾದಂತೆ (ಪಲ್ಲವಾಶ್ವ ಸಂಸ್ಥೇನ ತೀವ್ರನ ರೋಷಿತ ಇದರಿಂದ ಬಂಡೆದ್ದು ಶ್ರೀಪರ್ವತಕ್ಕೆ ಬಂದು ಪಲ್ಲವರ ವಿರುದ್ಧ ಬಂಡಾಯ ಹೂಡಿ ಜಯಶೀಲನಾಗಿ ಪಲ್ಲವರ ಮಾಂಡಲೀಕರಾದ ಬಾಣರನ್ನು ಸೋಲಿಸುತ್ತಾನೆ. ಮುಂದೆ ಸಾಮ್ರಾಜ್ಯ ಕಟ್ಟಿ ಚಕ್ರವರ್ತಿಯಾಗುತ್ತಾನೆ. ಇದು ನಡೆದದ್ದು ಕ್ರಿ.ಶ. ಸು ೩೫೦ ರಲ್ಲಿ.

ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಕದಂಬರ ನೇರ ಆಳ್ವಿಕೆಗೆ ಬಲ್ಲಕುಂದೆ ಒಳಪಟ್ಟಿತ್ತು. ಇವರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶವನ್ನು ಕದಂಬಳಿಗೆ ನಾಡು ಎಂದು ಕರೆಯಲಾಗುತ್ತಿತ್ತು. ಇದನ್ನೇ ಮುಂದೆ ಕದಂಬಳಿಗೆ ಸಾಸಿರವೆಂದು ಕರೆಯಲಾಗಿದೆ. ಈ ವಿಭಾಗವು ಬಲ್ಲಕುಂದೆ ನಾಡಿನ ಸಮೀಪದ ಹರಪನಹಳ್ಳಿ, ಕೂಡ್ಲಿಗಿ ತಾಲೂಕುಗಳ ಕೆಲವು ಗ್ರಾಮಗಳನ್ನು ಚಿತ್ರದುರ್ಗ, ಚಳ್ಳಕೆರೆ, ಜಗಳೂರು, ದಾವಣಗೆರೆ ತಾಲೂಕುಗಳ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಉಚ್ಚಂಗಿ ೩೦ ಕದಂಬಳಿಗೆ ಸಾಸಿರದ ಉಪವಿಭಾಗವಾಗಿತ್ತು. ಉಚ್ಚಂಗಿಯನ್ನು ಉಚ್ಚಶೃಂಗ ವಿಷಯವೆಂದು ಕದಂಬರ ಕಾಲದಲ್ಲಿ ಕರೆಯಲಾಗುತ್ತಿತ್ತು. ಕದಂಬರಿಗೆ ಇದೊಂದು ಪ್ರಮುಖ ವಿಭಾಗವಾಗಿತ್ತು. ಕಾಕುತ್ಸವರ್ಮನ (ಕ್ರಿ.ಶ. ೪೩೫-೫೫) ಪುತ್ರ ಕುಮಾರವರ್ಮ ಉಚ್ಚಂಗಿದುರ್ಗದಲ್ಲಿದ್ದು ಆಳುತ್ತಿದ್ದನೆಂದು ಮೋರೆಸ್ ಅವರ ಅಭಿಪ್ರಾಯವಾಗಿದೆ. ಅನಂತರ ಮೃಗೇಶವರ್ಮನ ಸಹೋದರ

ಶಿವಮಾಂಧಾತೃಪಿನ ಮಗ ಉಚ್ಚಂಗಿಯಲ್ಲಿ ಮಾಂಡಳಿಕನಾಗಿದ್ದು ಅವನು ಚಕ್ರವರ್ತಿಗೆ ವಿರುದ್ಧ ನಿಂತಿದ್ದರಿಂದ ರವಿವರ್ಮನು ತನ್ನ ಸಹೋದರ ಶಿವರಥನನ್ನು ಮಾಂಡಲೀಕನನ್ನಾಗಿ ನೇಮಿಸುತ್ತಾನೆ. ಮಯೂರವರ್ಮ ರಾಜ್ಯವಿಸ್ತಾರ ಮಾಡಿದಾಗ ಶ್ರೀಪರ್ವತ ಪ್ರದೇಶವೆಂಬುದು ಚಿತ್ರದುರ್ಗ ಮತ್ತು ಹಗರಿನದಿಯ ಬಳಿಯ ಬೆಟ್ಟಸಾಲೆಂದು ವಿದ್ವಾಂಸ ಅಭಿಪ್ರಾಯ. ಹೀಗೆ ಬಲ್ಲಕುಂದೆ ನಾಡಿನಲ್ಲಿ ಕದಂಬ ವಂಶದವರ ಆಳ್ವಿಕೆ ಬಹಳ ಹಿಂದಿನಿಂದಲೇ ಪ್ರಾರಂಭವಾಯಿತು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕೋಗಳಿ ೫೦೦ ವಿಭಾಗವನ್ನು ಕದಂಬ ವಂಶದ ಮಹಾಮಂಡಳೇಶ್ವರರು ಆಳುತ್ತಿದ್ದರು. (ಇವರನ್ನು ಕುರಿತು ಮುಂದೆ ವಿವೇಚಿಸಲಾಗಿದೆ) ಹೀಗೆ ಕದಂಬರಿಗೂ ಬಲ್ಲಕುಂದೆ ನಾಡಿಗೂ ವಿಶಿಷ್ಟವಾದ ಸಂಬಂಧವಿದೆ.

ಗಂಗರು

ಕರ್ನಾಟಕದ ಇತಿಹಾಸದಲ್ಲಿ ಗಂಗವಂಶದ ಅರಸರದು ವಿಶಿಷ್ಟ ಸ್ಥಾನ. ಕನ್ನಡದ ಸಂಸ್ಕೃತಿಗೆ ಇವರು ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಈ ಗಂಗರ ಆಳ್ವಿಕೆಗೆ ಕೆಲವು ವರ್ಷಗಳ ಮಟ್ಟಿಗಾದರೂ ಬಲ್ಲಕುಂದೆ ನಾಡಿನ ಭಾಗ ಒಳಪಟ್ಟಿತ್ತೆಂಬುದನ್ನು ಶಾಸನಗಳು ನಿರೂಪಿಸುತ್ತವೆ. ಕೋಗಳಿಯ[೧೯] ಕ್ರಿ.ಶ. ೧೦೫೫ ಅಕ್ಟೋಬರ್ ೨೫ ರ ಶಾಸನ ಗಂಗ ದೊರೆ ದುರ್ವಿನೀತನು ಕೋಗಳಿಯಲ್ಲಿ ಬಸದಿಯೊಂದನ್ನು ನಿರ್ಮಿಸಿದ ಬಗ್ಗೆ ಹೇಳುತ್ತದೆ.

ಇದು ದುರ್ವ್ವಿನೀತನಿಂದಂ
ಮೊದಲೊಳ್ ಬಸದಿಯಿದನಾಡಮತ್ತರ ಘಳೆಯಂ
ವಿಧಿತಯಶರಿನ್ದ್ರ ಕೀರ್ತಿಗ
ಉದಿತೋದಿತಮಾಗೆ ಮಾಡಿದರ್ಕ್ಕೋಗಳಿಯೊಳ್ ।

ಎಂದು ಬರುತ್ತದೆ. ದುರ್ವನೀತ ಗಂಗನಿಂದ ನಿರ್ಮಿಸಲ್ಪಟ್ಟ ಬಸದಿಯನ್ನು ಇಂದ್ರಕೀರ್ತಿ ಮುನಿಯು ಜೀರ್ಣೋದ್ಧಾರ ಮಾಡಿದ್ದನ್ನು ಮೇಲಿನ ಶಾಸನ ನಿರೂಪಿಸುತ್ತದೆ. ಈ ದುರ್ವಿನೀತನ ಕಾಲ ಕ್ರಿ.ಶ. ೫೨೯-೫೭ ಈತನ ಅವಧಿಯಲ್ಲಿ ಬಲ್ಲಕುಂದೆ ನಾಡು ಗಂಗರ ಆಳ್ವಿಕೆಗೆ ಒಳಪಟ್ಟಿತ್ತು.

ಅಂಬಳಿ ಶಾಸನವಲ್ಲಿಯೂ ದುರ್ವಿನೀತನು ಬಲ್ಲಕುಂದೆ ಪಕ್ಕದನಾಡಿನ ಕೋಗಳಿ ನಾಡಿನಲ್ಲಿದ್ದಂತೆ ಅಮ್ಮಳಿ ಶಾಸನ ತಿಳಿಸುತ್ತದೆ.

ಧರೆಗೆಸೆದಿರ್ಪ್ಪಂಮ್ಮಳಿಯಂ ।
ಧರಣೀಪತಿ ದುರ್ವ್ವಿನೀತ ಗಂಗಂಪರಮಾ ॥
ಧರದಿಂದೆ ರಾಜ್ಯಚಿಹ್ನ ।
ಬೆರಸುಕುಡಲ್ಪಡೆದ ನೆಸೆಯ ಪಶುಪತಿ ಭಟ್ಟಾಂ ॥ ಎಂದಿದೆ.

ಗಂಗರು ರಾಷ್ಟ್ರಕೂಟರೊಡನೆ ಯುದ್ಧಮಾಡಬೇಕಾದಾಗ ಅವರನ್ನು ಮೊದಲು ಕಂಪಿಲಿಯಲ್ಲಿ ಎದುರಿಸಿದಂತೆ ಶಾಸನವೊಂದು ತಿಳಿಸುತ್ತದೆ[೨೦]. ಹೀಗಾಗಿ ಈ ಕಾಲಕ್ಕೆ ಗಂಗರ ಪ್ರಭಾವ ಬಲ್ಲಕುಂದೆ ನಾಡಿನ ಭಾಗವಾಗಿದ್ದ ಕಂಪಲಿಯವರೆಗೆ ಇತ್ತು.

ಬಾದಾಮಿ ಚಾಲುಕ್ಯರು

ಕದಂಬರ ಕೃಷ್ಣವರ್ಮನನ್ನು ಕ್ರಿ.ಶ. ೫೪೦ ರಲ್ಲಿ ಆತನ ಮಾಂಡಲೀಕನಾದ ಚಾಲುಕ್ಯ ಒಂದನೇ ಪುಲಿಕೇಶಿಯು ಸೋಲಿಸಿ ಕ್ರಿ.ಶ. ೫೪೩-೪೪ ರಲ್ಲಿ ಅಶ್ವಮೇಧ ಯಾಗಮಾಡಿ ಚಕ್ರವರ್ತಿ ಎನಿಸಿದ. ಹೀಗೆ ಚಾಲುಕ್ಯರ ಚಕ್ರಾಧಿಪತ್ಯ ಪ್ರಾರಂಭವಾಯಿತು. ಇವರ ಆಳ್ವಿಕೆಗೂ ಬಲ್ಲಕುಂದೆ ನಾಡು ಒಳಪಟ್ಟಿದ್ದು ಈ ವಂಶದ ಚಕ್ರವರ್ತಿಗಳ ಕೆಲವು ಶಾಸನಗಳೂ ಈ ಪ್ರದೇಶದಲ್ಲಿ ಲಭ್ಯವಾಗಿವೆ. ಬದಾಮಿ ಚಾಲುಕ್ಯರಲ್ಲಿ ಪ್ರಸಿದ್ಧನಾದ ಇಮ್ಮಡಿ ಪುಲಿಕೇಶಿಯು ಬಾಣದೊರೆ ರಣವಿಕ್ರಮನನ್ನು ಸೋಲಿಸಲು ಬಲ್ಲಕುಂದೆ ನಾಡಿಗೆ ಬಂದಿದ್ದ. ರಣವಿಕ್ರಮನನ್ನು ಸೋಲಿಸಿ 'ಎಳ್ಪತ್ತು ಸಿಂಭಿಗೆ', ನಾಡನೂರು ಗ್ರಾಮಗಳನ್ನು ಮಹಾರಾಜರಿಗೆ ಕೊಟ್ಟಿದ್ದು ಗುತ್ತಿ ತಾಲೂಕಿನ ಪೆದ್ದವಡಗೂರು[೨೧] ಶಾಸನದಿಂದ ಹೀಗೆ ತಿಳಿದುಬರುತ್ತದೆ.

"ಸ್ವಸ್ತಿ ಸತ್ಯಾಶ್ರಯ ಶ್ರೀ ಪೃಥುವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟಾರರ ದತ್ತಿ ನಾಡನೊರೊಳ್ರಣ ವಿಕ್ರಮನಾನೆ ಜೆಯದಿಗಾಳ್ಕೆತಿತ್ತು ಸಿಂಭಿಗೆ ಕೊಳ್ಗೊಳದುಳ್ಳೀಜ್ ಎವ್ವಿದು ಗೆಲ್ದು ಅಲ್ಲಿ ಮಹಾಜನ ಮಾಸ್ಕರೆದು ಸಿಗಳ ಬಾಪ್ಪಿಸ್ತು ಜೀವಿತಂ ಬೇಡಿಕೊಳಂಮೆಂದೊಡೆ" ಎಳ್ಪತ್ತು ಸಿಂಬಗೆ ಮತ್ತು ನಾಡನೂರ ಗ್ರಾಮಗಳನ್ನು ಕೇಳಿ ಪಡೆದುಕೊಳ್ಳುತ್ತಾರೆ.

ಬಲ್ಲಕುಂದೆ ನಾಡಿನ ಕುರುಗೋಡು ಶಾಸನದಲ್ಲಿ[೨೨] ಕುರುಗೋಡಿನ ಜನರು ಈತನಿಂದ ದತ್ತಿ ಪಡೆದುದನ್ನು ಹೇಳಲಾಗಿದೆ. ಶಾಸನದಲ್ಲಿ "ಸ್ವಸ್ತಿಶ್ರೀ ಸತ್ಯಾಶ್ರಯ ದತ್ತಿಯ ಪಡೆದ ಕುಱುಂಗೋಡ ವ್ಯವಸ್ಥೆ ಎನ್ತೆನ್ಪೊಡೆ ಪಟನೆಣ್ಪುಗೇಣ ೧೮ ಕೋಲು ಮೊನ್ನು ನವಿಲವೊನ್ನು" ಎಂಬ ಮಾಹಿತಿ ಬರುತ್ತದೆ. ಚಾಲುಕ್ಯ ಅಭಿನವಾದಿತ್ಯನು ಕುಪ್ಪಶರ್ಮನೆಂಬ ಬ್ರಾಹ್ಮಣನಿಗೆ ಉಚ್ಚಶೃಂಗ ವಿಷಯೇ ನೆಲ್ಕುಂದ ನಾಮ ಗ್ರಾಮವನ್ನು ದಾನ ಬಿಡುತ್ತಾನೆ. ಈ ಶಾಸನದಲ್ಲಿ[೨೩] ಉತ್ತರಾಪಥದ ಸಾಮ್ರಾಟನಾದ ಶ್ರೀ ಹರ್ಷವರ್ಧನನನ್ನು ಪರಾಜಯಗೊಳಿಸಿ ತನ್ಮೂಲಕ ಪರಮೇಶ್ವರ ಎಂಬ ಆತನ ಬಿರುದನ್ನು ಧರಿಸಿ ಶ್ರೀ ಸತ್ಯಾಶ್ರಯ ಪೃಥಿವೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರನ ಪಾತ್ರನಾದ ಶ್ರೀ ಆದಿತ್ಯವರ್ಮ ಮಹಾರಾಜಾಧಿರಾಜ ಪರಮೇಶ್ವರನ ಪುತ್ರನಾದ ನಯವಿನಯ ಪೂಜ್ಯಗುಣಗಳಿಂದ ಸಂಪನ್ನನಾದ ಪನ್ನಗಪತಿಯ ಹೆಡೆಗಳಿಗೆ ಸದೃಶವಾದ ಭುಜಾದಂಡಗಳನ್ನುಳ್ಳ ಅಭಿನವಾದಿತ್ಯನೆಂಬ ಮತ್ತೊಂದು ಹೆಸರುಳ್ಳ ಶ್ರೀ ಸತ್ಯಾಶ್ರಯಪೃಥ್ವೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರನು ಎಲ್ಲರಿಗೂ ಹೀಗೆ ಆಜ್ಞೆ ಮಾಡುತ್ತಿದ್ದಾನೆ" ಎಂಬ ಐತಿಹಾಸಿಕ ಘಟನೆಗಳನ್ನು ನಿರೂಪಿಸಿದೆ. ಬಾದಾಮಿ ಚಾಲುಕ್ಯರ

ಕಾಲದಲ್ಲಿಯೂ ಉಚ್ಚಶೃಂಗ ವಿಷಯ ಹಾಗೆಯೇ ಮುಂದುವರೆದುಕೊಂಡು ಬಂದಿದ್ದು ಅದು ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಮಾಂಡಳಿಕನಾಗಿದ್ದ ರಾಷ್ಟ್ರಕೂಟ ವಂಶದ ದಂತಿದುರ್ಗನು ಕ್ರಿ.ಶ. ೭೫೩ ರಲ್ಲಿ ಚಕ್ರವರ್ತಿ ಬಾದಾಮಿ ಚಾಲುಕ್ಯ ವಂಶದ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟ ವಂಶವನ್ನು ಚಕ್ರವರ್ತಿಗಳ ಸ್ಥಾನಕ್ಕೆ ಏರಿಸದ ಈತನ ನಂತರ ಪಟ್ಟಕ್ಕೆ ಬಂದ ಇವನ ಚಿಕ್ಕಪ್ಪನಾದ ಕೃಷ್ಣನು ಚಾಲುಕ್ಯರ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸುತ್ತಾನೆ. ಹೀಗಾಗಿ ರಾಷ್ಟ್ರಕೂಟರ ಶಕ್ತಿ ಇಮ್ಮಡಿಸಿ ಸಾಮ್ರಾಜ್ಯ ವಿಸ್ತಾರಗೊಳ್ಳುತ್ತದೆ. ಹೀಗೆ ಪ್ರಾರಂಭವಾದ ರಾಷ್ಟ್ರಕೂಟರ ಆಳ್ವಿಕೆಗೆ ಬಲ್ಲಕುಂದೆ ನಾಡೂ ಒಳಪಟ್ಟಿತ್ತು. ಈ ವಂಶದ ಚಕ್ರವರ್ತಿಗಳು ಬಲ್ಲಕುಂದೆ ನಾಡಿನಲ್ಲಿ ದೇವಾಲಯಗಳಿಗೆ ದತ್ತಿ ದಾನವನ್ನು ಬಿಟ್ಟಿದ್ದಾರೆ. ಇಲ್ಲಿ ದೊರೆತ ಹಲವಾರು ಶಾಸನಗಳು ಈ ವಿಷಯವನ್ನು ನಿರೂಪಿಸುತ್ತವೆ. ರಾಯದುರ್ಗದ ಶಾಸನದಲ್ಲಿ[೧೪] ಅಮೋಘವರ್ಷನ ಪ್ರಸ್ತಾಪ ಹೀಗೆ ಬರುತ್ತದೆ. "ಸ್ವಸ್ತ್ಯಮೋಘವರಿಷ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟಾರರ ಮಗ ದುದ್ದಯ್ಯ ಇನ್ನವಲಿ ಮೊದಲಾಗೆ ಪನ್ನೆರಡು ಮಣ್ಣಾಲಿಗೆ ಕೊಟ್ಟಸ್ತಿತಿ" ಎಂದು ಹೇಳಿ ಬಾಲವಣ ತೆಗೆದುಹಾಕಿ ಸೀಸೆ ಮತ್ತು ಸಿದ್ದಾಯ ಆಕರಿಸಲು ನಿರ್ದೇಶಿಸಿದ್ದುದು ತಿಳಿದುಬರುತ್ತದೆ. ಅಕಾಲವರ್ಷ ಶುಭತುಂಗಭಟಾರ (ಕೃಷ್ಣ) ಆಳುತ್ತಿದ್ದುದನ್ನು ಬಲ್ಲಕುಂದೆ ಸಮೀಪವಿರುವ ಮಂಚಾಳ ಗ್ರಾಮದ ಶಾಸನವು[೧೫] ಹೇಳುತ್ತದೆ. ಈ ಸಾಮಂತ 'ಶ್ರೀಮತುಕಣ್ಣಂ' ಸಿಂಧವಾಡಿ ಸಾವಿರ ವಿಭಾಗವನ್ನು ಆಳುತ್ತಿರುವಾಗ ದಾನಕೊಟ್ಟ ಅಸ್ಪಷ್ಟ ಮಾಹಿತಿ ಇದೆ. ಈ ಇಮ್ಮಡಿ ಕೃಷ್ಣನು ಸಂಡೂರು ಸಮೀಪವಿರುವ ಕುಮಾರಸ್ವಾಮಿ ದೇವರಿಗೆ ದತ್ತಿ ಬಿಟ್ಟಿದ್ದನ್ನು ಸಂಡೂರಿನ ಶಾಸನ ತಿಳಿಸುತ್ತದೆ[೧೬]. ಇಮ್ಮಡಿ ಕೃಷ್ಣನ ಕಾಲಕ್ಕಾಗಲೇ ಸಂಡೂರಿನ ಷಣ್ಮುಖಸ್ವಾಮಿ ದೇವಾಲಯ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ಹೀಗಾಗಿ ಕೃಷ್ಣನು ಭಕ್ತಿಪೂರ್ವಕವಾಗಿ ದೇವರ ನೈವೇದ್ಯಕ್ಕೆ ಪ್ರೀತತಟಾಕ (ಕೆಜೆಯುವಳ್ಳಿ ಈಗಿನ ಕೆರ್ನಳ್ಳಿ) ಗ್ರಾಮವನ್ನು ದಾನ ಬಿಡುತ್ತಾನೆ.

'ಇಂದರ ಬಲ್ಲಹ' ಆಳುತ್ತಿದ್ದುದನ್ನು ಕಡಬಗೆರೆ ಶಾಸನ ತಿಳಿಸುತ್ತದೆ[೧೭]. ಬಾಗಳಿ ಶಾಸನವು ಇಂದರಬಲ್ಲಹನ[೧೮] ಆಧೀನನಾಗಿ ರಟ್ಟಕಂದರ್ಪನೆನಿಸಿದ್ದ 'ಬಿರುದಜೆಟ್ಟಿ' ಕೋಗಳಿ ೫೦೦ ಮಾಸಿಯವಾಡಿ ೧೪೦ ಆಳುತ್ತಿದ್ದುದನ್ನು ಹೇಳುತ್ತದೆ. ನಾಲ್ಕನೆ ಗೋವಿಂದನ ಆಳ್ವಿಕೆ ನಿರೂಪಿಸುವ ಕೆಲವು ಶಾಸನಗಳು ಇಲ್ಲಿವೆ. ದೊಡ್ಡಮಾಕಾಳ ಶಾಸನವು[೧೯] ಗೋವಿಂದನು ಸಮುದ್ರಪರ್ಯಂತ ಆಳುವುದನ್ನು ಹೇಳಿ ಈತನನ್ನು ಮಹಾಸಾಮಂತ ಕನ್ನರ ಸಿಂಧವಾಡಿ ೧೦೦೦ ಆಳುತ್ತಿದ್ದ. ಶಿರಸ್ತಹಳ್ಳಿ[೨೦] ಶಾಸನವೂ ನಾಲ್ಕನೆಯ ಗೋವಿಂದ ಆಳುವುದನ್ನು ನಿರೂಪಿಸುತ್ತದೆ.

ಮೂರನೆಯ ಕೃಷ್ಣ

ರಾಷ್ಟ್ರಕೂಟ ದೊರೆಗಳಲ್ಲಿ ಪ್ರಸಿದ್ಧನಾದ ಇವನ ನಾಲ್ಕು ಶಾಸನಗಳು ಈ ಬಲ್ಲಕುಂದೆ ನಾಡಿನಲ್ಲಿ ದೊರೆತಿವೆ. ನಾಡಿನ ಪಕ್ಕದಲ್ಲಿ ಬಿಕ್ಕಗ ೭೦ ಕ್ಕೆ ಸೇರಿದ್ದ ಬಾಗಳಿ ಶಾಸನದಲ್ಲಿ[೩೧] ಕನ್ನರದೇವ ರಾಜ್ಯಂಗೆಯೆ ಎಂದು ಬರುತ್ತಿದ್ದು ನಂತರ ಚಾಲುಕ್ಯವಂಶದ ಮಹಾಸಾಮಂತ ಕತ್ಯರ ಕೋಗಳಿ ೫೦೦ ಮಾಸಿಯವಾಡಿ ೧೪೦ ಆಳುತ್ತಿದ್ದುದು ತಿಳಿದು ಬರುತ್ತದೆ. ಕುಡತಿನಿ ಶಾಸನ[೩೨] ಮುರನೆಯ ಕೃಷ್ಣನು ದೇಕಮ್ಮನ ದೇವಾಲಯಕ್ಕೆ ಇದ್ದ ದತ್ತಿಯನ್ನು ನವೀಕರಿಸಿದುದನ್ನು ತಿಳಿಸುತ್ತದೆ. ಮಹಾಸಾಮಂತನಾದ ಸಿಂಧವಂಶದ ಅರಿಬಲ್ಲದಾಗ್ರನು ಕುರುಗೋಡ ೩೦೦ ರಲ್ಲಿ ಮಹಾರಾಜರು ಇದ್ದು ದೇಕಮ್ಮನ ದೇಗುಲಕ್ಕೆ ಕುರುಗೋಡಿನ ಹೊಲದಲ್ಲಿ ೬೨ ಮತ್ತರು ಭೂಮಿಯನ್ನು ಬಿಟ್ಟಿರುತ್ತಾರೆ. ಈ ಭೂಮಿಯನ್ನು ಅಯ್ಯಣಯ್ಯನ ಮಗನಾದ ಪುಟೆಗಳ್ಳನು ಅಪಹರಿಸುತ್ತಾನೆ. ಈ ಸಮಯದಲ್ಲಿ ಚಕ್ರವರ್ತಿ ಅಕಾಳವರ್ಷದೇವ ಶ್ರೀಮತ್ ಚಲಕೆ ನಲ್ಲಾತನು (ಕೃಷ್ಣIII) ಆಳಂಪುರದಲ್ಲಿರುತ್ತಾನೆ. ಗುಡ್ಡದ ರುದ್ರರಾಸಿಭಟಾರರು ಆಳಂಪುರಕ್ಕೆ ಹೋಗಿ ಚಕ್ರವರ್ತಿಯನ್ನು ಕಂಡು ವಿಷಯ ನಿವೇದಿಸಿ ೬೨ ಮತ್ತರ ಭೂಮಿಯನ್ನು ಶಾಸನ ಸಮೇತವಾಗಿ ಪಡೆದುಕೊಂಡು ಬರುತ್ತಾರೆ. ಬಾಗಳಿಯ ಶಾಸನದಲ್ಲಿಯೂ[೩೩] ಚಲಕೆನಲ್ಲಾತಂ ಶ್ರೀಮತ್ಕನ್ನರದೇವನ ರಾಜ್ಯ ಮುತ್ತರೋತ್ತರಾಭಿವೃಧ್ಧಿಗೆ ಸಲುತ್ತಮಿರೆ' ಎಂದು ಮೂರನೆಯ ಕೃಷ್ಣನು ಆಳುತ್ತಿದ್ದುದನ್ನು ಹೇಳುತ್ತದೆ.

ರಾಷ್ಟ್ರಕೂಟ ಚಕ್ರವರ್ತಿ ಖೊಟ್ಟಿಗದೇವನ ಎರಡು ಶಾಸನಗಳು ಈ ಬಲ್ಲಕುಂದೆ ನಾಡಿನಲ್ಲಿ ದೊರೆತಿವೆ. ಕುಡುತಿನಿಯ ಶಾಸನದಲ್ಲಿ[೩೪] "ಖೊಟ್ಟಿಗೇ ರಾಜ್ಯಮೇದಿನೀಂ" ಎಂದು ಬರುತ್ತದೆ. ಈ ಖೊಟ್ಟಿಗದೇವನು ಆಳುತ್ತಿರುವಾಗ ಭಟ್ಟಿತಿಳಾಗ್ರಾಮದ ಗದಾಧರನು ಸ್ಕಂದ ಪ್ರತಿಮೆಯನ್ನು ಕುಡುತಿನಿಯಲ್ಲಿ ಪ್ರತಿಷ್ಠಾಪಿಸುತ್ತಾನೆ. ಆ ದೇವರಿಗೆ ಅರಸನು ಭೂಮಿಯನ್ನು ದಾನ ಬಿಡುತ್ತಾನೆ. ಬಾಗಳಿಯ ಶಾಸನದಲ್ಲಿ[೩೫] ಖೊಟ್ಟಿಗದೇವ ಆಳುತ್ತಿರುವುದನ್ನು ಹೇಳಿ ಈತನ ಅದೀನನಾಗಿ ಗಂಗವಂಶದ ಶ್ರೀಮತ್ ಪೆರ್ಮ್ಮಾನಡಿಗಳ್ ಆಳುತ್ತಿದ್ದುದನ್ನು ಶಾಸನ ಹೇಳುತ್ತದೆ. ಮುಂಜುಂಗೆಜೆಯ ಬಸದಿ, ಮಠಗಳಿಗೆ ದತ್ತಿ ಬಿಟ್ಟದ್ದು ಈ ಶಾಸನದಿಂದ ತಿಳಿದು ಬರುತ್ತದೆ. ಹೀಗೆ ರಾಷ್ಟ್ರಕೂಟ ವಂಶದ ಚಕ್ರವರ್ತಿಗಳು ಬಲ್ಲಕುಂದೆ ನಾಡಿನ ದೇವಾಲಯ, ಮಠ, ಬಸದಿಗಳಿಗೆ ದತ್ತಿ ದಾನವನ್ನು ಇತ್ತಿದ್ದಾರೆ.

ಕಲ್ಯಾಣದ ಚಾಲುಕ್ಯರ ಘಟ್ಟ

ಕಲ್ಯಾಣದ ಚಾಲುಕ್ಯರ ಇತಿಹಾಸವು ಕರ್ನಾಟಕದ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವಾಗಿ ನಿಲ್ಲುತ್ತದೆ. ಅನೇಕ ಶಾಸನಗಳು ಇವರ ಕಾಲದಲ್ಲಿ ಹುಟ್ಟಿ ಬಂದಿವೆ. ವಾಸ್ತುಶಿಲ್ಪ ಕಲೆಯು ಶಾಸ್ತ್ರೀಯವಾಗಿ ಬೆಳೆದು, ಅರಳಿ ಹೆಚ್ಚು ಪ್ರಸಿದ್ಧಿ ಪಡೆದುದು ಇವರ ಕಾಲದಲ್ಲಿಯೇ. ಹಲವಾರು ದೇವಾಲಯಗಳು, ಬಸದಿಗಳು ಇವರ ಕಾಲದಲ್ಲಿ ನಿರ್ಮಾಣವಾಗಿವೆ. ಹಲವಾರು ಸಾಹಿತ್ಯ ಕೃತಿಗಳು ಹುಟ್ಟಿ ಕನ್ನಡ ಸಾಹಿತ್ಯ

ಚರಿತ್ರೆಯಲ್ಲೂ ಇವರ ಅವಧಿ ಪ್ರಮುಖವಾಗಿದೆ. ಹೀಗಾಗಿ ಈ ವಂಶದವರ ಆಳ್ವಿಕೆಯನ್ನು ಒಂದು ಪ್ರಮುಖ ಘಟ್ಟವನ್ನಾಗಿ ಗುರುತಿಸಲಾಗಿದೆ.

ರಾಷ್ಟ್ರಕೂಟರ ಕೊನೆಯ ಚಕ್ರವರ್ತಿಯನ್ನು ಚಾಲುಕ್ಯರ ವಂಶದ ಇಮ್ಮಡಿ ತೈಲಪನು ಸೋಲಿಸಿ ಪುನಃ ಚಾಲುಕ್ಯ ವಂಶವನ್ನು ಚಕ್ರವರ್ತಿಗಳ ಸ್ಥಾನಕ್ಕೆ ಏರಿಸಿದನು. ಕಲ್ಯಾಣ ನಗರವನ್ನು ಈ ವಂಶದವರು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದುದರಿಂದ ಇವರಿಗೆ ಕಲ್ಯಾಣ ಚಾಲುಕ್ಯರು ಎಂಬ ಹೆಸರು ಪ್ರಾಪ್ತವಾಯಿತು. ಇವರು ಬಳ್ಳಾರಿ ಜಿಲ್ಲೆಯ ಅನೇಕ ದೇವಾಲಯಗಳಿಗೆ, ಮಠಗಳಿಗೆ ದತ್ತಿ ದಾನಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಈ ವಂಶದ ಚಕ್ರವರ್ತಿಗಳು ಮತ್ತು ಅವರ ರಾಣಿಯರು ಈ ಜಿಲ್ಲೆಯಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಸಾಂಸ್ಕೃತಿಕವಾದ ಅನೇಕ ಚಟುವಟಿಕೆಗಳಿಗೆ ಇವರು ಕಾರಣೀಭೂತರಾಗಿದ್ದಾರೆ. ಇವರು ನೀಡಿದ ಕೊಡುಗೆಯ ವಿವರಗಳನ್ನು ಮುಂದೆ ನೋಡಬಹುದು.

ಇಮ್ಮಡಿ ತೈಲಪ

ಇಮ್ಮಡಿ ತೈಲಪನ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಾಗಿವೆ. ಕುಡತಿನಿಯ ಕ್ರಿ.ಶ ೯೭೬ ರ ಶಾಸನದಲ್ಲಿ[೩೬] ತೈಲಪದೇವನು ಆಳುತ್ತಿದ್ದುದನ್ನು ನಿರೂಪಿಸಲಾಗಿದೆ. ಕಂಚುಗಾರ ಬೆಳಗಲ್ಲು ಶಾಸನದಲ್ಲಿ[೩೭] ತೈಲಪನು ಮೂರು ಶಿವಾಲಯಗಳಿಗೆ ಪೂರ್ವದಲ್ಲಿ ನಡೆಯುತ್ತಿದ್ದ ಸ್ಥಾನಮಾನವನ್ನು ಮಾನ್ಯ ಮಾಡಿದುದನ್ನು ಹೇಳುತ್ತದೆ. ಬಾಗಳಿಯ ಶಾಸನದಲ್ಲಿ[೩೮] ಈತನ ಪಾದಪದ್ಮೋಪಜೀವಿಯಾಗಿ ಮಹಾಸಾಮಂತ ಆಯ್ತವರ್ಮನು ಕಿಸುಕಾಳೆಪ್ಪತ್ತು, ಕೋಗಳಿ೫೦೦ನ್ನು ಆಳುತ್ತಿದ್ದುದನ್ನು ಹೇಳಲಾಗಿದೆ. ಬಾಗಳಿಯ ಇನ್ನೊಂದು ಶಾಸನದಲ್ಲಿ[೩೯] ಬಾಗಳಿಯ ಜನರು ಸುಂಕ ಹೆಚ್ಚಳದ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಿದುದನ್ನು ನಿರೂಪಿಸುತ್ತದೆ. ಹಿಂದೆ ರಾಷ್ಟ್ರಕೂಟ ದೊರೆ ಕನ್ನರದೇವನು 'ಎಲೆಯ ಪೇಜಿಗೆ ಎರಡು ಪಣವಡ್ಡಂ ಸುಂಕ ಸಮುಚ್ಚಯ ನಡೆಯುವುದು' ಎಂದು ನಿಗದಿ ಮಾಡಿದ್ದನು. ಆದರೆ ಮಹಾಸಾಮಂತ ಕೋಗಳಿ ೫೦೦ ರ ಒಡೆಯ ಆದಿತ್ಯವರ್ಮರಸನು ಸುಂಕವನ್ನು ಹೆಚ್ಚು ಮಾಡುತ್ತಾನೆ. ಆಗ ಬಾಗಳಿಯ ೫೦ ಮಹಾಜನರು ಸಿದ್ದಿಸೆಟ್ಟಿ, ಸೋಭನಯ್ಯ, ಮಲ್ಲಯ್ಯಸೆಟ್ಟಿ ಅಣ್ಣಮ್ಮ ಮೊದಲಾದ ಪ್ರಮುಖರು ತಂಬುಲಿಗ ಸಾಸಿರ್ವರು, ಆಯ್ನೂರ್ವರು ಹೋಗಿ ಚಕ್ರವರ್ತಿ ಇಮ್ಮಡಿ ತೈಲಪನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಹೆಚ್ಚಾದ ಸುಂಕವನ್ನು ಕಡಿಮೆಗೊಳಿಸಲು ನಿಷೇಧಿಸಿಕೊಳ್ಳುತ್ತಾರೆ. ಆಗ ತೈಲಪನು "ಕನ್ನರದೇವನ ಮರ್ಯ್ಯಾದೆಯಲಾದ ಸುಂಕದ ಮರ್ಯಾದೆಯಂ ತಪ್ಪದೆ ನಡಯಿಮೆನ್ನು" ಆಜ್ಞೆ ಮಾಡುತ್ತಾನೆ.

ಕೋಗಳಿಯ ಶಾಸನದಿಂದ[೪೦] ಇಮ್ಮಡಿ ತೈಲಪನು ಸೈನ್ಯ ಸಮೇತನಾಗಿ ಯುದ್ಧಕ್ಕೆ ಹೊರಟಿದ್ದುದು ತಿಳಿದು ಬರುತ್ತದೆ. ಶಾಸನದಲ್ಲಿ ಈ ವಿಷಯ "ಶ್ರೀಮದಾಹವ ಮಲ್ಲದೇವರ್ ಚೋರರಾರಿಮಾರಿ ಡಾಮರೋಪ ಸ್ವರ್ಗಂಗಳ ಮರ್ಗ್ಗಿಸಿ ನಾನಾ ದೇಸಾಧೀಸರಂ ವಸಗತಂಮ್ಮಾಡಿ

ದುಷ್ಟರಂ ನಿಗ್ರಹಿಸಿ ಶಿಷ್ಟರಂ ಪ್ರತಿಪಾಳಿಸಿ ಮಹಾದಾನಂಗೆಯ್ದು ಚೋಳಿಯರೆಯ ನೋಲಗಿಸಿದ ನೂಱಯ್ವತ್ತಾನೆಯುಮಂ ರೊದ್ದದ ಬೀಡಿಸೊಳ್ಕೊಣ್ಡುತ್ತರಾಭಿವೃದ್ಧಿ"[೪೦] ಯಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಚೋಳ ಚಾಳುಕ್ಯರ ನಡುವೆ ಸತತ ಯುದ್ಧಗಳು ನಡೆಯುತ್ತಿದ್ದವು. ಈ ಚೋಳರೊಂದಿಗೆ ಸೆಣಸುವುದಕ್ಕಾಗಿಯೇ ಇಮ್ಮಡಿ ತೈಲಪನು ೧೫೦ ಆನೆಯ ದಳದೊಂದಿಗೆ ರೊದ್ದದಲ್ಲಿ ಬೀಡುಬಿಟ್ಟಿದ್ದನು. ಇಷ್ಟು ವಿಷಯವು ಈತನ ಬಗ್ಗೆ ಬಳ್ಳಾರಿ ಜಿಲ್ಲೆಯ ಶಾಸನಗಳಿಂದ ತಿಳಿದು ಬರುತ್ತದೆ.

ವಿಕ್ರಮಾದಿತ್ಯ V

ಚಕ್ರವರ್ತಿ ಐದನೇಯ ವಿಕ್ರಮಾದಿತ್ಯನ ಒಂದು ಶಾಸನ ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿದೆ. ಹೊಸಪೇಟೆ ತಾಲೂಕಿನ ಗೊನಹಾಳುನಲ್ಲಿದೊರೆತಿದ್ದು[೪೧] ಇದರ ಅಧೀನನಾಗಿ ಇರಿವನೊಳಂಬಾಧಿ ರಾಜನು ಆಳುತ್ತಿದ್ದನು. ಇವನು ಹಾಗೂ ಇವನ ರಾಣಿ "ಪಂಪಾXXಮಹಾಕಾಳ" ದೇವರಿಗೆ ದತ್ತಿ ಬಿಟ್ಟುದು ತಿಳಿದು ಬರುತ್ತಿದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳು ಅಲಭ್ಯ.

ಜಗದೇಕಮಲ್ಲ ಜಯಸಿಂಹ

ಈತನ ಹಲವಾರು ಶಾಸನಗಳು ಈ ಜಿಲ್ಲೆಯಲ್ಲಿವೆ. ಬಾಗಳಿ[೪೨] ಹಿರೇಮೇಗಳಗೇರಿ[೪೩] ಕತ್ತೆಬೆನ್ನೂರು[೪೪] ತೆಲಗಿ[೪೫] ಮೊದಲಾದ ಶಾಸನಗಳು ಜಯಸಿಂಹನು ಚಕ್ರವರ್ತಿಯಾಗಿ ಆಳುತ್ತಿದ್ದುದನ್ನು ನಿರೂಪಿಸುತ್ತವೆ. ಬಳ್ಳಾರಿ ತಾಲೂಕಿನ ಒರುವಾಯಿ ಶಾಸನದಿಂದ[೪೬] ಜಯಸಿಂಹನ ರಾಣಿ ದೇವಲದೇವಿ ಬಳ್ಳಾರಿ ಜಿಲ್ಲೆಯವಳೆಂದು ಗೊತ್ತಾಗುತ್ತದೆ. ಈಕೆಯು ಮಹಾಮಂಡಳೇಶ್ವರ ನೋಳಂಬ ಪಲ್ಲವ ಪೆರ್ಮಾನಡಿಯ ಮಗಳಾಗಿದ್ದು ತನ್ನ ತಾಯಿಯ'ರಂಗಮ' (ಚಿತಾಭಸ್ಮ) ಗಂಗೆಯಲ್ಲಿ ಬಿಟ್ಟು ಬಂದ ಬ್ರಾಹ್ಮಣರಾದ ಮಾಧವ ಷಡಂಗಿ ಕೃಷ್ಣಯ್ಯರಿಗೆ ಭೂಮಿ ದತ್ತಿ ಬಿಡುತ್ತಾಳೆ. ಈ ಶಾಸನದಿಂದ ನೊಳಂಬ ಪಲ್ಲವರಿಗೂ ಮತ್ತು ಕಲ್ಯಾಣದ ಚಾಲುಕ್ಯರಿಗೂ ವೈವಾಹಿಕ ಸಂಬಂಧಗಳಿದ್ದುದು ತಿಳಿದುಬರುತ್ತದೆ.

ಒರುವಾಯಿಯ ಇನ್ನೊಂದು ಶಾಸನದಲ್ಲಿ[೪೭] ಮೇಲಿನ ಅಂಶ ನಿರೂಪಿತವಾಗಿದ್ದು ಅದರಲ್ಲಿ ದೇವಳದೇವಿಯ ಪ್ರಶಸ್ತಿಯನ್ನು 'ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆಯರ್ ಶ್ರೀ ಮಜ್ಜಗದೇಕಮಲ್ಲದೇವರ ವಿಶಾಲೋರಸ್ಥಳ ಜಯಾಂಗನಾಲಬ್ದೆ ನೊಣಂಬನಣುಗಿ XX ನಾಮಾದಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮದ್ದೇವಳದೇವಿಯರು, ಎಂದು ಕೊಡಲಾಗಿದೆ. ಈಕೆಯು ತನ್ನ ತಂದೆ ಮಹಾಮಂಡಳೇಶ್ವರ ಉದಯಾದಿತ್ಯದೇವನೊಂದಿಗೆ ಇದ್ದು ತನ್ನ ತಾಯಿ ನೊಳಂಬ ಮಹಾದೇವಿಯರ ಅಂಗವನ್ನು (ಚಿತಾಭಸ್ಮ) ಗಂಗೆಯಲ್ಲಿ ಬಿಟ್ಟು ಬಂದ ಮಾಧವ ಷಡಂಗಿ ಕೃಷ್ಣಯ್ಯ, ತುಪ್ಪದ ದೇವಯ್ಯ ಇವರಿಗೆ ನಲ್ವಿಡಿ ೧೨ ರ ಕಂಪಣ ಒರ್ವಾಯನ್ನು ದಾನ

ಬಿಡುತ್ತಾಳೆ. ಸೋಗಿಯ ಶಾಸನ[೨೮] ಜಗದೇಕಮಲ್ಲನು ಚೋರನೂರಿನಿಂದ ಆಳುತ್ತಿದ್ದನೆಂದು ಹೇಳುತ್ತದೆ. ಈ ಚೋರನೂರು ಸಂಡೂರು ತಾಲೂಕಿನ ಚೋರನೂರು ಆಗಿದೆ.

ಸೋಮೇಶ್ವರ I

ಒಂದನೆಯ ಸೋಮೇಶ್ವರನಿಗೂ ಬಳ್ಳಾರಿ ಜಿಲ್ಲೆಗೂ ವಿಶೇಷ ಸಂಬಂಧವಿದೆ. ಈತನು ತನ್ನ ಜೀವಿತದ ಕೊನೆಯ ಕ್ಷಣಗಳನ್ನು ಕುರುವತ್ತಿಯಲ್ಲಿ ಕಳೆದು ಅಲ್ಲಿಯ ತುಂಗಭದ್ರೆಯಲ್ಲಿ ಜಲಸಮಾಧಿ ಹೊಂದುತ್ತಾನೆ. ಸಿರಿವಾರಂ ಶಾಸನ[೨೯] ತ್ರೈಲೋಕ್ಯಮಲ್ಲ ಆಹವಮಲ್ಲದೇವನು ಪೊಟ್ಟಳಕೆರೆಯಿಂದ ಆಳುತ್ತಿದ್ದನೆಂದು ಹೇಳಿ ಮಹಾಮಂಡಳೇಶ್ವರ ತ್ರೈಲೋಕ್ಯಮಲ್ಲ ನನ್ನಿನೊಳಂಬಾಧಿರಾಜನ ಪಟ್ಟಬಂಧ ವಿಷಯ ತಿಳಿಸುತ್ತದೆ. ಈ ನನ್ನಿನೊಳಂಬನು ಮಹಾಮಂಡಳೇಶ್ವರ ಉದಯಾದಿತ್ಯನ ಪುತ್ರ, ಇವನು ಒಂದನೆಯ ಸೋಮೇಶ್ವರನಿಗೆ ನಿಷ್ಠೆಯಿಂದ ಇದ್ದ ಮಹಾಮಂಡಳೇಶ್ವರ ಹಚ್ಚೊಳ್ಳಿಯ ಕ್ರಿ.ಶ. ೧೦೪೪ರ ಶಾಸನದಲ್ಲಿ[೩೦] ಈತನು ಕಸಮಡು ನೆಲೆವೀಡಿನಲ್ಲಿದ್ದು ಮಂಡಳಿಕ ವಿದಯ್ಯನ ಕೇಳಿಕೆಯ ಮೇರೆಗೆ ತ್ರೈಲೋಕ್ಯಮಲ್ಲ ಜೀಯರ್ಗೆ ಕೆಯ್ಮತ್ತ ೧೦೦ ಮ್ನು ಬಿಟ್ಟ ಉಲ್ಲೇಖವಿದೆ. ಹಿರೇಹಡಗಲಿ ಶಾಸನದಲ್ಲಿ ಸೋಮೇಶ್ವರನು ಚಕ್ರವರ್ತಿಯಾಗಿ ಆಳುತ್ತಿರುವಾಗ[೩೧] ಆತನ ಪುತ್ರ ಆರನೆಯ ವಿಕ್ರಮಾದಿತ್ಯನು ಕುಮಾರ ವೃತ್ತಿಯಿಂದ ಗಂಗವಾಡಿ ೯೬೦೦೦ ಬನವಾಸಿ ೧೨೦೦೦ ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಸೋಮೇಶ್ವರನ ಇನ್ನೊಬ್ಬ ಪುತ್ರ ವಿಷ್ಣುವರ್ಧನ ವಿಜಯಾದಿತ್ಯದೇವ ನೊಳಂಬವಾಡಿ ೩೨೦೦೦ ಮಾತ್ರ ಆಳುತ್ತಿದ್ದುದನ್ನು ಉಚ್ಚಂಗಿ, ಮೋರಿಗೆರೆ[೩೨], ಗುಡಿಹಳ್ಳಿ[೩೩], ಹರಕನಾಳು[೩೪], ಹೂವಿನ ಹಡಗಲಿ[೩೫] ಶಾಸನಗಳು ತಿಳಿಸುತ್ತವೆ. ಬಿಲ್ಹಣನು 'ವಿಕ್ರಮಾಂಕದೇವ ಚರಿತಂ' ಕಾವ್ಯದಲ್ಲಿ 'ವಿಷ್ಣುವರ್ಧನ' 'ವಿಜಯಾದಿತ್ಯ'ನೆಂಬ ಪುತ್ರನಿದ್ದುದನ್ನು ಹೇಳುವುದಿಲ್ಲ. ಬಿಲ್ಹಣನು ಇಮ್ಮಡಿ ಸೋಮೇಶ್ವರ, ಆರನೇಯ ವಿಕ್ರಮಾದಿತ್ಯ, ಜಯಸಿಂಹ ಈ ಮೂವರು ಪುತ್ರರನ್ನು ಹೆಸರಿಸುತ್ತಾನೆ. ಮೂರನೆಯ ಸೋಮೇಶ್ವರನ 'ವಿಕ್ರಮಾಂಕಾಭ್ಯುದಯಂ' ಕಾವ್ಯದಲ್ಲೂ ಈ ಮೂವರು ಪುತ್ರರ ಪ್ರಸ್ತಾಪವಿದೆ. ವಿಷ್ಣುವರ್ಧನ ವಿಜಯಾದಿತ್ಯನ ಪ್ರಸ್ತಾಪವಿಲ್ಲ. ಆರನೆಯ ವಿಕ್ರಮಾದಿತ್ಯನ ವಂಶಾವಳಿ ನಿರೂಪಿಸುವ ಮಲಘಾಣ[೩೬] ಗದಗ[೩೭] ಬಳ್ಗಾವಿ[೩೮] ಶಾಸನದಲ್ಲೂ ಈತನ ಪ್ರಸ್ತಾಪವಿಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಮೇಲೆ ಹೇಳಲಾದ ಶಾಸನಗಳು ವಿಷ್ಣವರ್ಧನ ವಿಜಯಾದಿತ್ಯನ ಪ್ರಸ್ತಾಪಮಾಡಿ ಈತನು ನೊಳಂಬವಾಡಿ ೩೨೦೦೦ ಆಳುತ್ತಿದ್ದುದನ್ನು ನಿರೂಪಿಸುತ್ತವೆ. ಈತನು ಒಂದನೆಯ ಸೋಮೇಶ್ವರನ ಬೇರೊಬ್ಬ ರಾಣಿಗೆ ಜನಿಸಿದ ಪುತ್ರನಾಗಿರಬೇಕು. ಉಚ್ಚಂಗಿದುರ್ಗದ ಶಾಸನದಲ್ಲಿ[೩೯] ಸೋಮೇಶ್ವರ ಆಳುತ್ತಿರುವುದನ್ನು ನಿರೂಪಿಸಿದ ನಂತರ "ತತ್ಸೂನು ಸ್ವಸ್ತಿಸರ್ವಲೋಕಾಶ್ರಯ ಸಮಸ್ತ ಬುಧಜನಾಶ್ರಯ ಸಾಹವಮಲ್ಲನಂಕಗಾಜಿಂ ಪರಮಂಡಳ ಸೂರ್ಯಕಾರಂ ಕಟಕ ಪ್ರಾಕಾರ ವಂದಿಜನಾಧಾರಂ ವೀರಮಾರ್ತಾಂಡ ಪ್ರತಾಪ ಜನಾರ್ಧನನ ಚಳಿತವಾಕ್ಯಂ ಚಾಳುಕ್ಯ ಮಾಳಿಕ್ಯ

ವಿಜಯಶ್ರೀ ಕೇಳೀ ಸದನಂ ವೀರ ಮಾರ್ತಾಣ್ಡ ರಿಪುರಾಯ ಕೊಮಾರ ಹೃದಯಸೆಲ್ಲಂ ಸಾಹಸಮಲ್ಲಂ ದೀನಾನಾಥ ಚಿಂತಾಮಣಿ ಮಣ್ಡಳಿಕ ಮುಕುಟ ಚೂಡಾಮಣಿ ವೆಂಗಿಮಂಡಳೇಶ್ವರನಯ್ಯನ ದೇವಂ" ಎಂದು ಈತನ ಪ್ರಶಸ್ತಿ ಹೇಳುತ್ತದೆ. ಈತನ ದಂಡನಾಯಕನಾಗಿದ್ದ ಮೂಕರಾಜನ ವಿನಂತಿಯ ಮೇರೆಗೆ ಗಳಗೇಶ್ವರ ದೇವರಿಗೆ ಭೂಮಿ ತೋಟ ಬಿಡುತ್ತಾನೆ. ಹೂವಿನ ಹಡಗಲಿ ಶಾಸನದಲ್ಲಿ[೬೦] ಈತನು ವೆಂಗಿ ಮತ್ತು ನೊಳಂಬವಾಡಿ ೩೨೦೦೦ ಆಳುತ್ತಿದ್ದನೆಂದು ಹೇಳಿ ಕಲಿದೇವಸ್ವಾಮಿ ದೇವರ ಉಪಭೋಗಕ್ಕೆ ಹಾಗೂ ಸತ್ರಕ್ಕೆ ಕೋಗಳಿ ನಾಡಿನ ಕಂಪಣ ಮಾಂಗೊಳ ೧೨ ರಲ್ಲಿಯ ಬಾಡ ಅಗ್ರಹಾರ 'ಪೊಲಿಕೆಱೆ' ದಾನಬಿಡುತ್ತಾನೆ. ಮೋರಿಗೇರೆಯ ಕ್ರಿ.ಶ. ೧೦೬೪ ರ ಶಾಸನದಲ್ಲಿ[೬೧] ವಿಷ್ಣುವರ್ಧನ ವಿಜಯಾದಿತ್ಯದೇವನನ್ನು ಆಹವಮಲ್ಲದೇವನ ಅಂಕಕಾರನೆಂದು ಕರೆಯಲಾಗಿದೆ.

ನೊಳಂಬವಾಡಿ ೩೨೦೦೦ ಆಳುತ್ತಿರುವಾಗ 'ದಕ್ಷಿಣ ದಿಶಾವರಕ್ಕೆ ಬಿಜಯಂಗೈಯುತ್ತಿರುವುದನ್ನು ಈ ಶಾಸನ ಹೇಳುತ್ತದೆ. ಮೋರಿಗೇರೆಯ ನೊಳಂಬೇಶ್ವರ ದೇವರಿಗೆ ಈತನು ತೆರಿಗೆಯನ್ನು ದಾನವಾಗಿ ಬಿಡುತ್ತಾನೆ. ಈತನಲ್ಲಿ ತಂತ್ರಪಾಳನಾಗಿದ್ದ ಮೈಲಯ್ಯನು ವಿಜಯಾದಿತ್ಯನಿಂದ ಪರಮೇಶ್ವರ ದತ್ತಿಯಾಗಿ ಪಡೆದು ಗುಳಿದೆರೆಯನ್ನು ನೊಳಂಬೇಶ್ವರ ದೇವರಿಗೆ ಬಿಡುತ್ತಾನೆ. ಗುಡಿಹಳ್ಳಿ ಶಾಸನವು[೬೨] ವಿಜಯಾದಿತ್ಯನು ತನ್ನ ತಂದೆ ಒಂದನೆಯ ಸೋಮೇಶ್ವರನ ಆಜ್ಞೆಯ ಮೇರೆಗೆ ದಕ್ಷಿಣ ದಿಶಾವರಕ್ಕೆ ದಿಗ್ವಿಜಯಗೆಯ್ಯಲೆಂದು ಮನೋದ್ಯುಕ್ತನಾಗಿ ಸಮಸ್ತ ಸಾಮಗ್ರಿಯೊಂದಿಗೆ ಅರಸಿಯಕೆರೆಯಲ್ಲಿ ಬೀಡು ಬಿಟ್ಟದನ್ನು ತಿಳಿಸುತ್ತದೆ. ಅಲ್ಲಿಯ ನೊಳಂಬೇಶ್ವರ ದೇವಾಲಯವನ್ನು ವೀಕ್ಷಿಸಿ ಅದು ನೈಷ್ಠಿಕಸ್ಥಾನವೆಂದು ಅರಿತು ಅದಕ್ಕೆ ದಾನ ಬಿಡುತ್ತಾನೆ. ಅಲ್ಲದೆ ಈತನಲ್ಲಿ ಮಹಾಸಂಧಿವಿಗ್ರಹಿಯಾಗಿದ್ದ ಪೆರ್ಗಡೆ ದೇವಪಯ್ಯ ಪ್ರಮುಖ ಕರಣಗಳು ವಿಜಯಾದಿತ್ಯ ದೇವನ ಆಜ್ಞೆಯ ಮೇರೆಗೆ ಅರಹಟದ ಸ್ವಯಂಭು ಕಲಿದೇವಸ್ವಾಮಿ ದೇವರಿಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಕೋಗಳಿ ೫೦೦ ರಲ್ಲಿಯ ಮೂಳ್ತಗೆ ೩೦ನ ರ ಬಳಿಯ ನಿಲ್ಲಜೆಗೆ ಊರನ್ನು ಬಿಡುತ್ತಾನೆ. ಈ ವಿಜಯಾದಿತ್ಯನ ಪ್ರಸ್ತಾಪ ನಂತರದ ಶಾಸನಗಳಲ್ಲಿ ಬರುವುದಿಲ್ಲ. ಇವನು ದಕ್ಷಿಣಕ್ಕೆ ದಿಗ್ವಿಜಯ ಕೈಕೊಂಡಿರುವುದು ಚೋಳರ ವಿರುದ್ಧವಾಗಿದೆ. ಈ ಚೋಳರೊಂದಿಗೆ ನಡೆದ ಯುದ್ಧದಲ್ಲಿ ವಿಜಯಾದಿತ್ಯ ವೀರಮರಣ ಹೊಂದಿರಬೇಕು. ಹೀಗಾಗಿ ಈತನ ಪ್ರಸ್ತಾಪ ನಂತರದ ಶಾಸನಗಳಲ್ಲಿ ಬರುವುದಿಲ್ಲ. ದಾನಗುಣ ಹೊಂದಿದ್ದ ವಿಜಯಾದಿತ್ಯ ಶ್ರೇಷ್ಠ ವೀರನೂ ಆಗಿದ್ದನೆಂಬುದು ಮೇಲಿನ ಶಾಸನಗಳು ನಿರೂಪಿಸುತ್ತವೆ. ಚಕ್ರವರ್ತಿ ಒಂದನೆ ಸೋಮೇಶ್ವರನಿಗೂ ಬಳ್ಳಾರಿ ಜಿಲ್ಲೆಗೂ ಭಾವನಾತ್ಮಕ ಸಂಬಂಧವಿದೆ. ಈ ಭಾಗದಲ್ಲಿಯೇ ಈತನ ಇಬ್ಬರು ಪುತ್ರರು ವಿಕ್ರಮಾದಿತ್ಯ, ವಿಜಯಾದಿತ್ಯ ನೆಲೆನಿಂತು ಚೋಳರ ದಾಳಿ ಹಿಮ್ಮೆಟ್ಟಿಸುವಲ್ಲಿ ಸಫಲರಾಗಿದ್ದಾರೆ. ಅಲ್ಲದೆ ಈತನು ಅತ್ಯಂತ ಶ್ರದ್ಧೆ ಮತ್ತು ಭಕ್ತಿಗಳಿಂದ ಕುರುವತ್ತಿಯಲ್ಲಿ ತನ್ನ ಹೆಸರಿನ 'ಆಹವಮಲ್ಲೇಶ್ವರ ದೇವಾಲಯ'ವನ್ನು ಕಟ್ಟಿಸುತ್ತಾನೆ. ಬೇಲೂರು, ಹಳೇಬೀಡುಗಳಲ್ಲಿಯ ದೇವಾಲಯಗಳಿಗೂ ಪೂರ್ವದಲ್ಲಿ ಆ ದೇವಾಲಯಗಳ ಶೈಲಿಯಲ್ಲಿಯೇ ಈ ದೇವಾಲಯ ಇರುವುದರಿಂದ ಕಲ್ಯಾಣ ಚಾಲುಕ್ಯರ ಈ

ವಾಸ್ತುಶೈಲಿಯನ್ನು ಅವರ ಮಾಂಡಲಿಕರಾದ ಹೊಯ್ಸಳರು ಬಳಸಿ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ಒಂದನೆಯ ಸೋಮೇಶ್ವರನಿಗೆ ಕುರುವತ್ತಿ ಕ್ಷೇತ್ರ ಪ್ರಿಯವಾಗಿತ್ತು. ತನ್ನ ಕೊನೆಯ ದಿನಗಳನ್ನು ಕಳೆಯಲು ಕಲ್ಯಾಣದಿಂದ ಕುರುವತ್ತಿಗೆ ಆಗಮಿಸಿದನು. ಅಲ್ಲಿಯ ತುಂಗಭದ್ರೆಯಲ್ಲಿ ಜಲಸಮಾಧಿ ಹೊಂದುತ್ತಾನೆ. ಈ ಅಂಶವನ್ನು ಬಳ್ಳಿಗಾವಿ ಶಾಸನ ಹೀಗೆ ನಿರೂಪಿಸುತ್ತದೆ.[೬೬]

ಗಗನವಾಂಕ ಸಂಖ್ಯೆ ಸಕಕಾಳದೊಳಗಾಗಿರೆ ಕೀಳಕಾಬ್ದಕಂ
ನೆಗಳಲೆ ತದೀಯ ಚೈತ್ರ ಬಹುಳಾಷ್ಟಮಿಯೊಳ್ ರವಿವಾರದೊಳಜಸಂ
ಮಿಗೆ ಕುರುವರ್ತಿಯೊಳ್ವರಪರಮಯೋಗ ನಿಯೋಗದೆ ತುಂ(ಗಭ)ದ್ರೆಯೊ
ಳ್ಜಗಧಧಿಪಂ ತ್ರಿವಿಷ್ಟಪಮನೇರಿದ ನಾಹವಮಲ್ಲವಲ್ಲಭಂ ॥

ಬಿಲ್ಹಣನ 'ವಿಕ್ರಮಾಂಕದೇವ ಚರಿತಂ' ಕಾವ್ಯದಲ್ಲಿ ಸೋಮೇಶ್ವರ ಶಿವಾಧೀನನಾದ ವಿಷಯ ಬರುತ್ತದೆ. ತಂದೆ ಆಹವಮಲ್ಲನ ಆಜ್ಞೆಯ ಮೇರೆಗೆ ವಿಕ್ರಮಾದಿತ್ಯ ದಂಡಯಾತ್ರೆ ಕೈಗೊಂಡು ಶತ್ರುಗಳ ಮೇಲೆ ವಿಜಯ ಸಾಧಿಸಿ ಕೃಷ್ಣಾನದಿಯ ದಂಡೆಯ ಮೇಲೆ ಬೀಡು ಬಿಟ್ಟಿರುತ್ತಾನೆ. ಅಲ್ಲಿಗೆ ಕಲ್ಯಾಣದಿಂದ ಬಂದ ದೂತನು ಚಕ್ರವರ್ತಿ ಸೋಮೇಶ್ವರ ಮರಣಿಸಿದ ಸುದ್ದಿಯನ್ನು "ಚಕ್ರವರ್ತಿ ಜ್ವರದಿಂದ ಬಳಲುತ್ತಿದ್ದು ಆತನ ಮಂತ್ರಿಗಳನ್ನೆಲ್ಲ ಕರೆಯಿಸಿ ನನ್ನನ್ನು ಸ್ವರ್ಗಕ್ಕೆ ಕಳಿಸುವ ಶಕ್ತಿಯಿರುವ ತುಂಗಭದ್ರಾ ನದಿಯಲ್ಲಿ ಮುಳುಗಿ ಶಿವಾಧೀನನಾಗುತ್ತೇನೆಂದು ತಿಳಿಸಿದ. ಅದಕ್ಕೆ ಮಂತ್ರಿಗಳೆಲ್ಲರೂ ಒಪ್ಪಿದರು. ಆಗ ಸೋಮೇಶ್ವರನು ಕುರುವತ್ತಿಯ ತುಂಗಭದ್ರೆಯಲ್ಲಿ ಮಿಂದು ಶಿವನನ್ನು ಆರಾಧಿಸಿ ಸಾಕಷ್ಟು ಹೊನ್ನನ್ನು ದಾನ ಮಾಡಿ ನಂತರ ತುಂಗಭದ್ರೆಯಲ್ಲಿ ಮುಳುಗಿ ಶಿವನಲ್ಲಿ ಐಕ್ಯನಾದ ಎಂದು ನಿವೇದಿಸುತ್ತಾನೆ. ಕುರುವತ್ತಿ ಕ್ಷೇತ್ರ ಆಕಾಲದಲ್ಲಿ ಪವಿತ್ರವೆನಿಸಿದ್ದುದು ಇದರಿಂದ ಗೊತ್ತಾಗುತ್ತದೆ.

ಕುರುವತ್ತಿಯಲ್ಲಿಯ ಆಹವಮಲ್ಲೇಶ್ವರ ದೇವಾಲಯದ ದಕ್ಷಿಣ ಬಾಗಿಲ ಸಮೀಪ ಪ್ರತ್ಯೇಕವಾಗಿ ಇಟ್ಟಿರುವ ಶಿಲ್ಪದಲ್ಲಿ ಒಬ್ಬ ರಾಜ ತನ್ನ ಇಬ್ಬರು ರಾಣಿಯರೊಡಗೂಡಿ ಕುಳಿತಿರುವ ದೃಶ್ಯವನ್ನು ಕೆತ್ತಲಾಗಿದೆ. ಈ ಮೂರ್ತಿ ಸೋಮೇಶ್ವರ ಮತ್ತು ಆತನ ರಾಣಿಯರದ್ದಾಗಿರಬೇಕು. ಈ ದೇವಾಲಯವನ್ನು ಅಂಕಮಲ್ಲ ಸೋಮೇಶ್ವರನೇ ಕಟ್ಟಿಸಿದ್ದು ಹೀಗಾಗಿ ಈ ಮೂರ್ತಿ ಒಂದನೆಯ ಸೋಮೇಶ್ವರ ಮತ್ತು ಆತನ ರಾಣಿಯರದಾಗಿರಬೇಕು. ಬಳ್ಳಾರಿ ಪ್ರದೇಶದೊಂದಿಗೆ ಈತನದು ವಿಶಿಷ್ಟ ಸಂಬಂಧವಿದ್ದುದನ್ನು ಈ ಅಂಶಗಳು ನಿರೂಪಿಸುತ್ತವೆ.

ಇಮ್ಮಡಿ ಸೋಮೇಶ್ವರ

ಆಹವಮಲ್ಲನ ಜಲಸಮಾಧಿಯ ನಂತರ ಆತನ ಹಿರಿಯ ಪುತ್ರ ಇಮ್ಮಡಿ ಸೋಮೇಶ್ವರನು ಕಲ್ಯಾಣದ ಸಿಂಹಾಸನ ಬೇಡುತ್ತಾನೆ. ಈತನು ಚಕ್ರವರ್ತಿಯಾಗಿದ್ದಾಗ ಕಿರಿಯ ಸಹೋದರ ಜಯಸಿಂಹ

'ಕಂಪಿಲೆ' ನೆಲೆವೀಡಿನಿಂದ ಆಳುತ್ತಿದ್ದನು.[೬೪] ಕ್ರಿ.ಶ. ೧೦೭೧ ಸುಮಾರಿಗೆ ಇಮ್ಮಡಿ ಸೋಮೇಶ್ವರನಿಗೂ ಮತ್ತು ಆರನೇಯ ವಿಕ್ರಮಾದಿತ್ಯನಿಗೂ ನಡೆದ ಅಂತಃಕಲಹದಲ್ಲಿ ವಿಕ್ರಮಾದಿತ್ಯ ಜಯಶೀಲನಾಗಿ ಚಕ್ರವರ್ತಿಯಾಗುತ್ತಾನೆ.

ಆರನೆಯ ವಿಕ್ರಮಾದಿತ್ಯ

ಶಕಪುರುಷ ಆರನೇಯ ವಿಕ್ರಮಾದಿತ್ಯ ಕಲ್ಯಾಣ ಚಾಲುಕ್ಯ ವಂಶದಲ್ಲಿ ಶ್ರೇಷ್ಠ ಚಕ್ರವರ್ತಿ. ಕ್ರಿ.ಶ. ೧೦೭೬ ರಲ್ಲಿ ಪಟ್ಟಾಭಿಷಿಕ್ತನಾಗಿ ಅಂದಿನಿಂದ 'ಚಾಲುಕ್ಯ ವಿಕ್ರಮ ಶಕೆ'ಯನ್ನು ಪ್ರಾರಂಭಿಸುತ್ತಾನೆ. ಬಳ್ಳಾರಿ ಜಿಲ್ಲೆಯಲ್ಲಿ ಈತನ ಹಲವಾರು ಶಾಸನಗಳು ಲಭ್ಯವಾಗಿವೆ. ಒಂದನೆಯ ಸೋಮೇಶ್ವರ ಚಕ್ರವರ್ತಿಯಾಗಿದ್ದಾಗ ನೊಳಂಬವಾಡಿ ೩೨೦೦೦ ವನ್ನು ಕುಮಾರವೃತ್ತಿಯಿಂದ ಆಳುತ್ತಿದ್ದನು[೬೫]. ವಿಕ್ರಮಾದಿತ್ಯನ ಸಾಹಸಕಾರ್ಯಗಳು ಅಣ್ಣ ಸೋಮೇಶ್ವರನಿಗೆ ಹೊಟ್ಟೆಕಿಚ್ಚನ್ನು ಹೊತ್ತಿಸಿತು. ತತ್ಫಲವಾಗಿ ವಿಕ್ರಮಾದಿತ್ಯ ಹಾಗೂ ಜಯಸಿಂಹರನ್ನು ಕೊಲ್ಲುವ ಸಂಚು ಹೂಡುತ್ತಾನೆ. ಇದನ್ನು ಗ್ರಹಿಸಿದ ವಿಕ್ರಮಾದಿತ್ಯ ಜಯಸಿಂಹನೊಂದಿಗೆ ಕಲ್ಯಾಣ ಬಿಟ್ಟು ಓಡಿಬರುತ್ತಾನೆ. ಈ ವಿಷಯ ಸೋಮೇಶ್ವರನಿಗೆ (II) ತಿಳಿದು ಇವರನ್ನು ಸೆರೆಹಿಡಿಯಲು ಸೈನ್ಯ ಕಳುಹಿಸುತ್ತಾನೆ. ಈ ಸೈನ್ಯವನ್ನು ವಿಕ್ರಮಾದಿತ್ಯ ಸೋಲಿಸುತ್ತಾನೆ. ಈ ಅಂಶ 'ವಿಕ್ರಮಾಂಕದೇವ ಚರಿತಂ' ಕಾವ್ಯ ವಿವರಿಸುತ್ತದೆ. ಹಾಗೆಯೆ ಶಾಸನಗಳು ಹೇಳುತ್ತವೆ.

ವಿಕ್ರಮಾದಿತ್ಯ ಕಲ್ಯಾಣ ನಗರ ತ್ಯಜಿಸಿ ತನ್ನ ಆಳ್ವಿಕೆಯ ವಿಭಾಗವಾಗಿದ್ದ ಬಲ್ಲಕುಂದೆ ನಾಡಿನ ಸಮೀಪದಲ್ಲಿರುವ ಸಿಂಧವಾಡಿ ೧೦೦೦ ವಿಭಾಗಕ್ಕೆ ಜಯಸಿಂಹನನ್ನು ಕರೆದುಕೊಂಡು ಬರುತ್ತಾನೆ. ಇದಕ್ಕೆ ಹೂವಿನ ಹಡಗಲಿ ಶಾಸನ[೬೬] ಆಧಾರವೊದಗಿಸುತ್ತದೆ. ಈ ಶಾಸನದಲ್ಲಿ ದಂಡನಾಯಕ ಚಿದ್ದಯ್ಯ ವಿಕ್ರಮಾದಿತ್ಯನನ್ನು ಗೆದ್ದು ಉತ್ಸಾಹದಲ್ಲಿದ್ದನೆಂದು ಹೇಳಲಾಗಿದೆ. ಹೂವಿನ ಹಡಗಲಿ ಶಾಸನದ ಕಾಲ ಕ್ರಿ.ಶ. ೧೦೭೧ ಫೆಬ್ರವರಿ ೨೫ ವಿಕ್ರಮಾದಿತ್ಯ ಕಲ್ಯಾಣದಿಂದ ತಪ್ಪಿಸಿಕೊಂಡು ಕ್ರಿ.ಶ. ೧೦೭೧ ಜನವರಿ ಕೊನೆಯ ಭಾಗದಲ್ಲಿ ಬಂದಿರಬೇಕು. ಹಡಗಲಿಯ ಈ ಶಾಸನದಲ್ಲಿ ಇಮ್ಮಡಿ ಸೋಮೇಶ್ವರ ಚಕ್ರವರ್ತಿಯಾಗಿ ಜೀವಂತವಾಗಿರುವಾಗಲೇ ವಿಕ್ರಮಾದಿತ್ಯ ತನ್ನನ್ನು ಚಕ್ರವರ್ತಿಯೆಂದು ಕರೆದುಕೊಂಡಿದ್ದಾನೆ. ಹೀಗೆ ವಿಕ್ರಮಾದಿತ್ಯನಿಗೆ ಆಪತ್ಕಾಲದಲ್ಲಿ ಆಶ್ರಯ ಕೊಟ್ಟಿದ್ದು ಬಳ್ಳಾರಿ ಜಿಲ್ಲೆಯ ಪ್ರದೇಶ. ವಿಕ್ರಮಾದಿತ್ಯನ ನೆರವಿಗೆ ನಿಂತವರು ಸಿಂಧರು. ವಿಕ್ರಮಾದಿತ್ಯ ಮತ್ತು ಇಮ್ಮಡಿ ಸೋಮೇಶ್ವರರ ನಡುವೆ ನಡೆದ ನಿರ್ಣಾಯಕ ಯುದ್ಧದಲ್ಲಿ ವಿಕ್ರಮಾದಿತ್ಯ ಗೆದ್ದು ಸಿಂಹಾಸನವೇರುತ್ತಾನೆ.

ನಿತ್ಯಭೂಮಿದಾನ ಲೋಲನೆಂಬ ಖ್ಯಾತಿ ಗಳಿಸಿಕೊಂಡಿದ್ದ, ವಿಕ್ರಮಾದಿತ್ಯ ಬಳ್ಳಾರಿ ಜಿಲ್ಲೆಯ ಅನೇಕ ದೇವಾಲಯಗಳಿಗೆ ದತ್ತಿ ದಾನ ನೀಡಿದ್ದಾನೆ. ದಂಡನಾಯಕ ಚಿದ್ದಯ್ಯನನ್ನು ಗೆದ್ದು ಉತ್ಸಾಹದಲ್ಲಿದ್ದಾಗ ಹೂವಿನ ಹಡಗಲಿಯ ಕಲಿದೇವಸ್ವಾಮಿ ದೇವರಿಗೆ ತುಂಗಭದ್ರಾ ನದಿಯ ತೆಂಕಣ

ಕೋಗಳಿ ೫೦೦ ಬಳಿಯ ಕಂಪಣ ಪಾಲ್ವಳ ೧೨ ರಲ್ಲಿಯ ಕೂಟಗನೂರನ್ನು ಬಿಡುತ್ತಾನೆ. ಅಲ್ಲದೆ ರವಿಗದಂಡನಾಯಕನ ಪತ್ನಿ ರೆಬ್ಬಲಾದೇವಿ ಪೂಪಿನನ ಹೊಸವಡಂಗಿಲೆಯಲ್ಲಿ[೬೭] ಕೇಶವ ದೇವಾಲಯ ಕಟ್ಟಿಸುತ್ತಾಳೆ, ವಿಕ್ರಮಾದಿತ್ಯನು ಮಹಾಮಂಡಳೇಶ್ವರ ಗಂಗರಸರು ತಮ್ಮ ತಂದೆ ಮಾಡಿಸಿದ ಬಳೇಶ್ವರ ದೇವಾಲಯಕ್ಕೆ ಚಕ್ರವರ್ತಿ ವಿಕ್ರಮಾದಿತ್ಯನಿಗೆ ಬಿನ್ನಪ ಮಾಡಿ ತ್ರಿಭೋಗ ಅಭ್ಯಂತರ ಸಿದ್ಧಿಯಾಗಿ ಭೂಮಿ ಪಡೆದು ಬಿಟ್ಟುದುದನ್ನು ಹೊಳಗುಂದಿ ಶಾಸನ[೬೮] ತಿಳಿಸುತ್ತದೆ. ಸಾಲಗುಂದೆಯ ಹುಳಿಯಮೇಶ್ವರ ದೇವಾಲಯಕ್ಕೆ ಸಿರುಗುಪ್ಪೆಯ ಸಮೀಪವಿರುವ ಸಿರಿಪುರದಲ್ಲಿ ಗದ್ದೆದಾನ ಬಿಡುತ್ತಾನೆ.[೬೯] ಹೀಗೆ ವಿಕ್ರಮಾದಿತ್ಯನ ದಾನಗುಣವನ್ನು ಇಲ್ಲಿಯ ಶಾಸನಗಳು ನಿರೂಪಿಸುತ್ತವೆ. ವಿಕ್ರಮಾದಿತ್ಯನ ೧೯ ಜನ ರಾಣಿಯರಲ್ಲಿ ಮೂವರು ಬಳ್ಳಾರಿ ಜಿಲ್ಲೆಯವರೇ. ಹಿರಿಯ ಕೇತಲಾದೇವಿಯನ್ನು ಚಕ್ರವರ್ತಿಯ 'ಪ್ರಿಯಾಂಗನೆ' ಎಂದು ಸಿರುಗುಪ್ಪ[೭೦] ಶಾಸನ ಕರೆದಿದೆ. ಅಚ್ಚೊಳ್ಳಿ[೭೧] ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ಪಟ್ಟಮಹಾದೇವಿಯ ಉಲ್ಲೇಖವಿದೆ. ಆದರೆ ಈ ಶಾಸನದಲ್ಲಿ ಆಕೆಯ ಹೆಸರಿಲ್ಲ. ಬಹುಶಃ ಮಲಯ ಮತಿದೇವಿಯನ್ನು ಸೂಚಿಸುತ್ತಿರಬೇಕು. ವಿಕ್ರಮಾದಿತ್ಯನ ಹಿರಿಯ ಅರಸಿ ಪಟ್ಟಮಹಾದೇವಿ ಮಲಯಮತಿ ಮಹಾದೇವಿಯ ಪ್ರಸ್ತಾಪ ಬಳ್ಳಾರಿಗೆ ಸಮೀಪವಿರುವ ಚಿನ್ನತುಂಬಳಂ[೭೨] ಶಾಸನದಲ್ಲಿ ಬರುತ್ತದೆ. ವಿಕ್ರಮಾದಿತ್ಯ ಕುಮಾರ ವೃತ್ತಿಯಿಂದ ಆಳುತ್ತಿರುವಾಗ ವರಿಸಿದ ರಾಣಿಯೆಂದರೆ ಪದ್ಮಲಾದೇವಿ. ಈಕೆ ಬಳ್ಳಾರಿ ಜಿಲ್ಲೆಯವಳಾಗಿದ್ದು, ಹಡಗಲಿ ತಾಲೂಕಿನ ಮಾಗಳ ಗ್ರಾಮದವಳು. ಬೆಳಗಾವಿ ಜಿಲ್ಲೆಯ ರಾಯಬಾಗ[೭೩] ಶಾಸನದಲ್ಲಿ ಈಕೆಯ ಉಲ್ಲೇಖ ಅಪ್ರತ್ಯಕ್ಷವಾಗಿ ಬರುತ್ತದೆ. ಈ ಶಾಸನದ ಕಾಲಮಾನ ಕ್ರಿ.ಶ. ೧೦೭೭ ಮಾರ್ಚ್ ೧೯ ಇರುವುದರಿಂದ ಇದಕ್ಕಿಂತ ಪೂರ್ವದಲ್ಲಿ ವಿಕ್ರಮಾದಿತ್ಯನು ಕುಮಾರ ವೃತ್ತಿಯಿಂದ ಆಳುತ್ತಿರುವಾಗಲೇ ಪದ್ಮಲಾದೇವಿಯನ್ನು ವಿವಾಹವಾಗಿರಬೇಕು. ವಿಕ್ರಮಾದಿತ್ಯನದು ನಿಷ್ಠುರ ವ್ಯಕ್ತಿತ್ವ, ಪ್ರಭುವರ್ಗದವರು ತಪ್ಪು ಮಾಡಿದರೆ ಅವರನ್ನು ಅಧಿಕಾರದಿಂದ ಕಿತ್ತೊಗೆಯುತ್ತಿದ್ದನು. ಅವರ ವಂಶದವರಿಗೂ ಅಧಿಕಾರ ಸಿಗದಂತೆ ನಿಯಮ ಮಾಡಿದ್ದನು. ಆರನೇ ವಿಕ್ರಮಾದಿತ್ಯನ ಕಾಲವು ಬಳ್ಳಾರಿ ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ಒಂದು ಮೈಲುಗಲ್ಲು. ಪರಂಪರಾಗತವಾಗಿ ನೊಳಂಬವಾಡಿ ೩೨೦೦ವನ್ನು. 'ಹೆಂಜೇರು' ಕಂಪಿಲಿಗಳಿಂದ ಆಳುತ್ತಾ ಬಂದಿದ್ದ ಪಲ್ಲವ ವಂಶದವರನ್ನು ಆರನೇ ವಿಕ್ರಮಾದಿತ್ಯ ಕಿತ್ತೊಗೆಯುತ್ತಾನೆ. ಇದಕ್ಕೆ ಕಾರಣ ಇವರು ವಿಕ್ರಮಾದಿತ್ಯನ ಅಣ್ಣ ಇಮ್ಮಡಿ ಸೋಮೇಶ್ವರನ ಪರ ವಹಿಸಿ ವಿಕ್ರಮಾದಿತ್ಯನ ವಿರುದ್ಧ ಯುದ್ಧ ಮಾಡಿದುದಾಗಿದೆ. ಕ್ರಿ.ಶ. ೧೦೭೬ ರಿಂದ ಕ್ರಿ.ಶ. ೧೧೨೬ ರ ವರೆಗೆ ದೀರ್ಘ ವರ್ಷಗಳ ಕಾಲ ಚಕ್ರವರ್ತಿಯಾಗಿ ಮೆರೆದ ವಿಕ್ರಮಾದಿತ್ಯನ ವ್ಯಕ್ತಿತ್ವವನ್ನು ಆತನ ರಾಜಧಾನಿಯನ್ನು ಕುರಿತು ಕವಿ ವಿಜ್ಞಾನೇಶ್ವರನು ತನ್ನ ಮಿತಾಕ್ಷರದಲ್ಲಿ ಸಾಕಷ್ಟು ಹಾಡಿ ಹೊಗಳಿದ್ದಾನೆ. ಈತನ ನಂತರ ಇವನ ಪುತ್ರ ಮೂರನೇ ಸೋಮೇಶ್ವರ ಕಲ್ಯಾಣದ ಸಿಂಹಾಸನವನ್ನೇರುತ್ತಾನೆ.

ಮೂರನೆ ಸೋಮೇಶ್ವರ

ಕವಿಯೂ, ವಿದ್ವಾಂಸನೂ ಆದ ಮೂರನೇ ಸೋಮೇಶ್ವರನು ವಿಕ್ರಮಾದಿತ್ಯನ ಪುತ್ರನಾಗಿದ್ದಾನೆ. ವಿಕ್ರಮಾದಿತ್ಯನು ಮರಣಿಸಿದ ತರುವಾಯ ಈತನು ಕಲ್ಯಾಣ ಚಾಲುಕ್ಯದ ಸಿಂಹಾಸನವನ್ನು ಏರುತ್ತಾನೆ. ಇವನಿಗೆ ಸರ್ವಜ್ಞ ಚಕ್ರವರ್ತಿ ಎಂಬ ವಿಶೇಷಣವಿತ್ತು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ[೨೪] ರಾಗಿಮಸಲವಾಡ ಶಾಸನವೊಂದರಲ್ಲಿ ಈತನು ಚಕ್ರವರ್ತಿಯಾಗಿ ಆಳುತ್ತಿದ್ದುದು ತಿಳಿದುಬರುತ್ತದೆ. ಮೂರನೇ ಸೋಮೇಶ್ವರನ ತರುವಾಯ ಎರಡನೇ ಜಗದೇಕ ಮಲ್ಲನು ಸಿಂಹಾಸನವನ್ನೇರಿ ಆಳುತ್ತಿದ್ದುದನ್ನು ಸಿಂಧಗೆರೆ[೨೫], ಜೆಣ್ಣೆಹಳ್ಳಿ[೨೬] ಮತ್ತು ಕುಡಿತಿನಿ[೨೭] ಶಾಸನಗಳು ನಿರೂಪಿಸುತ್ತವೆ. ಮುಂದೆ ಪಟ್ಟವೇರಿದ ಮೂರನೆಯ ತೈಲಪನು ಆಳುತ್ತಿರುವುದನ್ನು ಹಳ್ಯಂ[೨೮] ಶಾಸನ ನಿರೂಪಿಸುತ್ತದೆ. ಈತನ ಕಾಲದಲ್ಲಿ ಕಳಚೂರಿ ವಂಶದ ಬಿಜ್ಜಳನು ಕಲ್ಯಾಣದ ಚಾಲುಕ್ಯ ಸಿಂಹಾಸನವನ್ನು ಆಕ್ರಮಿಸುತ್ತಾನೆ.

ಸೋಮೇಶ್ವರ IV

ಕಳಚೂರಿ ವಂಶದವರು ಚಾಲುಕ್ಯ ಸಿಂಹಾಸನವನ್ನು ಆಕ್ರಮಿಸಿ ಚಕ್ರವರ್ತಿಗಳೆನಿಸಿದರೂ ಇವರಿಗೆ ಅನೇಕ ಮಹಾಮಂಡಳೇಶ್ವರರ ವಿರೋಧವಿತ್ತು. ಕ್ರಿ.ಶ. ೧೧೮೪ ರ ಸುಮಾರಿಗೆ[೨೯] ನಾಲ್ಕನೇ ಸೋಮೇಶ್ವರನ ಚಕ್ರವರ್ತಿಯಾಗಿ ಜಯಂತಿಪುರದ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಕ್ರಿ.ಶ. ೧೧೮೫ ಫೆಬ್ರವರಿ ೪ ರ ಶಾಸನದಲ್ಲಿ[೩೦] ನಾಲ್ಕನೇ ಸೋಮೇಶ್ವರನನ್ನು ಚಾಳುಕ್ಯಾಭರಣಂ "ಕಳಚೂರಿಯ ಕುಳ ನಿರ್ಮೂಳನಂ ತ್ರಿಭುವನಮಲ್ಲ ವೀರಸೋಮೇಶ್ವರ ದೇವರ್" ಎಂದು ನಿರೂಪಿಸಿ ಈತನು ಆಳುತ್ತಿದ್ದನೆಂದು ಹೇಳಿದೆ. ಇವರೀರ್ವರೂ ರಾಜ್ಯದಾಹದಿಂದ ಸದಾ ಯುದ್ಧಗಳಲ್ಲಿ ತೊಡಗಿದುದು ಶಾಸನಗಳಿಂದ ತಿಳಿದುಬರುತ್ತದೆ.

ಕಳಚೂರಿ, ಸೇವುಣರ ಮತ್ತು ಹೊಯ್ಸಳ ಘಟ್ಟ: ಈ ಮೂರೂ ಮನೆತನಗಳ ಆಳ್ವಿಕೆಯನ್ನು ಒಂದು ಘಟ್ಟವನ್ನಾಗಿಸಿ ಇಲ್ಲಿ ವಿವರಿಸಲಾಗಿದೆ. ಕಲ್ಯಾಣದ ಚಾಲುಕ್ಯರು ಮೂಲೆಗುಂಪಾದ ಮೇಲೆ ಚಕ್ರಾಧಿಪತ್ಯಕ್ಕೆ ತ್ರಿಕೋನ ಸ್ಪರ್ಧೆ ನಡೆಯುತ್ತದೆ. ಈ ಮೂರು ಮನೆತನದವರು ತಮ್ಮ ತೋಳ್ಬಲವನ್ನು ಪ್ರದರ್ಶಿಸುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಆರಂಭದಲ್ಲಿ ಕಳಚೂರಿ ವಂಶದವರು ಮೇಲುಗೈ ಸಾಧಿಸಿ ಚಕ್ರವರ್ತಿಗಳೆನಿಸಿಕೊಂಡರೂ ಮುಂದೆ ಪ್ರಬಲರಾದ ದೇವಗಿರಿ ಯಾದವರಿಗೆ (ಸೇವುಣರಿಗೆ) ಸೋಲಲೇಬೇಕಾಯಿತು. ಅನಂತರ ದೇವಗಿರಿ ಯಾದವರಿಗೂ ಮತ್ತು ಹೊಯ್ಸಳರಿಗೂ ಸತತವಾಗಿ ಯುದ್ಧಗಳು ನಡೆದವು. ಇವರ ಕಾಲದಲ್ಲಿಯೇ ಬಲ್ಲಕುಂದೆ ಪ್ರದೇಶ ಒಮ್ಮೆ ಹೊಯ್ಸಳರ ವಶದಲ್ಲಿದ್ದರೆ, ಮತ್ತೊಮ್ಮೆ ದೇವಗಿರಿ ಯಾದವರ ವಶದಲ್ಲಿರುತ್ತಿತ್ತು. ಈ ಮೂರು ಮನೆತನದವರು ಬಳ್ಳಾರಿ ಜಿಲ್ಲೆಗೆ ಇತ್ತ ಕಾಣಿಕೆಯನ್ನು ಮುಂದೆ ನೋಡಬಹುದು.

ಕಳಚೂರಿ ಅರಸರು

ಕಳಚೂರಿ ಅರಸರಿಗೂ ಕಲ್ಯಾಣದ ಚಾಲುಕ್ಯರ ನಡುವೆ ರಕ್ತಸಂಬಂಧವಿತ್ತು. ಆರನೇಯ ವಿಕ್ರಮಾದಿತ್ಯನ ಮಗಳ ಮಗನಾದ ಕಳಚೂರಿ ವಂಶದ ಬಿಜ್ಜಳನು ಚಾಲುಕ್ಯ ವಂಶದ ಮೂರನೇ ತೈಲಪನನ್ನು ಹಿಂದಕ್ಕೆ ತಳ್ಳಿ ತಾನೇ ಚಕ್ರವರ್ತಿಯಾಗುತ್ತಾನೆ. ಕ್ರಿ.ಶ. ೧೧೫೭ ರಿಂದ ಕಳಚೂರಿ ವಂಶವನ್ನು ಕಲ್ಯಾಣದ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸುತ್ತಾನೆ. ಬಸವಣ್ಣನಂತಹ ಮಹಾನುಭಾವರು ಈತನ ಆಸ್ಥಾನದಲ್ಲಿ ದಂಡನಾಯಕರಾಗಿದ್ದು ಭಂಡಾರದ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಈ ಬಸವಣ್ಣನವರ ಸಾಮಾಜಿಕ ಕ್ರಾಂತಿಯಿಂದಾಗಿ ೧೨ ಶತಮಾನ ಅಂದರೆ ಬಿಜ್ಜಳನ ಆಳ್ವಿಕೆಯ ಅವಧಿಯು ಇತಿಹಾಸದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆಯಿತು. ಬಿಜ್ಜಳನ ಕಾಲದಲ್ಲಿ ಕುರುಗೋಡಿನ ಅರಸರು ಒತ್ತಾಯಪೂರ್ವಕವಾಗಿ ಕಳಚೂರಿ ವಂಶದವರನ್ನು ತಮ್ಮ ಚಕ್ರವರ್ತಿಗಳೆಂದು ಒಪ್ಪಿದ್ದರು. ಉಚ್ಚಂಗಿಯ ಪಾಂಡ್ಯರ ನಿಷ್ಠೆ ಯಾವಾಗಲೂ ಚಾಲುಕ್ಯರ ಕಡೆಗೇ ಇತ್ತು. ಅಲ್ಲದೆ ಕುರುಗೋಡಿನ ಸಿಂಧರೂ ಕೂಡ ಚಾಲುಕ್ಯರ ಅನುಯಾಯಿಗಳಾಗಿದ್ದಾರೆ. ಚಾಲುಕ್ಯ ವಂಶದ ನಾಲ್ಕನೆಯ ಸೋಮೇಶ್ವರನು ಕೆಲವು ದಿನಗಳ ಮಟ್ಟಿಗಾದರೂ ಸಿಂಧರ ರಾಜಧಾನಿ ಕುರುಗೋಡಿನಲ್ಲಿ ಆಶ್ರಯ ಪಡೆದಿದ್ದುದು ಗೊತ್ತಾಗುತ್ತದೆ. ಕುರುಗೋಡಿನ ಕ್ರಿ.ಶ. ೧೧೮೧-೮೨ ರ ಶಾಸನದಲ್ಲಿ ರಾಚಮಲ್ಲನು ಸೋಮೇಶ್ವರನ ಅಧೀನನಾಗಿ ಆಳುತ್ತಿರುವುದನ್ನು ಹೇಳಲಾಗಿದೆ. ಬಿಜ್ಜಳನ ಒಂದು ಶಾಸನ ಬಳ್ಳಾರಿ ಜಿಲ್ಲೆಯ ನೀಲಗುಂದ[೮೧], ಗ್ರಾಮದಲ್ಲಿ ಲಭ್ಯವಿದೆ. ಕ್ರಿ.ಶ. ೧೧೬೨ ರ ಈ ನೀಲಗುಂದ ಶಾಸನದಲ್ಲಿ "ತ್ರಿಭುವನ ಮಲ್ಲ, ಭುಜಬಳ ಚಕ್ರವರ್ತಿ ಬಿಜ್ಜಳದೇವರು" ಆಳುತ್ತಿದ್ದುದನ್ನು ಹೇಳಲಾಗಿದೆ. ಈತನಿಗೆ ಅಧೀನನಾಗಿ ವೀರಪಾಂಡ್ಯ ದೇವನು ಕೋಗಳಿ ೫೦೦, ಕದಂಬಳಿಗೆ ೧೦೦೦ ವಿಭಾಗಗಳನ್ನು ಆಳುತ್ತಿದ್ದನು. ಕ್ರಿ.ಶ. ೧೧೬೨ ರ ಸುಮಾರಿಗೆ ಕಳಚೂರಿ ವಂಶದ ರಾಯಮುರಾರಿ ಭುಜಬಳಮಲ್ಲ ಸೋಮೇಶ್ವರ ದೇವನಿಗೆ ಈ ಪ್ರದೇಶ ಒಳಪಟ್ಟಿದ್ದಿತು[೮೨]. ಕುರುಗೋಡಿನ[೮೩] ಕ್ರಿ.ಶ. ೧೧೭೬ ರ ಶಾಸನದಲ್ಲಿ ರಾಯಮುರಾರಿ ಸೋವಿದೇವನು ರಾಜ್ಯ ಪರಿಪಾಲಿಸುತ್ತಿರುವಾಗ ಮಹಾಮಂಡಳೇಶ್ವರ ರಾಚಮಲ್ಲನು ಕಲ್ಲಿಸೆಟ್ಟಿ ಪ್ರತಿಷ್ಠಾಪಿಸಿದ ಕಲಿದೇವರಿಗೆ ದಾನ ಬಿಡುತ್ತಾನೆ. ಕ್ರಿ.ಶ. ೧೧೭೭ ರ ಜೂನ್ ೨೬ ರ ಸುಮಾರಿಗೆ ಕಳಚೂರಿ ವಂಶದ ಸಂಕಮದೇವನು ಕಲ್ಯಾಣದಿಂದ ಆಳುತ್ತಿದ್ದನೆಂದು ಕುರುಗೋಡಿನ[೮೪] ಶಾಸನ ತಿಳಿಸುತ್ತದೆ. ಶಾಸನದಲ್ಲಿ ಶ್ರೀಮದ್ ಶಂಕವರ್ಮದೇವ ಚಕ್ರವರ್ತಿ ಎಂದು ಬರುತ್ತಿದ್ದು, ಕಲ್ಯಾಣದಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಇದು ಕಳಚೂರಿ ವಂಶದವರು ಬಳ್ಳಾರಿ ಜಿಲ್ಲೆಯನ್ನು ಚಕ್ರವರ್ತಿಗಳಾಗಿ ಆಳಿದ್ದಾರೆಂಬುದಕ್ಕೆ ಆಧಾರಗಳು.

ಹೊಯ್ಸಳರು

ಹೊಯ್ಸಳ ವಂಶದ ಮಹಾಮಂಡಳೇಶ್ವರ ವಿಷ್ಣುವರ್ಧನನಿಂದ ಹೊಯ್ಸಳರಿಗೂ ಬಳ್ಳಾರಿ ಪ್ರದೇಶದಲ್ಲಿ ಸಂಬಂಧ ಉಂಟಾಗುತ್ತದೆ. ಈತನು ಉಚ್ಚಂಗಿ ದುರ್ಗವನ್ನು ವಶಪಡಿಸಿಕೊಂಡಿದ್ದನು. ಅನಂತರ ಚಕ್ರವರ್ತಿ ಆರನೇ ವಿಕ್ರಮಾದಿತ್ಯ ಈತನನ್ನು ಸಂಪೂರ್ಣವಾಗಿ ಹತ್ತಿಕ್ಕಿದುದು ಶಾಸನಗಳಿಂದ ತಿಳಿದುಬರುತ್ತದೆ.

ಇಮ್ಮಡಿ ವೀರಬಲ್ಲಾಳನ ಕಾಲಕ್ಕೆ ಅಂದರೆ ಕ್ರಿ.ಶ. ೧೧೮೯ ರ ಸುಮಾರಿಗಾಗಲೇ ಬಳ್ಳಾರಿ ಜಿಲ್ಲೆ ಸಂಪೂರ್ಣವಾಗಿ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೧೧೯೩ ನವೆಂಬರ್ ೧೦ ರ ಬಾಗಳಿ ಶಾಸನದಲ್ಲಿ "ಶ್ರೀ ವೀರಬಲ್ಲಾಳ ದೇವರು ಶ್ರೀಮತ್ತು ಹರಿಶ್ಚಂದ್ರದತ್ತಿಯ ಅಗ್ರಹಾರ ಬಾಳ್ಗುಡಿಯ ನೆಲೆವೀಡಿನೊಳು ಆಳುತ್ತಿದ್ದುದನ್ನು ಹೇಳಲಾಗಿದೆ." ವೀರಬಲ್ಲಾಳನು ಬಾಗಳಿಯ[೮೫] ಸ್ವಯಂಬು ಕಲಿದೇವರ ಅಂಗರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಅಲ್ಲಿಯ ಬ್ರಾಹ್ಮಣರ ಭೋಜನಕ್ಕೆ ನಂದಿಬೇಹೂರ ಸಮಚತುರಾಘಾಟ ಸೀಮೆಯಲ್ಲಿ ಭೂಮಿಯನ್ನು ದಾನವಾಗಿ ಬಿಡುತ್ತಾನೆ. ಅಲ್ಲದೆ ಇದೇ ಬಾಗಳಿಯ ನೆಲೆವೀಡಿನಲ್ಲಿರುವಾಗ ಈತನು ಕುರುವತ್ತಿಯ ಶ್ರೀಮದ್ ಆಹವಮಲ್ಲೇಶ್ವರ ದೇವರ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಅಂಗ ರಂಗ ಭೋಗಗಳಿಗೆ ಬೆಂಣೆವೂರು ೧೨ ರಲ್ಲಿಯ ಮುಕುರಬ್ಬೆಯನ್ನು ಬಿಡುತ್ತಾನೆ[೮೬]. ಸಂಡೂರಿನ ಕುಮಾರಸ್ವಾಮಿ ದೇವಾಲಯದಿಂದ[೮೭] ಈತನು ಕ್ರಿ.ಶ. ೧೨೦೬ ಮಾರ್ಚ್ ೧೧ ರಂದು ತುಂಗಭದ್ರಾ ನದಿ ತೀರದ ಮಧುವನದ ನೆಲೆವೀಡಿನಿಂದ ಆಳುತ್ತಿದ್ದುದು ತಿಳಿದುಬರುತ್ತದೆ. ಕುಮಾರಸ್ವಾಮಿ ದೇವಾಲಯಕ್ಕೆ ಹಿಂದೆ ರಾಷ್ಟ್ರಕೂಟ ದೊರೆ ಕೃಷ್ಣನು ಬಿಟ್ಟಿದ್ದ ಪ್ರೀತಿ ತಟಾಕ ಎಂಬ ಗ್ರಾಮವನ್ನು ಈತನು ಪುನರ್‌ದತ್ತಿ ಮಾಡಿಕೊಡುತ್ತಾನೆ. ಈ ಗ್ರಾಮವನ್ನು ಶಾಸನದಲ್ಲಿ ಕೆರೆಯ ಹಳ್ಳಿ ಎಂದು ಕರೆಯಲಾಗಿದೆ. ಈ ಗ್ರಾಮದಿಂದ ಸಲ್ಲುತ್ತಿದ್ದ ತೆರಿಗೆ ಆಯ ಮೊದಲಾದವು ಕುಮಾರಸ್ವಾಮಿ ದೇವಾಲಯಕ್ಕೆ ಸಲ್ಲುವಂತೆ ಮಾಡಿ ಈ ಗ್ರಾಮವನ್ನು ಪುನರ್‌ದತ್ತಿ ಮಾಡಿಕೊಡುತ್ತಾನೆ. ವೀರಬಲ್ಲಾಳನ ಪಟ್ಟ ಮಹಾದೇವಿಯಾದ ಪದುಮಲಾದೇವಿಯು ಬಳ್ಳಾರಿ ಜಿಲ್ಲೆಯ ಹಿರೇಹಡಗಲಿಯವಳೆಂದು ಶಾಸನದಿಂದ ತಿಳಿದುಬರುತ್ತದೆ[೮೮]. "ಸ್ವಸ್ತ್ಯನವರತ ಪರಮಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆ ಕಳಹಂಸೆಯಾನೆ ಸಮಸ್ತಾವನಿಪಾಂತಪುರ ವಿಶದ ವಿರಾಜಮಾನ ರೂಪವಿದ್ಯಾಧರಿ ವ್ರಿತ್ತೋನ್ನತ ಪಯೋಧರಿ ಪರಿರಕ್ಷಿತಾತ್ಮೀಯ ಬಂಧುವರ್ಗೆ ಮನುನೀತಿ ಮರ್ಗ್ಗೇ ಪ್ರತ್ಯೇಕ ಪ್ರಭಾವ ಸರಸ್ವತಿ ದಶದಿ ಶಾಂತರ XXXX ನಿರ್ಮಳ ಯಶ ಸ್ವಾತಿ ನಿರನ್ತರ ಪ್ರವರ್ಧಮಾನ ವೀರಬಲ್ಲಾಳ ದೇವರಾಜ್ಯ ಲಕ್ಷ್ಮೀನಿವಾಸೆ ಶುಭಲಕ್ಷ XXXX ರಪ್ಪ ಪಿರಿಯರಸಿ ಪದ್ಮಲಾಪಟ್ಟ ಮಹಾದೇವಿಯರು ಪೊಸವಡಂಗಿಲೆಯಂ ಸುಧರ್ಮದಿಂ ರಕ್ಷಿಸುತ್ತಿರೆ" ಎಂದು ಬರುತ್ತದೆ. ಇದರಿಂದ ಈಕೆಯು ಹಿರೇಹಡಗಲಿ ಗ್ರಾಮದವಳೇ ಆಗಿರಬೇಕೆನಿಸುತ್ತದೆ. ಮಹಾಜನರ ಭಿನ್ನಹದ

ಮೇರೆಗೆ ಹಿರಿಯ ಕೆರೆಗೆ, ತುಂಬಿನ ಕೆರೆಗೆ ಪಡಿ ಸಲ್ಲಿಸಲು ಭೂಮಿಯನ್ನು ದಾನ ಬಿಟ್ಟ ವಿವರವೂ ಈ ಶಾಸನದಲ್ಲಿದೆ. ವೀರಬಲ್ಲಾಳನು ದೇವಗಿರಿಯ ಯಾದವರೊಂದಿಗೆ ಸೇವುಣರು ಯುದ್ಧ ಮಾಡಿ ವಿಜಯಸಾಧಿಸಿದ್ದನ್ನು ನೀಲಗುಂದದ[೯] ಕ್ರಿ.ಶ. ೧೨೨೪ ರ ಶಾಸನದಲ್ಲಿ ಹೇಳಲಾಗಿದೆ. ಈ ಯುದ್ಧ ಸೊರಟೂರಿನಲ್ಲಿ ನಡೆದಿರಬೇಕು. ಆದುದರಿಂದಲೇ ಸೊರಟೂರಿನಿಂದ ಕೃಷ್ಣಾನದಿಯ ವರೆಗೆ ಸೇವುಣ ಸೈನ್ಯವನ್ನು ಬೆನ್ನಟ್ಟಿಕೊಂಡು ಹೋಗಿ ಸೋಲಿಸಿ ಓಡಿಸಿದ್ದಾನೆ. ಈ ಶಾಸನದಿಂದ ವೀರಬಲ್ಲಾಳನಲ್ಲಿ ಬಲಿಷ್ಠವಾದ ಆನೆಯ ದಳ ಇದ್ದುದು ಗೊತ್ತಾಗುತ್ತದೆ. ಈ ಎರಡನೆಯ ವೀರಬಲ್ಲಾಳ ಮತ್ತು ಪದುಮಲಾದೇವಿಯರ ಪುತ್ರ ಇಮ್ಮಡಿ ವೀರನರಸಿಂಹನ ಆಳ್ವಿಕೆಯ ಅವಧಿಯಲ್ಲಿ ಬಳ್ಳಾರಿ ಪ್ರದೇಶವು ಹೊಯ್ಸಳರಿಗೆ ಒಳಪಟ್ಟಿತ್ತು.

ದೇವಗಿರಿಯ ಯಾದವರು

'ಸೇವುಣರು' 'ಯಾದವರು' ಎಂದು ಇವರನ್ನು ಶಾಸನಗಳು ಕರೆದಿವೆ. ಈಗ ಮಹಾರಾಷ್ಟ್ರದಲ್ಲಿರುವ ದೇವಗಿರಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಇವರು ಆಳುತ್ತಿದ್ದರು. ಆರಂಭದಲ್ಲಿ ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳಿಗೆ ಮಹಾಮಂಡಳೇಶ್ವರರಾಗಿದ್ದರು. ಕಳಚೂರಿ ವಂಶದವರ ಆಳ್ವಿಕೆಯಲ್ಲಿ ಸ್ವಾತಂತ್ರವನ್ನು ಘೋಷಿಸಿಕೊಂಡ ಇವರು ರಾಜ್ಯವಿಸ್ತರಣೆಗಾಗಿ ಹೊಯ್ಸಳರ ಜೊತೆ ಪೈಪೋಟಿಗೆ ಇಳಿದರು. ಇವರಿಗೂ ಹೊಯ್ಸಳರಿಗೂ ಅನೇಕ ಯುದ್ಧಗಳು ಜರುಗಿವೆ. ಒಮ್ಮೆ ಸೇವುಣರಿಗೆ ಜಯ ಲಭಿಸಿದರೆ ಮತ್ತೊಮ್ಮೆ ಹೊಯ್ಸಳರಿಗೆ ಜಯ ಲಭಿಸುತ್ತಿತ್ತು.

ಯಾದವರ ಕೆಲವು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಾಗಿದ್ದು ಅವು ಈ ಜಿಲ್ಲೆಯಲ್ಲಿ ಅವರ ಆಳ್ವಿಕೆಯನ್ನು ತಿಳಿಸುತ್ತವೆ. ಬಾಗಳಿ ಶಾಸನ[೧೦] "ಶ್ರೀಮತು ಯಾದವನಾರಾಯಣ ಭುಜಬಲ ಪ್ರತಾಪ ಚಕ್ರವರ್ತಿ ಶ್ರೀ ಕಂಧ್ಧರದೇವರು" ಆಳುತ್ತಿದ್ದುದನ್ನು ಹೇಳುತ್ತದೆ. ಪಣಗಿಯ ಶಾಸನ[೧೧] "ದ್ವಾರಾವತೀ ಪುರವರಾಧೀಶ್ವರಂ ವಿಷ್ಣು ವಂಶೋದ್ಭವಂ ಸುವರ್ಣ ಗರುಡಧ್ವಜಂ ಯಾದವಕುಳ ಕಮಳಕಳಿಕಾ ವಿಕಾಸ ಭಾಸ್ಕರಂ ಅರಿರಾಯ ಜಗಝಂಪ ಮಾಳವರಾಯ ಮದನ ತ್ರಿಣೇತ್ರಂ ಗೂರ್ಜರರಾಯ ಭಯಂಕರಂ ತೆಲುಂಗರಾಯ ಸ್ಥಾಪನಾಚಾರ್ಯ ಯಿತ್ಯಾದಿ ನಾಮಾಲಂಕ್ರಿತಂ ಶ್ರೀಮತು ಪ್ರೌಢ ಪ್ರತಾಪ ಚಕ್ರವರ್ತಿ ಶ್ರೀ ಕಂಧಾರದೇವ"ನು ದೇವಗಿರಿಯ ನೆಲೆವೀಡಿನಿಂದ ಆಳುತ್ತಿದ್ದನೆಂದು ತಿಳಿಸುತ್ತದೆ.

ಕ್ರಿ.ಶ. ೧೨೬೫ ಹಾಗೂ ೧೨೬೮ ರಲ್ಲಿ ಮಹಾದೇವರಾಯ ಆಳುತ್ತಿದ್ದನೆಂದು ಚಿಮ್ಮನಹಳ್ಳಿ[೧೨] ಹಾಗೂ ಉಜ್ಜಿನಿ[೧೩]ಯ ಶಾಸನಗಳಲ್ಲಿ ಉಕ್ತವಾಗಿದೆ. ಚಿಮ್ಮನಹಳ್ಳಿಯ ಶಾಸನವು ಮಹಾದೇವರಾಯನನ್ನು "ಶ್ರೀಮತು ಯಾದವ ನಾರಾಯಣಂ ಭುಜಬಳ ಪ್ರವುಢ ಪ್ರತಾಪ ಚಕ್ರವರ್ತಿ ಶ್ರೀ ವೀರಮಹದೇವರಾ" ಎಂದು ಕರೆದಿದೆ.

ರಾಮಚಂದ್ರ ದೇವನ ಮೂರು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಾಗಿದ್ದು ಅವು ಕ್ರಮವಾಗಿ ಕ್ರಿ.ಶ. ೧೨೭೮, ೧೨೭೯ ಮತ್ತು ೧೨೮೨ ಕಾಲಕ್ಕೆ ಸಂಬಂಧಿಸಿವೆ. ಇವು ಕ್ರಮವಾಗಿ ಬಸರಕೋಡು[೬೪], ಕಂಚೂರು[೬೫], ಕುಲುಬಾಗಲು[೬೬] ಗ್ರಾಮಗಳ ಶಾಸನಗಳಾಗಿವೆ. ಬಸರಕೋಡು ಈಗ ಆಂದ್ರ ಪ್ರದೇಶದಲ್ಲಿದ್ದರೂ ಅದು ಬಳ್ಳಾರಿಗೆ ಸಮೀಪವಿರುವ ಗ್ರಾಮವಾಗಿದೆ. ಬಸರಕೋಡು ಮತ್ತು ಕುಂಚೂರು ಶಾಸನಗಳಲ್ಲಿ 'ಶ್ರೀ ವೀರರಾಮಚಂದ್ರರಾಯ'ನು ದೇವಗಿರಿಯ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಲಾಗಿದೆ.

ಇವರ ನಂತರ ಅಂದರೆ ಸುಮಾರು ಕ್ರಿ.ಶ. ೧೨೮೦ ರಿಂದ ಕ್ರಿ.ಶ. ೧೩೨೬ ರ ವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಮುಮ್ಮಡಿ ಸಿಂಗನಾಯಕ ಆತನ ಪುತ್ರ ವೀರ ಕಂಪಿಲರಾಯ ಈತನ ಪುತ್ರ ಕುಮಾರರಾಮನ ಆಳ್ವಿಕೆ ಇರುತ್ತದೆ. ಉತ್ತರ ಭಾರತದಿಂದ ಬಂದ ದೆಹಲಿ ಸುಲ್ತಾನರ ದಾಳಿಗೆ ಕಮ್ಮಟ ದುರ್ಗ ರಾಜ್ಯವೇ ನಾಶವಾಗುತ್ತದೆ. ಇವರೊಂದಿಗೆ ವೀರ ಕಂಪಿಲರಾಯ ಮತ್ತು ಆತನ ಪುತ್ರ ಕುಮಾರರಾಮನು ವೀರಾವೇಶದಿಂದ ಹೋರಾಡಿ ತಮ್ಮ ಪ್ರಾಣವನ್ನೇ ಕಳೆದುಕೊಳ್ಳುತ್ತಾರೆ. ಇವರ ನಂತರ ಕ್ರಿ.ಶ. ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡು ಹಂಪಿಯನ್ನು (ವಿಜಯನಗರವನ್ನು) ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಾ ಸಂಪೂರ್ಣ ದಕ್ಷಿಣ ಭಾರತವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ವಿಜಯನಗರ ಸಾಮ್ರಾಜ್ಯದಿಂದಾಗಿ ಬಳ್ಳಾರಿ ಜಿಲ್ಲೆಯ ಇತಿಹಾಸ ಇನ್ನಷ್ಟು ಖ್ಯಾತಿ ಪಡೆಯಿತು.

ನೊಳಂಬ ಪಲ್ಲವರು

ಕಂಚಿಯ ಪಲ್ಲವ ವಂಶದವರು ವಶಪಡಿಸಿಕೊಂಡಿರುವ ಪ್ರದೇಶವನ್ನು ಆಳಲು ತಮ್ಮ ವಂಶದವರನ್ನು ನೇಮಕ ಮಾಡಿದ್ದು ಅವರ ಆಳ್ವಿಕೆಗೊಳಪಟ್ಟ ಪ್ರದೇಶ ನೊಳಂಬವಾಡಿಯಾಗಿದೆ. ಕಂಚಿಯ ಪಲ್ಲವರೊಂದಿಗೆ ಕದಂಬರು, ಗಂಗರು, ಚಾಲುಕ್ಯರು ನಿರಂತರವಾಗಿ ಕಾದಾಡುತ್ತಲೇ ಬಂದಿದ್ದಾರೆ. ಕದಂಬ ವಂಶದ ಮಯೂರ ಶರ್ಮನು ಕಂಚಿ ನಗರದಲ್ಲಿ ತನಗಾದ ಅವಮಾನವನ್ನು ಸಹಿಸದೆ ಪ್ರತಿಭಟಿಸಿ ತನ್ನದೇ ಆದ ಸಾಮ್ರಾಜ್ಯ ಕಟ್ಟಿದ. ಆಗ ಬಳ್ಳಾರಿ ನೇರವಾಗಿ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಆಗ ಕಂಚಿಯ ಪಲ್ಲವರು ಈ ಪ್ರದೇಶದ ಮೇಲಿನ ಅಧಿಕಾರ ಕಳೆದುಕೊಂಡರು. ಗಂಗರಿಗೂ ಇವರಿಗೂ ಅನೇಕ ಯುದ್ಧಗಳು ನಡೆದುದನ್ನು ಶಾಸನಗಳು ನಿರೂಪಿಸುತ್ತವೆ. ಗಂಗರು ಯುದ್ಧದಲ್ಲಿ ಪಲ್ಲವರನ್ನು ಗೆದ್ದು ಆವರಣದಲ್ಲಿದ್ದ ಪೆರ್ಮನಡಿ ಎಂಬ ಹೆಸರನ್ನು ಕಸಿದುಕೊಳ್ಳುತ್ತಾರೆ. ನಂತರ ಪಲ್ಲವರಿಗೂ ಗಂಗರಿಗೂ ವೈವಾಹಿಕ ಸಂಬಂಧಗಳಾಗಿ ಶಾಂತಿ ನೆಲೆಯೂರಿತು. ಸಿಂಧವಾಡಿ ಭಾಗದಲ್ಲಿದ್ದ ನೊಳಂಬ ಪಲ್ಲವರು ಮೂರು ತಲೆಮಾರುಗಳ ವರೆಗೆ ಸತತವಾಗಿ ಗಂಗ ರಾಜಕುಮಾರಿಯನ್ನು ವಿವಾಹವಾಗಿದ್ದುದು ತಿಳಿದುಬರುತ್ತದೆ. ಧರ್ಮಪುರಿ [೬೭] ಶಾಸನದಲ್ಲಿ

ನೊಳಂಬಾದಿ ರಾಜ ಗಂಗವಂಶ ರಾಚಮಲ್ಲನ ಪುತ್ರಿ ಜಾಯಬ್ಬರಸಿಯನ್ನು ವಿವಾಹವಾಗಿದ್ದನ್ನು ಹೇಳಲಾಗಿದೆ. ಇವರಿಬ್ಬರಿಗೆ ಜನಿಸಿದ ಮಹೇಂದ್ರನು ಕೂಡ ಗಂಗ ರಾಜಕುಮಾರಿ ಗಾಮಬ್ಬೆ ಮಹಾದೇವಿಯನ್ನು ವಿವಾಹವಾಗಿದ್ದನು. ಇವರಿಬ್ಬರಿಗೆ ಜನಿಸಿದ ಅಯ್ಯಪ್ಪದೇವನೂ ಸಹಿತ ಗಂಗ ರಾಜಕುಮಾರಿ ಪಲ್ಲಬ್ಬರಸಿಯನ್ನು ವಿವಾಹವಾಗಿದ್ದನು. ನೊಳಂಬ ಪಲ್ಲವರು ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಇವರಿಗೆ ಅಧೀನರಾಗಿ ಕ್ರಿ.ಶ. ಸುಮಾರು ೮ ನೇ ಶತಮಾನದಿಂದ ಕ್ರಿ.ಶ. ೧೦೭೬ ರ ವರೆಗೆ ಬಳ್ಳಾರಿ ಜಿಲ್ಲೆಯ ಪ್ರದೇಶವನ್ನೊಳಗೊಂಡ ನೊಳಂಬವಾಡಿ ನಾಡನ್ನು ಆಳಿದ್ದಾರೆ.

ಕಲ್ಯಾಣದ ಚಕ್ರವರ್ತಿಗಳಿಗೆ ಇಮ್ಮಡಿ ಸೋಮೇಶ್ವರನ ಅವಧಿಯ ವರೆಗೂ ಇವರು ಪ್ರತಿಷ್ಠಿತ ಮಹಾಮಂಡಳೇಶ್ವರರೆನಿಸಿದ್ದರು. ಕ್ರಿ.ಶ. ೧೦೭೬ ರಲ್ಲಿ ಚಕ್ರವರ್ತಿ ವಿಕ್ರಮಾದಿತ್ಯನು ನೊಳಂಬವಾಡಿ ನಾಡಿಗೆ ಪಾಂಡ್ಯರನ್ನು ಮಹಾಮಂಡಳೇಶ್ವರರನ್ನಾಗಿ ನೇಮಿಸುತ್ತಾನೆ. ಇದಕ್ಕೆ ಕಾರಣ ನೊಳಂಬ ಪಲ್ಲವರು ಇಮ್ಮಡಿ ಸೋಮೇಶ್ವರನ ಪರ ವಹಿಸಿ ವಿಕ್ರಮಾದಿತ್ಯನ ವಿರುದ್ಧ ಯುದ್ಧ ಮಾಡಿದುದಾಗಿದೆ.

ಕ್ರಿ.ಶ. ೧೦೭೬ ರಲ್ಲಿ ಸಿಂಹಾಸನವನ್ನೇರಿದ ವಿಕ್ರಮಾದಿತ್ಯ ನೊಳಂಬವಾಡಿ ನಾಡಿನ ಒಡೆತನವನ್ನು ಪಾಂಡ್ಯರಿಗೆ ಕೊಡುತ್ತಾನೆ. ಹೀಗೆ ಅಧಿಕಾರ ಕಳೆದುಕೊಂಡ ಪಲ್ಲವರು ಪುನಃ ಮೇಲೇರಲೇ ಇಲ್ಲ.

ನೊಳಂಬಾದಿ ರಾಜ

ಈತನ ಪ್ರಥಮ ಉಲ್ಲೇಖ ಕಂಬದೂರು [೯] ಶಾಸನದಲ್ಲಿ ಬರುತ್ತದೆ. ಇವನು ಚಿದ್ದುಗೊನ್ಡೆಯಲ್ಲಿ ಕೆರೆಯನ್ನು ಕಟ್ಟಿದ ಒಡ್ಡರನ್ನು 'ಸೋಜಮ್ಮದೊಡ್ಡ'ರೆಂದು ಬಿರುದು ಕೊಟ್ಟು, ಕಡಗವಿಟ್ಟು ಸನ್ಮಾನಿಸುತ್ತಾನೆ. ಅಲ್ಲದೆ ಶ್ರೀಮುಖರಾಮ, ಶ್ರೀಮುಖ ದೊಡ್ಡರು ಎಂಬ ಬಿರುದುಗಳನ್ನು ಕೊಟ್ಟು ಕಡಗವಿಟ್ಟು ಸನ್ಮಾನಿಸುತ್ತಾನೆ. ಇದೇ ರೀತಿ ಸಿಂಗಪೋತರಸ, ಪೊನ್ನವರಸ, ಧರ್ಮಮಹಾದೇವಿಯರು ಈ ವಡ್ಡರಿಗೆ ಪೊನ್ನೇರದೊಡ್ಡರೆಂದು ಕರೆದು ಕಡಗವಿಟ್ಟು ಸನ್ಮಾನಿಸುತ್ತಾರೆ. ಯಾವುದೇ ವ್ಯಕ್ತಿ ತನಗೆ ವಹಿಸಿದ ವಿಶಿಷ್ಟ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸದರೆ ಅಂತವರನ್ನು ಬಹುಮಾನವಿತ್ತು ಸನ್ಮಾನಿಸುವುದು ಮೊದಲಿನಿಂದಲೂ ನಡೆದುಬಂದ ಪದ್ಧತಿ. ಈಗಲೂ ಬಳ್ಳಾರಿ ಗ್ರಾಮೀಣ ಪ್ರದೇಶದಲ್ಲಿ ವಿಶಿಷ್ಟವಾದ ಸಾಧನೆಗೈದವನಿಗೆ ಕಡಗವಿಟ್ಟು ಸನ್ಮಾನಿಸುವ ಪದ್ಧತಿ ರೂಢಿಯಲ್ಲಿದೆ. ಈ ನೊಳಂಬಾದಿರಾಜನ ರಾಣಿ ಗಂಗ ವಂಶದ ರಾಚಮಲ್ಲ ಮತ್ತು ಮಂಕಾದೇವಿಯರ ಪುತ್ರಿ ಬಾಯಬ್ಬರಸಿ ಎಂಬುದು ಧರ್ಮಪುರಿ ಶಾಸನದಿಂದ ತಿಳಿದುಬರುತ್ತದೆ.

ಮಹೇಂದ್ರ

ನೊಳಂಬಾದಿರಾಜ ಮತ್ತು ಜಾಯಬ್ಬರಸಿಯರ ಪುತ್ರನೇ ಮಹೇಂದ್ರ ಕಂಬದೂರಿನ್ ಕ್ರಿ.ಶ. ೮೮೩ ಮತ್ತು ೮೮೪ ಶಾಸನದಲ್ಲಿ ಈತನನ್ನು ಪಲ್ಲವ ಕುಲತಿಲಕ ಶ್ರೀಮನೊಳಂಬಾಧಿರಾಜ ಮಹೇನ್ದ್ರಂ

ತ್ರಿಭುವನಧೀರಂ" ಎಂದು ಕರೆದಿದೆ. ಈತನ ಬಗ್ಗೆ ಬರಗೂರು, ಧರ್ಮಪುರಿ ಮೊದಲಾದ ಕಡೆಯ ಶಾಸನಗಳು ಹೆಚ್ಚಿನ ಮಾಹಿತಿ ನೀಡುತ್ತವೆ. ಈತ ತನ್ನ ರಾಜ್ಯವನ್ನು ಚಿತ್ರದುರ್ಗ ತುಮಕೂರು, ಕೋಲಾರ, ಧರ್ಮಪುರಿ ಜಿಲ್ಲೆಗಳನ್ನು ಒಳಗೊಂಡಂತೆ ವಿಸ್ತರಿಸಿದ್ದ. ಗಂಗರ ಮೇಲೆಯೂ ಯುದ್ಧಸಾರಿದ್ದ.

ಅಯ್ಯಪ್ಪ ದೇವ

ಮಹೇಂದ್ರ ಮತ್ತು ಗಂಗವಂಶದ ಗಾಮಬ್ಬೆ ಮಹಾದೇವಿಗೆ ಜನಿಸಿದ ಇವನ ಉಲ್ಲೇಖ ಮನೆಪಲ್ಲಿ[೧೦೦] ಶಾಸನದಲ್ಲಿ ಬಂದಿದ್ದು ಪಲ್ಲವಾನ್ವಯ ಶ್ರೀ ಪೃಥ್ವೀವಲ್ಲಭ ಪಲ್ಲವ ಕುಲತಿಲಕ ನನ್ನಿಗಾಶ್ರಯ ಶ್ರೀಮದಯ್ಯಪದೇವ ರಾಜಜ್ಜೆಯೆ ಎಂದು ಬರುತ್ತದೆ. ಇದನ್ನು ಬಿಟ್ಟರೆ ಬೇರಾವ ಮಾಹಿತಿಯೂ ಸಹ ತಿಳಿದುಬರುವುದಿಲ್ಲ.

ಅಣ್ಣಿಗ

ಅಯ್ಯಪ್ಪದೇವ ಮತ್ತು ಗಂಗವಂಶದ ಪಲ್ಲಬ್ಬರಸಿಗೆ ಜನಿಸಿದ ಅಣ್ಣಿಗನ ಉಲ್ಲೇಖ ಗುನಿಮೊರಬಾಗಿಲ[೧೦೧] ಶಾಸನದಲ್ಲಿ ಪಲ್ಲವಾನ್ವಯ ಶ್ರೀಪೃಥ್ವೀವಲ್ಲಭ ಪಲ್ಲವ ಕುಲತಿಲಕ ಶ್ರೀಮತ್ ದೀರನೊಳಂಬ ಅಂಬಯ್ಯದೇವನು ಎಂದು ಬರುತ್ತದೆ. ಬೇರಾವ ಮಾಹಿತಿಯೂ ಲಭ್ಯವಿಲ್ಲ.

ಪಲ್ಲವ ಕುಲತಿಲಕ ಶ್ರೀಮದಿಱುಳ ಚೋರ

ಅಣ್ಣಿಗ ದೇವ ಮತ್ತು ಚಳುಕಿಯರ (ಚಾಲುಕ್ಯರ) ಮಗಳು ಅತ್ತಿಯಬ್ಬೆ ಅರಸಿಗೆ ಜನಿಸಿದ ಈತನ ಪ್ರಸ್ತಾಪ ಧರ್ಮಪುರಿ [೧೦೨] ಶಾಸನದಲ್ಲಿ ಶ್ರೀ ಪೃಥ್ವೀವಲ್ಲಭ ಪಲ್ಲವ ಕುಲತಿಲಕಂ ಶ್ರೀಮದಿಱುಳಚೋರ ಎಂದು ಬರುತ್ತದೆ. ಈತನು ಶತ್ರುಗಳನ್ನು ನಿರ್ನಾಮ ಮಾಡಿ ರಾಜ್ಯ ಪರಿಪಾಲಿಸುತ್ತಿರುವಾಗ ನವಮಿ ವಡ್ಡವಾರದ ದಿವಸ ಮೂಲ ನಕ್ಷತ್ರದಲ್ಲಿ ದಾನ ಮಾಡಿದುದು ತಿಳಿದುಬರುತ್ತದೆ.

ನೊಳಂಬಾದಿ ರಾಜ II

ಈತನು ಕ್ರಿ.ಶ. ೯೫೫–೬೦ ರಲ್ಲಿ ಆಳುತ್ತಿದ್ದುದನ್ನು ಮಧುಡಿ[೧೦೩] ಶಾಸನ ನಿರೂಪಿಸುತ್ತದೆ. ಪಲ್ಲವಾನ್ವಯ ಶ್ರೀ ಪೃಥ್ವೀವಲ್ಲಭ ಪಲ್ಲವ ಕುಲತಿಲಕ ಏಕವಾಕ್ಯ ಶ್ರೀಮತ್ನೋಳಮ್ಬಾಧಿರಾಜ ಎಂದು ಈತನನ್ನು ಕರೆದಿದೆ. ಬೇರಾವ ಮಾಹಿತಿ ಇಲ್ಲ.

ದಿಲೀಪ ಪಲ್ಲವರಾಯ ಶ್ರೀಮದಿಱಿವ ನೊಳಂಬ

ಈತನು ಇಮ್ಮಡಿ ನೊಳಂಬಾದಿರಾಜನ ಪುತ್ರನಾಗಿರಬೇಕು. ಇವನ ಪ್ರಥಮ ಉಲ್ಲೇಖ ಕ್ರಿ.ಶ. ೯೬೩ ಜೂನ್ ೨೮ ರ ಹೊನ್ನೇರಲಹಳ್ಳಿ[೧೦೪] ಶಾಸನದಲ್ಲಿ ಬರುತ್ತದೆ. ಈ ಸುಮಾರಿಗಾಗಲೇ ಇಮ್ಮಡಿ

ನೊಳಂಬಾದಿ ರಾಜನು ಮರಣಿಸಿರಬೇಕು. ಹೀಗಾಗಿ ದಿಲೀಪರಸನು ಪಟ್ಟಕ್ಕೆ ಬಂದಿರಬೇಕು. ಮಡಕಶಿರ[೧೦೫] ಶಾಸನದಲ್ಲಿ "ಪಲ್ಲವಾನ್ವಯ ಶ್ರೀ ಪೃಥ್ವೀವಲ್ಲಭ ಪಲ್ಲವ ಕುಲತಿಲಕ ಪಲ್ಲವರಾಯ ಪಲ್ಲವರೊಡೆಗಣ್ಣ ಇಜಿ‍ವ ನೊಳಂಬನೇಕ ವಾಕ್ಯ ಶ್ರೀಮತ್ ದಿಲೀಪರಸ" ಎಂದು ಈತನನ್ನು ಕರೆಯಲಾಗಿದ್ದು ಈತನು ಆಳುತ್ತಿದ್ದನೆಂದು ತಿಳಿಸುತ್ತಗೆ. ಈತನು ಆಳುತ್ತಿರುವಾಗ ಚಿಕ್ಕಯ್ಯನಿಗೆ ಮತ್ತು ಆಚಬ್ಬೆಗೆ ಹುಟ್ಟಿದ ಬಿರೆಯಣ್ಣ ಮತ್ತು ಅವನ ತಮ್ಮ ಪುನ್ನಾಯನು ದಿಲೀಪರಸನ ದಂಡಿನಲ್ಲಿ ಕೂಡಿಕೊಂಡು ಗಜಾಂಕುಸ ಚೋಳನ ಮೇಲೆ ಯುದ್ಧಕ್ಕೆ ಹೋಗುತ್ತಾರೆ. ಇದು 'ಇಬೀಜಿ‍ದ' ಎಂಬಲ್ಲಿ ಕಾಳಗವಾಗುತ್ತದೆ. ಈ ಯುದ್ಧದಲ್ಲಿ ಪೊನ್ನರು ಹೋರಾಡಿ ಸಾಯುತ್ತಾರೆ. ಕಂಬದೂರಿನ[೧೦೬] ಶಾಸನದಲ್ಲಿ ಈ ದಿಲೀಪನ ಉಲ್ಲೇಖವಿದೆ.

ಮೈದಮ್ಮರಸ

ದಿಲೀಪನ ಹಿರಿಯ ಪುತ್ರ ಇವನಾಗಿರಬೇಕು. ಏಕೆಂದರೆ ದಿಲೀಪರಸನ ನಂತರ ಮೈದಮ್ಮರಸ ಆಳುತ್ತಿದ್ದುದನ್ನು ಶಾಸನಗಳು ತಿಳಿಸುತ್ತವೆ. ಈತನು ಆಳುತ್ತಿರುವಾಗ ಅಯ್ಯಪ್ಪದೇವ ದಾನಬಿಟ್ಟಿರುದನ್ನು ಕಲುಗೋಡು[೧೦೭] ಶಾಸನ ತಿಳಿಸುತ್ತದೆ.

ಇದೇ ಶಾಸನದಲ್ಲಿ ಪಲ್ಲವಾನ್ವಯ ಶ್ರೀಮತ್ ಪೃಥ್ವೀವಲ್ಲಭ ಪಲ್ಲವ ಕುಲತಿಲಕ ಶ್ರೀಮನ್ಮಯ್ದಮ್ಮರಸ ಎಂದು ಈತನನ್ನು ಕರೆಯಲಾಗಿದೆ. ಈತನು ಬರಗೂರಿನ ನೆಲೆವೀಡಿನಿಂದ ಆಳುತ್ತಿರುವಾಗ ಎರೆಗಂಗಯ್ಯನು ಹೋರಾಡಿ ಸ್ವರ್ಗವೇರಿದ್ದಕ್ಕೆ ಹಾಗೂ ಕಳುನೇನರಸರ ಮಗ ಮೈದಮ್ಮನು 'ಕೀಜಿಸ್ಗೊಣ್ಡೆಯಾಗಿ' ಸತ್ತುದಕ್ಕೆ ನನ್ನಿಗಾತ್ರಯ ಅಯ್ಯಪ್ಪದೇವನು ಕಲ್ನಾಡು ಕೊಡುತ್ತಾನೆ.

ಮಂಗಪ್ಪರಸ

ಈತನ ಉಲ್ಲೇಖ ಕೋಳೂರು[೧೦೮] ಶಾಸನದಲ್ಲಿ 'ಪಞ್ಚಮಹಾಶಬ್ದ ಪಲ್ಲವಾನ್ವಯ ಪರಮೇಶ್ವರ ಶ್ರೀ ಮಙ್ಗಪರಸರ ಎಂದು ಬರುತ್ತಿದ್ದು ಈತನು ಬಳ್ಳಾರಿ ೩೦ ರ ಪೊಲೆಯರಿಗೆ ತೆರಿಗೆಗಳನ್ನು ತೆಗೆದುಹಾಕುತ್ತಾನೆ.

ವೀರನೊಳಂಬ ಪಲ್ಲವಪೆರ್ಮಾನಡಿ

ಕ್ರಿ.ಶ. ೯೮೧ ಏಪ್ರಿಲ್ ೨೨ ರ ಕಂಚಗಾರ ಬೆಳಗಲ್ಲು[೧೦೯] ಶಾಸನದಲ್ಲಿ ಈತನ ಉಲ್ಲೇಖವಿದೆ. ಶಾಸನದಲ್ಲಿ ಶ್ರೀ ಪೃಥ್ವಿವಲ್ಲಭ ಪಲ್ಲವ ಕುಲತಿಲಕನೇಕವಾಕ್ಯಂ ಕಾಂಚಿಪುರವರೇಶ್ವರಂ ಶ್ರೀಮನ್ವೀರನೊಳಂಬ ಪಲ್ಲವ ಪೆರ್ಮಾನಡಿ ದೇವರ ಎಂದು ಈತನನ್ನು ಕರೆಯಲಾಗಿದೆ. ಈತನ ರಾಣಿ ದೆವಲಾದೇವಿ ಕಾಳಪ್ಪಯ್ಯ ದೇವರಿಗೆ ಹಾಗೂ ವಿಷ್ಣುದೇವರಿಗೆ ಭೂದಾನ ಮಾಡುತ್ತಾಳೆ.

ವೀರಮಹೇಂದ್ರ

ಪೊಳಲ್ಚೋರ ದೇವನ ಪುತ್ರ ಶ್ರೀಮತ್ ವೀರಮಹೇಂದ್ರ ನೊಳಂಬಾದಿರಾಜನ ಉಲ್ಲೇಖಕರ್ಶನಪಲ್ಲಿ[೧೧೦] ಶಾಸನದಲ್ಲಿದೆ. ಈ ವೀರಮಹೇಂದ್ರನು ಚೋಳನಾಡಿನಿಂದ ನೊಳಂಬವಾಡಿಗೆ ಬಂದು ಅಲ್ಲಿಂದ (ಕೋಲಾರ) ಕೋಳಾಲದಲ್ಲಿದ್ದು ಕೀರ್ತಿಗಾವುಂಡನ ಮಗನಿಗೆ ಪಟ್ಟಗಟ್ಟಿ ಪುಲಿನಾಟ್ಟ ಕೆರೆಯ ಬೆಳಗದೂರನ್ನು ಕೊಡುಗೆಯಾಗಿ ಕೊಡುತ್ತಾನೆ. ಈತನಿಗೆ ಈರ್ವರು ಪುತ್ರರು ವಾಕ್ಯದೇವ ಮತ್ತು ಇರಿವನೊಳಂಬ ಘಟಯಂಕಕಾರ ಪಲ್ಲವಾದಿತ್ಯ. ಹಿರೇಹಡಗಲಿಯ[೧೧೧] ಕ್ರಿ.ಶ. ೧೦ ನೇ ಶತಮಾನದ ಶಾಸನದಲ್ಲಿ ಬರುವ ಮಹೇಂದ್ರ ಈತನೇ ಆಗಿದ್ದಾನೆ. ಈ ಶಾಸನದಲ್ಲಿ 'ಕಾಂಚಿಪುರವರಾಧೀಶ್ವರಂ' ಯದುವಂಶಾಂಬರದ್ಯುಮಣಿ ಸುಭಟ ಚೂಡಾಮಣಿ ನಿಜವಿಜೆಯ ಕುಳಕಮಳ ಮಾರ್ತಾಂಡಂ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನು ಮಹಾಮಂಡಳೇಶ್ವರಂ ಮಹೇಂದ್ರಂ ಸುಖ ಸಂಕಥಾ ವಿನೋದದಿಂ ರಾಜ್ಯಂಗೇಯುತ್ತಂ ಕೋಗಳಿಯಲ್ಲಿರ್ದು ಮರಂದೆಲೆ ಮರ್ಯಾದೆಯಾಗಿ ನಾಡನ್ನು ಆಳುತ್ತಿದ್ದರೆಂದು ಹೇಳಲಾಗಿದೆ. ಈತನು ಪೊಸವಡಂಗಿಲೆಯ ಮಹೇಶ್ವರ ವಿಷ್ಣುದೇವಾಲಯಗಳಿಗೆ ಭೂಮಿ ದಾನ ನೀಡುತ್ತಾನೆ.

ಇರಿವ ನೊಳಂಬ ಘಟಯಂಕಕಾರ ಪಲ್ಲವಾದಿತ್ಯ (ಕ್ರಿ.ಶ. ೧೦೦೦-೧೦೨೦)

ಇವನ ಕಾಲಕ್ಕೆ ಚೋಳರು ಗಂಗವಾಡಿಯ ಮೇಲೆ ಧಾಳಿಮಾಡಿ ಗಂಗವಾಡಿಯನ್ನು ತಮ್ಮ ವಶಪಡಿಸಿಕೊಂಡಿದ್ದಲ್ಲದೆ, ಇವರ ಮಾಂಡಳೀಕರನ್ನೆಲ್ಲಾ ತಮ್ಮ ವಶಪಡಿಸಿಕೊಳ್ಳುತ್ತಾರೆ. ರಾಷ್ಟ್ರಕೂಟರ ಜೊತೆಗೂಡಿ ಚೋಳರ ಮೇಲೆ ಯುದ್ಧಕ್ಕೆ ಹೋದವರಲ್ಲಿ ನೊಳಂಬರೂ ಸೇರಿದ್ದರು. ಹೀಗಾಗಿ ರಾಷ್ಟ್ರಕೂಟರು ರಾಜ್ಯ ಕಳೆದುಕೊಂಡಮೇಲೆ ನೊಳಂಬರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಚಾಳುಕ್ಯರ ಗೆಳೆತನ ಸಂಪಾದಿಸಿದರು. ಅಲ್ಲಿಂದಾಚೆಗೆ ನೊಳಂಬರು ಉತ್ತರದ ಕಡೆಗೆ ತಮ್ಮ ರಾಜಧಾನಿಯನ್ನು ಬದಲಾಯಿಸಿದರು. ಹೀಗಾಗಿ ಹೆಂಜೇರಿನ ಜೊತೆಗೆ ಕಂಪಿಲಿಯೂ ಇವರ ರಾಜಧಾನಿಯಾಯಿತು.

ವೀರಮಹೇಂದ್ರನ ದ್ವಿತೀಯ ಪುತ್ರನಾದ ಈತನ ಉಲ್ಲೇಖ ನೆಲಪಲ್ಲಿ[೧೧೨] ಶಾಸನದಲ್ಲಿ ಬರುತ್ತದೆ. ಇವನು ಪಱುವಿನಾಡಿನ ವೆಂದೂರು ಪೊನ್ನೆಯಲ್ಲಿರುವ ಕೊಯತೂರು, ಬಳಿಗಾರ, ಗವರೇಶೆಟ್ಟಿಯ ಮಗ ಕರವಯ್ಯನಿಗೆ ಮುಮ್ಮಡಿ ಗವರೆ ಪಲ್ಲವಾದಿತ್ಯ ನೋಟಿಮ್ಪುಸೆಟ್ಟಿಯೆಂದು ಬಿರುದು ಕೊಟ್ಟು ಪಟ್ಟಗಟ್ಟಿ ಕುದುರೆ ಕೊಡೆ ಅಳಪಣ್ಣುವಕೆಕುಂಚಿನ್ತಳಿಗೆ, ರೇಜ್ಜಿಟ್ಟ(?) ಅಡ್ಡಣಿಗೆ, ಗದಿಗೆ, ಚಿನ್ನ ಇವುಗಳನ್ನು ಕೊಡುತ್ತಾನೆ. ಅಲ್ಲದೆ ಪುಲಿನಾಡ ಕೊಳೆತೂರನ್ನು "ಪಲ್ಲವಾದಿತ್ಯ ಪುರವಾಗಿ ನಕರಂ ಮಾಡಿ ವೈಶ್ಯದತ್ತಿಯಾಗಿ ಮಾಡಿ ನೊಳಂಬಸೆಟ್ಟಿಗೆ ಕೊಡುಗೆಯಾಗಿ ಕೊಡುತ್ತಾನೆ. ಗೋನಹಾಳು[೧೧೩] ಶಾಸನದಲ್ಲಿ ಈತನು ಚಾಲುಕ್ಯ ಚಕ್ರವರ್ತಿ ಐದನೇ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾಗಿ

ಆಳುತ್ತಿದ್ದನೆಂದು ಹೇಳಲಾಗಿದೆ. ಬಲ್ಲಕುಂದೆ[೧೧೪] ಶಾಸನದಲ್ಲಿ ಈತನನ್ನು ಸ್ವಸ್ತಿ ಘಟಯಂಕಕಾರ ಚಿತ್ರವೆಡಂಗ ನೊಳಂಬಾದಿರಾಜ ಎಂದು ಕರೆಯಲಾಗಿದೆ. ಈತನ ನಿಯೋಗಿ ಕೌಶಿಕ ಗೋತ್ರದ ಮಾಚಿಗರೇನ ಪುತ್ರ ಶ್ರೀಮತ್ ಶ್ರೀಧರಾರ್ಯನ ಬಲ್ಲಕುಂದೆಯಲ್ಲಿ ಶಿಲಾಮಯ ದೇವರನ್ನು ಪ್ರತಿಷ್ಠಾಪಿಸುತ್ತಾನೆ. ನಂತರ ದೇವಾಲಯಕ್ಕೂ ಮತ್ತು ಜಿನಾಲಯಕ್ಕೂ ದಾನಬಿಟ್ಟಿದುದು ತಿಳಿದುಬರುತ್ತದೆ. ಈತನಲ್ಲಿ ಮಹಾಸೇನಾಧಿಪತಿಯಾಗಿದ್ದ ಬ್ರಹ್ಮಾದಿರಾಜನು[೧೧೫], ಪಾಪೆಕಲ್ಲ ಊರೊಡೆಯರಿಗೆ ದಾನಬಿಡುತ್ತಾರೆ.

ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ಉದಯಾದಿತ್ಯ ದೇವ

ಇವನು ಇರಿವನೊಳಂಬ ಘಟಯಂಕಕಾರ ಪಲ್ಲವಾದಿತ್ಯನ ಪುತ್ರನಾಗಿದ್ದಾನೆ. ಕ್ರಿ.ಶ. ೧೦೧೮ ರಲ್ಲಿ ಈತನು ಆಳುತ್ತಿದ್ದುದು ತಿಳಿದುಬರುತ್ತದೆ. ಕಲ್ಕಂಭದ[೧೧೬] ಶಾಸನ ಶ್ರೀ ಪೃಥ್ವೀವಲ್ಲಭ ಪಲ್ಲವ ಕುಲತಿಲಕ ಅಮೋಘವ್ಯಾಖ್ಯ ಕಾಂಚೀ ಪುರವೇಶ್ವರಂ ಶ್ರೀಮದ್ ಜಗದೇಕ ಮಲ್ಲ ನೊಳಂಬಪಲ್ಲವ ಪೆರ್ಮಾನಡಿ ದೇವ ಎಂದು ಕರೆದು ಪಿಪ್ರ ನಾರಾಯಣದ ನೆಲೆವೀಡಿನಿಂದ ಆಳುತ್ತಿದ್ದನೆಂದು ತಿಳಿಸುತ್ತದೆ.

ಚಾಲುಕ್ಯ ಚಕ್ರವರ್ತಿ ಜಯಸಿಂಹನ ಪಾದ ಪದ್ಮೋಪಜೀವಿಯಾಗಿದ್ದ ಈ ಉದಯಾದಿತ್ಯನು ಕದಂಬಳಿಕೆ ೧೦೦೦, ಕೋಗಳಿ ೫೦೦, ಮಾಸಿಯವಾಡಿ ೧೪೦ ರಲ್ಲಿ ಪಂಚಗ್ರಾಮಗಳನ್ನು, ಬಲ್ಲಕುಂದೆ ೩೦೦, ಕರವಿಡಿ ೩೦, ಬಿಕ್ಕಿಗ ೭೦, ಎಡೆದೊರೆ

ಇರ್ಚ್ಛಾಸಿರದಲ್ಲಿಯಲ್ಲಿಯ ಪಕುಡಿಪಾರ ೭೦ ವಿಭಾಗಗಳನ್ನು ಕಂಪಿಲಿಯ ಬೀಡಿನಿಂದ ಆಳುತ್ತಿದ್ದನೆಂದು ಬಾಗಳಿಯ[೧೧೭] ಶಾಸನ ನಿರೂಪಿಸುತ್ತದೆ. ಇದರಿಂದ ಇವನ ಕಾಲಕ್ಕೆ ನೊಳಂಬ ಪಲ್ಲವರ ರಾಜಧಾನಿ 'ಪೆಂಜೆರು'ವಿನಿಂದ 'ಕಂಪಿಲಿ' (ಕಂಪ್ಲಿ)ಗೆ ಸ್ಥಳಾಂತರವಾದುದು ಗೊತ್ತಾಗುತ್ತದೆ.

ಮಲ್ಲಯ್ಯನ ಗುಡ್ಡದ ೪ ಶಾಸನದಲ್ಲಿ ಈತನು ಆಳುತ್ತಿದ್ದುದನ್ನು ಮತ್ತು ಮೈಲಾರದ ದೇವನಿಗೆ ಬಲ್ಲಕುಂದೆ ೩೦೦ ರಲ್ಲಿ ಪಗರೆ ತಡಿಯ ಸಿರಿಯನೂರನ್ನು ಬಿಟ್ಟಿದುದನ್ನು ಹೇಳಲಾಗಿದೆ. ತೆಲಗಿ[೧೧೮] ಶಾಸನವು ಈತನು ನೊಳಂಬವಾಡಿ ೩೨೦೦೦, ಕದಂಬಳಿಕೆ ೧೦೦೦, ಕೋಗಳಿ ೫೦೦, ಬಲ್ಲಕುಂದೆ ೩೦೦, ಕುದಿಪರವಿ ೭೦, ಕರಿವಿಡಿ ೩೦, ಪಂಚಗ್ರಾಮಗಳನ್ನು ಆಳುತ್ತಿರುವಾಗ ಬಿಕ್ಕಿಗ ೭೦ ರಲ್ಲಿಯ ಅಗ್ರಹಾರ ತೆಲಗಿಯ ಊರೊಡೆಯ ಕೆಣ್ಣಿಮಯ್ಯ ಮತ್ತು ಬಿಕ್ಕಿಗನ ಕೆರೆಯ ಕರಿಗೋಡಂಗೆವೊಂದು ಮತ್ತರ್ಗಟ್ಟಿಯ ಶ್ರೀ ನೊಳಂಬಾದಿರಾಜ ಕಾಲಕರ್ಚಿಧಾರಪೂರ್ವಕವಾಗಿ ಕೊಡುತ್ತಾನೆ.

ಉದಯಾದಿತ್ಯನ ಪತ್ನಿ ನೊಳಂಬಮಹಾದೇವಿ ದೇವಳಾದೇವಿಯ ತಾಯಿ ಕ್ರಿ.ಶ. ೧೦೩೬ ಡಿಸೆಂಬರ್ ೨೪ ಕ್ಕೆ ಪೂರ್ವದಲ್ಲಿ ಮರಣಹೊಂದಿದ್ದು, ಈಕೆಯರಂಗವಂ 'ಚಿತಾಭಸ್ಮ' ಗಂಗೆಯಲ್ಲಿಟ್ಟು ಬಂದ ಮಾದವಪಡಂಗಿ, ಕೃಷ್ಣಯ್ಯ ದೇವರುಗಳಿಗೆ ಉದಯಾದಿತ್ಯ ಮತ್ತು ಚಕ್ರವರ್ತಿ ಜಯಸಿಂಹನ ರಾಣಿ ದೇವಳದೇವಿಯು ದಾನ ಕೊಡುತ್ತಾಳೆ[೧೧೯].

ಒರುವಾಯಿಯ[೧೨೦] ಇನ್ನೊಂದು ಶಾಸನದಲ್ಲಿ ಈ ಪಿಷಯವಿದ್ದು ಅದರಲ್ಲಿ ನಲ್ವಡಿ ೧೨ ಕಂಪಣ ಓರ್ವಾಯನ್ನು ದಾನವಾಗಿ ಕೊಟ್ಟುದು ತಿಳಿದುಬರುತ್ತದೆ. ಈತನಿಗೆ ಜಗದೇಕ ಮಲ್ಲನಿರ್ಮಡಿ ನೊಳಂಬ ಮತ್ತು ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿಗಳ್ ಎಂಬ ಈರ್ವರು ಪುತ್ರರು ಇದ್ದರು[೧೨೧]. ಕ್ರಿ.ಶ. ೧೦೩೯ ಎಪ್ರಿಲ್ ೨೩ ರ ಕಂಚಿಕೆರೆ[೧೨೨] ಶಾಸನ ಈತನು ಆಳುತ್ತಿದ್ದುದನ್ನು ತಿಳಿಸುತ್ತದೆ. ಕ್ರಿ.ಶ. ೧೦೩೮-೩೯ ರ ಸುಮಾರಿಗೆ ಉದಯಾದಿತ್ಯದೇವ ಶಿವಧೀನನಾಗಿದ್ದುದು ಗೊತ್ತಾಗುತ್ತದೆ.

ನೊಳಂಬರ ಕನಕರಸ

ಉದಯಾದಿತ್ಯ ದೇವನು ಆಳುತ್ತಿರುವಾಗ ಪಲ್ಲವವಂಶದ ಕನಕರಸನ ಉಲ್ಲೇಖ ಸೋಮಲಾಪುರಂ[೧೨೩] ಶಾಸನದಲ್ಲಿ ಬರುತ್ತದೆ. 'ಶ್ರೀಕಾಂಚೀಪುರವರೇಶ್ವರ ಶ್ರೀಮತು ನೊಳಂಬರ ಕನಕರಸನು' ಎಂದು ಶಾಸನದಲ್ಲಿ ಕರೆಯಲಾಗಿದೆ. ಈತನು ಅರಕೆಱೆಯ ಮಹಾದೇವರಿಗೆ ಆರುಮತ್ತರು ಭೂಮಿ, ಗದ್ದೆ ಕಮ್ಮ ೧೦೦ನ್ನು ಬಿಡುತ್ತಾನೆ. ಇವನು ಉದಯಾದಿತ್ಯನ ಅಧೀನನಾಗಿ ಚಿಕ್ಕ ವಿಭಾಗವೊಂದರ ಆಳ್ವಿಕೆ ಮಾಡುತ್ತಿರಬೇಕು. ಇವನ ಮೂಲವಂಶಾವಳಿಗೆ ಸೇರಿದವನಲ್ಲ.

ಜಗದೇಕಮಲ್ಲ ನಿರ್ಮಡಿ ನೊಳಂಬ ಪಲ್ಲವ ಪೆರ್ಮಾನಡಿದೇವ:

ಮಹಾಮಂಡಳೇಶ್ವರ ಉದಯಾದಿತ್ಯದೇವನ ಪುತ್ರನಾದ ಈತನು ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಯಸಿಂಹನ ಪಾದಪದ್ಮೋಪಜೀವಿಯಾಗಿ ಆಳುತ್ತಿದ್ದುದು. ಸೋಗಿಯ[೧೨೪] ತ್ರುಟಿತ ಶಾಸನದಿಂದ ತಿಳಿದುಬರುತ್ತದೆ. ಹಡಗಲಿ ತಾಲೂಕಿನ ತುಂಬಿಗೆರೆ[೧೨೫] ಶಾಸನದಲ್ಲಿ ಚಕ್ರವರ್ತಿ ಜಯಸಿಂಹನ ಪಾದಪದ್ಮೋಪಜೀವಿಯಾಗಿ ಕದಂಬಳಿಗೆ ೧೦೦೦, ಕೋಗಳಿ ೫೦೦, ಕರಿವಿಡಿ ೩೦ ಇವುಗಳನ್ನು 'ಗಂಗತಿಯ (ಗಂಗಾವತಿ) ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಲಾಗಿದೆ.

ಕ್ರಿ.ಶ. ೧೦೪೪ ರ ಏಪ್ರಿಲ್ ೫ ರ ಸಿರಿವಾರಂ[೧೨೬] ಶಾಸನದಲ್ಲಿ ಈತನ ಸಹೋದರ ಪಟ್ಟಾಭಿಷಕ್ತನಾಗಿ ಅಧಿಕಾರ ವಹಿಸಿಕೊಂಡಿದುದು ತಿಳಿದುಬರುತ್ತದೆ. ಇದರಿಂದ ಈ ಕಾಲಕ್ಕೆ ಇರ್ಮಡಿ ನೊಳಂಬ ಪಲ್ಲವ ಪೆರ್ಮಾನಡಿದೇವ ವಿಧಿವಶವಾಗಿರಬೇಕು.

ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿಗಳ್

ಇವನು ಜಗದೇಕ ಮಲ್ಲ ನೊಳಂಬಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನ ಕಿರಿಯ ಪುತ್ರನಾಗಿದ್ದಾನೆ. ಈತನಿಗೆ ಪಟ್ಟಾಭಿಷೇಕವಾದುದನ್ನು ಸಿರಿವಾರಂ[೧೨೭] ಶಾಸನ ತಿಳಿಸುತ್ತದೆ. ಚಿಯನಪಟ್ಟಿಯ ವಿಷ್ಣುದೇವರಿಗೆ ಈತನು ದಾನಬಿಟ್ಟುದುದನ್ನು ಕಲ್ಕಂಬ ಶಾಸನ[೧೨೮] ಹೇಳುತ್ತದೆ. ಈತನು ಕೋಗಳಿ ೫೦೦, ಕದಂಬಳಿಕೆ ೧೦೦೦, ಬಲ್ಲಕುಂದೆ ೩೦೦, ಕುಟಿಯಕಲ್ಲು ೩೦೦ ವಿಭಾಗಗಳ ನಾಡನ್ನು ಸುಖದಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಹಾವಿನಾಳು, ವೀರಾಪುರ[೧೨೯], ಶಾಶನದಲ್ಲಿ

ಇವನು ನಾಡನ್ನು ಸುಖದಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಅನಂತರ ಈತನು ನೊಳಂಬವಾಡಿ ೩೨೦೦೦ ಆಳುತ್ತಿದ್ದನೆಂದು ಹೇಳಿದೆ. ಇವನು ಅಗ್ರಹಾರ ಮೋರಿಗೆರೆಯಲ್ಲಿ ಉದಯಾದಿತ್ಯದೇವನಿಗೆ ಪರೋಕ್ಷವಿನಯವಾಗಿ ೨೪ ಜನರಿಗೆ ಸತ್ರ, ನೊಳಂಬೇಶ್ವರ ದೇವಾಲಯ, ತಮ್ಮ ಹೆಸರಲ್ಲಿ ಲೆಂಕೇಶ್ವರ ದೇವಾಲಯ ಮಾಡಿಸಿ ವಿದ್ಯಾದಾನಕ್ಕೆ, ಮಠಕ್ಕೆ ದೇವಾಲಯಗಳಿಗೆಂದು ಇವರು ನನ್ನಿನೊಳಂಬ, ಪಲ್ಲವ, ಪೆರ್ಮಾನಡಿಗಳಿಗೆ ಭಿನ್ನವಿಸಿ ಸವಂಟೆಯಪಾಳ ಪಡೆದು ಅದಕ್ಕೆ ಶಿವಪುರವೆಂದು ಹೆಸರಿಟ್ಟು ದಾನಬಿಡುತ್ತಾರೆ. ಕೋಗಳಿಯ ತೃಟಿತ ಶಾಸನ[೧೩೦], ತಳಕಲ್ಲು[೧೩೧] ಶಾಸನ ಇವನು ಆಳುತ್ತಿದ್ದುದನ್ನು ನಿರೂಪಿಸುತ್ತದೆ.

ತ್ರೈಲೋಕ್ಯಮಲ್ಲನಿಜಿವನೊಳಂಬ ಪಲ್ಲವಪೆರ್ಮಾನಡಿ ನಾರಸಿಂಹದೇವ

ಇವನು ತ್ರೈಲೋಕ್ಯಮಲ್ಲ ನನ್ನಿನೊಳಂಬನ ಪುತ್ರನಾಗಿರಬೇಕು ಕ್ರಿ.ಶ. ೧೦೫೨ ಡಿಸೆಂಬರ್ ೨೪ ರ ಪುಣಭಗಟ್ಟ[೧೩೨] ಶಾಸನದಲ್ಲಿ ಈತನು ಆಳುತ್ತಿರುವ ಪ್ರಸ್ತಾಪ ಬರುವುದರಿಂದ ಈ ಸುಮಾರಿಗಾಗಲೇ ತ್ರೈಲೋಕ್ಯಮಲ್ಲ ನನ್ನಿನೊಳಂಬ ಶಿವಾಧೀನನಾಗಿರಬೇಕು. ಈತನ ರಾಣಿ ನೊಳಂಬಮಹಾದೇವಿ ಈಕೆಯು ಉತ್ತರಾಯಣ ಸಂಕ್ರಾಂತಿ ನಿಮಿತ್ತ ಹೊಸಗೆರೆ ಯಮಹಾದೇವರ ನೇವೈದ್ಯಕ್ಕಾಗಿ ಪೂಜಿಸುವ ಪೂಜಾರಿಗಳಿಗೆ ಆಹಾರಕ್ಕೆ ಗದ್ದೆ, ಹೂವಿನ ತೋಟ ಒಂದು ಗಾಣ ಇವುಗಳನ್ನು ದಾನಬಿಡುತ್ತಾಳೆ.

ಸಿಂದಿಗೆರೆ ಶಾಸನದಲ್ಲಿ[೧೩೩] 'ಶ್ರೀಮತ್ರೈಲೋಕ್ಯಮಲ್ಲ ಇಜಿವನೊಳಂಬ ನಾರಸಿಂಘ ದೇವರ ದತ್ತಿ' ಎಂದು ಬರುತ್ತಿದ್ದು ಇದರಿಂದ ಇವನು ಸಿಂದಿಗೆರೆಯ ದೇವಾಲಯಕ್ಕೆ ದತ್ತಿ ಬಿಟ್ಟಿದ್ದು ಗೊತ್ತಾಗುತ್ತದೆ. ಈ ಶಾಸನದಲ್ಲಿ ಈತನ ಅಧೀನನಾಗಿ ಮಹಾಮಂಡಲೇಶ್ವರ ಶ್ರೀಮಣಿಬೆತ ಮಹಾರಾಜ ಆಳುತ್ತಿದ್ದು ಇವನು ಬಲ್ಲಕುಂದೆ ೩೦೦ ಬಲ್ಲಕುಂದೆ ಪಟ್ಟಣದ ಧರ್ಮೇತಕ್ಕೆ ೧೨ ಮತ್ತರು ಭೂಮಿಯನ್ನು ಬಿಡುತ್ತಾನೆ.

ಪಲ್ಲವ ಪೆರ್ಮಾಡಿಗಳಪ್ಪ ಶ್ರೀಮದ್ವೀರನೊಳಂಬ ಘಟ್ಟಿದೇವ

ಇರಿವ ನೊಳಂಬ ಪಲ್ಲವ ಪೆರ್ಮಾನಡಿ ನಾರಸಿಂಹದೇವ ಆಳುತ್ತಿರುವಾಗ ಆತನ ಅದೀನನಾಗಿ ಈ ವೀರನೊಳಂಬ ಘಟ್ಟಿದೇವನು ಸಿಂಧವಾಡಿ ೧೦೦೦ ವಿಭಾಗವನ್ನು ಆಳುತ್ತಿದ್ದನು. ಹೀಗಾಗಿ ಇವನು ನಾರಸಿಂಘದೇವನ ಕಿರಿಯ ಸಹೋದರ ಇಲ್ಲವೆ ಪುತ್ರನಾಗಿರಭೇಕು. ಚಿನ್ನ ತುಂಬಳಂ[೧೩೪] ಶಾಸನದಲ್ಲಿ ಒಂದನೆಯ ಸೋಮೇಶ್ವರನ ಪಾದಪದ್ಮೋಪಜೀವಿಯೆಂದು 'ಶ್ರೀಮದ್ವೀರನೊಳಂಬ ಪಲ್ಲವ ಪೆರ್ಮಾನಡಿಗಳಪ್ಪ ಶ್ರೀಮದ್ವೀರನೊಳಂಬ ಘಟದೇವರ್" ಎಂದು ಕರೆಯಲಾಗಿದೆ. ಇವನು ಉತ್ತರಾಯಣ ಸಂಕ್ರಾಂತಿಯಂದು 'ಶ್ರೀಮನ್ಮಹಾ ವಾದೀಭಕ್ತಿಪಂಡಿತರಿಗೆ ಧಾರಾಪೂರ್ವಕವಾಗಿ ತುಂಬಳಸ್ಥಾನ ಕೊಟ್ಟು ಭೋಗೇಶ್ವರದೇವರಂ ಭೋಗಕ್ಕೆ ದಾನ ಬಿಡುತ್ತಾನೆ. ಕಮ್ಮರ ಚೇಡು

ಶಾಸನದಲ್ಲಿ[೧೩೫] ವೀರನೊಳಂಬ ಘಟ್ಟದೇವನು ಸಿಂಧವಾಡಿ ಸಾಸಿರ ಆಳುತ್ತಿದ್ದುದು ತಿಳಿದು ಬರುತ್ತದೆ. ಬದನೆಹಾಳು[೧೩೬] ಶಾಸನದಲ್ಲಿ ಈತನು ಸಿಂಧವಾಡಿ ೧೦೦೦ ಆಳುತ್ತಿರುವಾಗ ಇವನ ಪೆರ್ಗಡೆ ವೀರರಾಕ್ಷಸ ಓರಾಯನ ಬಿನ್ನಪದ ಮೇರೆಗೆ ಕವಲಾಳು ೧೨ ರಲ್ಲಿಯ ಸೀರಿಲ ಬದಲಪಾಳದಲ್ಲಿ ಧರ್ಮ್ಮೋತದ ಬಾವಿಗಾಗಿ ಕರಿಯನೆಲೆ ಮತ್ತರು ೧೩ನ್ನು ಬಿಡುತ್ತಾನೆ.

ಭುವನೈಕಮಲ್ಲ ವೀರನೊಳಂಬ ಉದಯಾದಿತ್ಯ

ಈತನ ಪ್ರಥಮ ಉಲ್ಲೇಖ ಕ್ರಿ.ಶ. ೧೦೭೫-೭೬ ರ ಕಲಕೇರಿ ಶಾಸನದಲ್ಲಿ ಬರುತ್ತದೆ[೧೩೭]. ನೊಳಂಬವಾಡಿ ೩೨೦೦೦ ವಿಭಾಗವನ್ನಾಳಿದ ಪಲ್ಲವ ವಂಶದ ಕೊನೆಯ ಅರಸ ಇವನು. ಚಕ್ರವರ್ತಿ ಇಮ್ಮಡಿ ಸೋಮೇಶ್ವರನ ಪರವಹಿಸಿದ ಸಮರ್ಥ ಮಹಾಮಂಡಳೇಶ್ವರನೀತ. ಹೀಗಾಗಿ ಆರನೆಯ ವಿಕ್ರಮಾದಿತ್ಯನ ವಿರೋಧ ಕಟ್ಟಿಕೊಳ್ಳುತ್ತಾನೆ. ಕಲಕೋರಿ ಶಾಸನದಲ್ಲಿ ಭವನೈಕಮಲ್ಲ ವೀರನೊಳಂಬ ಉದಯಾದಿತ್ಯನ ದೀರ್ಘ ವಿವರಣೆ ಬರುತ್ತೆ. ಕಲಕೇರಿಯ ಶಾಸನವೇ ಭುವನೈಕಮಲ್ಲ ವೀರನೊಳಂಬ ಉದಯಾದಿತ್ಯನ ಕೊನೆಯ ಶಾಸನ.

ಈ ಉದಯಾದಿತ್ಯನ ರಾಣಿ ಮಾಳಲದೇವಿ ಈಕೆಯನ್ನು ದಾನಪ್ರಿಯೆ ಶ್ರೀ ರೂಪಾವಿದ್ಯಾಧರಿಯೆಂದು ಶಾಸನ ಬಣ್ಣಿಸಿದೆ. ಈಕೆಯು ಕಲಕೇರಿಯಲ್ಲಿ ವಿವಿಧ ಧರ್ಮಕಾರ್ಯಗಳನ್ನು ಮಾಡಿಸುತ್ತಾಳೆ. ಶ್ರೇಷ್ಠ ಶಿವಾಲಯ, ಆದಿತ್ಯಾಲಯ, ಶಾಲೆ, ವಿಷ್ಣುಗೃಹ, ಬುದ್ಧವಿಹಾರ, ಮಹಾಭವನ, ನಾಗಾಲಯ, ಭಾವಿ, ದಿಗ್ಗಿಗೆ ಛತ್ರ, ಕೆರೆ, ದೀಪಮಾಲೆ ಮೊದಲಾದ ಧರ್ಮಕಾರ್ಯಗಳನ್ನು ಮಾಡಿ ಮಹಾದಾನಿಯೆನಿಸಿದಳು.

ಈ ನೊಳಂಬ ಪಲ್ಲವರು ಆರಂಭದಿಂದಲೂ ಕಟ್ಟಾ ಶೈವರಾಗಿದ್ದು ಶಿವಲಿಂಗ ಪ್ರತಿಷ್ಠಾಪನೆ ಶಿವಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ. ಶಿವಾಲಯ ನಿರ್ಮಿಸಿದವನನ್ನು 'ನೊಳಂಬಶೆಟ್ಟಿ' ಎಂದು ಬಿರುದು ಕೊಟ್ಟು ಸನ್ಮಾನಿಸುತ್ತಿದ್ದು ಈ ವಿಷಯ ಕಲಕೇರಿ ಶಾಸನದಲ್ಲಿದೆ.

ಒಟ್ಟಾರೆ ಸುಮಾರು ಕ್ರಿ.ಶ. ೮೦೦ ಕ್ಕೂ ಪೂರ್ವದಿಂದ ಕ್ರಿ.ಶ. ೧೦೭೬ ರ ವರೆಗೆ ನೊಳಂಬವಾಡಿನ ಒಡೆತನ ಅನುಭವಿಸಿದ ನೊಳಂಬ ಪಲ್ಲವರು ಶೈವರಾಗಿದ್ದರೂ ಸಕಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡಿದ್ದಾರೆ. ಶಿವಾಲಯಗಳಿಗೆ ದತ್ತಿ ಕೊಟ್ಟಂತೆ ವಿಷ್ಣುದೇವಾಲಯಗಳಿಗೆ, ಬಸದಿಗಳಿಗೆ ದತ್ತಿ ದಾನ ಕೊಟ್ಟಿದ್ದಾರೆ. ವಿಶಾಲ ಮನೋಭಾವನೆ ಮೆರೆದಿದ್ದಾರೆ. ಬಲ್ಲಕುಂದೆ ನಾಡು ಕ್ರಿ.ಶ. ಸುಮಾರು ೧೦೦೦ ದಿಂದ ಕ್ರಿ.ಶ. ೧೦೭೬ ರ ವರೆಗೆ ಅಂದರೆ ಆರನೆಯ ವಿಕ್ರಮಾದಿತ್ಯನು ಕಲ್ಯಾಣಕ್ಕೆ ಬರುವವರೆಗೆ ನೊಳಂಬರ ವಶದಲ್ಲಿತ್ತು. ಈ ಅವಧಿಯಲ್ಲಿ ಈ ಪ್ರದೇಶದಲ್ಲಿ ದೇವಾಲಯ ರಚನೆ, ಅಗ್ರಹಾರಗಳ ಸ್ಥಾಪನೆ ಮುಂತಾದ ಕಾರ್ಯಗಳಲ್ಲಿ ನೊಳಂಬರು ಬಲ್ಲಕುಂದೆ ನಾಡಿನಲ್ಲಿ ತೊಡಗಿದ್ದುದು ಅವರ ಶಾಸನಗಳಿಂದ ತಿಳಿದುಬರುತ್ತದೆ.

ಉಚ್ಚಂಗಿ ಪಾಂಡ್ಯರು

ಕರ್ನಾಟಕದಲ್ಲಿ ಪಾಂಡ್ಯ ಮನೆತನದ ಎರಡು ಶಾಖೆಗಳ ಇತಿಹಾಸ ಲಭ್ಯವಿದೆ. ಸಿಸುಗಲಿಯಿಂದ ಆಳುತ್ತಿದ್ದ 'ಸಿಸುಗಲಿ ಪಾಂಡ್ಯ'ರು ಹಾಗೂ ಉಚ್ಚಂಗಿದುರ್ಗದಿಂದ ಆಳುತ್ತಿದ್ದ 'ಉಚ್ಚಂಗಿ ಪಾಂಡ್ಯ'ರು ನೊಳಂಬವಾಡಿ ೩೨೦೦೦ ವನ್ನು ಕ್ರಿ.ಶ. ೧೦೭೬ ರಿಂದ ೧೨ ನೇ ಶತಮಾನದ ಅಂತ್ಯದ ವರೆಗೂ ಆಳಿದ್ದಾರೆ.

ಉಚ್ಚಂಗಿ ಪಾಂಡ್ಯರು ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳಿಗೆ ನಿಷ್ಠೆಯಿಂದ ಇದ್ದ ಮಹಾಮಂಡಳೇಶ್ವರರು. ಅನೇಕ ಯುದ್ಧಗಳಲ್ಲಿ ಭಾಗವಹಿಸಿ ತಮ್ಮ ಚಕ್ರವರ್ತಿಗೆ ಜಯ ತಂದಿದ್ದಾರೆ. ಈ ವಂಶದ ತ್ರಿಭುವನಮಲ್ಲ ರಾಯಪಾಂಡ್ಯ ಮತ್ತು ತ್ರಿಭುವನಮಲ್ಲ ಪಾಂಡ್ಯದೇವರು 'ರಾಜಿಗಚೋಳ ಮನೋಭಂಗ'ವೆಂಬ ಬಿರುದನ್ನು ಧರಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಶಾಸನಗಳ ಆಧಾರದಿಂದ ಕ್ರಮವಾಗಿ ಆಳಿದ ಪಾಂಡ್ಯ ಅರಸರೆಂದರೆ ತ್ರಿಭುವನಮಲ್ಲರಾಯಪಾಂಡ್ಯ> ತ್ರಿಭುವನಮಲ್ಲಪಾಂಡ್ಯದೇವ> ವೀರಪಾಂಡ್ಯ> ವಿಜಯಪಾಂಡ್ಯ> ಜಗದೇಕಮಲ್ಲ ವೀರಪಾಂಡ್ಯ> ವಿಜಯ ಪಾಂಡ್ಯII.

ತ್ರಿಭುವನಮಲ್ಲ ರಾಯಪಾಂಡ್ಯ

ತ್ರಿಭುವನಮಲ್ಲ ರಾಯಪಾಂಡ್ಯನ ಉಲ್ಲೇಖ ನೀಲಗುಂದದ[೧೩೮] ಕ್ರಿ.ಶ. ೧೦೭೯ ಜನವರಿ ೩೦ ರ ಶಾಸನದಲ್ಲಿದೆ. ಇವನು ಆರನೆಯ ವಿಕ್ರಮಾದಿತ್ಯನ ನಿಷ್ಠಾವಂತ ಮಹಾಮಂಡಳೇಶ್ವರನಾಗಿ ನೊಳಂಬವಾಡಿ ೩೨೦೦೦ ಕುಣೆಯಕಲ್ಲು ೩೦೦ ವಿಭಾಗಗಳನ್ನು ಆಳುತ್ತಿದ್ದನೆಂದು ಶಾಸನದಲ್ಲಿ ಹೇಳಲಾಗಿದೆ. ಬಾಗಳಿಯ[೧೩೯] ಶಾಸನದಲ್ಲೂ ಈತನ ಪ್ರಸ್ತಾಪವಿದೆ. ಆರನೆಯ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾದ ಈತನು ಕಾಂಚಿಪುರ ವರಾಧೀಶ್ವರ, ಯದುವಂಶಾಂಬರದ್ಯುಮಣಿ ಮೊದಲಾದ ಪ್ರಶಸ್ತಿಗಳನ್ನು ಧರಿಸಿದ್ದನು. ಇವನು ವಿಕ್ರಮಾದಿತ್ಯನೊಂದಿಗೆ ಯುದ್ಧದಲ್ಲಿ ಭಾಗವಹಿಸಿ ಚೋಳ ಅರಸ ರಾಜಿಗಚೋಳನನ್ನು ಸೋಲಿಸಿದ ಕಾರಣ ಇವನಿಗೆ 'ರಾಜಿಗಚೋಳ ಮನೋಭಂಗ'ನೆಂಬ ಬಿರುದು ಪ್ರಾಪ್ತವಾಗಿದೆ.

ತ್ರಿಭುವನಮಲ್ಲ ಪಾಂಡ್ಯದೇವ

ಈತನು ತ್ರಿಭುವನಮಲ್ಲ ರಾಯಪಾಂಡ್ಯನ ಪುತ್ರ. ಅಂಬಳಿ[೧೪೦] ಶಾಸನದಲ್ಲಿ ಈತನನ್ನು 'ತ್ರಿಭುವನಮಲ್ಲ ದೇವಪಾದಾಬ್ಜಭೃಂಗಂ' ಎಂದು ಕರೆಯಲಾಗಿದೆ. ರಾಗಿಮಸಲವಾಡ ಶಾಸನವು[೧೪೧] ಈತನು ನೊಳಂಬವಾಡಿ ೩೨೦೦೦ ಮಾತ್ರವಲ್ಲದೆ ಗಂಗವಾಡಿ ೯೬೦೦೦ವನ್ನು ಆಳುತ್ತಿದ್ದನೆಂದು ಹೇಳಿದರೆ. ಹೂವಿನ ಹಡಗಲಿ[೧೪೨] ಶಾಸನವು ನೊಳಂಬ ವಾಡಿಯ ಜೊತೆಗೆ ಮಾಸವಾಡಿ ೧೪೦ ನ್ನು ಆಳುತ್ತಿದ್ದನೆಂದು ಹೇಳುತ್ತದೆ. ಸಿರುಗುಪ್ಪ[೧೪೩], ಅಂಬಳಿ[೧೪೪], ಬಾಗಳಿ[೧೪೫], ದಾವಣಗೆರೆ[೧೪೬] ಶಾಸನಗಳಲ್ಲಿ

ಈತನು ಆಳುತ್ತಿದ್ದುದನ್ನು ನಿರೂಪಿಸುತ್ತವೆ. ದಾವಣಗೆರೆ ಶಾಸನದ ಕಾಲ ಕ್ರಿ.ಶ. ೧೧೨೩ ಹೀಗಾಗಿ ಇವನು ಕ್ರಿ.ಶ. ೧೦೮೩ ರಿಂದ ಕ್ರಿ.ಶ. ೧೧೨೩ ರ ವರೆಗೆ ಮಹಾಮಂಡಳೇಶ್ವರನಾಗಿ ಆಳಿದನೆಂದು ಹೇಳಬಹುದು. ಕ್ರಿ.ಶ. ೧೧೨೪ ರ ಸುಮಾರಿಗಾಗಲೇ ಈತನ ಪುತ್ರ ತ್ರಿಭುವನಮಲ್ಲ ರಾಯಪಾಂಡ್ಯ II. ಆಳುತ್ತಿದ್ದುದು ತಿಳಿದು ಬರುತ್ತದೆ.

ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯದೇವನು ಇಲ್ಲಿಯ ಕೆಲವು ದೇವಾಲಯಗಳಿಗೆ ದತ್ತಿದಾನ ಬಿಟ್ಟಿದ್ದಾನೆ. ಈತನು ತನ್ನದೇ ಆದ ಸೈನ್ಯ, ಮಂತ್ರಿಮಂಡಲ ಮತ್ತು ಅಧಿಕಾರಿಗಳನ್ನು ಹೊಂದಿದ್ದನು. ಈತನ ಅಧೀನನಾಗಿ ಮಹಾಮಂಡಳೇಶ್ವರ ಘಟಿದೇವರಸ ಕೋಗಳಿ ೫೦೦ ಆಳುತ್ತಿದ್ದನು[೧೪೭]. ಮಹಾಸಾಮಂತ ಹೊಳೆಯನು ತ್ರಿಭುವನಮಲ್ಲ ಪಾಂಡ್ಯನಿಗೆ ಅಧೀನನಾಗಿ ಆಳುತ್ತಿದ್ದ ವಿಷಯ ಗುಡಿಹಳ್ಳಿ[೧೪೮] ಶಾಸನದಲ್ಲಿ ಬರುತ್ತದೆ. ಈತನಲ್ಲಿ ಕುಂಚಾಪುರದ ಯರುಂಗರಸನ ನಾಳ್ಪ್ರಭುವಾಗಿ ಆಳುತ್ತಿದ್ದನು[೧೪೯]. ಚಿತ್ರದುರ್ಗ ಜಿಲ್ಲೆಯ ಶಾಸನಗಳಿಂದ ಈತನಲ್ಲಿದ್ದ ಅಧಿಕಾರಿಗಳ ವಿವರಗಳು ತಿಳಿದುಬರುತ್ತವೆ.

ಮಹಾಮಂಡಳೇಶ್ವರ ವೀರಪಾಂಡ್ಯI

ತ್ರಿಭುವನಮಲ್ಲ ಪಾಂಡ್ಯನ ಪುತ್ರನೋ ಸಹೋದರನೋ ಆಗಿರಬಹುದಾದ ಇವನ ಉಲ್ಲೇಖ ಹಿರೇಹಡಗಲಿ[೧೫೦] ಶಾಸನದಲ್ಲಿದೆ. ದೇಮರಸ ಕಟ್ಟಿಸಿದ ದೇಮೇಶ್ವರ ದೇವಾಲಯಕ್ಕೆ ಕ್ರಿ.ಶ. ೧೧೦೭ ಮಾರ್ಚ್ ೨೫ ರಂದು ಇವನು ದಾನ ಬಿಡುತ್ತಾನೆ. ಚಕ್ರವರ್ತಿ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾಗಿ ಇವನು ಕೋಗಳಿನಾಡು, ಕದಂಬಳಿಗೆ ನಾಡು; ಬಲ್ಲಕುಂದೆ ನಾಡುಗಳನ್ನು ತ್ರಿಭುವನಮಲ್ಲ ಪಾಂಡ್ಯನಿಗೆ ಅಧೀನನಾಗಿ ಆಳುತ್ತಿದ್ದನು.

ಮಹಾಮಂಡಳೇಶ್ವರ ವಿಜಯಪಾಂಡ್ಯ

ಬಾಗಳಿಯ[೧೫೧] ಕ್ರಿ.ಶ. ೧೧೦೮ ಡಿಸೆಂಬರ್ ೨೮ ರ ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ತಿಳಿದು ಬರುವುದಿಲ್ಲ. ಬಾಗಳಿಯ[೧೫೨] ಇನ್ನೊಂದು ಶಾಸನದಲ್ಲಿ 'ಮಹಾಮಂಡಳೇಶ್ವರ ವಿಜಯಪಾಂಡ್ಯದೇವರ" ಎಂದು ಬರುತ್ತದೆ. ಈ ಶಾಸನವೂ ತ್ರುಟಿತವಾಗಿರುವುದರಿಂದ ಬೇರಾವ ಮಾಹಿತಿ ತಿಳಿದು ಬರುವುದಿಲ್ಲ.

ತ್ರಿಭುವನಮಲ್ಲ ರಾಯಪಾಂಡ್ಯ

ಇವನು ತ್ರಿಭುವನಮಲ್ಲ ಪಾಂಡ್ಯದೇವನ ಪುತ್ರನಾಗಿರಬೇಕು. ಇವನ ಉಲ್ಲೇಖ ರಾಮಘಟ್ಟದ[೧೫೩] ಕ್ರಿ.ಶ. ೧೧೨೨ ಡಿಸೆಂಬರ್ ೨೫ ರ ಶಾಸನದಲ್ಲಿ ಬರುತ್ತಿದ್ದು ಇವನು ನೊಳಂಬವಾಡಿಯನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ದಾವಣಗೆರೆಯ[೧೫೪] ಶಾಸನ ಈತನ

ಪರಾಕ್ರಮವನ್ನು ರಂಜನೀಯವಾಗಿ ಬಣ್ಣಿಸಿದೆ. ಅಲ್ಲದೆ ಇವನು ನೊಳಂಬವಾಡಿ ಹಾಗೂ ಸಾಂತಳಿಗೆ ೧೦೦೦ ಆಳುತ್ತಿದ್ದನೆಂದು ಹೇಳಲಾಗಿದೆ. ಆನೆಯ ಸಾಹಣಿ ಪಸಾಯ್ತ ಕೆಂಗಣನು[೧೫೫] ಈತನಿಗೆ ಬಿನ್ನಪಗೆಯ್ದು ರಾಮೇಶ್ವರ ದೇವರಿಗೆ ಗದ್ದೆದಾನ ಬಿಡಿಸುತ್ತಾನೆ.

ಜಗದೇಕಮಲ್ಲ ವೀರಪಾಂಡ್ಯದೇವ

ತ್ರಿಭುವನ ಮಲ್ಲ ರಾಯಪಾಂಡ್ಯನ ಪುತ್ರನಾಗಿರುವ ಈತನ ಪ್ರಥಮ ಉಲ್ಲೇಖ ಕ್ರಿ.ಶ. ೧೧೪೨ ಮೇ ೨೭ ರ ಹೊಳಲ[೧೫೬] ಶಾಸನದಲ್ಲಿ ಬರುತ್ತದೆ. ಈ ಜಗದೇಕಮಲ್ಲ ವೀರಪಾಂಡ್ಯದೇವನು ಆರಂಭಕ್ಕೆ ನೊಳಂಬವಾಡಿ ೩೨೦೦೦ ವಿಭಾಗದ ಒಡೆಯನಾಗಿದ್ದು[೧೫೭] ಕ್ರಿ.ಶ. ೧೧೬೦ ರ ಸುಮಾರಿಗೆ ಕೇವಲ ಕದಂಬಗಳಿಗೆ ಸಾಸಿರ, ಬಲ್ಲಕುಂದೆ ೩೦೦, ಕೋಗಳಿ ೫೦೦ ಇವುಗಳನ್ನು ಮಾತ್ರ ಆಳುತ್ತಿದ್ದನು[೧೫೮]. ಹೊಯ್ಸಳರ ಪ್ರಾಬಲ್ಯದಿಂದಾಗಿ ಇವನು ತನ್ನ ಮಂಡಲದ ಕೆಲವು ಭಾಗಗಳನ್ನು ಕಳೆದುಕೊಂಡಿರಬೇಕು. ಚಾಲುಕ್ಯ ಚಕ್ರವರ್ತಿ ಧರಿಸುತ್ತಿದ್ದ ಖಡ್ಗದೋಪಾಯದಲ್ಲಿ ಜಗದೇಕಮಲ್ಲ ವೀರಪಾಂಡ್ಯ ಇದ್ದನು. ಜಗದೇಕಮಲ್ಲ ವೀರಪಾಂಡ್ಯನ ಪ್ರಶಸ್ತಿಯನ್ನು ಹಲವು ಶಾಸನಗಳು ನಿರೂಪಿಸುತ್ತವೆ. ಕ್ರಿ.ಶ. ೧೧೬೨ ರ ನಿಲಗುಂದ ಶಾಸನದಲ್ಲಿ ವೀರಪಾಂಡ್ಯ ದೇವರು 'ಶ್ರೀಮತ್ರಿಭುವನಮಲ್ಲದೇವ ಪದಾಬ್ಜಭೃಂಗಿ ಶ್ರೀಮತ್ರಿಭುವನಮಲ್ಲ ವೀರಪಾಂಡ್ಯದೇವರು' ಎಂದು ಕರೆದಿದೆ. 'ಜಗದೇಕಮಲ್ಲ' ವೆಂಬ ಮೊದಲನೆಯ ಬಿರುದು ತನ್ನ ಮೊದಲ ಒಡೆಯನಾದ ಚಾಲುಕ್ಯ ಚಕ್ರವರ್ತಿಯದು. ದಾನಗುಣಕ್ಕೂ ಈತನು ಖ್ಯಾತನಾಗಿದ್ದಾನೆ[೧೬೦]. ಹಿರೇಹಡಗಲಿ[೧೬೧] ಶಾಸನದಲ್ಲಿ ಈತನ ಪ್ರಸ್ತಾಪ ಬರುತ್ತಿದ್ದು ಆ ಶಾಸನದ ಸಾರಾಂಶವನ್ನು 'ವೀರಪಾಂಡ್ಯ ದೇವನು ಕದಂಬಳಿಗೆ ೧೦೦೦, ಬಲ್ಲಕುಂದೆ ೩೦೦, ಕೋಗಳಿಯನ್ನು ಆಳುತ್ತಿರುವಾಗ ಆತನ ಚಿಕ್ಕಪ್ಪ ವಿಕ್ರಮಪಾಂಡ್ಯನು, ಪತ್ನಿ ಚಾಚಲದೇವಿ ಮತ್ತು ಮಗಳು ಮಹಾದೇವಿಯ ಶ್ರೇಯೋಭಿವೃದ್ಧಿಗಾಗಿ ಭೂದಾನ ಮಾಡಿದನು' ಎಂದು ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೧ರಲ್ಲಿ ಕೊಡಲಾಗಿದೆ. ಈ ವೀರಪಾಂಡ್ಯನ ಉಪಲಬ್ಧ ಕೊನೆಯ ಶಾಸನ ಮಳೆಮಲ್ಲಪ್ಪನಗುಡಿಯ ಶಾಸನವಾಗಿದೆ[೧೬೨]. ಇದರ ಕಾಲ ಕ್ರಿ.ಶ. ೧೧೬೮ ಡಿಸೆಂಬರ್ ಕೊನೆಯ ಭಾಗ ಅಥವಾ ೧೧೬೯ ಜನವರಿ ಆದಿಭಾಗ.

ವಿಜಯಪಾಂಡ್ಯ

ಸುಮಾರು ಕ್ರಿ.ಶ. ೧೧೬೮ ರಿಂದ ೧೨೦೮ ರ ವರೆಗೆ ಮಹಾಮಂಡಳೇಶ್ವರನಾಗಿ ಆಳಿದ ವಿಜಯಪಾಂಡ್ಯನು ರಾಯಪಾಂಡ್ಯನ ಕಿರಿಯ ಪುತ್ರನೋ ಇಲ್ಲವೇ ಕಿರಿಯ ಸಹೋದರನೇ ಆಗಿರಬೇಕು. ಮನ್ನೇರ ಮಸಲವಾಡದ[೧೬೩] ಕ್ರಿ.ಶ. ೧೧೮೩ ಜೂನ್ ೭ ರ ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ಬಾಗಳಿಯ[೧೬೪] ಶಾಸನದಲ್ಲಿ ಈತನು ಉಚ್ಚಂಗಿ ರಾಜಧಾನಿಯಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಹೊಳಲು[೧೬೫] ಶಾಸನದಲ್ಲಿ ವಿಜಯಪಾಂಡ್ಯನ ವರ್ಣನೆ ಸಾಕಷ್ಟಿದೆ. ಈತನು ಅಗ್ರಹಾರ ಗಂಡರಾದಿತ್ಯನ

ಹೊಳಲ ಶ್ರೀ ಗವರೇಶ್ವರ ದೇವರ ಅಂಗಭೋಗಕ್ಕೆ ರಂಗಭೋಗಕ್ಕೆ ಅಡಕೆಯ ಹೆಜ್ಜುಂಕದಲ್ಲಿ ಲಕ್ಷಕ್ಕೆ ಹಾಗವೊಂದು ದಾನ ಬಿಡುತ್ತಾನೆ.

ಜಗದಳ ಪಾಂಡ್ಯ

ಉಜ್ಜನಿ[೧೬೬] ಶಾಸನದಲ್ಲಿ ಈತನ ಉಲ್ಲೇಖವಿದೆ. ಈತನು ಕೋಗಳಿಯಲ್ಲಿ ೪೦೦ ಕಂಬ ಭೂಮಿಯನ್ನು ಕಲಿದೇವರಿಗೆ ದಾನ ಬಿಡುತ್ತಾನೆ. ಈತನನ್ನು ನಳ, ನಹುಷ, ಸಗರ ಮೊದಲಾದವರಿಗೆ ಹೋಲಿಸಿ ವರ್ಣಿಸಲಾಗಿದೆ. ಇಷ್ಟು ವಿವರಗಳು ಮಾತ್ರ ಈತನ ಬಗ್ಗೆ ತಿಳಿದು ಬರುತ್ತದೆ.

ಹೀಗೆ ಪಾಂಡ್ಯರು ಕ್ರಿ.ಶ. ೧೦೭೬ ರಿಂದ ೧೨ ನೆಯ ಶತಮಾನದವರೆಗೆ ನೊಳಂಬವಾಡಿ ೩೨೦೦೦ ವನ್ನು ಆಳಿದ್ದಾರೆ. ಇವರು ಕಟ್ಟಿಸಿದ ದೇವಾಲಯಗಳು ಬಿಟ್ಟ ದತ್ತಿಗಳನ್ನು ಹೇಳುವ ಶಾಸನಗಳು ಇಂದಿಗೂ ಇವರ ವೈಭವವನ್ನು ಸಾರುವ ಮೂಕಸಾಕ್ಷಿಗಳಾಗಿ ನಿಂತಿವೆ.

ಸಿಂಧರು

ಆಂಧ್ರಪ್ರದೇಶದ ಅನಂತಪುರ ಮತ್ತು ಕರ್ನೂಲು, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಹೊಸಪೇಟೆ, ಬಳ್ಳಾರಿ, ಸಂಡೂರು ತಾಲೂಕುಗಳ ಕೆಲವು ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಸಿಂಧರನಾಡು ಎಂದು ಕೆಲವು ಶಾಸನಗಳಲ್ಲಿ ಕರೆಯಲಾಗಿದೆ. ಈ ಪ್ರದೇಶಗಳನ್ನು ಬಹು ಹಿಂದಿನಿಂದ ಆಳುತ್ತಿರುವುದರಿಂದ ಇದಕ್ಕೆ ಈ ಹೆಸರು ಪ್ರಾಪ್ತವಾಗಿರಬಹುದು. ಕರ್ನಾಟಕ ಮತ್ತು ಆಂಧ್ರ ಎರಡೂ ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡು ಮೆರೆದ ಹೆಮ್ಮೆ ಈ ಅರಸರಿಗಿದೆ.

'ನಾಗಕುಲ' ದವರೆಂದೂ ಭೋಗಾವತಿ 'ಪುರವರೇಶ್ವರ' ರೆಂದೂ 'ಫಣಿವಂಶೋದ್ಭವ' ರೆಂದೂ ಇವರು ತಮ್ಮನ್ನು ಕರೆದುಕೊಂಡಿದ್ದಾರೆ. ತಮ್ಮ ಮೂಲ ಪುರುಷನೆಂದು ನಿಡುದೋಳನನ್ನು ಹೇಳಿಕೊಂಡಿದ್ದಾರೆ. ಕುರುಗೋಡು ಸಿಂಧರು ೧೧ ನೆಯ ಶತಮಾನದಿಂದ ೧೨ ನೆಯ ಶತಮಾನದ ವರೆಗೆ ಆಳಿದ ಸಿಂಧರಲ್ಲಿ ಪ್ರಮುಖರಾಗಿದ್ದರು. ಇವರು ಬಲ್ಲಕುಂದೆ ೩೦೦ ವಿಭಾಗವನ್ನು ಕುರುಗೋಡಿನಿಂದ ಆಳುತ್ತಿದ್ದರು. ಒಂದನೆಯ ರಾಚಮಲ್ಲ ಮತ್ತು ಇಮ್ಮಡಿ ರಾಚಮಲ್ಲ ಪ್ರಮುಖ ಅರಸರಾಗಿದ್ದು ವೀರಶೈವರಾಗಿದ್ದುದನ್ನು ಶಾಸನಗಳಲ್ಲಿ ನಿರೂಪಿತವಾಗಿವೆ. ರಾಜಧಾನಿ ಕುರುಗೋಡಿನಲ್ಲಿ ನಿರ್ಮಿಸಿದ ದೇವಾಲಯಗಳು ಇವರು ವಾಸ್ತುಶಿಲ್ಪ ಕಲೆಗೆ ಇತ್ತ ಪ್ರೋತ್ಸಾಹವನ್ನು ಸೂಚಿಸುತ್ತದೆ. ಕುರುಗೋಡು ಸಿಂಧರು ಬಳ್ಳಾರಿ ಸಾಂಸ್ಕೃತಿಕ ಇತಿಹಾಸಕ್ಕೆ ತಮ್ಮದೆ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಸಿಂಧರ ಕಾಲದಲ್ಲಿ ಬಲ್ಲಕುಂದೆ ಗ್ರಾಮವು ಬಲ್ಲಕುಂದೆ ೩೦೦ ರ ಕೇಂದ್ರ ಸ್ಥಾನವನ್ನು ಕಳೆದುಕೊಂಡಿತು. ಅದರ ಸ್ಥಾನದಲ್ಲಿ ಕುರುಗೋಡನ್ನು ಬಲ್ಲಕುಂದೆ ನಾಡಿನ ರಾಜಧಾನಿಯನ್ನಾಗಿ ಸ್ವೀಕರಿಸಿದರು.

ಮೂಲತಃ ದ್ರಾವಿಡ ಜನಾಂಗದ ನಾಗಕುಲಕ್ಕೆ ಸೇರಿರಬಹುದಾದ ಸಿಂಧರ ವಂಶಾವಳಿ ಇಂತಿದೆ[೧೬೭].

ಸಿಂಧರ ವಂಶಾವಳಿ

ನಿಡುದೋಳ ಸಿಂಧ
↓
ಆರಿಬಲ್ಲದಾಗ್ರ (ಕ್ರಿ.ಶ.೯೪೭)
↓
ಉದಯಾದಿತ್ಯ (ಕ್ರಿ.ಶ.೧೦೪೫)
↓
ಚೂಕರಸ (ಕ್ರಿ.ಶ.೧೦೯೨)
↓
ಒಂದನೆಯ ಭೀಮ (ಬೀವರಸ)
↓
ಮಾಕಣಾಂಬಿಕೆ (ಕ್ರಿ.ಶ.೧೧೦೨)
↓
ಸೋವಿದೇವ (ಕ್ರಿ.ಶ. ೧೧೨೨)
↓

- ಇಮ್ಮಡಿಭೀಮ ಫಣಿರಾಜ (ಕ್ರಿ.ಶ.೧೧೩೧–೧೧೪೭)
- ಒಂದನೆಯ ರಾಚಮಲ್ಲ (ಕ್ರಿ.ಶ.೧೧೪೧–೧೧೭೭)
  - ಪಿರಿಯರಸಿ ಮಾಕಲದೇವಿ(ಪತ್ನಿ)
  - ಸೋಮಲದೇವಿ(ಪತ್ನಿ)
    ↓
    ಇರುಂಗೋಳ
    ↓
    ಏಚಲದೇವಿ(ಪತ್ನಿ)
    ↓
    - ಇಮ್ಮಡಿರಾಚಮಲ್ಲ (ಕ್ರಿ.ಶ.೧೧೭೭–೧೧೯೫)
    - ಏಚಲದೇವಿ(ಪತ್ನಿ)
      ↓
      ವೀರಕಲಿದೇವ (ಕ್ರಿ.ಶ.೧೧೯೫–೧೨೦೬)
- ದೇವರXX
- XXದೇವ
-

ಇವನ ನಂತರ ಉಳಿದ ಅರಸರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಮಹಾಸಾಮಂತ ಅರಿಬಲ್ಲದಾಗ್ರ

ಕ್ರಿ.ಶ. ೯೪೭ರ ಕುಡುತಿನಿ[೧೬೮] ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ಶ್ರೀಮತು ರಣ ಸಿಂಧವಾಡಿ ಸಾಸಿರ ಆಳುತ್ತಿದ್ದನೆಂದು ಕ್ರಿ.ಶ. ೮೯೩-೯೪ ಮಂಚಾಳ[೧೬೯] ಶಾಸನದಲ್ಲಿ ಹೇಳಲಾಗಿದೆ. ಆದರೆ ಇವನು ಸಿಂಧವಾಡಿಯವನಲ್ಲ. ಕ್ರಿ.ಶ. ೯೩೧[೧೭೦] ರ ಶಾಸನದಲ್ಲಿ ಮಹಾಸಾಮಂತ ಕನ್ನರ ಸಿಂಧವಾಡಿ ಆಳುತ್ತಿದ್ದನೆಂದು ಹೇಳಲಾಗಿದೆ. ಇವನದು ಯಾವ ವಂಶವೆಂದು ತಿಳಿದುಬಂದಿಲ್ಲ. ಮಹಾಸಾಮಂತ ಅರಿಬಲ್ಲಿದಾಗ್ರ ಸಿಂಧವಂಶದ ಪ್ರಥಮ ಮಹಾಸಾಮಂತ ಅರಿಬಲ್ಲದಾಗ್ರ ೬೭ ಮತ್ತರು ಭೂಮಿಯನ್ನು ಮೂರುನೂರು ಜನರ ಸಮ್ಮುಖದಲ್ಲಿ ದೇಕಮ್ಮನ ದೇಗುಲಕ್ಕೆ ದಾನಕೊಡುತ್ತಾನೆ. ಶಾಸನಗಳಲ್ಲಿ ಇಲ್ಲಿ ಹೇಳಲಾಗಿರುವ 'ಬೋಗಾವತಿ ಪುರವರೇಶ್ವರ 'ಫಣೀಂದ್ರ ಕುಲಸಂಭವ' ಎಂಬ ಪ್ರಶಸ್ತಿಗಳು ಸಿಂಧರು ಪರಂಪರಾಗತವಾಗಿ ಧರಿಸುತ್ತಾಬಂದ ಪ್ರಶಸ್ತಿಗಳಾಗಿವೆ.

ಬಲ್ಲಕುಂದೆ[೧೭೧] ಶಾಸನದಲ್ಲಿ ದೇಮಪಯ್ಯನೆಂಬುವನು ನನ್ನಿನೊಳಂಬನ ಮಾತನ್ನು ಕೇಳಿ ಪೆರ್ಗಡೆ ಬೆನಮಯ್ಯ ಮತ್ತು ಸಿಂಧರನ X X X X ಆಗಿ ಸ್ವರ್ಗಸ್ಥನಾಗುತ್ತಾನೆ. ದೇಮಪಯ್ಯ ಯುದ್ಧದಲ್ಲಿ ಕೊಂದಿರುವ ಸಿಂಧವಂಶದ ವ್ಯಕ್ತಿ ಅರಿಬಲ್ಲದಾಗ್ರನಾಗಿರಬೇಕೆಂದೆನಿಸುತ್ತದೆ. ಒಂದು ವೇಳೆ ಅರಿಬಲ್ಲದಾಗ್ರನೇ ಆಗಿದ್ದರೆ ಅವನು ಕ್ರಿ.ಶ. ೯೬೭ ರ ಸುಮಾರಿಗೆ ಮರಣಿಸಿದಂತಾಗುತ್ತದೆ.

ಉದಯಾದಿತ್ಯ ಸಿಂಧರಸ

ಕ್ರಿ.ಶ. ೧೦೪೫ ರ ಹಾಪಿನಾಳ ಪೀರಾಪುರ[೧೭೨] ಶಾಸನದಲ್ಲಿ ಈತನ ಉಲ್ಲೇಖವಿದೆ. ಈ ಶಾಸನದಲ್ಲಿ ಸಿಂಧರ ದತ್ತಿ ಎಂಬ ಉಲ್ಲೇಖವಿದ್ದು, ಇದು ಇವರ ದತ್ತಿ ದಾನಗುಣಗಳನ್ನು ಎತ್ತಿ ತೋರಿಸುತ್ತದೆ. ಈ ಉದಯಾದಿತ್ಯ ದೊಂಡವಟ್ಟಿಯಲ್ಲಿ ತನ್ನ ಮನ್ನೆಯದ ತೆರಿಗೆಯೆಲ್ಲವನ್ನು ಧಾರಾಪೂರ್ವಕವಾಗಿ 'ಸಿನ್ನರ ಹೊಲೆಗೆಟ್'ಗೆ ಎಂದು ಬಿಟ್ಟುಕೊಡುತ್ತಾನೆ. ಕ್ರಿ.ಶ. ೧೮೯೧-೯೨ರ ಸುಮಾರಿಗೆ ಮಹಾಸಾಮಂತ ಚೋಕರಸನು ಆಳುತ್ತಿರುವುದು ತಿಳಿದುಬರುತ್ತದೆ. ಈ ಸುಮಾರಿಗಾಗಲೇ ಉದಯಾದಿತ್ಯ ಸಿಂಧರಸನು ಮರಣಿಸಿದುದು ಸ್ಪಷ್ಟವಾಗುತ್ತದೆ. **ಮಹಾಸಾಮಂತ ಚೋಕರಸ** ಕ್ರಿ.ಶ. ೧೮೯೧-೯೨ರ ಸಿರುಗುಪ್ಪ ಶಾಸನದಲ್ಲಿ[೧೭೩] ಈತನ ಉಲ್ಲೇಖವಿದೆ. ಇವನು ಉದಯಾದಿತ್ಯನ ಪುತ್ರನೋ, ಪೌತ್ರನೋ ಆಗಿರಬೇಕು. ಆರನೇ ವಿಕ್ರಮಾದಿತ್ಯನ ರಾಣಿ ಪಿರಿಯಕೇತಲಾದೇವಿ ಬಲ್ಲಕುಂದೆ ೩೦೦ರಲ್ಲಿಯ ತೆಕ್ಕೆಕಲ್ಲು ೧೨ರೊಳಗಿರುವ ಛತ್ರಗ್ರಾಮ, ಸಿರುಗುಪ್ಪ, ಕೊಳನೂರು ಈ ಮೂರು ಗ್ರಾಮಗಳನ್ನು ಆಳುತ್ತಿದ್ದಳು. ಸಿರುಗುಪ್ಪೆಯ ಕೇತಲೇಶ್ವರ ದೇವರಿಗೆ ಈಕೆ ಭೂಮಿ ದತ್ತಿ ಬಿಡುತ್ತಾಳೆ. ಪಿರಿಯ ಕೇತಲಾದೇವಿಯ ಪಾದ ಪದ್ಮೋಪಜೀವಿಯಾಗಿ ಮನ್ನೆಯ ಚೋಕರಸ ಆಳುತ್ತಿದ್ದನು. ಇವನು ತನ್ನ ಸ್ವಾಮ್ಯವನ್ನು ಪ್ರಭುಗಳು, ಪ್ರಭುಸ್ವಾಮ್ಯವನ್ನು ಬಿಟ್ಟಕೊಟ್ಟು ಸರ್ವಭಾಗ ಪರಿಹಾರ ಮಾಡಿ ದೇವರಿಗೆ ಬಿಡುತ್ತಾರೆ.

ಒಂದನೆಯ ಭೀಮ (ಬೀವರಸ)

ಇವನು ಮಹಾಸಾಮಂತ ಚೋಕರಸನ ಪುತ್ರನಾಗಿರಬೇಕು. ಸಿರುಗುಪ್ಪದ[೮೪] ಕ್ರಿ.ಶ. ೧೧೦೩ರ ಶಾಸನದಲ್ಲಿ ಈತನನ್ನು ಬೀವರಸ ಎಂದು ಕರೆಯಲಾಗಿದೆ. ಚೊಕ್ಕರಾಯ, ಬೀವರಸ, ಲೋಕರಸ, ತೆಕ್ಕೆಕಲ್ಲು ಚೊಕ್ಕರಸ, ಜಗ್ಗರಸ ಇವರುಗಳು ಹಾಗೂ ಸಮಸ್ತ ಪ್ರಜೆಗಾವುಂಡಗಳು ಸೇರಿ ಸ್ವಯಂ ಭೂದೇವರಿಗೆ ಬಲ್ಲಕುಂದೆ ೩೦೦ ರಲ್ಲಿ 'ಮೂರಲೊಂದು ಪಣ' ಕೊಡುತ್ತಾರೆ. ಕೊಂಚಿಗೆರೆ ಶಾಸನದಲ್ಲಿ[೮೫] ಈತನ ರಾಣಿ ಮಾಕಗಾಂಜಿಕೆಯೆಂದೂ ಸೋವಿದೇವನ ಪುತ್ರನೆಂದು ಹೇಳಲಾಗಿದೆ. ಕೊಂಚಿಗೆರೆಯ ಕ್ರಿ.ಶ. ೧೧೨೧ ರ ಶಾಸನದಲ್ಲಿ ಸೋವಿದೇವ ಆಳುತ್ತಿದ್ದುದನ್ನು ಹೇಳುತ್ತಿರುವುದರಿಂದ ಈ ಸುಮಾರಿಗಾಗಲೇ ಒಂದನೆಯ ಬೀವರಸ ಮರಣಿಸಿದುದು ಸ್ಪಷ್ಟ

ಸೋವಿದೇವ

ಕೊಂಚಿಗೆರೆ[೮೬] ರ ಶಾಸನದಲ್ಲಿ ಈತನನ್ನು ಮಹಾಮಂಡಳೇಶ್ವರನೆಂದು ಕರೆಯಲಾಗಿದೆ. ಇದರಿಂದ ಕ್ರಿ.ಶ. ೧೧೨೧ ರ ಸುಮಾರಿಗೆ ಕುರುಗೋಡು ಸಿಂಧರ ಸ್ಥಾನಮಾನ ಹೆಚ್ಚಿದುದು ಗೊತ್ತಾಗುತ್ತದೆ. ಶಾಸನದಲ್ಲಿ[೮೭] ಭೀಮದೇವ ಮತ್ತು ಮೂಕಗಾಂಬಿಕೆಯರ ಪುತ್ರನಾದ ಸೋವಿದೇವ ತನ್ನ ಬಾಹುಬಲದಿಂದ ಖ್ಯಾತಿ ಗಳಿಸಿ ಮಹಾಮಂಡಳೇಶ್ವರ ಸ್ಥಾನ ಹೊಂದುತ್ತಾನೆ. ಕೊಂಚಿಗೆರೆ[೮೮] ಕ್ರಿ.ಶ. ೧೧೪೪ರ ಶಾಸನದಿಂದ ಈತನಿಗೆ ಇಮ್ಮಡಿ ಭೀಮ, ಒಂದನೆಯ ರಾಚಮಲ್ಲ, ದೇವರX, Xದೇವ ಮತ್ತು ಫಣಿರಾಜರೆಂಬ ಐದು ಜನ ಪುತ್ರರು ಜನಿಸಿದ್ದು ಗೊತ್ತಾಗುತ್ತದೆ. ಕ್ರಿ.ಶ. ೧೧೩೧ ರ ಬೈಲೂರು ಶಾಸನವು[೮೯] ಇಮ್ಮಡಿ ಭೀಮದೇವನು ಆಳುತ್ತಿರುವುದನ್ನು ಹೇಳುತ್ತಿರುವುದರಿಂದ ಸೋವಿದೇವನು ಈ ಸುಮಾರಿಗಾಗಲೇ ಮರಣಿಸಿರಬೇಕು.

ಇಮ್ಮಡಿ ಭೀಮ

ಬೈಲೂರಿನ ಕ್ರಿ.ಶ. ೧೧೩೧ ರ ಶಾಸನದಲ್ಲಿ[೯೦] ಈತನನ್ನು 'ಶ್ರೀಮನು ಮಹಾಮಂಡಳೇಶ್ವರ ಬಳ್ಳಾರಿಯ ಬೀವರಸರು' ಎಂದು ಕರೆಯಲಾಗಿದೆ. ಬಳ್ಳಾರಿಯ ಬೀವರಸನೆ ಇಮ್ಮಡಿ ಭೀಮನಾಗಿದ್ದಾನೆ. ಕೋಳೂರು ಶಾಸನದಲ್ಲಿ[೯೧] ಈತನನ್ನು ವರ್ಣಿಸಿದೆ. ಈ ಭೀಮನು ತನ್ನ ಸಹೋದರನಾದ ಒಂದನೆಯ ರಾಚಮಲ್ಲನೊಂದಿಗೆ ರಾಜ್ಯವಾಳುತ್ತಿದ್ದನೆಂದು ಶಾಸನ ತಿಳಿಸುತ್ತಿದ್ದರಿಂದ ಕ್ರಿ.ಶ. ೧೦೪೭ ಡಿಸೆಂಬರ್ ೨೫ರವರೆಗೆ ಇವನು ಜೀವಿಸಿದುದು ಸ್ಪಷ್ಟವಾಗುತ್ತದೆ.

ಒಂದನೇ ರಾಚಮಲ್ಲ: ಕುರುಗೊಡು ಸಿಂಧರಲ್ಲಿ ಒಂದನೇ ರಾಚಮಲ್ಲ ಪ್ರಸಿದ್ಧ ಅರಸ. ಇವನು ಕ್ರಿ.ಶ. ೧೧೪೪ ರ ಸುಮಾರಿನಿಂದ ಕ್ರಿ.ಶ. ೧೧೭೭ ರ ವರೆಗೆ ಆಡಳಿತ ನಡೆಸುತ್ತಿದ್ದಂತೆ ತಿಳಿದುಬರುತ್ತದೆ. ಈತನು ತನ್ನ ಆಡಳಿತ ಅವಧಿಯಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾನೆ.

ಧಾರ್ಮಿಕ ಇತಿಹಾಸದಲ್ಲಿಯೂ ಒಂದನೇ ರಾಚಮಲ್ಲನದು ಮರೆಯಲಾರದ ಹೆಸರು[೧೮೨]. ಕೊಂಚಿಗೆರೆ ಶಾಸನದಲ್ಲಿ[೧೮೩] ಸೋವಿದೇವನ ಪಂಚಪುತ್ರರನ್ನು ಹೇಳಿದ ತರುವಾಯ ಅವರಲ್ಲಿ ದ್ವಿತೀಯನಾದ ಈ ರಾಚಮಲ್ಲನ ಪ್ರಸ್ತಾಪ ಬರುತ್ತದೆ. ಇವನು ತನ್ನ ಪಿರಿಯರಸಿ ಮಾಕಲಾದೇವಿಯೊಂದಿಗೆ ರಾಜ್ಯಗೆಯ್ಯುತಿದ್ದನೆಂದು ಆ ಶಾಸನ ತಿಳಿಸುತ್ತದೆ. ಕ್ರಿ.ಶ. ೧೧೪೧ ಸಿಂದಿಗೆರೆ ೯೪ ಶಾಸನದಲ್ಲಿ ಈತನ ಪ್ರಥಮ ಉಲ್ಲೇಖ ಬರುತ್ತದೆ. ಇವನನ್ನು ನಂದಿಕೇಶ್ವರನೆಂದು ಕರೆದಿರುವುದು ಇವನ ಶಿವಭಕ್ತಿಯನ್ನು ಸೂಚಿಸುತ್ತದೆ. ಕೋಳೂರಿನ[೧೮೪] ಶಾಸನ ಇವನು ತನ್ನ ಅಣ್ಣ ಇಮ್ಮಡಿ ಭೀಮನೊಂದಿಗೆ ಆಳುತ್ತಿದ್ದುನ್ನು ಹೇಳುತ್ತದೆ. ಕುರುಗೋಡಿನ ಇನ್ನೊಂದು ಶಾಸನದಲ್ಲಿ[೧೮೫] ಈತನ ಅನುಮತಿಯಿಂದ ನಗರದ ಮೂಲಸ್ತಂಭರಾಗಿದ್ದ ಮುಮ್ಮರಿದಂಡಗಳು ತ್ರಿಕೂಟ ದೇವಾಲಯ ಮಾಡಿಸುತ್ತಾರೆ. ಒಂದನೇ ರಾಚಮಲ್ಲ ಮತ್ತು ಸೋವಲದೇವಿಯಿಂದ ಜನಿಸಿದ ಪುತ್ರನೇ ಇರುಂಗೋಳ. ಈ ಇರುಂಗೋಳನ ಪುತ್ರನೇ ಇಮ್ಮಡಿ ರಾಚಮಲ್ಲ. ಈ ಇಮ್ಮಡಿ ರಾಚಮಲ್ಲ ತನ್ನ ಅಜ್ಜನೊಂದಿಗೆ ಇದ್ದು ಆಡಳಿತ ಕಾರ್ಯದಲ್ಲಿ ನೆರವಾಗುತ್ತಿದ್ದುದನ್ನು ಶಾಸನಗಳು ತಿಳಿಸುತ್ತವೆ.

ಇರುಂಗೋಳ ದೇವ

ಒಂದನೇ ರಾಚಮಲ್ಲ ಮತ್ತು ಸೋವಲಾದೇವಿಯ ಪುತ್ರನಾದ ಇವನ ಉಲ್ಲೇಖ ಕುರುಗೋಡು[೧೮೬] ಶಾಸನದಲ್ಲಿದೆ. ಕ್ರಿ.ಶ. ೧೧೪೯ ರ ಒರವಾಯಿ ಶಾಸನದಲ್ಲಿ[೧೮೭] ಈತನ ಪುತ್ರ ಇಮ್ಮಡಿ ರಾಚಮಲ್ಲ ಆಳುತ್ತಿರುವುದನ್ನು ಹೇಳುತ್ತಿರುವುದರಿಂದ ಇರೂಂಗುಳ ಅಕಾಲ ಮರಣಕ್ಕೀಡಾಗಿರಬೇಕು. ಒರವಾಯಿ ಶಾಸನ[೧೮೮], ಇವನನ್ನು ನಳ, ನಹುಷ, ಪೃಥು, ಮಾಂಧಾತರಿಗೆ ಸಮಾನನೆಂದು ವರ್ಣಿಸಿದೆ. ಇರುಂಗೋಳನಿಗೆ ಬಲದೇವಿಯಿಂದ ಇಮ್ಮಡಿ ರಾಚಮಲ್ಲ ಮತ್ತು ಸೋಮಭೂಪಾಲ ಎಂಬ ಇಬ್ಬರು ಪುತ್ರರು ಜನಿಸಿದರೆಂದು ಕುರುಗೋಡಿನ ಒಂದು ಶಾಸನ ಹೇಳಿದರೆ ಅದೇ ಕುರುಗೋಡಿನ ಇನ್ನೊಂದು ಶಾಸನದಲ್ಲಿ ಏಚಲಾದೇವಿಯಲ್ಲಿ ಇಮ್ಮಡಿ ರಾಚಮಲ್ಲ ಮಾತ್ರ ಹುಟ್ಟಿದನೆಂದು ತಿಳಿಸುತ್ತದೆ.

ಇಮ್ಮಡಿ ರಾಚಮಲ್ಲ

ಇರುಂಗೋಳ ದೇವನ ಪುತ್ರನು, ಒಂದನೆಯ ರಾಚಮಲ್ಲನ ಪುತ್ರನೂ ಆದ ಈತನು ತನ್ನ ಅಜ್ಜ ಒಂದನೇ ರಾಚಮಲ್ಲನ ಹಾಗೆಯೇ ಖ್ಯಾತಿವಂತನಾಗಿದ್ದಾನೆ. ಇವನ ಪ್ರಥಮ ಉಲ್ಲೇಖ ಕ್ರಿ.ಶ. ೧೧೪೯ ರ ಒರುವಾಯಿ ಶಾಸನದಲ್ಲಿ[೧೮೯] ಬರುತ್ತದೆ.

ಅಲ್ಲಿ ಮಹಾಸಾಮಂತ ಲಕ್ಕೆಯ ನಾಯಕನನ್ನು ಇಮ್ಮಡಿ ರಾಚಮಲ್ಲದೇವರಾಜ್ಯ ಸಮುದ್ಧರಣಂ ಎಂದು ಕರೆದಿದೆ. ಇದರಿಂದ ಕ್ರಿ.ಶ. ೧೧೪೯ ರ ಅವಧಿಯಲ್ಲಿ ಇಮ್ಮಡಿ ರಾಚಮಲ್ಲನು ಆಡಳಿತದಲ್ಲಿ ನಿರತನಾಗಿದ್ದುದು ತಿಳಿದುಬರುತ್ತದೆ. ಒಂದನೇ ರಾಚಮಲ್ಲನು ಇನ್ನೂ ಜೀವಂತ ವಿದ್ದು, ಕ್ರಿ.ಶ. ೧೧೭೬ ರಲ್ಲಿ ಆಳುತ್ತಿರುವುದುನ್ನು ಕುರುಗೋಡಿನ[೧೯೦] ಶಾಸನ ತಿಳಿಸುತ್ತಿರುವುದರಿಂದ ಇಮ್ಮಡಿ ರಾಚಮಲ್ಲನಿಗೆ

ಆಡಳಿತದಲ್ಲಿ ನೆರವಾಗುತ್ತಿದ್ದನು ಎಂದು ಹೇಳಬಹುದು. ಒರವಾಯಿ ಶಾಸನದಲ್ಲಿ[೯೧] ಈತನ ಗುಣಗಳನ್ನು ಕುರಿತು ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರ[೯೨] ದಲ್ಲಿ ಹಾಗೂ ಕುರುಗೋಡಿನ[೯೩] ಶಾಸನದಲ್ಲಿ ಇಮ್ಮಡಿ ರಾಚಮಲ್ಲನು ಶಿವನನ್ನು ಸಾಕ್ಷಾತ್ಕರಿಸಿಕೊಂಡು ನಿಚ್ಚವರವನ್ನು ಪಡೆದ ಮಹಾನ್ ಶಿವಭಕ್ತನೆಂದು ವರ್ಣಿಸಲಾಗಿದೆ. ಕಲ್ಬುರ್ಗಿಯವರು[೯೪] ತಮ್ಮ ಶಾಸನಗಳಲ್ಲಿ ಶಿವಶರಣರು ಎಂಬ ಗ್ರಂಥದಲ್ಲಿ ಈತನನ್ನು ಕುರಿತು ವ್ಯಕ್ತಪಿಡಿಸಿದ ಮಾತುಗಳು ಇವನ ವ್ಯಕ್ತಿತ್ವ ಎಂತದೆಂಬುದನ್ನು ಸ್ಪಷ್ಟಪಡಿಸುತ್ತಾರೆ. ಇಮ್ಮಡಿ ರಾಚಮಲ್ಲನಿಗೆ ವೀರಕಲಿದೇವರಸನೆಂಬ ಪುತ್ರನಿದ್ದುದು ಹಾಗೂ ಇವನು ಬಲ್ಲಕುಂದೆ ನಾಡನ್ನು ಆಳುತ್ತಿದ್ದುದು ಹಂಪೆಯ ಶಾಸನದಿಂದ ತಿಳಿದುಬರುತ್ತದೆ[೯೫]. ಹಂಪೆಯ ಶಾಸನ ಕಾಲ ಕ್ರಿ.ಶ. ೧೧೮೯. ಈ ಸುಮಾರಿಗೆ ಇಮ್ಮಡಿ ರಾಚಮಲ್ಲ ಶಿವಾಧೀನನಾಗಿರಬೇಕು.

ವೀರಕಲಿದೇವರಸ

ಇಮ್ಮಡಿ ರಾಚಮಲ್ಲನ ತರುವಾಯ ಅವನ ಪುತ್ರ ವೀರಕಲಿದೇವರಸ ಬಲ್ಲಕುಂದೆ ನಾಡಿನ ಸಿಂಹಾಸನವನ್ನೇರುತ್ತಾನೆ. ಈ ವಿಷಯವನ್ನು ಹಂಪೆಯ ಶಾಸನ[೯೬] ಇಮ್ಮಡಿ ರಾಚಮಲ್ಲ ದೇವಾಪತ್ಯನಪ್ಪ ಶ್ರೀ ವೀರಕಲಿದೇವರಸರ ರಾಜ್ಯಾಂಬೋಧಿ ಪ್ರವರ್ಧಮಾನನೆಂದು ಹಂಪೆಯ ಶಾಸದಿಂದ ತಿಳಿದುಬರುತ್ತದೆ. ಮಾದಯ್ಯನಾಯಕನ ಮೂಲಕರ್ತವ್ಯ ಶತ್ರುಗಳಿಂದ ವಿರುಪಾಕ್ಷ ತೀರ್ಥದ ರಕ್ಷಣೆ ಮಾಡುವುದಾಗಿತ್ತು. ಕ್ರಿ.ಶ. ೧೨೦೬ ರಲ್ಲಿ ಹಂಪೆಯ ಮಧುವನದಲ್ಲಿದ್ದು ಆಳುತ್ತಿದ್ದುದನ್ನು ಸಂಡೂರಿನ ಶಾಸನ[೯೭] ತಿಳಿಸುತ್ತದೆ. ಮುಂದೆ ಈ ಸಿಂಧ ಮನೆತನದವರು ಏನಾದರೆಂಬುದು ತಿಳಿದುಬರುವುದಿಲ್ಲ.

ಇತರ ಸಿಂಧ ಅರಸರು

ಬಳ್ಳಾರಿ ಜಿಲ್ಲೆಯ ಬೇರೆ ಸ್ಥಳಗಳಲ್ಲಿ ಸಿಂಧ ವಂಶದವರ ಪ್ರಸ್ತಾಪ ಬರುತ್ತಿದ್ದು, ಅವರು ಇಂತಿದ್ದಾರೆ. ಇವರ ಕಾಲ, ಸ್ಪಷ್ಟವಾದ ವಂಶಾವಳಿ ಯಾವುದೂ ಸ್ಪಷ್ಟವಾಗಿ ತಿಳಿಯುವುದಿಲ್ಲ.

ಮಹಾಮಂಡಳೇಶ್ವರ ಬಳ್ಳಾರೆಯಜ್ಜರಸ

ಬಳ್ಳಾರೆಯ ಅಜ್ಜರಸನು ಸಿಂಧವಂಶದವನಾಗಿದ್ದು ಇವನ ಆಳ್ವಿಕೆಗೊಳಪಟ್ಟ ವಿಭಾಗದ ಉಲ್ಲೇಖವಿಲ್ಲ. ಆದರೆ ಈತನು ಇಮ್ಮಡಿ ರಾಚಮಲ್ಲನ ಅಧೀನನಾಗಿದ್ದನೆಂಬುದು ಸ್ಪಷ್ಟ. ಇಮ್ಮಡಿ ರಾಚಮಲ್ಲನ ಸಂಬಂಧಿಯಾಗಿರಬೇಕು. ಕುರುಗೋಡಿನ[೯೮] ಕ್ರಿ.ಶ. ೧೧೭೬ ಜನವರಿ ೧೩ ಶಾಸನದಲ್ಲಿ ಈತನ ಉಲ್ಲೇಖವಿದೆ. ತಪೋಧನರ ಆಹಾರಕ್ಕೆ ದೇವರಿಗೆ ನೈವೇದ್ಯ ನಂದಾದೀವಿಗೆಗೆ ಭೂಮಿ, ಹೂವಿನ ತೋಟ, ಎರಡು ಗದ್ಯಾಣ ಹಾಗೂ ಸುಂಕವನ್ನು ಬಿಡುತ್ತಾನೆ.

ಮಹಾಸಾಮಂತ ಬಮ್ಮದೇವರಸ

ಕ್ರಿ.ಶ. ೧೦೫೨-೫೩ ರ ತಳಕಲ್ಲು ಶಾಸನದಲ್ಲಿ ಇವನ ಉಲ್ಲೇಖವಿದೆ. ಈತನು ೫೦೦ ರಲ್ಲಿಯ ಕಂಪಣX ಪನ್ನೆರಡರಲ್ಲಿಯ ಅಗ್ರಹಾರ ತೊಣಂಕಲಿ (ತಳಕಲ್ಲು) ಮX. ಉರಯಿ ಪನ್ನೆರಡರ ಬಳಿಯ ನಿಟ್ಟೂರನ್ನು ಮೊಸಳೆಮಡು ಪನ್ನೆರಡರ ಬಳಿಯ ಬಸಿಕೋಡನ್ನು ಆಳುತ್ತಿದ್ದನು. ಈ ಗ್ರಾಮಗಳು ಕೋಗಳಿ ೫೦೦ ರಲ್ಲಿವೆ. ಸಿಂಧ ವಂಶದವನಾದ ಇವನಿಗೆ ಕೇವಲ ೩ ಗ್ರಾಮಗಳು ಮಾತ್ರ ಒಳಪಟ್ಟಿದ್ದವು. ಈತನು ತೊಣಂಕಲಿಯ ಗುಂಡಿಯಕೆರೆಗೆ ಪಡಿ ಸಲ್ಲಿಸುವ ಸಲುವಾಗಿ ಭೂಮಿ ದಾನ ಬಿಡುತ್ತಾನೆ.

ಬಾಣರು

ಕದಂಬರು ಮತ್ತು ಬಾದಾಮಿ ಚಾಲುಕ್ಯರ ಕಾಲದಲ್ಲಿ ಅನಂತಪುರ, ಕರ್ನೂಲು, ಬಳ್ಳಾರಿ, ಸಿರುಗುಪ್ಪ ಅಲ್ಲದೆ ಅನಂತಪುರ ಜಿಲ್ಲೆಯ ಪ್ರದೇಶವನ್ನೊಳಗೊಂಡಿದ್ದ 'ತುರಮರ ವಿಷಯ ಗುತ್ತಿ ತಾಲೂಕಿನ ಪೆದ್ದವಡಗೂರು ಪ್ರದೇಶಗಳನ್ನು ಬಾಣರು ಹಿಂದೆ ಆಳುತ್ತಿದ್ದರು ಎಂದು ಪೆದ್ದವಡಗೂರು ಶಾಸನದಿಂದ[೧೯೯] ತಿಳಿಯುತ್ತದೆ. ಅನಂತಪುರ ಪ್ರದೇಶದಲ್ಲಿ ಬಾಣರು ಪ್ರಬಲರಾಗಿದ್ದು ಬಾದಾಮಿ ಚಾಲುಕ್ಯರಿಗೆ ಅಧೀನರಾಗಿ ಆಳುತ್ತಿದ್ದರು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಇವರ ಪ್ರಾಬಲ್ಯ ಕಡಿಮೆಯಾಗಿ ಈ ಪ್ರದೇಶದಿಂದ ದಕ್ಷಿಣಕ್ಕೆ ಅಂದರೆ ತಮಿಳುನಾಡಿಗೆ ಹೋಗಿ ನೆಲೆಸಿದ್ದರು. ಬಾದಾಮಿ ಚಾಲುಕ್ಯರ ಪ್ರಭಾವದಿಂದ ಬಾಣರು ಚಿಕ್ಕ ವಿಭಾಗಗಳ ಮಹಾಮಂಡಲೇಶ್ವರರಾಗಿ, ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದುದ್ದನ್ನು ಬಳ್ಳಾರಿ ಶಾಸನಗಳು ನಿರೂಪಿಸುತ್ತವೆ. ಸಾಮಂತಾಧಿಪತಿ ಏಚರಸ ಈತನ ಮಗ ಗೋಳಿದೇವನ ಉಲ್ಲೇಖ ಬಾಗಳಿ ಶಾಸನದಲ್ಲಿದೆ[೨೦೦]. ಏಚ ಹಾಗೂ ಆವನ ಪುತ್ರ ದಸವರ್ಮನ ಉಲ್ಲೇಖ ನೀಲಗುಂದ ಶಾಸನದಲ್ಲಿದೆ[೨೦೧]. ಇವರು ತಮ್ಮನ್ನು 'ಮಹಾಬಲಿ' ವಂಶದವರೆಂದು ಕರೆದುಕೊಂಡಿದ್ದಾರೆ.

ಮಹಾಮಂಡಳೇಶ್ವರ ತ್ರೈಳೋಕ್ಯಮಲ್ಲ ಬಾಣಾಧಿರಾಜ

'ಬಾಣರ' ಅರಸು ಮನೆತನಕ್ಕೆ ಸೇರಿದ ಈತನ ಉಲ್ಲೇಖ ಹಳೇಕೋಟೆ ಶಾಸನದಲ್ಲಿ ಬರುತ್ತದೆ. ಇವನು ಉತ್ತರಾಯಣ ಸಂಕ್ರಾಂತಿಯಂದು 'ಸಿನ್ದಾಪುರದ' ಕೂಡಲ ಮಲ್ಲಿಕಾರ್ಜುನ ದೇವರಿಗೆ ೧೨ ಮತ್ತರು, ಪಾತ್ರ ಪಾವುಳರಿಗೆ ೧೨ ಮತ್ತರು, ಉಪಧ್ಯಾಯ ಬಲದೇವರಿಗೆ ೬ ಮತ್ತರು ಭೂಮಿಯನ್ನು ಬಿಡುತ್ತಾನೆ. ಅಲ್ಲದೆ ಊರೊಡೆಯ ಗಾಮುಣ್ಡ ಒಕ್ಕಲು ಮಕ್ಕಳಿಗೆಂದು ಶಿಲಾಶಾಸನ ಬರೆದು 'ಊರ ಪುತಯ ಶ್ರೀಹಗೆ ಮತ್ತರಲು ಪಣ ಒಂದು ಎರಡನೆಯ ವರುಷ ಮತ್ತರಲು ಪಣ೨ ಮೂರನೇ ವರುಷ ಮತ್ತರಲು ಪಣ ೩ ನಾಲ್ಕನೇ ವರುಷ ಮತ್ತರಲು ಪಣ ೪ ಆಯ್ದೆನೆಗೆ ಕರಿಕ್ಕೆ ಸಲುವುದು ಎಂಬ

ನಿಬಂಧನೆ ಹಾಕುತ್ತಾನೆ. ಇವನು ಸಿರುಗುಪ್ಪ ಭಾಗದಲ್ಲಿ ಒಂದು ಚಿಕ್ಕ ವಿಭಾಗವನ್ನು ಮಹಾಮಂಡಳೇಶ್ವರನಾಗಿ ಆಳುತ್ತಿದ್ದನೆಂದು ಹೇಳಬಹುದು.

ಹೊಸಮಲೆ ದುರ್ಗದ ಅರಸರು

ಹೊಸಮಲೆ ದುರ್ಗದ ಅರಸರಲ್ಲಿ ಮುಮ್ಮಡಿ ಮನೆತನದ ಸಿಂಗೆಯನಾಯಕ, ಕಂಪಿಲರಾಯ ಮತ್ತು ಕುಮಾರರಾಮ ಈ ಮೂವರು ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದ್ದಾರೆ. ಕಂಪಿಲರಾಯ ಮತ್ತು ಆತನ ಪುತ್ರ ಕುಮಾರರಾಮರ ಚರಿತ್ರೆ ಒಂದು ರೋಚಕ ಕಥೆಯಾಗಿದೆ. ಕುಮಾರರಾಮನ ಬಗ್ಗೆ ಸಾಂಗತ್ಯ ಕೃತಿಗಳು, ಜನಪದ ಕಥೆಗಳು, ಹಾಡುಗಳು, ನಾಟಕಗಳು ರಚನೆಯಾಗಿವೆ. ಈತನನ್ನು ಕುಮಾರರಾಮನೆಂದು ಕರೆಯುವುದು ರೂಢಿಯಲ್ಲಿದೆ. ಕಂಪಿಲರಾಯ ಮತ್ತು ಕುಮಾರರಾಮರ ಕೆಲವು ಶಾಸನಗಳು ಕನ್ನಡ ಸಾಹಿತ್ಯಿಕ ಕೃತಿಗಳು, ಜಾನಪದ ಕಥೆಗಳು ಮತ್ತು ಕೈಫಿಯತ್ತುಗಳು ಆಧಾರವಾಗಿ ದೊರೆತಿವೆ.

ವಂಶಾವಳಿ

ಇವರ ವಂಶಾವಳಿ ಕೈಫಿಯತ್ತು ಭಟ್ಟರಹಳ್ಳಿ ತಾಲೂಕ ಬಳ್ಳಾರಿಯಲ್ಲಿ ಹೀಗೆ ನಿರೂಪಿಸಲಾಗಿದೆ. ಇವರ ವಂಶಾವಳಿ ಇಂತಿದೆ.

ಖಂಡೆಯರಾಯ
↓
ಮತ್ತಿನ ಮುಮ್ಮಣಿರಾಯ
↓
ನರಸಿಂಗರಾಯ
↓
ನರಸಿಂಗರಾಯ
↓
ಕೋವಿನ ತಿಮ್ಮನಾಯಕ
↓
ಹೆಬ್ಬುಲಿ ಕಂಪಿಲರಾಯ
↓
ಕುಮಾರರಾಮ
↓
ಸಿಂಗೆಯ ನಾಯಕ
↓
ಕಂಪಿಲರಾಯ+ಹರಿಯಾಲದೇವಿ
↓
ಕುಮಾರರಾಮ

ಮುಮ್ಮಡಿ ಸಿಂಗೆಯ ನಾಯಕ

ಮುಮ್ಮಡಿ ಸಿಂಗೆಯ ನಾಯಕನ ಬಗ್ಗೆ ವಿವರಗಳು ತಾಲೂಕು ಕಂಪಲಿ ಕೈಫಿಯತ್ತು ಮತ್ತು ಕೆಲವು ಉಪಲಬ್ದ ಆಧಾರಗಳಿಂದ ತಿಳಿಯುತ್ತದೆ. ಸಿಂಗೇಯನಾಯಕ ಈ ವಂಶದ ಪ್ರಥಮ ಐತಿಹಾಸಿಕ ದೊರೆ. ಇವನು ಒಮ್ಮೆ ಅರಣ್ಯದಲ್ಲಿ ಬೇಟೆಯಾಡುವ ಸಂದರ್ಭದಲ್ಲಿ ಅಪಾರ ಹಣ ದೊರೆಯುತ್ತದೆ. ಸಿಂಗೇಯ ನಾಯಕನು ಮಲ್ಲನನ್ನು ಸಂಹಾರ ಮಾಡಿ ತಾನೇ ಅಧಿಕಾರವನ್ನು ವಹಿಸಿಕೊಳ್ಳುತ್ತಾನೆ. ಇದು ಕೈಫಿಯತ್ತಿನಿಂದ ತಿಳಿದುಬರುವ ಅಂಶವಾಗಿದೆ. ಹನೇಯದಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಂಡ ಮುಮ್ಮಡಿ ಸಿಂಗೆಯನಾಯಕನು ಮುಂದೆ ದೊರವಡಿ ವಿಭಾಗವನ್ನು (ದರೋಜಿ) ತನ್ನ ವಶಕ್ಕೆ ತೆಗೆದುಕೊಂಡು ಹೊಸಮಲೆ ದುರ್ಗದಿಂದ ಆಳುತ್ತಾನೆ. ಮುಂದೆ ಕುಮ್ಮಟದುರ್ಗಕ್ಕೆ ರಾಜಧಾನಿ ಬದಲಾಯಿಸುತ್ತಾನೆ.

ಮುಮ್ಮಡಿ ಸಿಂಗೆಯನಾಯಕ–ಯುದ್ಧಗಳು

ಮುಮ್ಮಡಿ ಸಿಂಗೆಯನಾಯಕನು ವೀರನಾಗಿದ್ದು, ಹಲವಾರು ಯುದ್ಧಗಳನ್ನು ಮಾಡಿ ತನ್ನ ಶಕ್ತಿ ಸಾಮರ್ಥ್ಯಗಳಿಂದ ಉನ್ನತ ಸ್ಥಾನ ಪಡೆದಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇವನ ಮೇಲೆ ದೇವಗಿರಿ ಯಾದವ ಅರಸ ವೀರರಾಮದೇವನ ಮಹಾಮಂಡಳೇಶ್ವರನಾದ ಕನ್ನರದೇವನು ಯುದ್ಧಕ್ಕೆ ಬರುತ್ತಾನೆ. ಈ ಯುದ್ಧದಲ್ಲಿ ಜಯ ಯಾರಿಗೆ ಲಭಿಸುತ್ತದೆ ಎಂದು ತಿಳಿದುಬಂದಿಲ್ಲ. ಈ ಯುದ್ಧದಲ್ಲಿ ಕನ್ನರದೇವನು ಬಹುಷಃ ಸೋತಿರಬೇಕು. ಏಕೆಂದರೆ ಕ್ರಿ.ಶ. ೧೨೮೭ ರಲ್ಲಿ ಹುಲಿಗೆರೆಯಿಂದ ಸೈನ್ಯವು ಮತ್ತೊಮ್ಮೆ ಸಿಂಗೆಯನಾಯಕನ ಮೇಲೆ ದಂಡೆತ್ತಿ ಹೋದುದು ತಿಳಿದುಬರುತ್ತದೆ[೨೦೨]. ಕಮ್ಮಟದಲ್ಲಿದ್ದ ಈ ಸಿಂಗೆಯನಾಯಕನ ಮೇಲೆ .... ರಾಣೆಯನು ದಂಡೆತ್ತಿ ಬಂದುದು ಲಕ್ಷ್ಮೇಶ್ವರದ ಶಾಸನದಿಂದ ತಿಳಿದುಬಂದಿದೆ. ಹೊಯ್ಸಳದ ವಶದಲ್ಲಿದ್ದ ಚಿತ್ರದುರ್ಗದ ಭಾಗಕ್ಕೆ ಈತನು ಸೈನ್ಯಸಮೇತನಾಗಿ ಹೋಗಿ ಅಲ್ಲಿಯ ಅಧಿಕಾರಿಗಳ ಮೇಲೆ ಯುದ್ಧ ಸಾರಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೩೦೦ ರ ಸುಮಾರಿಗೆ ಮುಮ್ಮಡಿ ಸಿಂಗನಾಯಕ ಮರಣಿಸಿರಬೇಕು.

ಕಂಪಿಲರಾಯ

ವೀರ ಕಂಪಿಲರಾಯ 'ಖಂಡೆಯರಾಯ'ನೆಂದು ಕಾವ್ಯಶಾಸನಗಳು ಈತನನ್ನು ಕರೆದಿವೆ. ಮುಮ್ಮಡಿ ಸಿಂಗೆಯನಾಯಕ ಮತ್ತು ಮಾದನಾಯಕತಿಯ ಪುತ್ರ ರಾಜ್ಯದ ಗಡಿಗಳನ್ನು ಬಾಹುಬಲದಿಂದ ವಿಸ್ತರಿಸಿ ಉತ್ತರಕ್ಕೆ ಪ್ರಬಲರಾಗಿದ್ದ ಕಾಕತೀಯ ಅರಸರೊಂದಿಗೆ ದಕ್ಷಿಣದಲ್ಲಿ ಪ್ರಬಲರಾಗಿದ್ದ ಹೊಯ್ಸಳರೊಂದಿಗೆ ಯುದ್ಧ ಮಾಡಿ ವಿಜಯಿಯಾಗುತ್ತಾನೆ. ದೆಹಲಿ ಸುಲ್ತಾನರ ದಾಳಿಯನ್ನು ಸಮರ್ಥ ರೀತಿಯಲ್ಲಿ ಎದುರಿಸಿದ ವೀರ. ಈ ಯುದ್ಧ ಕಾರ್ಯಗಳಲ್ಲಿ ನೆರವಾಗಿ ವಿಜಯಕ್ಕೆ ಕಾರಣೀಕರ್ತ ಈತನ ಪುತ್ರ ರಾಮನಾಥ. ಕಂಪಿಲರಾಯನ ರಾಜಧಾನಿ

ಕುಮ್ಮಟದುರ್ಗವಾಗಿತ್ತು. ಅಲ್ಲದೆ ಕಂಪಿಲರಾಯನು ಸಂಡೂರು–ಹೊಸಪೇಟೆ ಮಾರ್ಗಮಧ್ಯೆ ಹಬ್ಬಿರುವ ಬೆಟ್ಟದ ಮೇಲೆ ಭದ್ರವಾದ ಕೋಟೆಯನ್ನು ಕಟ್ಟಿ ಅದಕ್ಕೆ ಹೊಸಮಲೆದುರ್ಗವೆಂಬ ಹೆಸರನ್ನು ಇಡುತ್ತಾನೆ.

ಕಂಪಿಲರಾಯನ ರಾಣಿಯರು

ಕಂಪಿಲರಾಯನಿಗೆ ಕನಕಗಿರಿ ಗುಜ್ಜಲ ಮನೆತನದ ಹೆಣ್ಣುಮಗಳು ಹರಿಯಾಲದೇವಿಯೊಡನೆ ವಿವಾಹವಾಗಿತ್ತು. ಈಕೆಯೇ ಕಂಪಿಲರಾಯನ ಪಟ್ಟದ ರಾಣಿಯಾಗಿದ್ದಳು. ಹರಿಯಾಲದೇವಿಯ ಜೊತೆಗೆ ಇನ್ನೂ ನಾಲ್ಕು ಜನ ಹೆಂಡತಿಯರು ಇದ್ದರೆಂದು 'ತಾಲೂಕು ಕಂಪಲಿ ಕೈಫಿಯತ್ತು' ತಿಳಿಸುತ್ತದೆ. ಅವರೆಂದರೆ ಹರಿಯಮ್ಮ, ರತ್ನಾಜಿ, ತಿರುಮಲಾಂಬೆ ಮತ್ತು ಕಮಲಾಜಿ. ಹರಿಯಾಲದೇವಿಗೆ ಕುಮಾರರಾಮ ಜನಿಸುತ್ತಾನೆ. ಈತನಿಗೆ ಅಣ್ಣ ಕಾಟಣ್ಣ, ಸಹೋದರಿ ಮಾರಮ್ಮ, ಸಿಂಗಮ್ಮ ಇದ್ದುದನ್ನು ಕಾವ್ಯಗಳು ತಿಳಿಸುತ್ತವೆ.

ಕುಮಾರರಾಮನ ಜನನ

ಕಂಪಿಲರಾಯ ಮತ್ತು ಅವನ ಪಟ್ಟದರಾಣಿ ಹರಿಯಾಲದೇವಿಗೆ ಜಟಿಂಗರಾಮೇಶ್ವರನ ವರಪ್ರಸಾದದಿಂದ ಜನಿಸಿದ ಈತನ ಮೊದಲ ಹೆಸರು ರಾಮನಾಥನೆಂದು. ಈತನನ್ನು ಕುಮಾರರಾಮನೆಂದು ಕಥೆ, ಕಾವ್ಯ, ಕೈಫಿಯತ್ತುಗಳು ಕರೆದಿವೆ. ಈತನು ಬಾಲ್ಯದಲ್ಲಿಯೇ ವೀರಗುಣಗಳಿಂದ, ತನ್ನ ತಂದೆಯ ಶತ್ರುಗಳೊಂದಿಗೆ ಯುದ್ಧ ಮಾಡಿ ವಿಜಯಗಳಿಸಿದ. ಹೋರಾಡುತ್ತಲೇ ಮರಣಿಸಿ ಕಾವ್ಯಗಳಿಗೆ ವಸ್ತುವಾದ.

ಯುದ್ಧಗಳು

ಕಂಪಿಲರಾಯ ಮತ್ತು ಆತನ ಪುತ್ರ ಕುಮಾರರಾಮ ಹಲವಾರು ಯುದ್ಧಗಳನ್ನು ಮಾಡಿರುವುದನ್ನು ಶಾಸನ ಕಾವ್ಯಗಳು ತಿಳಿಸುತ್ತವೆ.

ಹೊಳಲ್ಕೆರೆ ಯುದ್ಧ

ಕ್ರಿ.ಶ. ೧೩೦೩ ರ ಚಿತ್ರದುರ್ಗ ಜಿಲ್ಲೆಯ ಜೇನುಕಲ್ಲು ಶಾಸನದಲ್ಲಿ[೨೦೩] ವೀರಬಲ್ಲಾಳ ಆಳುತ್ತಿರುವಾಗ ಕಂಪಿಲದೇವನು ತನ್ನ ಸೇನೆಯನ್ನು ತೆಗೆದುಕೊಂಡು ಹೊಳಲ್ಕೆರೆಯ ವರೆಗೆ ಬರುತ್ತಾನೆ. ಇಲ್ಲಿ ಹೊಯ್ಸಳ ಸೈನ್ಯಕ್ಕೂ, ಈತನಿಗೂ ಯುದ್ಧ ನಡೆಯುತ್ತದೆ. ಈ ಯುದ್ಧದಲ್ಲಿ ಯಾರು ವಿಜಯಿಗಳಾದರೆಂಬುದು ಸ್ಪಷ್ಟವಿಲ್ಲ.

ಹೊಯ್ಸಳ ವೀರಬಲ್ಲಾಳನೊಂದಿಗೆ ಯುದ್ಧ

ಕ್ರಿ.ಶ. ೧೩೨೩ ರಲ್ಲಿ ಹೊಯ್ಸಳ ವೀರಬಲ್ಲಾಳನು ತಾನೇ ಸೈನ್ಯ ಸಮೇತವಾಗಿ ಮತ್ತೊಮ್ಮೆ ದೊರವಡಿಗೆ ಬಂದು ಕಂಪಿಲರಾಯನೊಂದಿಗೆ ಯುದ್ಧ ಮಾಡುತ್ತಾನೆ. ಈ ಯುದ್ಧದಲ್ಲಿ ಇವರೀರ್ವರೂ ನೇರವಾಗಿ ಭಾಗವಹಿಸಿದುದನ್ನು ಶಾಸನ ತಿಳಿಸುತ್ತದೆ.

ಹುಳಿಯೇರು ಯುದ್ಧ

ನಂಜುಂಡ ಕವಿಯ ಕುಮಾರರಾಮ ಚರಿತದಲ್ಲಿ ಹುಳಿಯೇರುವಿನಲ್ಲಿದ್ದ ಬಾಯಿಲಗಳಿಗಾಗಿ (ಬೇಟೆನಾಯಿಗಳಿಗಾಗಿ) ಕುಮಾರ ರಾಮನು ಯುದ್ಧ ಮ್ಾಡಿ 'ಹುಳಿಯೇರು'ವನ್ನು ನಾಶ ಮಾಡಿದುದನ್ನು ಹೇಳಲಾಗಿದೆ. ಈ ಕೋಟೆ ಹೊಯ್ಸಳ ವೀರಬಲ್ಲಾಳನದು. ಆದ್ದರಿಂದ ಇವನು ಕಂಪಿಲರಾಯನ ಮೇಲೆ ಯುದ್ಧಕ್ಕೆ ಬರುತ್ತಾನೆ. ಈ ಯುದ್ಧದಲ್ಲಿ ಸೋತು ಸಂಧಿಯನ್ನು ಮಾಡಿಕೊಂಡನು.

ಬೇಚೆಯ ದಣ್ಣಾಯಕ ಮತ್ತು ಸಿಂಗೆಯ ದಣ್ಣಾಯಕರೊಂದಿಗಿನ ಯುದ್ಧ

ಕಂಪಿಲರಾಯನು ಬೇಚೆಯ ದಣ್ಣಯಾಕ ಮತ್ತು ಸಿಂಗೆಯ ದಣ್ಣಾಯಕರೊಂದಿಗೆ ಯುದ್ಧಮಾಡಿದ ಅಸ್ಪಷ್ಟ ಮಾಹಿತಿ ಕ್ರಿ.ಶ. ೧೩೨೫ ರ ಕಡಸೂರು ಶಾಸನದಲ್ಲಿ[೨೦೪] ಬರುತ್ತದೆ.

ಸಿರುಗುಪ್ಪ ಯುದ್ಧ

ಸಿರುಗುಪ್ಪ ಯುದ್ಧ ಕಂಪಿಲರಾಯನಿಗೂ ವೀರಬಲ್ಲಾಳನಿಗೂ ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಒಂದು ಯುದ್ಧ ನಡೆದುದು ಕೂಡ್ಲಿಗಿ ಶಾಸನ[೨೦೫] ತಿಳಿಸುತ್ತದೆ. ವೀರಬಲ್ಲಾಳ ಸಿರುಗುಪ್ಪೆಯಲ್ಲಿ ಬೀಡುಬಿಟ್ಟಿದ್ದ. ಇಲ್ಲಿ ಘೋರವಾದ ಯುದ್ಧ ನಡೆಯುತ್ತದೆ.

ಈ ಮೇಲಿನ ಯುದ್ಧಗಳು ಹೊಯ್ಸಳ ವೀರಬಲ್ಲಾಳ ಮತ್ತು ಕಂಪಿಲರಾಯರು ಸತತವಾಗಿ ಯುದ್ಧಗಳಲ್ಲಿ ನಿರತರಾಗಿದ್ದುದನ್ನು ಸ್ಪಷ್ಟಪಡಿಸುತ್ತವೆ.

ಪ್ರತಾಪರುದ್ರ ಮತ್ತು ಕಂಪಿಲೇಶ್ವರರೊಂದಿಗಿನ ಯುದ್ಧ

ಒರಂಗಲ್ಲಿನ ಪ್ರತಾಪರುದ್ರ ದೇವನಿಗೂ, ಕಂಪಿಲರಾಯನಿಗೂ ಯುದ್ಧ ನಡೆದುದನ್ನು ನಂಜುಂಡ ಕವಿಯು ತನ್ನ ಕುಮಾರರಾಮ ಚರಿತದಲ್ಲಿ ಹೇಳಿದ್ದಾನೆ. ಇದು ಬೊಲ್ಲ ಎಂಬ ಕುದುರೆಗಾಗಿ ನಡೆದ ಹೋರಾಟವೆಂಬಂತೆ ಇದೇ ಸಾಂಗತ್ಯ ಕೃತಿಯಿಂದ ತಿಳಿಯುತ್ತದೆ. ಕುಮ್ಮಟದುರ್ಗದಲ್ಲಿ ಒಂದು ಕಲ್ಲಿನ ಮೇಲೆ ಅದರ ಚಿತ್ರವನ್ನು ಕೆತ್ತಿ ವೀರಗಲ್ಲಿನ ಸಮೀಪದಲ್ಲಿ ಇಡಲಾಗಿದೆ. ಇದು ಕುದುರೆ ಬೊಲ್ಲನ ವೀರಗಲ್ಲಾಗಿದೆ.

ದೆಹಲಿ ಸುಲ್ತಾನನೊಡನೆ ಯುದ್ಧ

ಕಂಪಿಲರಾಯನು ತನ್ನ ಪುತ್ರ ಕುಮಾರರಾಮನೊಂದಿಗೆ ಸೇರಿಕೊಂಡು ದೆಹಲಿಯ ಸುಲ್ತಾನನೊಂದಿಗೆ ಯುದ್ಧಗಳನ್ನು ಮಾಡಿದುದು ಶಾಸನ ಕಾವ್ಯಗಳು ತಿಳಿಸುತ್ತವೆ. ಡಾ॥ ಚನ್ನಬಸಪ್ಪ ಪಾಟೀಲರು ಕಂಪಿಲರಾಯನ ಎರಡು ಶಾಸನಗಳನ್ನು 'ಕುಮ್ಮಟ'ದಲ್ಲಿ ಶೋಧಿಸಿದ್ದಾರೆ. ಕಂಪಿಲರಾಯನು ಸುಲ್ತಾನನ ಸೇನಾನಾಯಕನಾದ ನೇಮಿನೊಂದಿಗೆ ಯುದ್ಧ ನಡೆಸಿದುದನ್ನು ತಿಳಿಸುತ್ತದೆ. ದೆಹಲಿ ಸುಲ್ತಾನನು ಕಂಪಿಲ ರಾಯನ ಮೇಲೆ ಯುದ್ಧಕ್ಕೆ ಬರಲು ಎರಡು ಕಾರಣ. ೧) ಬಹದ್ದೂರ್‌ನ ಪ್ರಸಂಗ, ೨) ಸುಲ್ತಾನನ ಪುತ್ರಿಯ ಪ್ರೇಮಪ್ರಸಂಗ. ಕೊನೆಯ ನಿರ್ಣಾಯಕವಾದ ಯುದ್ಧವು ಕುಮ್ಮಟದಲ್ಲಿಯೇ ನಡೆಯಿತೆಂದು ಕಾವ್ಯ, ಜನಪದ ಕಥೆಗಳು, ಕೈಫಿಯತ್ತುಗಳು ನಿರೂಪಿಸುತ್ತವೆ. ಈ ಯುದ್ಧದಲ್ಲಿ ಕುಮಾರರಾಮನು ವೀರಾವೇಶದಿಂದ ಹೋರಾಡುತ್ತಾನೆ. ಕೊನೆಗೆ ಸುಲ್ತಾನನ ಕಡೆಯವರು ಕುಮಾರರಾಮನನ್ನು ಸೋಲಿಸಿ ತಲೆ ಕಡಿಯುತ್ತಾರೆ.

ಮಾತಂಗಿ ಪ್ರಸಂಗ

ಸುಲ್ತಾನನು ಸೈನ್ಯದ ನೇತೃತ್ವ ವಹಿಸಿ ನಿರ್ಣಾಯಕವಾದ ಯುದ್ಧ ಮಾಡಿ ಕುಮಾರರಾಮನನ್ನು ಸೋಲಿಸಿದವಳು 'ಮಾತಂಗಿ' ಎಂಬ ಸ್ತ್ರೀ ಎಂದು ಕಾವ್ಯ, ಕೈಫಿತ್ತುಗಳು ಹೇಳುತ್ತವೆ. 'ಕೈಫಿಯತ್ತು ಭಟ್ಟರಹಳ್ಳಿ ತಾಲೂಕು ಬಳ್ಳಾರಿ'ಯಲ್ಲಿ ಈ ಬಗ್ಗೆ ವಿವರವಾಗಿ ಬರುತ್ತದೆ. ಮಾತಂಗಿಯ ನೇತೃತ್ವದಲ್ಲಿ ಬಂದ ಸುಲ್ತಾನರ ಸೈನ್ಯವು ಕುಮಾರರಾಮನನ್ನು ಕೊಂದು ಯಶಸಾಧಿಸಿ ಕಮ್ಮಟದುರ್ಗವನ್ನು ವಶಪಡಿಸಿಕೊಂಡಿದುದು ಸ್ಪಷ್ಟವಾಗುತ್ತದೆ.

ಇತರ ಶಾಸನ ಕಾವ್ಯಗಳಲ್ಲಿ ಕಂಪಿಲರಾಯ ಮತ್ತು ಕುಮಾರರಾಮ

ನಾಡಿನ ಜನರ ಸಂಸ್ಕೃತಿ ರಕ್ಷಣೆಗಾಗಿ ಸ್ವಾಭಿಮಾನದಿಂದ ಹೋರಾಡಿ ತನ್ನ ಪ್ರಾಣವನ್ನೇ ಕಳೆದುಕೊಂಡ ಕಂಪಿಲರಾಯನ ಮಗ ಕುಮಾರರಾಮನಿಗಾಗಿ ಜನತೆ ಮರುಗಿದುದು ಶಾಸನ ಮತ್ತು ಕಾವ್ಯಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೪೩೨ ರ ಕೊಕ್ಕೋಡು ಶಾಸನದಲ್ಲಿ[೨೦೬] ಪುಟಗಡೆ ಎಂಬುವವನು ಸತ್ತಳಿಗೆ ನಾಡಿನ ಕೊಳವಳ್ಳಿಯಲ್ಲಿ ನಡೆದ ಯುದ್ಧದಲ್ಲಿ ಹೋರಾಡಿ ಮಡಿಯುತ್ತಾನೆ. ಅವನನ್ನು ವರ್ಣಿಸುವಾಗ ಕುಮಾರರಾಮನಾಥನಿಗೆ ನೆಟ್ಟಹಾಗೆ ಬಾಣಗಳು ನೆಟ್ಟಿದ್ದವೆಂದು ಶಾಸನದಲ್ಲಿ ಹೇಳಲಾಗಿದೆ.

ಕುಮಾರರಾಮನ ದೇವಾಲಯಗಳು

ವೀರನು ಮರಣಿಸಿದರೆ ಆತನನ್ನು ಕುರಿತು ಕಥೆ, ಹಾಡು ಕಟ್ಟಿ ಹೇಳುವುದು ಸಾಮಾನ್ಯ. ಕೆಲವು ವೀರರು ಇದನ್ನು ಮೀರಿ ದೈವತ್ವ ಪಡೆದುಕೊಳ್ಳುತ್ತಾರೆ. ಅಂಥವರಲ್ಲಿ ಕುಮಾರರಾಮನೂ ಒಬ್ಬ.

ಕುಮಾರರಾಮನು ಮರಣಿಸಿದ ಸಂದರ್ಭದಲ್ಲಿ ಈತನ ಆರಾಧನೆಗಾಗಿ ಕುಮಾರರಾಮನ ದೇವಾಲಯ ನಿರ್ಮಿಸಿ ಆತನ ತಲೆಯ ಪ್ರತಿರೂಪವನ್ನು, ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಪೂಜಿಸುವ ಪದ್ಧತಿ ಬೆಳೆದುಬಂದಿದೆ. ಈ ತರನಾದ ಕುಮಾರರಾಮನ ದೇವಾಲಯಗಳು ಕರ್ನಾಟಕದ ವಿವಿಧೆಡೆ ಇರುವುದು ತಿಳಿದುಬರುತ್ತದೆ.

ರಾಮಾಪುರದ ಕುಮಾರರಾಮ ದೇವಾಲಯ

ಬಳ್ಳಾರಿಯಿಂದ ಸುಮಾರು ೯೮ ಕಿ.ಮೀ. ದೂರದಲ್ಲಿರುವ ರಾಮಾಪುರದಲ್ಲಿ ಕುಮಾರರಾಮನ ದೇವಾಲಯವಿದೆ. ಈ ದೇವಾಲಯ ನಿರ್ಮಾಣವಾದ ಬಗೆಯನ್ನು ದರೋಜಿ ಗ್ರಾಮದ ಕೈಫಿಯತ್ತುನಲ್ಲಿ ಹೇಳಲಾಗಿದೆ[೨೦೭]. ಸಂಡೂರಿನಲ್ಲಿರುವ ರಾಮಸ್ವಾಮಿ ದೇವಾಲಯ ಕುಮಾರರಾಮನ ದೇವಾಲಯವೇ ಆಗಿದೆ.

ಈ ರೀತಿಯಾಗಿ ಬಲ್ಲಕುಂದೆ ನಾಡಿನ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದಾಗ ಈ ನಾಡು ಶಿಲಾಯುಗದ ಕಾಲದಿಂದ ಪುರಾತತ್ವದ ನೆಲೆವೀಡಾಗಿದ್ದು ಕರ್ನಾಟಕದ ಇತಿಹಾಸದ ಪ್ರತಿಯೊಂದು ಸ್ತರಗಳಿಗೆ ತನ್ನ ಇರುವಿಕೆಯನ್ನು ದೃಢಪಡಿಸಿದೆಯೆಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಡಾ. ಪಪ್ಪು ಆರ್.ಎಸ್; ಪ್ರಾಚೀನತಮ ಮಾನವ ಸಂಸ್ಕೃತಿಗಳು ವಿಕಸನ ಹಂತಗಳು, ಕರ್ನಾಟಕ ಚರಿತ್ರೆ ಸಂ. ೧, ಪು. ೯೫; ೧೯೯೭.

೨. ಅದೇ

೩. ಅದೇ

೪. ಇವೆರಡು ಬಳ್ಳಾರಿಯ ಈಶಾನ್ಯದಿಕ್ಕಿಗಿದ್ದು ಬಳ್ಳಾರಿಗೆ ಸಮೀಪದಲ್ಲಿದೆ.

೫. ಇವುಗಳಲ್ಲಿ ಹೊಸಪೇಟೆ ತಾಲೂಕಿನ ಕಮಲಾಪುರ, ಆನೆಗೊಂದಿ, ಗಂಗಾವತಿ ತಾಲೂಕಿನ ಹಿರೇಬೆಣಕಲ್, ಬಳ್ಳಾರಿ ತಾಲೂಕಿನ ಕಪ್ಪಗಲ್ಲು, ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ, ನಿಟ್ಟೂರು, ಕೂಡ್ಲಗಿ ತಾಲೂಕಿನ ಜುನ್ಜೋಜನಹಳ್ಳಿ ಪ್ರಮುಖವಾಗಿವೆ.

೬. ಸಂಕಾಲಿಯಾ ಎಚ್.ಡಿ; ಮಿಸೋಲಿಥಿಕ್ ಅಂಡ್ ಪ್ರೀಮಿಸೋಲಿಥಿಕ್ ಕಲ್ಚರ್ಸ್ ಇನ್ ಸಂಗನಕಲ್. ಪು. ೧೬; ೧೯೭೯.

೭. ಅನ್ಸಾರಿ ಜಡ್.ಎ., ಪೆಬಲ್ ಟೂಲ್ಸ್ ಫ್ರಂ ನಿಟ್ಟೂರ್ಸ್, ಇಂಡಿಯನ್ ಆಂಟಿಕ್ಷೆ ಸಂ.೪. ಪು. ೧-೭.

೭a. ಎಚ್.ತಿಪ್ಪೇಸ್ವಾಮಿ; ಕೂಡ್ಲಿಗಿ ತಾಲೂಕಿನ ಪ್ರಾಗೈತಿಹಾಸಿಕ ನೆಲೆಗಳು, ಇತಿಹಾಸ ದರ್ಶನ, ಸಂ. ೧೪, ಪು. ೧-೩; ೧೯೯೮.

೮. ಶೇಷಾದ್ರಿ, ಎಂ; ದಿ ಸ್ಟೋನ್ ಯೂಸಿಂಗ್ ಕಲ್ಚರ್ಸ್ ಆಫ್ ಪ್ರೀಹಿಸ್ಟಾರಿಕ್ ಅಂಡ್ ಪ್ರೋಟೋಹಿಸ್ಟಾರಿಕ್, ಮೈಸೂರು.

೯. ನಾಗರಾಜರಾವ್ ಎಂ.ಎಸ್., ಪ್ರೋಟೋಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರಾ ವ್ಯಾಲಿ ಪು.೧೪-೧೫.

೧೦. ನೋಡಿ; ಸಂಕಾಲಿಯ, ಪೂರ್ವೋಕ್ತ.

೧೧. ಎಚ್. ತಿಪ್ಪೇಸ್ವಾಮಿ, ಇತಿಹಾಸದರ್ಶನ, ಸಂ. ೧೪, ಪು. ೧೪-೧೭

೧೨. SII IX(i) ೨೪೯, ೧೧೪೭ ಡಿಸೆಂಬರ್ ೨೫, ಕವಿತಾ I ಬಳ್ಳಾ ೩, ಕೋಳೂರು, ಬಳ್ಳಾರಿ (ತಾ).

೧೩. ಸಿಂಗಿರಾಜ; ಬಸವರಾಜ ಚಾರಿತ್ರ (ಸಿಂಗಿರಾಜ ಪುರಾಣ), ಮೈಸೂರು; ಮೈಸೂರು ವಿಶ್ವವಿದ್ಯಾಲಯ, ೧೯೭೦ ಪು.೪೩. ಪ.೧೧.

೧೪. EC II (New) ಚಿಕ್ಕಬೆಟ್ಟ ೩೪, ಕ್ರಿ.ಶ. ೭ನೆಯ ಶತಮಾನ ಶ್ರವಣಬೆಳಗೊಳ

೧೫. SINGH (N5) : Mastya Puranam. Delhi: Nag. 1983, Part II Chapter 273, P.1175-1177.

೧೬. ಹುಲ್ಲೂರು (ಶ್ರೀನಿವಾಸ ಜೋಯಿಸ); ಐತಿಹಾಸಿಕ ಲೇಖನಗಳು ಸಂ. ಲಕ್ಷ್ಮಣ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ, ಚಿತ್ರದುರ್ಗ: ಹು.ಶ್ರೀ.ಜೋ.ಗ್ರಂಥ ಪ್ರಕಟಣ ಸಮಿತಿ, ೧೯೭೬.

೧೭. SII IX (i) ೩೪೯, ೧೧೮೧ ಡಿಸೆಂಬರ್ ೨೫, ಕುರುವತ್ತಿ, ಹಡಗಲಿ (ತಾ).

೧೮. ಹುಲ್ಲೂರು (ಶ್ರೀನಿವಾಸ ಜೋಯಿಸ); ಐತಿಹಾಸಿಕ ಲೇಖನಗಳು ಸಂ. ಲಕ್ಷ್ಮಣ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ ಚಿತ್ರದುರ್ಗ: ಹು.ಶ್ರೀ.ಜೋ.ಗ್ರಂಥ ಪ್ರಕಟಣ ಸಮಿತಿ, ೧೯೭೬ ಪು. ೨೮೮-೨೯೦.

೧೯. SII IX (i) ೧೧೭, ೧೦೫೫ ಅಕ್ಟೋಬರ್ ೨೭ ಕೋಗಳಿ, ಹಗರಿಬೊಮ್ಮನಹಳ್ಳಿ (ತಾ).

೨೦. Ibid ೧೫೩, ೧೦೮೩ ಜನವರಿ ೨೦, ಅಂಬಳಿ, ಹಗರಿಬೊಮ್ಮನಹಳ್ಳಿ (ತಾ).

೨೧. SII IX (i) ೪೫, ಪೆದ್ದವಡಗೂರು, ಗುತ್ತಿ (ತಾ), ಅನಂತಪುರ (ಜಿ).

೨೨. Ibid ೫೩, ಕುರುಗೋಡು, ಬಳ್ಳಾರಿ (ತಾ).

೨೩. ಹುಲ್ಲೂರು (ಶ್ರೀನಿವಾಸ ಜೋಯಿಸ); ಐತಿಹಾಸಿಕ ಲೇಖನಗಳು ಸಂ. ಲಕ್ಷ್ಮಣ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ ಚಿತ್ರದುರ್ಗ: ಹು.ಶ್ರೀ.ಜೋ.ಗ್ರಂಥ ಪ್ರಕಟಣ ಸಮಿತಿ, ೧೯೭೬ ಪು. ೧೭೧-೧೭೨.

೨೪. SII IX (i) ೫೪, ರಾಯದುರ್ಗ, ಕಲ್ಯಾಣದುರ್ಗ (ತಾ)

೨೫. Ibid ೫೫, ೮೯೩-೯೪, ಮಂಚಾಳ, ಆದೋನಿ (ತಾ)

೨೬. SII IX (i) ೩೭೬, ೧೨೦೬ ಮಾರ್ಚ್ ೧೧ ಸಂಡೂರು.

'ವಿಭವಾಮರೇಂದ್ರನೂರ್ಜಿತ ಶುಭತುಂಗಂ ಜಿತವಿರೋಧಿ ಯಾದವ
ವಂಶಜ ಪ್ರಭವಂ ಭೂಭುವನೈಕ ಪ್ರಭು ರಟ್ಟಿರ ಮೇರು ಕೃಷ್ಣರಾಜಂ
ನೆಗಳ್ದ॥..... ಕೃಷ್ಣಭೂಪಾಲಕನತುಳಬಳ ಗಣ್ಡ ಮಾರ್ತ್ತಣ್ಡದೇವಂ ॥
ಆತಂ ವಿಶೇಷಭಕ್ತಿ ಸಮೇತಾತ್ಮಂ ಷಣ್ಮುಖಂಗೆ ನೈವೇದ್ಯಾರ್ತ್ಥಂ
ಪ್ರೀತತಟಾಕ ನಾಮಕ್ಯಾತ ಗ್ರಾಮಮನೂನಗುಣ ನಿಧಿಯಿತ್ತಂ ॥

೨೭. Ibid ೫೭, ೯೨೨ ಸೆಪ್ಟೆಂಬರ್ ೯ ಕಡಬಗೆರೆ, ಹರಪನಹಳ್ಳಿ (ತಾ).

೨೮. Ibid ೫೯, ಬಾಗಳಿ, ಹರಪನಹಳ್ಳಿ (ತಾ).

೨೯. Ibid ೬೦, ೯೩೧ ಫೆಬ್ರವರಿ ೨೫, ದೊಡ್ಡಿಮಾಕಾಳ, ಆದೋನಿ(ತಾ).

೩೦. Ibid ೬೧, ೯೩೧-೩೨, ಶಿರಸ್ತಹಳ್ಳಿ (ತಾ).

೩೧. Ibid ೬೪, ೯೪೪-೪೫, ಬಾಗಳಿ, ಹರಪನಹಳ್ಳಿ (ತಾ).

೩೨. SII IX (i) ೬೫, ೯೪೭ ಜುಲೈ ೨೫, ಕುಡುತಿನಿ, ಬಳ್ಳಾರಿ (ತಾ).

೩೩. SII IX (i) ೬೬, ೯೫೬ ಡಿಸೆಂಬರ್ ೨೩, ಬಾಗಳಿ, ಹರಪನಹಳ್ಳಿ (ತಾ).

೩೪. Ibid ೭೦, ೯೭೧ ಫೆಬ್ರವರಿ ೨೩, ಕುಡುತಿನಿ, ಬಳ್ಳಾರಿ (ತಾ).

೩೫. Ibid ೭೧, ೯೭೨ ಆಗಸ್ಟ್, ಬಾಗಳಿ, ಹರಪನಹಳ್ಳಿ (ತಾ).

೩೬. SII IX (i) ೭೩, ೯೭೬ ಫೆಬ್ರವರಿ ೧೮, ಕುಡುತಿನಿ, ಬಳ್ಳಾರಿ (ತಾ).

೩೭. Ibid ೭೪, ೯೮೧ ಎಪ್ರಿಲ್ ೨೨ ಕಂಚುಗಾರ ಬೆಳಗಲ್ಲು.

೩೮. Ibid ೭೫, ೯೮೭ ಎಪ್ರಿಲ್ ೩, ಬಾಗಳಿ, ಹರಪನಹಳ್ಳಿ (ತಾ).

೩೯. Ibid ೭೬, ೯೯೧ ಜನೇವರಿ ೧೨, ಬಾಗಳಿ, ಹರಪನಹಳ್ಳಿ (ತಾ).

೪೦. Ibid ೭೭, ೯೯೨, ಡಿಸೆಂಬರ್ ೨೩, ಕೋಗಳಿ, ಹಗರಿಬೊಮ್ಮನಹಳ್ಳಿ (ತಾ).

೪೧. SII IX (i) ೭೯, ೧೦೧೪ ಗೋನಕಾಳು, ಹೊಸಪೇಟೆ (ತಾ).

೪೨. SII IX (i) ೮೦, ೧೦೧೮, ಬಾಗಳಿ, ಹರಪನಹಳ್ಳಿ (ತಾ).

೪೩. Ibid ೮೨, ೧೦೨೧-೨೨, ಹಿರೇಮೇಗಳಗೇರಿ, ಹರಪನಹಳ್ಳಿ (ತಾ).

೪೪. Ibid ೮೩, ೧೦೨೫ ನವೆಂಬರ್ ೩ ಕತ್ತೆಬೆನ್ನೂರು, ಹಡಗಲಿ (ತಾ).

೪೫. Ibid ೮೫, ೧೦೩೨, ತೆಲಗಿ, ಹರಪನಹಳ್ಳಿ (ತಾ).

೪೬. Ibid ೯೧, ೧೦೩೬ ಡಿಸೆಂಬರ್ ೨೪, ಓರುವಾಯಿ, ಬಳ್ಳಾರಿ (ತಾ).

೪೭. Ibid ೯೨, ೧೦೩೬ ಡಿಸೆಂಬರ್ ೨೪, ಓರುವಾಯಿ, ಬಳ್ಳಾರಿ (ತಾ).

೪೮. SII IX (i) ೯೩, ೧೦೩೬ ಡಿಸೆಂಬರ್ ೨೪, ಒರುವಾಯಿ, ಬಳ್ಳಾರಿ (ತಾ).

೪೯. Ibid ೧೧೮, ೧೦೫೭ ಎಪ್ರಿಲ್ ೨೧, ಹಿರೇಹಡಗಲಿ, ಹಡಗಲಿ (ತಾ).

೫೦. ಕ.ವಿ.ಶಾ.ಸಂ. I ಹರಪನಹಳ್ಳಿ ೮೭, ೧೦೬೩, ಹೂವಿನ ಹಡಗಲಿ (ತಾ).

೫೧. SII IX (i) ೧೧೮, ೧೦೫೭ ಎಪ್ರಿಲ್ ೨೧ ಹಿರೇಹಡಗಲಿ, ಹೂವಿನಹಡಗಲಿ (ತಾ).

೫೨. Ibid ೧೨೮, ೧೦೬೫ ಗುಡಿಹಳ್ಳಿ, ಹರಪನಹಳ್ಳಿ (ತಾ).

೫೩. Ibid ೧೨೭, ೧೦೬೪ ಡಿಸೆಂಬರ್ ೨೬ ಮೋರಿಗೆರೆ, ಹಡಗಲಿ (ತಾ).

೫೪. Ibid ೧೨೯, ೧೦೬೬ ಸೆಪ್ಟೆಂಬರ್ ಅಂದರಕನಹಾಳು ಕೂಡ್ಲಿಗಿ (ತಾ).

೫೫. ಕ.ವಿ.ಶಾ.ಸಂ. I ಹರಪನಹಳ್ಳಿ ೮೭, ೧೦೬೩, ಹೂವಿನ ಹಡಗಲಿ (ತಾ).

೫೬. SII XX ೯೩, ಮಲಘಾಣ, ಸಿಂಧಗಿ (ತಾ), ಬಿಜಾಪುರ (ಜಿ).

೫೭. SII XI (ii) ೧೧೦೨ ಎಪ್ರಿಲ್ ೬ ಗದಗ, ಧಾರವಾಡ (ಜಿ).

೫೮. I.A.I.V ೨, ೧೦೭೫-೭೬ ಬಳ್ಳಿಗಾವಿ, ಶಿಕಾರಿಪುರ (ತಾ), ಶಿವಮೊಗ್ಗ (ಜಿ).

೫೯. SII IX (i) ೧೨೬, ೧೦೬೪ ಎಪ್ರಿಲ್ ೪ ಉಚ್ಚಂಗಿದುರ್ಗ, ಹರಪನಹಳ್ಳಿ (ತಾ).

೬೦. ಕ.ವಿ.ಶಾ.ಸಂ. I ಹಡಗಲಿ ೮೬, ೧೦೬೨ ನವೆಂಬರ್ ೧೯, ಹೂವಿನ ಹಡಗಲಿ (ತಾ).

೬೧. SII IX (i) ೧೨೭, ೧೦೬೪ ಡಿಸೆಂಬರ್ ೨೬ ಮೋರಿಗೆರೆ, ಹಡಗಲಿ (ತಾ).

೬೨. SII IX (i) ೧೨೮, ೧೦೬೫ ಡಿಸೆಂಬರ್ ೨೪, ಗುಡಿಹಳ್ಳಿ, ಹರಪನಹಳ್ಳಿ (ತಾ).

೬೩. EC VIII ಶಿಕಾರಿಪುರ ೧೩೬, ೧೦೬೮, ಆಗಸ್ಟ್ ೧೫, ಬಳ್ಳಗಾವಿ, ಶಿಕಾರಿಪುರ (ತಾ), ಶಿವಮೊಗ್ಗ (ಜಿ).

೬೪. SII IX (i) ೧೩೩, ೧೦೬೮, ಆಗಸ್ಟ್ ೧೫, ಚಿನ್ನತುಂಬಳಮ್.

೬೫. SII IX (i) ೧೧೮, ೧೦೫೭ ಎಪ್ರಿಲ್ ೨೧, ಹಿರೇಹಡಗಲಿ, ಹೂವಿನ ಹಡಗಲಿ (ತಾ).

೬೬. Ibid ೧೩೫, ೧೦೭೧ ಫೆಬ್ರವರಿ ೨೫, ಹೂವಿನ ಹಡಗಲಿ (ತಾ).

೬೭. SII IX (i) ೧೫೮, ೧೦೮೩ ಜನವರಿ ೨೦, ಹೂವಿನ ಹಡಗಲಿ (ತಾ).

೬೮. Ibid ೧೬೩, ೧೦೯೩ ಸೆಪ್ಟೆಂಬರ್ ೨೩, ತೋಳಗುಂದಿ, ಹಡಗಲಿ (ತಾ).

೬೯. ARIE ೧೦೫ / ೧೯೮೫-೮೬, ೧೦೬೩, ಸಾಲಗುಂದೆ, ಸಿಂಧನೂರು (ತಾ), ರಾಯಚೂರು (ಜಿ) (ಶಾಸನ ಪಠ್ಯಕ್ಕೆ ನೋಡಿ : ಹಿರೇಮಠ (ಚನ್ನಬಸವಯ್ಯ): ಕುರುಗೋಡು ಸಿಂಧರು; ಒಂದು ಅಧ್ಯಯನ, ಕೊಪ್ಪಳ: ಸಂಗಣ್ಣನವರು ಆಗಡಿ ಸಂಸ್ಕೃತಿ ಪ್ರತಿಷ್ಠಾನ, ೧೯೯೫, ಪು. ೩೩೭.

೭೦. SII IX (i) ೧೩೯, ಸಿರುಗುಪ್ಪ.

೭೧. ARIF ೨೨/೭೭-೭೮, ೧೧೧೨ ಡಿಸೆಂಬರ್ ೨೫. ಹಚ್ಚೊಳ್ಳಿ ಸಿರುಗುಪ್ಪ (ತಾ) (ಶಾಸನ ಪಠ್ಯಕ್ಕೆ ನೋಡಿ: ಹಿರೇಮಠ (ಚನ್ನಬಸವಯ್ಯ): ಕುರುಗೋಡು ಸಿಂಧರು; ಒಂದು ಅಧ್ಯಯನ, ಕೊಪ್ಪಳ: ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ, ೧೯೯೫. ಪು. ೩೨೮.

೭೨. SII IX (i) ೧೭೫, ೧೧೦೭ ಡಿಸೆಂಬರ್ ೩೧. ಚಿನ್ನತುಂಬಳಂ.

೭೩. E. I. ೩೮, ನಂ. ೧೯, ೧೦೭೭ ಮಾರ್ಚ್ ೧೯, ರಾಯಭಾಗ, ಬೆಳಗಾವಿ (ತಾ).

೭೪. SII IX (i) ೨೨೩, ೧೧೨೭ ಜುಲೈ ೧೦, ರಾಗಿ ಮಸಲವಾಡ, ಹರಪನಹಳ್ಳಿ (ತಾ).

೭೫. Ibid ೨೩೫, ೧೧೪೧ ಆಗಸ್ಟ್ ೯, ಸಿಂದಿಗೆರೆ, ಬಳ್ಳಾರಿ (ತಾ).

೭೬. Ibid ೨೫೧, ೧೧೪೯ ಎಪ್ರಿಲ್ ೯, ಬೆಣ್ಣಿಹಳ್ಳಿ, ಹರಪನಹಳ್ಳಿ (ತಾ).

೭೭. Ibid ೨೫೨, ೧೧೪೮ ಎಪ್ರಿಲ್ ೨೦, ಕುಡುತಿನಿ, ಬಳ್ಳಾರಿ (ತಾ).

೭೮. Ibid ೨೬೪, ೧೧೩೪ ಜನವರಿ ೧೫, ಹಳ್ಯಂ, ಕೂಡ್ಲಿಗಿ (ತಾ).

೭೯. Ibid ೨೭೭, ೧೧೮೪ ನವೆಂಬರ್ ೫, ಮಲ್ಲಾಪುರಂ, ಆದೋನಿ(ತಾ).

೮೦. Ibid ೨೭೮, ೧೧೮೫ ಫೆಬ್ರವರಿ ೨೪, ಪಟಿಕಿವಾರಂ, ಮಡಕಶಿರ(ತಾ).

೮೧. SII IX (i) ೨೯೩, ೧೧೬೨ ನೀಲಗುಂದ, ಹರಪನಹಳ್ಳಿ (ತಾ).

೮೨. Ibid ೨೯೫, ೧೧೭೨ ಜನವರಿ ೨ ಬಾಪುರಂ, ಆದೋನಿ(ತಾ).

೮೩. Ibid ೨೯೬, ೧೧೭೬ ಜನವರಿ ೧೩, ಕುರುಗೋಡು, ಬಳ್ಳಾರಿ (ತಾ).

೮೪. Ibid ೨೯೭, ೧೧೭೭ ಜೂನ್ ೨೬, ಕುರುಗೋಡು, ಬಳ್ಳಾರಿ (ತಾ).

೮೫. SII IX (i) ೩೧೯, ೧೧೯೩ ನವೆಂಬರ್ ೧೦, ಬಾಗಳಿ, ಹರಪನಹಳ್ಳಿ (ತಾ).

೮೬. Ibid ೩೨೦, ೧೧೯೪ ಮಾರ್ಚ್ ೨೫, ಕುರುವತ್ತಿ, ಹಡಗಲಿ (ತಾ).

೮೭. Ibid ೩೨೬, ೧೨೦೬ ಮಾರ್ಚ್ ೧೧, ಕುಮಾರಸ್ವಾಮಿ ದೇವಲಯ, ಸಂಡೂರು(ತಾ).

೮೮. Ibid ೩೩೦, ೧೨೧೨ ಜನವರಿ ೮, ಹಿರೇಹಡಗಲಿ, ಹಡಗಲಿ (ತಾ).

೮೯. SII IX (i) ೩೪೦, ೧೨೨೪ ಫೆಬ್ರವರಿ ೧, ನೀಲಗುಂದ, ಹರಪನಹಳ್ಳಿ (ತಾ).

೯೦. SII IX (i) ೩೬೮, ೧೨೫೦, ಜನವರಿ ೪ ಬಾಗಳಿ, ಹರಪನಹಳ್ಳಿ (ತಾ).

೯೧. Ibid ೩೭೧, ೧೨೫೮-೫೯, ಏಣಗಿ, ಹಡಗಲಿ (ತಾ).

೯೨. Ibid ೩೭೪, ೧೨೬೫ ಜುಲೈ ೧೩, ಚಿಮ್ಮನಹಳ್ಳಿ, ಹಗರಿ ಬೊಮ್ಮನಹಳ್ಳಿ (ತಾ).

೯೩. Ibid ೩೭೫, ೧೨೬೮ ನವೆಂಬರ್ ೬, ಉಜ್ಜನಿ, ಕೂಡ್ಲಿಗಿ (ತಾ).

೯೪. SII IX (i) ೩೭೭, ೧೨೭೮ ಮೇ, ೨೪ ಬಸರಕೋಡ್, ಆದೋನಿ(ತಾ).

೯೫. Ibid ೩೭೮, ೧೨೭೯, ಕುಂಚೂರು, ಹರಪನಹಳ್ಳಿ (ತಾ).

೯೬. Ibid ೩೮೦, ೧೨೮೨, ಎಪ್ರಿಲ್ ೨೩, ಯಲುವಾಗಲು, ಹರಪನಹಳ್ಳಿ (ತಾ).

೯೭. SII IX (i) ಕ್ರಿ.ಶ. ೯೨೯ ಫೆಬ್ರವರಿ ೫ ಧರ್ಮಪುರಿ, ಧರ್ಮಪುರಿ (ತಾ).

೯೮. SII IX (i) ೧೭, ಕಂಬದೂರು, ಕಲ್ಯಾಣದುರ್ಗ (ತಾ), ಅನಂತಪುರ(ಜಿ).

೯೯. SII IX (i) ೧೮, ಕ್ರಿ.ಶ. ೮೮೩-೮೪, ಕಂಬದೂರು, ಕಲ್ಯಾಣದುರ್ಗ (ತಾ)

೧೦೦. SII IX (i) ೨೧, ಮನೆಪಲ್ಲಿ, ಹಿಂದುಪುರ (ತಾ), ಅನಂತಪುರ(ಜಿ).

೧೦೧. Ibid ೨೪, ಗುಣಿಮೊರುಬಾಗಲ ಮಡಕಶಿರ (ತಾ), ಅನಂತಪುರ(ಜಿ).

೧೦೨. Ibid ೨೩, ೯೨೯ ಫೆಬ್ರವರಿ, ಧರ್ಮಪುರಿ, ಧರ್ಮಪುರಿ (ತಾ), ಸೇಲಂ(ಜಿ).

೧೦೩. SII IX (i) ೨೮, ೯೫೯-೬೦ ಮಧುಡಿ, ಮಡಕಶಿರ (ತಾ).

೧೦೪. SII IX (i) ೨೯, ೯೬೩ ಜೂನ್ ೨೮, ಹೊಸರಲಿಹಳ್ಳಿ, ಮಡಕಶಿರ (ತಾ).

೧೦೫. Ibid ೨೫, ೯೪೮-೪೯ ಮಡಕಶಿರ (ತಾ), ಅನಂತಪುರ(ಜಿ).

೧೦೬. Ibid ೩೦, ೯೬೫ ಮಾರ್ಚ್ ೫, ಕಂಬದೂರು, ಕಲ್ಯಾಣದುರ್ಗ (ತಾ).

೧೦೭. ಕ.ವಿ.ಶಾ.ಸಂ. I ಬಳ್ಳಾರಿ ೪' ಸು ೧೦ ನೆಯ ಶತಮಾನದ ಉತ್ತರಾರ್ಧ, ಕೋಳೂರು, ಬಳ್ಳಾರಿ (ತಾ).

೧೦೮. SII IX (i) ೪೦, ಕ್ರಿ.ಶ. ೯೭೭, ಕುಲುಗೋಡು, ರಾಯದುರ್ಗ (ತಾ).

೧೦೯. SII IX (i) ೭೪, ಕ್ರಿ.ಶ. ೯೮೧, ಎಪ್ರಿಲ್ ೨೨, ಕಂಜಗಾರ ಬೆಳಗಲ್ಲು, ಆಲೂರು (ತಾ), ಅನಂತಪುರ(ಜಿ).

೧೧೦. SII IX (i) ೩೯, ಕರ್ಶನಪಲ್ಲಿ, ಪುಂಗನೂರು (ತಾ), ಚಿತ್ತೂರು (ಜಿ).

೧೧೧. Ibid ೨೯೧, ೧೦-೧೧ ನೆಯ ಶತಮಾನ, ಹಿರೇಹಡಗಲಿ, ಹಡಗಲಿ (ತಾ).

೧೧೨. SII IX (i) ೪೧, ನೆಲಪಲ್ಲಿ, ಪುಂಗನೂರು ಜಮೀನ್ದಾರಿ, ಚಿತ್ತೂರು (ಜಿ).

೧೧೩. Ibid ೭೯, ೧೦೧೪ ಗೋನಹಾಳ, ಹಂಪದೇವನಹಳ್ಳಿ, ಹೊಸಪೇಟೆ (ತಾ).

೧೧೪. ARIE ನಂ. ೮೬/೭೭-೭೮, ಕ್ರಿಶ. ೧೦೨೦ ಅಕ್ಟೋಬರ್ ೨೦, ತೆಕ್ಕಲಕೋಟೆ, ಸಿರುಗುಪ್ಪ (ತಾ), ಬಳ್ಳಾರಿ (ಜಿ).

೧೧೫. ARIE ನಂ. ೧೧೭/೭೭-೭೮, ಕ್ರಿಶ. ೧೦೨೦ ಅಕ್ಟೋಬರ್ ೨೦, ತೆಕ್ಕಲಕೋಟೆ, ಸಿರುಗುಪ್ಪ (ತಾ), ಬಳ್ಳಾರಿ (ಜಿ).

೧೧೬. SII IX (i) ೪೨, ೧೦೨೮, ಫೆಬ್ರವರಿ ೨೯, ಕಲ್ಕಂಭ, ಬಳ್ಳಾರಿ (ತಾ).

೧೧೭. Ibid ೮೦, ೧೦೧೮ ಡಿಸೆಂಬರ್ ೨೩, ಬಾಗಳಿ, ಹರಪನಹಳ್ಳಿ (ತಾ).

೧೧೮. SII IX (i) ೮೫, ಕ್ರಿಶ. ೧೦೩೨ ತೆಲಗಿ, ಹರಪನಹಳ್ಳಿ (ತಾ).

೧೧೯. Ibid ೯೧, ೧೦೩೬ ಡಿಸೆಂಬರ್ ೨೪, ಒರುವಾಯಿ, ಬಳ್ಳಾರಿ (ತಾ).

೧೨೦. Ibid ೯೨, ೧೦೩೬ ಡಿಸೆಂಬರ್ ೨೪, ಒರುವಾಯಿ, ಬಳ್ಳಾರಿ (ತಾ).

೧೨೧. SII IX (i) ೧೦೧, ೧೦೪೫ ಅಕ್ಟೋಬರ್ ೨೮, ಮೋರಿಗೆರೆ, ಹಗರಿ ಬೊಮ್ಮನಹಳ್ಳಿ (ತಾ).

೧೨೨. Ibid ೯೪, ೧೦೩೯ ಏಪ್ರಿಲ್ ೨೩ ಕಂಚಿಕೆರೆ, ಹರಪನಹಳ್ಳಿ (ತಾ).

೧೨೩. Ibid ೪೩, ೧೦೩೦ ಜೂನ್ ೨೮, ಸೋಮಲಾಪುರಂ, ಬಳ್ಳಾರಿ (ತಾ).

೧೨೪. Ibid ೯೩, ೧೦೩೮ ಜೂನ್ ೨೫, ಸೋಗಿ, ಹಡಗಲಿ (ತಾ).

೧೨೫. Ibid ೯೬, ತುಂಬಿಗೆರೆ, ಹಡಗಲಿ (ತಾ).

೧೨೬. SII IX (i) ೯೮, ೧೦೪೪ ಏಪ್ರಿಲ್ ೫ ಸಿರಿವಾರಂ, ಬಳ್ಳಾರಿ (ತಾ).

೧೨೭. Ibid

೧೨೮. Ibid ೪೪, ೧೦೪೯ ಅಕ್ಟೋಬರ್ ೫ ಕಲ್ಕಂಭ, ಬಳ್ಳಾರಿ (ತಾ).

೧೨೯. Ibid ೧೦೦, ೧೦೪೫ ಆಗಸ್ಟ್ ೫ ಹಾವಿನಹಾಳ ವೀರಾಪುರ, ಬಳ್ಳಾರಿ (ತಾ).

೧೩೦. SII IX (i) ೧೦೬ ಕೋಗಳಿ, ಹಗರಿ ಬೊಮ್ಮನಹಳ್ಳಿ (ತಾ).

೧೩೧. Ibid ೧೦೯, ೧೦೫೨-೫೩ ತಳಕಲ್ಲು, ಹಡಗಲಿ (ತಾ).

೧೩೨. Ibid ೧೧೦, ೧೦೫೨ ಡಿಸೆಂಬರ್ ೨೪, ಪುಣಬಘಟ್ಟ, ಹರಪನಹಳ್ಳಿ (ತಾ).

೧೩೩. SII IX (i) ೧೩೨, ೧೦೬೮ ಮೇ ೧೯, ಸಿಂದಿಗೆರೆ, ಬಳ್ಳಾರಿ (ತಾ).

೧೩೪. SII IX (i) ೧೧೧, ೧೦೫೨ ಡಿಸೆಂಬರ್ ೧೦, ಚಿನ್ನತುಂಬಳಂ, ಆದೋನಿ(ತಾ).

೧೩೫. Ibid ೧೧೪, ೧೦೩೪ ಡಿಸೆಂಬರ್ ೧೫, ಕಮ್ಮರಚೋಡು, ಆಲೂರು(ತಾ).

೧೩೬. Ibid ೧೧೬, ೧೦೩೫ ಪೆಬ್ರವರಿ ೪, ಬದನೆಹಾಳು, ಆದೋನಿ(ತಾ).

೧೩೭. SII XX ೪೯, ೧೦೭೬, ಕಲಕೇರಿ, ಹಾನಗಲ್ಲ (ತಾ), ಹಾವೇರಿ (ಜಿ).

೧೩೮. SII IX (i) ೧೪೧, ೧೦೭೯ ಜನವರಿ ೩೦, ಅಂಬಳಿ, ಕೂಡ್ಲಿಗಿ. (ತಾ).

೧೩೯. SII IX (i) ೧೪೫, ೧೦೭೯ ಡಿಸೆಂಬರ್ ೨೬, ಬಾಗಳಿ, ಹರಪನಹಳ್ಳಿ (ತಾ).

೧೪೦. Ibid ೧೫೩, ೧೦೮೩ ಜನವರಿ ೨೦, ಅಂಬಳಿ, ಕೂಡ್ಲಿಗಿ (ತಾ).

೧೪೧. Ibid ೧೫೪, ೧೦೮೫-೮೬, ರಾಗಿಮಸಲವಾಡ, ಹರಪನಹಳ್ಳಿ (ತಾ).

೧೪೨. Ibid ೧೫೮, ೧೦೯೦ ನವೆಂಬರ್ ೨೪, ಹೂವಿನ ಹಡಗಲಿ (ತಾ).

೧೪೩. Ibid ೧೬೭, ೧೧೦೨ ಡಿಸೆಂಬರ್ ೧೭, ಸಿರುಗುಪ್ಪ (ತಾ).

೧೪೪. Ibid ೧೭೦, ೧೧೦೬ ಜನವರಿ ೭, ಅಂಬಳಿ, ಹಗರಿಬೊಮ್ಮನಹಳ್ಳಿ (ತಾ).

೧೪೫. Ibid ೧೯೮, ೧೧೧೯ ಮೇ ೧೧ ಬಾಗಳಿ, ಹರಪನಹಳ್ಳಿ (ತಾ).

೧೪೬. ECXI ಚಿತ್ರದುರ್ಗ ೧, ೧೧೨೩ ದಾವಣಗೆರೆ, ದಾವಣಗೆರೆ (ತಾ).

೧೪೭. SII IX (i) ೧೭೦, ೧೧೦೬ ಜನವರಿ ೭, ಅಂಬಳಿ, ಹಗರಿಬೊಮ್ಮನಹಳ್ಳಿ (ತಾ).

೧೪೮. Ibid ೧೮೬, ೧೧೧೧ ಡಿಸೆಂಬರ್ ೧೨ ಗುಡಿಹಳ್ಳಿ, ಹರಪನಹಳ್ಳಿ (ತಾ).

೧೪೯. Ibid ೨೧೬, ಕುಂಚೂರು, ಹರಪನಹಳ್ಳಿ (ತಾ).

೧೫೦. SII IX (i) ೧೧೮, ೧೦೫೭ ಎಪ್ರಿಲ್ ೨೭ ಮತ್ತು ೧೧೧೭ ಮಾರ್ಚ್ ೨೫ ಹಿರೇಹಡಗಲಿ, ಹಡಗಲಿ (ತಾ).

೧೫೧. Ibid ೧೭೮, ೧೧೦೮ ಡಿಸೆಂಬರ್ ೨೮, ಬಾಗಳಿ, ಹರಪನಹಳ್ಳಿ (ತಾ).

೧೫೨. Ibid ೧೮೨, ೧೧೧೦ ಡಿಸೆಂಬರ್ ೩, ಬಾಗಳಿ, ಹರಪನಹಳ್ಳಿ (ತಾ).

೧೫೩. Ibid ೨೦೬, ೧೧೨೨ ಡಿಸೆಂಬರ್ ೨೫, ರಾಮಘಟ್ಟ ಹರಪನಹಳ್ಳಿ (ತಾ).

೧೫೪. 10 E.C. XI ದಾವಣಗೆರೆ ೨, ೧೧೨೪ ದಾವಣಗೆರೆ, ದಾವಣಗೆರೆ (ತಾ).

೧೫೫. SII IX (i) ೨೦೬, ೧೧೨೨ ಡಿಸೆಂಬರ್ ೨೫, ರಾಮಘಟ್ಟ ಹರಪನಹಳ್ಳಿ (ತಾ).

೧೫೬. Ibid ೨೩೮, ೧೧೪೨ ಮೇ ೨೭. ಹೊಳಲು, ಹಡಗಲಿ (ತಾ).

೧೫೭. SI IX (i) ೨೪೨, ೧೧೪೩ ಡಿಸೆಂಬರ್ ೨೩ ಅಂಬಳಿ, ಕೂಡ್ಲಿಗಿ (ತಾ).

೧೫೮. Ibid ೨೬೭, ೧೧೬೦, ಬಾಗಳಿ, ಹರಪನಹಳ್ಳಿ (ತಾ).

೧೫೯. SII IX (i) ೨೯೩, ೧೧೬೨, ನೀಲಗುಂದ, ಹರಪನಹಳ್ಳಿ (ತಾ).

೧೬೦. SII IX (i) ೨೪೭, ೧೧೪೭ ಅಕ್ಟೋಬರ್ ೨೮, ಶ್ರೀನಿವಾಸಪುರಂ, ಹರಪನಹಳ್ಳಿ (ತಾ).

೧೬೧. Ibid ಹಡಗಲಿ ೫೪, ಹಿರೇಹಡಗಲಿ, ಹಡಗಲಿ (ತಾ).

೧೬೨. SII IX (i) ಹಡಗಲಿ ೫೪, ಹಿರೇಹಡಗಲಿ, ಹಡಗಲಿ (ತಾ).

೧೬೩. Ibid ೨೭೬, ೧೧೮೩ ಜೂನ್ ೭, ಮನ್ನೇರ ಮಸಲವಾಡ, ಹರಪನಹಳ್ಳಿ (ತಾ).

೧೬೪. Ibid ೨೯೨, ಬಾಗಳಿ, ಹರಪನಹಳ್ಳಿ (ತಾ).

೧೬೫. ಕ.ವಿ.ಶಾ.ಸಂ. I ಹಡಗಲಿ ೩೯, ೧೧೭೮ ನವೆಂಬರ್ ೧೯, ಹೊಳಲು, ಹಡಗಲಿ (ತಾ).

೧೬೬. ಕ.ವಿ.ಶಾ.ಸಂ. I ಕೂಡ್ಲಿಗಿ ೬, ೧೨ ನೆಯ ಶತಮಾನ, ಉಜ್ಜಿನಿ, ಕೂಡ್ಲಿಗಿ (ತಾ).

೧೬೭. ಎಂ.ಜಿ.ನಾಗಯ್ಯ ೨೦೦೨ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಪು.೯೭

೧೬೮. SII IX (i) ೬೫, ೯೪೭ ಜುಲೈ ೨೫, ಕುಡುತಿನಿ, ಬಳ್ಳಾರಿ (ತಾ).

೧೬೯. Ibid ೫೫, ೮೯೩-೯೪ ಮಂಬಾಳ, ಆದೋನಿ (ತಾ) ಅನಂಪುರ (ಜಿ).

೧೭೦. SII IX (i) ೯೩೧, ಫೆಬ್ರವರಿ ೨೫ ದೊಡ್ಡ ಮಾರಾಳ, ಆದೋನಿ(ತಾ)

೧೭೧. ARIF ನಂ. ೮೪/೭೭-೭೮, ಕ್ರಿ.ಶ. ೯೬೭ ಬಲ್ಲಕುಂದೆ, ಸಿರುಗುಪ್ಪ (ತಾ). (ಶಾಸನ ಪಠ್ಯಕ್ಕೆ ನೋಡಿ: ಹಿರೇಮಠ (ಚನ್ನಬಸವಯ್ಯ): ಕುರುಗೋಡು ಸಿಂಧರು; ಒಂದು ಅಧ್ಯಯನ, ಕೊಪ್ಪಳ: ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ, ೧೯೯೫. ಪು. ೩೨೪.

೧೭೨. SII IX (i) ೧೦೦, ೧೦೪೫ ಅಗಸ್ಟ್ ೫, ಹಾವಿನಹಾಳು, ವೀರಾಪುರ, ಬಳ್ಳಾರಿ (ತಾ).

೧೭೩. Ibid ೧೫೯, ೧೦೯೧-೯೨ ಸಿರುಗುಪ್ಪ, ಸಿರುಗುಪ್ಪ (ತಾ).

೧೭೪. SII IX (i) ೧೫೯, ೧೦೯೧-೯೨ ಸಿರುಗುಪ್ಪ, ಸಿರುಗುಪ್ಪ (ತಾ).

೧೭೫. Ibid ೧೬೭, ೧೧೦೨ ಡಿಸೆಂಬರ್ ೧೭, ಸಿರುಗುಪ್ಪ, ಸಿರುಗುಪ್ಪ (ತಾ).

೧೭೬. ARIE ನಂ. ೯೩-೧೦೦/೭೭-೭೮, ಕ್ರಿಶ. ೧೧೨೧ ಕೊಂಚಿಗೆರೆ, ಸಿರುಗುಪ್ಪ (ತಾ).

೧೭೭. ಜೆ.ಎಂ. ನಾಗಯ್ಯ ೨೦೦೨ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ. ಪು.೧೦೦.

೧೭೮. ARIE ನಂ. ೧೦೧/೭೭-೭೮, ಕ್ರಿ.ಶ. ೧೧೪೪ ಕೊಂಚಿಗೆರೆ, ಸಿರುಗುಪ್ಪ (ತಾ).

೧೭೯. SII IX (i) ೨೨೫, ೧೧೩೧ ಜನವರಿ ೨೫, ಬೈಲೂರು, ಬಳ್ಳಾರಿ (ತಾ).

೧೮೦. Ibid

೧೮೧. ಜೆ.ಎಂ. ನಾಗಯ್ಯ ೨೦೦೨ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ. ಪು.೧೦೧.

೧೮೨. ARIE ನಂ. ೧೦೧/೭೭-೭೮, ಕ್ರಿ.ಶ. ೧೧೪೪ ಕೊಂಚಿಗೆರೆ, ಸಿರುಗುಪ್ಪ (ತಾ).

೧೮೩. SII IX (i) ೨೩೫, ೧೧೪೧ ಆಗಸ್ಟ್ ೯, ಸಿಂದಿಗೆರೆ, ಬಳ್ಳಾರಿ (ತಾ).

೧೮೪. SII IX (i) ೨೪೯, ೧೧೪೭ ಡಿಸೆಂಬರ್ ೨೫, ಕೋಳೂರು, ಬಳ್ಳಾರಿ (ತಾ).

೧೮೫. SII IX (i) ೨೯೬, ೧೧೭೬ ಜನವರಿ ೧೩, ಕುರುಗೋಡು, ಬಳ್ಳಾರಿ (ತಾ).

೧೮೬. Ibid (i) ೧೧೭೩-೧೧೮೨, ಕುರುಗೋಡು, ಬಳ್ಳಾರಿ (ತಾ).

೧೮೭. SII IX (i) ೨೫೩, ೧೧೪೯ ಡಿಸೆಂಬರ್ ೨೬, ಒರುವಾಯಿ, ಬಳ್ಳಾರಿ (ತಾ).

೧೮೮. Ibid ೩೨೨, ೧೧೯೫ ಫೆಬ್ರವರಿ ೨೫, ಒರುವಾಯಿ, ಬಳ್ಳಾರಿ (ತಾ).

೧೮೯. SII IX (i) ೨೫೩, ೧೧೪೯ ಡಿಸೆಂಬರ್ ೨೩, ಒರುವಾಯಿ, ಬಳ್ಳಾರಿ (ತಾ).

೧೯೦. SII IX (i) ೨೯೬, ೧೧೭೬ ಜನವರಿ ೧೩, ಕುರುಗೋಡು, ಬಳ್ಳಾರಿ (ತಾ).

೧೯೧. Ibid ೩೨೨, ೧೧೯೫ ಫೆಬ್ರವರಿ ೨೬, ಒರುವಾಯಿ, ಬಳ್ಳಾರಿ (ತಾ).

೧೯೨. ಶಾಂತಲಿಂಗದೇಶಿಕ: ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರತ್ನಾಕರ ಸಂ. ಡಾ.ಆರ್.ಸಿ.ಹಿರೇಮಠ ಮತ್ತು ಡಾ. ಎಂ.ಎಸ್.ಸುಂಕಾಪುರ, ಧಾರವಾಡ: ಕ.ಪ.ವಿ. ೧೯೬೪ ಪು. ೨೪೮-೪೯.

೧೯೩. E.I. XIV 19 (i) ೧೧೭೩-೧೧೮೨, ಕುರುಗೋಡು, ಬಳ್ಳಾರಿ (ತಾ).

೧೯೪. ಕಲಬುರ್ಗಿ (ಎಂ.ಎಂ.) ಶಾಸನಗಳಲ್ಲಿ ಶಿವಶರಣರು.
ಗದಗ: ವೀರಶೈವ ಅಧ್ಯಯನ ಸಂಸ್ಥೆ, ೧೯೭೮. ಪು. ೧೦೭-೧೦೮.

೧೯೫. SII IV ೨೬೦, ಕ್ರಿ.ಶ. ೧೧೯೯, ಹಂಪಿ, ಹೊಸಪೇಟೆ (ತಾ).

೧೯೬. Ibid

೧೯೭. SII IX (i) ೩೨೬, ೧೨೦೬ ಮಾರ್ಚ್ ೧೧, ಕುಮಾರಸ್ವಾಮಿ ದೇವಾಲಯ, ಸಂಡೂರು.

೧೯೮. SII IX (i) ೨೯೬, ೧೧೭೬ ಜನವರಿ ೧೩, ಕುರುಗೋಡು, ಬಳ್ಳಾರಿ (ತಾ).

೧೯೯. SII IX (i) ೪೬ ಪೆದ್ದವಡಗೂರು, ಗುತ್ತಿ (ತಾ) ಅನಂತಪುರ (ಜಿ).

೨೦೦. ಕ.ವಿ.ಶಾ.ಸಂ. I ಹರಪನಹಳ್ಳಿ ೧೪೬ ಬಾಗಳಿ, ಹರಪನಹಳ್ಳಿ (ತಾ).

೨೦೧. Ibid ೮೪, ೧೨ನೇ ಶತಮಾನ, ನೀಲಗುಂದ, ಹರಪನಹಳ್ಳಿ (ತಾ).

೨೦೨. SII XX ೨೨೨, ೧೨೮೭ ಅಕ್ಟೋಬರ್ ೧೬ ಲಕ್ಷ್ಮೇಶ್ವರ, ಶಿರಹಟ್ಟಿ (ತಾ), ಧಾರವಾಡ (ಜಿ).

೨೦೩. E.C. XI ಹೊಳಲ್ಕೆರೆ ೧೦೬ ಕ್ರಿ.ಶ. ೧೩೦೩ ಜೇನುಕಲ್ಲು, ಹೊಳಲ್ಕೆರೆ (ತಾ), ಚಿತ್ರದುರ್ಗ (ಜಿ).

೨೦೪. E.C. XII ತಿಪಟೂರು ೨೪ ಕ್ರಿ.ಶ. ೧೩೨೫ ಜೇನುಕಲ್ಲು, ಹೊಳಲ್ಕೆರೆ (ತಾ), ಚಿತ್ರದುರ್ಗ (ಜಿ).

೨೦೫. M.A.R. ೧೯೨೩ ನಂ. ೧೨೧, ಕೂಡ್ಲಿ ಹೊಳಲೂರು (ಹೋ), ಶಿವಮೊಗ್ಗ (ಜಿ).

೨೦೬. E.C. VIII ತೀರ್ಥಹಳ್ಳಿ ೨೩, ೧೪೩೨ ಕೊಕ್ಕೋಡು, ತೀರ್ಥಹಳ್ಳಿ (ತಾ), ಶಿವಮೊಗ್ಗ (ಜಿ).

೨೦೭. ಕಲಬುರ್ಗಿ (ಎಂ.ಎಂ.) ಕರ್ನಾಟಕದ ಕೈಫಿಯತ್ತುಗಳು, ಹಂಪಿ; ಕನ್ನಡ ವಿ.ವಿ. ೧೯೯೪, ಪು.೫೦೮.

ಅಧ್ಯಾಯ ೪

ಆಡಳಿತ ವ್ಯವಸ್ಥೆ

ಅಧ್ಯಾಯ ೪

ಬಲ್ಲಕುಂದೆ ನಾಡಿನ ಆಡಳಿತ ವ್ಯವಸ್ಥೆ

ಬಲ್ಲಕುಂದೆ ನಾಡಿನ ವಿಸ್ತಾರವಾದ ಪ್ರದೇಶಗಳನ್ನು ಉತ್ತಮ ಆಡಳಿತ ನಡೆಸಲು ಅನುಕೂಲವಾಗುವಂತೆ ಅನೇಕ ಪ್ರಾಂತ್ಯಗಳನ್ನಾಗಿ, ಆ ಪ್ರಾಂತ್ಯಗಳನ್ನು ಉಪ ವಿಭಾಗಳನ್ನಾಗಿ ವಿಂಗಡಿಸಿ ಅವುಗಳನ್ನು ನಾಡು, ವಿಷಯ, ದೇಶ, ಹಳ್ಳಿಗಳೆಂದು ಕರೆಯುತ್ತಿದ್ದರು. ಹಳ್ಳಿಯನ್ನು ಆಡಳಿತದ ಕನಿಷ್ಠ ಘಟಕವೆಂದು ಶಾಸನಗಳಲ್ಲಿ ಕರೆದಿರುವುದು ತಿಳಿಯುತ್ತದೆ. ಹೀಗೆ ವಿಂಗಡಿಸಿಕೊಂಡ ಪ್ರದೇಶಗಳಿಗೆ ಅಥವಾ ನಾಡುಗಳಿಗೆ ರಾಜವಂಶದ ವ್ಯಕ್ತಿಗಳನ್ನು ನೇಮಿಸುವ ಪದ್ಧತಿ ಇತ್ತು. ಈ ನಾಡು ಕೆಲವು ಅರಸರ ಕಾಲದಲ್ಲಿ ಕಾಣಿಸಿಕೊಂಡು ಉಚ್ಛ್ರಾಯಸ್ಥಿತಿಗೆ ಏರಿ ಮತ್ತೆ ಕೆಲವು ಅರಸರ ಆಳ್ವಿಕೆಯಲ್ಲಿ ಪ್ರಾಮುಖ್ಯತೆಯನ್ನು ಕಳೆದುಕೊಂಡಿರಬಹುದು. ಆದರೆ ಅದರ ವಂಶದ ಹೆಸರಲ್ಲಿ ನಾಡನ್ನು ಅವರ ಆಳ್ವಿಕೆಯ ಉದ್ದಕ್ಕೂ ಉಳಿಸಿಕೊಂಡು ಬಂದಿದ್ದಾರೆ.

ಬೇರೆ ಬೇರೆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಆಡಳಿತ ವಿಭಾಗಗಳನ್ನು ಗಮನಿಸಿದಾಗ ಒಂದು ರಾಜವಂಶದ ಪತನಾನಂತರ ಅವರ ಆಳ್ವಿಕೆಯ ಪ್ರದೇಶಗಳನ್ನು ಆಕ್ರಮಿಸಿಕೊಂಡು ತಮ್ಮ ಸಾಧನೆಯ ದಿಗ್ವಿಜಯದ ದ್ಯೋತಕವಾಗಿ ಆ ರಾಜವಂಶಗಳ ಮೂಲ ಹೆಸರಿನಲ್ಲಿ ಕರೆಯುತ್ತಿದ್ದ ಅಂಶ ತಿಳಿದು ಬರುತ್ತದೆ. ಹೀಗೆ ಇವರು ಬಲ್ಲಕುಂದೆ ನಾಡನ್ನು ಬಳಸಿಕೊಂಡಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

ಬಲ್ಲಕುಂದೆ ನಾಡಿನ ಕೆಲವು ಆಡಳಿತ ವಿಭಾಗಳನ್ನು ನಿಖರವಾಗಿ ಗುರುತಿಸುವುದಾಗಿಲ್ಲ. ಈ ನಾಡಿನ ಹೆಸರಿನ ಜೊತೆ ಸಂಖ್ಯೆಗಳೂ ಕಂಡು ಬರುತ್ತವೆ. ಸ್ಥಳಸೂಚಿಯ ಜೊತೆಯಲ್ಲಿ ಸಂಖ್ಯೆಗಳನ್ನು ಸೇರಿಸಿರುವ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚೆ ನಡೆಸಿದ್ದಾರೆ. ಈ ಸಂಖ್ಯೆಗಳು ಆ ನಾಡಿನ ಎಲ್ಲಾ ಹಳ್ಳಿಗಳ ಮೊತ್ತವೆಂದು ಕಂದಾಯದ ಒಟ್ಟು ಲೆಕ್ಕವೆಂದೂ, ಮಹಾಜನರ ಸಂಖ್ಯೆ ಎಂದೂ, ವಿಸ್ತೀರ್ಣವನ್ನು ಸೂಚಿಸುವ ಸಂಖ್ಯೆ ಎಂತಲೂ ವಾದವನ್ನು ಮಂಡಿಸಿದ್ದಾರೆ.

ಈ ಆಡಳಿತ ವಿಭಾಗಗಳಲ್ಲಿ ಕೆಲವನ್ನು ಅರಸರು, ರಾಣಿಯರು, ರಾಜಕುಮಾರರು ಆಳುತ್ತಿರುವುದನ್ನು ಕೆಲವು ಶಾಸನಗಳು ಉಲ್ಲೇಖಿಸಿದ್ದರೆ, ಇನ್ನೂ ಕೆಲವು ಶಾಸನಗಳು ನಾಡಿನ ವಿವಿಧ ಭಾಗಗಳ ಹೆಸರುಗಳು, ಯಾವುದಾದರೂ ದಾನ-ದತ್ತಿಗಳನ್ನು ನೀಡುವಾಗ ಅಥವಾ ಭೂದಾನದ ಮೇರೆಯನ್ನು ನಿರ್ದೇಶಿಸುವಾಗ ಉಲ್ಲೇಖಗೊಂಡಿದೆ.

ಆಡಳಿತ ವಿಭಾಗಗಳು

ದೊರವಡಿ ೭೦

ಬಲ್ಲಕುಂದೆ ಮುನ್ನೂರಿನ ಉಪ ವಿಭಾಗವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಕುರುಗೋಡು ನಾಡು ಪ್ರಾಮುಖ್ಯತೆ ಪಡೆದ ಈ ನಾಡು ಎಪ್ಪತ್ತು ಗ್ರಾಮಗಳನ್ನು ಒಳಗೊಂಡಿತ್ತು. ಇದರ ರಾಜಧಾನಿ 'ದೊರವಡಿ' ಅಥವಾ ಇಂದಿನ 'ದರೋಜಿ' ಗ್ರಾಮವಾಗಿತ್ತು. ಒರುವಾಯಿ ಶಾಸನದಲ್ಲಿ[೧] 'ದೊರವಡಿಯಪ್ಪತ್ತರ ಪ್ರಭುಗಾವುಂಡಗಳುಂ' ಎಂದು ದೊರವಡಿ ವಿಭಾಗದ ಪ್ರಾಚೀನ ಪ್ರಸ್ತಾಪ ಬರುತ್ತದೆ. ಸಂಡೂರು ಬೆಟ್ಟದ ಸಾಲಿನ ಪೂರ್ವ ಮತ್ತು ಉತ್ತರದ ಗ್ರಾಮಗಳು ದೊರವಡಿ ವಿಭಾಗಕ್ಕೆ ಸೇರಿದ್ದವು. ಈ ದೊರವಡಿ ನಾಡಿನಲ್ಲಿ ಪಂಪಾತೀರ್ಥ (ಹಂಪೆ) ಇದ್ದು, ಶಾಸನದಲ್ಲಿ[೨] ಈ ವಿಷಯ 'ಬಲ್ಲಕುಂದೆ ನಾಡೊಳ್ತಳೊಂದೊಳ್ಗೊಂಬೆನೆ ದೊರವದಿ ನಾಡಿಳೆಯೊಳ್ ರಂಜಿಪುದು ನೋಡೆ ನಾಡುಗಳರಸಂ ಆ ದೊರವಡಿ ನಾಡೊಳ್ಪಂಪಾತೀರ್ತ್ಥ ಮಿರ್ದ್ದುದೆನ್ತೆನೆ' ಎಂದು ನಿರೂಪಿತವಾಗಿ ಪಂಪಾತೀರ್ಥದ ವರ್ಣನೆ ಕೊಡಲಾಗಿದೆ. ಕುರುಗೋಡು ಸಿಂಧರ ಕಾಲದಲ್ಲಿ ಈ ಪಂಪಾತೀರ್ಥವನ್ನು ಕಾಪಾಡಲು ಸೈನ್ಯವನ್ನು ಇಟ್ಟಂತೆ ತಿಳಿಯುತ್ತದೆ. ಯಾದವ ವೀರರಾಮದೇವ ಆಳುವಾಗ ಆತನ ಮಹಾಮಂಡಳೇಶ್ವರ ಕನ್ನರದೇವನು ದೊರವಡಿ ೭೦ನ್ನು ಆಳುತ್ತಿದ್ದ ಮುಂಮಡಿ ಸಿಂಗೆಯನಾಯಕನ[೩] ಮೇಲೆ ಯುದ್ಧಕ್ಕೆ ಬರುತ್ತಾನೆ. ಈ ಯುದ್ಧ ದೊರವಡಿಯಲ್ಲಿ ನಡೆಯುತ್ತದೆ. ವಣದೇವರಸ ಎಂಬುವವನು ಹೋರಾಡಿ ಹಲವು ಆಳು ಕುದುರೆಗಳನ್ನು ಕೊಂದು ಸುರಲೋಕ ಪ್ರಾಪ್ತನಾಗುತ್ತಾನೆ. ಈ ವಿಭಾಗ ಮುಂಮಡಿ ಸಿಂಗೆಯ ನಾಯಕ, ಕಂಪಿಲರಾಯ ಕುಮಾರ ರಾಮ ಇವರ ಆಳ್ವಿಕೆಗೆ ಒಳಪಟ್ಟಿರುರುತ್ತವೆ

ಆಡಳಿತ ವಿಭಾಗಗಳು

ತೆಕ್ಕೆಕಲ್ಲು ೧೨:

ಬಲ್ಲಕುಂದೆ ೩೦೦ ವಿಭಾಗದ ಉಪವಿಭಾಗಗಳಲ್ಲಿ ಒಂದು ಈ ತೆಕ್ಕೆಕಲ್ಲು ಇದು ಇಂದಿನ ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆಯಾಗಿದೆ. ತೆಕ್ಕಲಕೋಟೆ ಸುತ್ತಲಿನ ೧೨ ಗ್ರಾಮಗಳು ಈ ವಿಭಾಗದಲ್ಲಿ ಅಂತರ್ಗತವಾಗಿದ್ದವು. ಸಿರುಗುಪ್ಪ[೪] ಶಾಸನದಲ್ಲಿ "ಬಲ್ಲಕುನ್ದೆ ಮೂನೂಱಱ ಬಳಿಯ ತೆಕ್ಕೆಕಲ್ಲು ಪನ್ನೆಱಡರ ಉಲ್ಲೇಖ ಬಂದಿದೆ. ಸಿರಿಗುಪ್ಪೆ ಈಗಿನ ತಾಲೂಕಾ ಕೇಂದ್ರ ಸಿರುಗುಪ್ಪವಾಗಿದೆ.

ನಲ್ವಿಡಿ ೧೨

೧೨ ಗ್ರಾಮಗಳ ಈ ವಿಭಾಗದ ಉಲ್ಲೇಖ ಒರುವಾಯಿ[೫] ಶಾಸನದಲ್ಲಿದೆ. 'ನಲ್ವಿಡಿ ೧೨ರ ಕಂಪಣ ಒರ್ವಾಯ' ಎಂದು ಶಾಸನದಲ್ಲಿ ಹೇಳಿರುವುದರಿಂದ ಒರ್ವಾಯ (ಒರುವಾಯಿ) ಗ್ರಾಮ ನಲ್ವಿಡಿ ೧೨ರಲ್ಲಿತ್ತು. ಇದು ಇಂದಿನ ನಲ್ಲುಡಿ ಆಗಿದೆ.

ಕುದಿಯ ಪರವಿ ೭೦ ಮತ್ತು ಕರಿವಿಡಿ ೩೦

ಸಿರುಗುಪ್ಪ ತಾಲೂಕಿನ ಮಲ್ಲಯ್ಯನ ಗುಡ್ಡ[೬] ಶಾಸನದಲ್ಲಿ ಈ ಎರಡು ವಿಭಾಗಗಳ ಪ್ರಸ್ತಾಪವಿದೆ. ನೊಳಂಬರ ಪಾರಂಪರಿಕ ಆಳ್ವಿಕೆಯ ನಾಡುಗಳ ಪಟ್ಟಿಯಲ್ಲಿ ಬರುವ ನಾಡುಗಳು ಇವು. ಜಗದೇಕಮಲ್ಲ ನೊಳಂಬಪಲ್ಲವ ಪೇರ್ಮಾಡಿ ಆಳುತ್ತಿದ್ದ ವಿಭಾಗಗಳ ಯಾದಿಯಲ್ಲಿ ಇವುಗಳ ಹೆಸರಿದೆ. ಕುದಿಯಪರವಿ ಪ್ರದೇಶವನ್ನು ಗುರುತಿಸಲು ಈಗ ಕಷ್ಟವಾದರೂ ಕರವಿಡಿ ಪ್ರದೇಶವು ಹುನಗುಂದ ತಾಲೂಕಿನ ಕರಡಿಯ ಸುತ್ತಮುತ್ತಲ ಪ್ರದೇಶವಾಗಿದೆ. ಇವು ಪಾರಂಪರಿಕವಾಗಿ ನೊಳಂಬ ಆಡಳಿತ ಪ್ರದೇಶಕ್ಕೆ ಒಳಪಟ್ಟಿದ್ದವು.

ಆರ್ಮಳೆ ೧೨

ಶಾಸನಗಳಲ್ಲಿ ಅಮ್ಮವಳ್ಳಿ[೭], ಅಮ್ಮಳೆ[೮], ಅರ್ಮಳೆ[೯] ಎಂದು ಕರೆದಿದೆ. ಇದು ನೆಲ್ಕುದುರೆ, ಸೊನ್ನ, ಪೊಳಲ್ಗುಂದ, ಸೂಗೂರು, ಮೋರಿಂಗರೆ ಮುಂತಾದ ಹನ್ನೆರಡು ಹಳ್ಳಿಗಳ ಕೇಂದ್ರಸ್ಥಾನವಾಗಿದ್ದಿತು. ಈ ನಾಡಿನ ಪ್ರಾಚೀನ ಉಲ್ಲೇಖ ಕ್ರಿಶ ೯೦೦ ರ ಒಂದನೆಯ ಮಹೇಂದ್ರನ ಕಾಲದ ಶಾಸನದಲ್ಲಿ ಉಲ್ಲೇಖವಾಗಿದ್ದು ಮುಂದೆ ಕ್ರಿ.ಶ. ೧೦೪೬ ರ ತ್ರೈಲೋಕಮಲ್ಲ ನನ್ನಿನೊಳಂಬನ ಶಾಸನದಲ್ಲಿ ಉಕ್ತವಾಗಿದೆ. ಅಲ್ಲಿಂದ ಮುಂದಿನ ಶಾಸನಗಳಲ್ಲಿ ಈ ನಾಡಿನ ಉಲ್ಲೇಖ ಕಾಣಬರುವುದಿಲ್ಲ. ಈಗಿನ ಹಗರಿಬೊಮ್ಮನಹಳ್ಳಿ ತಾಲೂಕಿನ ಅಂಬಳಿಯೇ ಹಿಂದಿನ ಆರ್ಮ್ಮಳೆ ಅಥವಾ ಅಮ್ಮವಳ್ಳಿ ಅಥವಾ ಅಂಬಳಿ ಆಗಿದೆ. ಇದು ಹಗರಿಯ ದಡದಲ್ಲಿದ್ದು, ಕೋಗಳಿಯ ಉತ್ತರಕ್ಕಿದ್ದು, ಕೋಗಳಿ ನಾಡಿನಲ್ಲಿ ಅಂತರ್ಗತವಾಗಿತ್ತು. ಪಲ್ಲವ ನೊಳಂಬರ ಒಂದನೇಯ ಮಹೇಂದ್ರನ ಕಾಲಕ್ಕಾಗಲೇ ಈ ಪ್ರದೇಶ ಆಧೀನದಲ್ಲಿತ್ತೆಂದು ತಿಳಿದುಬರುತ್ತದೆ. ಅಲ್ಲದೇ ಉದಯಾದಿತ್ಯನಿಗೆ ಪರೋಕ್ಷವಿನಯವಾಗಿ 'ಲೆಂಕಾಸಾಸಿರ್ವರು ಅಮ್ಮಳೆ' ಮುಂತಾದವುಗಳನ್ನು ಆಳುತ್ತಿದ್ದ ಉಲ್ಲೇಖವಿದ್ದು, ತೀಕಣ ದಂಡನಾಯಕನ ನಿಯೋಗ ರಾಜನನ್ನು ಅವನೋಡಿ ಅನುಮತಿ ಪಡೆದು ನೊಳಂಬೇಶ್ವರ ಮತ್ತು ಲೆಂಕೇಶ್ವರ ದೇವಾಲಯಗಳನ್ನು ಮಾಡಿಸಿ ದೇವರ ರಂಗ ಭೋಗಕ್ಕೆ ಪಾದಮೂಲ ಪರಿವಾರಕ್ಕೆ ಮಠದ ವಿದ್ಯಾದಾನಕ್ಕೆ ಬಿನ್ನಹವನ್ನು ಮಾಡಿ ಸವಂಟಿಯ ಪಾಳಂ ಪಡೆದು ಅದಕ್ಕೆ ಶಿವಪುರವೆಂದು ಹೆಸರನ್ನಿಟ್ಟಿರುವುದು ತಿಳಿಯುತ್ತದೆ[೧೦].

ಉಚ್ಚಂಗಿ ೩೦

ಉಚ್ಚಂಗಿಯು ಕದಂಬರ ಕಾಲದಲ್ಲಿ ಉಚ್ಚಶೃಂಗ ಎಂಬ ಹೆಸರನ್ನು ಪಡೆದಿತ್ತು. ಮುಂದೆ ಈ ಗ್ರಾಮವು ನೊಳಂಬವಾಡಿಯನ್ನು ಆಳಿದ ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗ ದೇವನ ಕಾಲದಲ್ಲಿ ನೊಳಂಬರಿಗೆ ಸೇರಿತ್ತು. ಇವನ ಕಾಲದಲ್ಲಿ ಉಚ್ಚಂಗಿ-೩೦ ನ್ನು ದಂಡನಾಯಕ ದಾಮಪಯ್ಯ ಎಂಬುವನು ಕ್ರಿ.ಶ. ೧೦೭೦ ರಲ್ಲಿ ಆಳುತ್ತಿದ್ದನು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ನೊಳಂಬವಾಡಿಯನ್ನು ಆಳುತ್ತಿದ್ದ ಪಾಂಡ್ಯರ ರಾಜಧಾನಿಯಾಗಿತ್ತು. ಉಚ್ಚಂಗಿಯ ಕೋಟೆಯಲ್ಲಿ

ಕಾಳಾಮುಖ ಪಂಥದ ಕಂಟೆಯ ವಕ್ಕಾಣಿದೇವನ ಶಿಷ್ಯನಾದ ಸೋಮೇಶ್ವರ ಪಂಡಿತನು ಸ್ಥಾನಪತಿಯಾಗಿದ್ದನು. ಈ ನಾಡು ಸ್ವಲ್ಪಕಾಲಾವಧಿಯಲ್ಲಿ ಮಾತ್ರ ನೊಳಂಬರ ವಶದಲ್ಲಿತ್ತು. ಉಚ್ಚಂಗಿ ದೇವಿಯ ಪಾಂಡ್ಯರ ಕಾಲಕ್ಕೆ ಪ್ರಸಿದ್ಧಳಾಗಿದ್ದಳು.

ಎಡದೊರೆ ೨೦೦೦

ಬಳ್ಳಾರಿ ಜಿಲ್ಲೆ, ಹರಪನಹಳ್ಳಿ ತಾಲೂಕು[೧೧] ಬಾಗಳಿ ಗ್ರಾಮದಲ್ಲಿ ದೊರೆತ ಕ್ರಿ.ಶ. ೧೦೧೮ ರ ಶಾಸನದಲ್ಲಿ ಎಡದೊರೆ-೨೦೦೦ ದ ಹೆಸರು ಉಲ್ಲೇಖವಾಗಿದೆ. ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯನ ಆಳ್ವಿಕೆಯಲ್ಲಿದ್ದ ಗಂಗವಾಡಿ-೯೬೦೦೦, ಕದಂಬಳಿಗೆ-೧೦೦೦, ಕೋಗಳಿ ೫೦೦, ಮಾಸವಾಡಿ ೧೪೦ ರೊಳಗಣ ಪಂಚಗ್ರಾಮಗಳು, ಬಲ್ಲಕುಂದೆ-೩೦೦ ಮತ್ತು ಎಡದೊರೆ-೨೦೦೦ ದೊಳಗಣ, ಕುದಿಹಾರ-೭೦ನ್ನು ಆಳುತಿದ್ದಂತೆ ಹೇಳಿದೆ. ಹೀಗಾಗಿ ಈ ನಾಡುಗಳ ಮಧ್ಯೆ ಈ ನಾಡಿನ ಉಲ್ಲೇಖ ಬೀರಿದೆ. ಎಡತೊರೆ ಪ್ರದೇಶವೆಂದರೆ, ರಾಯಚೂರು ಜಿಲ್ಲೆಯ ಹಿಂದಿನ ದೊ-ಅಬ್ ಪ್ರದೇಶ ಅಂದರೆ ಕೃಷ್ಣಾ-ತುಂಗಭದ್ರೆಯ ಮಧ್ಯದ ಪ್ರದೇಶ[೧೨].

ಕಣೇಕಲ್ಲು ೩೦೦

ಈಗಿನ ಆಂಧ್ರಪ್ರದೇಶದ ಅನಂತಪುರದ ಜಿಲ್ಲೆಯ ರಾಯದುರ್ಗ ತಾಲೂಕಿನ ಗ್ರಾಮವಾಗಿದ್ದು, ಹಗರಿಯ ಪೂರ್ವ ತಡಿಯಲ್ಲಿದೆ. ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾನಡಿಯ ಕ್ರಿ.ಶ. ೧೦೫೦ ರ ಶಾಸನದಲ್ಲಿ ಅವನ ಆಳ್ವಿಕೆಗೆ ಸೇರಿದ್ದಿತೆಂದು ಉಲ್ಲೇಖಿವಿದೆ. ಈಗಿನ ಕಣೇಕಲ್ಲು ಆಗಿನ ಕಣೆಯಕಲ್ಲು-೩೦೦ ರ ಕೇಂದ್ರಸ್ಥಳವಾಗಿತ್ತು[೧೩].

ಕರಿವಿಡಿ ೩೦

ಈ ಪ್ರದೇಶವು ಎಡದೊರೆ ನಾಡಿನ ಭಾಗವಾಗಿದ್ದು, ಕಂಪಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ನೊಳಂಬರ ವಶದಲ್ಲಿರುತ್ತದೆ. ಕ್ರಿ.ಶ ೧೦೧೭ ರ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯನ ಶಾಸನದಲ್ಲಿ ಈ ನಾಡು ನೊಳಂಬರ ಆಳ್ವಿಕೆಯಲ್ಲಿದ್ದಂತೆ ತಿಳಿಯುತ್ತದೆ.[೧೪] ನೊಳಂಬರ ಪಾರಂಪರಿಕ ಆಳ್ವಿಕೆಯ ಪ್ರದೇಶವಲ್ಲಿ ಇದೂ ಒಂದು. ಇದು ಕ್ರಿ.ಶ ೧೦೫೦ ರ ವರೆಗೆ ನೊಳಂಬರ ವಶದಲ್ಲಿದ್ದಂತೆ ತಿಳಿಯುತ್ತದೆ. ಇದರ ಮುಂದಿನ ಶಾಸನಗಳು ಈ ನಾಡಿನ ಬಗ್ಗೆ ಮೌನವನ್ನು ವಹಿಸಿದೆ. ಹುನುಗುಂದ ತಾಲೂಕಿನ ಕರಡಿಯೇ ಹಿಂದಿನ ಕರಿವಿಡಿ ಪ್ರದೇಶದ ಕೇಂದ್ರವಾಗಿತ್ತು.

ಕುದಿಯಪರವಿ ೭೦

ಕಂಪಲಿ ನೊಳಂಬರ ಬಹಳಷ್ಟು ಶಾಸನಗಳಲ್ಲಿ ಈ ನಾಡಿನ ಉಲ್ಲೇಖ ಬರುತ್ತದೆ. ಆದರೆ ಈ ನಾಡು ಎಲ್ಲಿತ್ತೆಂದು ಸ್ಪಷ್ಟವಾಗುತ್ತಿಲ್ಲ.

ಕೋಗಳಿ ೫೦೦

ಅಯ್ಯಪದೇವನ ಕಾಲದ ಶಾಸನದಲ್ಲಿ ಕೋಗಳಿ ೫೦೦ ರ ನಾಡಿನ ಉಲ್ಲೇಖವಿದೆ.[೧೫] ವಡ್ಡಾರಾಧನೆಯಲ್ಲಿ ಕೋಗಳಿಯ ಉಲ್ಲೇಖವಿದೆ. ಈ ಕೋಗಳಿಯ ಪೂರ್ವಕ್ಕೆ ಲೋಹಾದ್ರಿ ಇತ್ತೆಂದು ಹೇಳಿದೆ. ಕನ್ನಡದ ಪ್ರಾಚೀನ ಕಾವ್ಯ ವಡ್ಡಾರಾಧನೆಯ ಕಾಲಕ್ಕೆ ಇದು ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಮುಂದೆ ಕದಂಬರ ಅಂತ್ಯದ ನಂತರ ಈ ನಾಡು ನೊಳಂಬರ ವಶದಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ಹಡಗಲಿ ತಾಲೂಕಿನ ಕ್ರಿಶ. ಸು. ೧೧೦೦ ರ ಶಾಸನದಲ್ಲಿ ಈ ಕೋಗಳಿ ನಾಡಿನ ವರ್ಣನೆಯಿದ್ದು[೧೬], ಕೋಗಳಿಯನ್ನು ಮತ್ತು ಅಲ್ಲಿದ್ದ ಶಿವ ಮತ್ತು ವಿಷ್ಣು ದೇವಸ್ಥಾನದ ಬಗ್ಗೆ ಶಾಸನವು ಮುಕ್ತವಾಗಿ ಪ್ರಶಂಸಿಸಿದೆ[೧೭]. ನೊಳಂಬರ ನಂತರ ಕೋಗಳಿ, ಉಚ್ಚಂಗಿ ಪಾಂಡ್ಯರ ವಶವಾಗುತ್ತದೆ. ಇಂದಿನ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿಯೇ ಅಂದಿನ ಕೋಗಳಿ ೫೦೦ ರ ಮುಖ್ಯ ಕೇಂದ್ರವಾಗಿದ್ದಿತು.

ಕೋಳೂರು ೧೨

ಬಳ್ಳಾರಿ ತಾಲೂಕಿನ ಇಂದಿನ ಕೋಳೂರು ಗ್ರಾಮದ ಸುತ್ತಮುತ್ತಲ ಪ್ರದೇಶವೇ ಈ ಕೋಳೂರು ೧೨ರ ಪ್ರದೇಶವಾಗಿತ್ತು.[೧೮] ಈ ಕೋಳೂರಿನಲ್ಲಿ ನೊಳಂಬ ಮಂಗಸರಸನು ಬಳಾರೆ ೩೦ರ ವೊಲೆಯರಿಗೆ ಕೆಲವು ವಿನಾಯಿತಿಗನ್ನು ನೀಡಿದಂತೆ ಹೇಳಿದೆ. ಫಣಿವಂಶದ ದೇವಗಾವುಂಡನು ಈ ಗ್ರಾಮದಲ್ಲಿ ಕೆಲವು ದೇವಾಲಯಗಳನ್ನು ನಿರ್ಮಿಸಿದಂತೆ ಹೇಳಿದೆ.

ಬಲ್ಲಕುಂದೆ ೩೦೦

ನೊಳಂಬರ ರಾಜ್ಯ ಹೆಂಜೇರುನಿಂದ ಕಂಪಲಿಯ ಕಡೆಗೆ ಹೊಸ ಹೊಸ ನಾಡುಗಳು ಇವರ ಆಡಳಿತಕ್ಕೆ ಸೇರುತ್ತವೆ. ಅವುಗಳಲ್ಲಿ ಬಲ್ಲಕುಂದೆಯೂ ಒಂದಾಗಿತ್ತು. ಈ ಪ್ರದೇಶವು ಹಗರಿನದಿ ದಡದಲ್ಲಿದ್ದುದರಿಂದ ಸಂಪದ್ಭರಿವಾದ ಪ್ರಾಂತ್ಯವಾಗಿತ್ತು. ಬಲ್ಲಕುಂದೆಯು ಬೆಟ್ಟದ ಬುಡದಲ್ಲಿದ್ದು, ಕ್ರಿಶ.೧೦೦೮ ರಲ್ಲಿಯೇ ಪ್ರಮುಖ ಜೈನ ಕ್ಷೇತ್ರವಾಗಿತ್ತು. ನೊಳಂಬಾದಿ ರಾಜನ ನಿಯೋಗಿಯಾಗಿದ್ದ ಮಾಚಿಗಾರ್ಯನು ಬಲ್ಲಕುಂದೆಯಲ್ಲಿ ಬಸದಿಯನ್ನು ನಿರ್ಮಿಸಿ ಜಿನಬಿಂಬವನ್ನು ಪ್ರತಿಷ್ಠಾಪಿಸಿದಂತೆ ಶಾಸನವೊಂದು ತಿಳಿಸುತ್ತದೆ. ಕಂಪಲಿಯ ನೊಳಂಬರ ಅಂತ್ಯದವರೆಗೆ ಈ ಬಲ್ಲಕುಂದೆ ೩೦೦ ಅವರ ಪಾರಂಪರಿಕ ನಾಡುಗಳಲ್ಲಿ ಸೇರಿರುತ್ತದೆ. ಮುಂದೆ ಜಯಸಿಂಹನ ಕಾಲದಲ್ಲಿ ನಾಡುಗಳ ಪಟ್ಟಿಯಿಂದ ಇದು ಹೊರಗುಳಿಯುತ್ತದೆ. ಅಲ್ಲಿಂದಾಚೆಗೆ ನೊಳಂಬರ ಆಡಳಿತದಿಂದ ಈ ನಾಡು ತಪ್ಪಿ ಹೋಗುತ್ತದೆ. ಇಂದಿನ ತೆಕ್ಕಲಕೋಟೆ ಬಳಿಯ ಬಲ್ಕುಂದಿ ಈ ನಾಡಿನ ಕೇಂದ್ರ ಸ್ಥಳವಾಗಿತ್ತು[೨೧].

ಬಿಕ್ಕಿಗ ೭೦

ಈ ನಾಡು ಬಹುಶಃ ಕೋಗಳಿ ನಾಡಿಗೆ ಸೇರಿದ್ದ ಉಪವಿಭಾಗವಾಗಿತ್ತು. ಇದು ನೊಳಂಬರ ಕಾಲದಲ್ಲಿ ಒಂದು ಪ್ರಮುಖವಾದ ಕೇಂದ್ರವಾಗಿತ್ತು. ಅಗ್ರಹಾರ ಬಾಗಳಿಯು ಈ ನಾಡಿಗೆ ಸೇರಿತ್ತು. ಇಂದಿನ ಹರಪನಹಳ್ಳಿ ತಾಲೂಕಿನ ಬಿಕ್ಕಿಗನ ಮರಡಿ ಎಂಬ ಬೇಚಿರಾಕ್ ಗ್ರಾಮವು ಈ ನಾಡಿನ ಕೇಂದ್ರವಾಗಿತ್ತು.

ಬಳ್ಳಾರೆ ೩೦

ಬಳ್ಳಾರೆಯ ಸುತ್ತಮುತ್ತಲ ಪ್ರದೇಶವೇ ಬಳ್ಳಾರೆ ೩೦ ಎಂದು ಪ್ರಸಿದ್ಧವಾಗಿತ್ತು. ಮಂಗಪರಸನು ಬಳ್ಳಾರೆ ೩೦ರ ಪೊಲೆಯರಿಗೆ ದಾನ ನೀಡಿದ ಉಲ್ಲೇಖ ಬಂದಿದ್ದು ಇಂದಿನ ಬಳ್ಳಾರಿಯ ಸುತ್ತಮುತ್ತಲ ಪ್ರದೇಶವಾಗಿದೆ. ಕುರುಗೋಡು ಸಿಂಧರ ಕಾಲದಲ್ಲಿಯೂ ಈ ಬಳಾರೆ ೩೦ ಪ್ರಸಿದ್ಧವಾಗಿತ್ತು.

ಮಾಸೆವಾಡಿ ೧೪೦

ಈ ಪ್ರದೇಶದ ಉಲ್ಲೇಖ ಹರಪನಹಳ್ಳಿ ತಾಲೂಕಿನ ೨೧೦ ಮತ್ತು ೨೧೧ ನೇ ಶಾಸನಗಳಲ್ಲಿ[೨೨] ಉಲ್ಲೇಖವಾಗಿದ್ದು, ಕ್ರಿಶ ೯೨೨ ರಲ್ಲಿ ನೊಳಂಬರ ವಶದಲ್ಲಿದ್ದಂತೆ ತಿಳಿಯಬಹುದಾಗಿದೆ. ಮುಂದೆ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನ ಕಾಲದಲ್ಲಿ ನೊಳಂಬರಿಗೆ ಈ ನಾಡು ಸೇರಿದಂತೆ ಉಲ್ಲೇಖವಿದೆ. ಮಾಸೆವಾಡಿ-೧೪೦ ರೊಳಗೆ ಐದು ಗ್ರಾಮಗಳು ಮಾತ್ರ ಸೇರಿದ್ದವು. ಮಾಸೆವಾಡಿ ೧೪೦ ರೊಳಗೆ ಭತ್ತಗ್ರಾಮವಾದ ಪಂಚಗ್ರಾಮಗಳು ಸೇರಿತ್ತೆಂದು ಶಾಸನ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ[೨೩].

ಸಿಂಧವಾಡಿ ೧೦೦೦

ಸಿಂಧವಾಡಿ ೧೦೦೦ ದ ಉಲ್ಲೇಖವು ನೊಳಂಬರ ಶಾಸನದಲ್ಲಿ[೨೪] ಬಂದಿದೆ. ಇದರ ನಂತರದ ಉಲ್ಲೇಖಗಳು ನೊಳಂಬರ ಕ್ರಿ.ಶ. ೧೦೫೨. ೧೦೬೮ ಮುಂತಾದ[೨೫] ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ನಾಡು ಪಾರಂಪರಿಕವಾಗಿ ಸಿಂಧರ ನಾಡಾಗಿತ್ತು. ಇದು ಮುಂದೆ ಕುರುಗೋಡು ಸಿಂಧರ ವಶವಾಗುತ್ತದೆ. ಬಳ್ಳಾರಿ ತಾಲೂಕಿನ ಈಗಿನ ಸಿಂಧವಾಳವೇ ಈ ನಾಡಿನ ಕೇಂದ್ರ ಸ್ಥಾನವಾಗಿದ್ದಿರಬೇಕು.

ಈ ಮೇಲಿನ ನಾಡುಗಳಲ್ಲದೇ. ನಾಡುಗಳಷ್ಟೇ ಪ್ರಮುಖವಾದ ಅನೇಕ ಗ್ರಾಮಗಳು ಇವರ ಕಾಲದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದವು. ಈ ಗ್ರಾಮಗಳನ್ನು ರಾಜನ ಕಡೆಯವರು ಅಥವಾ ಅವನ ಪ್ರಮುಖ ಅಧಿಕಾರಿಗಳು ಆಳುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಇವು ಅಗ್ರಹಾರಗಳಾಗಿದ್ದಿರ ಬಹುದು. ಇಲ್ಲವೇ ಪ್ರಮುಖ ವಾಣಿಜ್ಯ ಕೇಂದ್ರಗಳಾಗಿದ್ದಿರಬಹುದು. ರಾಜಧಾನಿಗಳು ಯಾವ ನಾಡಿಗೂ ಯಾವ ಅಧಿಕಾರಿಗಳಿಗೂ ಒಳಪಡದೇ ನೇರ ರಾಜನ ಆಡಳಿತಕ್ಕೆ ಒಳಪಟ್ಟಿರಬೇಕು. ಹೀಗಾಗಿ ಅವುಗಳ

ಹೆಸರಿನ ನಾಡುಗಳು ದೊರೆಯುತ್ತಿಲ್ಲ. ಶಾಸನೋಕ್ತ ಊರು/ನಗರಗಳಲ್ಲಿ ಕೆಲವನ್ನು ಈ ಮುಂದೆ ಹೆಸರಿಸಲಾಗಿದೆ. ಆನೆವೂರು, ಉಳನೂರು, ಎರೆಡೆಯೂರು, ಕಕ್ಕರ ಮದಲೂರು, ಕಂಪ್ಲಿ, ಕಪ್ಪೆಕಲ್ಲೂರು, ಕುಂದೂರು, ಕೊಡಲ್ ಕಲ್ಲನೂರು, ಕೊನಡಿಯೂರು ಮುಂತಾದವುಗಳು (ಮಾಹಿತಿಗಾಗಿ) ಪ್ರಸಿದ್ಧವಾಗಿದ್ದವು.

ಒಂದನೇ ಮಹೇಂದ್ರನ ಕಾಲದಿಂದ ಇಮ್ಮಡಿ ಮಹೇಂದ್ರನವರೆಗೆ ಅನೇಕ ದೇವಲಾಯಗಳು ರಚನೆ ಆಗಿದ್ದವು. ದೊಡ್ಡೇಶ್ವರ ದೇವಾಲಯ, ಸಿದ್ಧೇಶ್ವರ ದೇವಾಲಯ, ಅಕ್ಕತಂಗಿಯರ ದೇವಾಲಯ ಇವು ಪ್ರಮುಖವಾದವುಗಳು. ಇವು ಅವರ ಪಾರಂಪರಿಕ ರಾಜಧಾನಿ ಹೆಂಜೇರಿನಲ್ಲಿ ರಚಿತವಾಗಿವೆ. ಅನೇಕ ವೀರಗಲ್ಲು ಶಾಸನಗಳು ಗ್ರಾಮದಲ್ಲಿ ದೊರೆತಿವೆ.

ಇರಿವ ನೊಳಂಬನ ಕಾಲದಿಂದ ಕಂಪಿಲೆಯು ನೊಳಂಬರ ಉತ್ತರ ದಿಕ್ಕಿನ ರಾಜಧಾನಿಯಾಗಿ ಪ್ರಸಿದ್ಧಿಗೆ ಬರುತ್ತದೆ. ಚೋಳರ ದಾಳಿಗಳಿಂದ ತಪ್ಪಿಸಿಕೊಳ್ಳಲು ಇದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಕಾರಣದಿಂದ ನೊಳಂಬರು ಹೆಂಜೇರರನ್ನು ಬಿಟ್ಟ ಮೇಲೆ ಉತ್ತರಕ್ಕೆ ಬಂದು ಕಂಪಲಿಯನ್ನು ರಾಜಧಾನಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಗ್ರಾಮದಲ್ಲಿಯೂ ಕೂಡ ತಮ್ಮ ಪೂರ್ವದ ರಾಜಧಾನಿ ಹೆಂಜೇರಿನಲ್ಲಿದ್ದಂತೆ ಸಿದ್ಧೇಶ್ವರ ದೇವಾಲಯವನ್ನು (ಈಗಿನ ಸೋಮೇಶ್ವರ ದೇವಾಲಯ) ಮಾಡಿಸುತ್ತಾರೆ. ನೊಳಂಬರ ಅಂತ್ಯದವರೆಗೆ ಕಂಪಲಿಯೇ ರಾಜಧಾನಿಯಾಗಿತ್ತು. ಕಂಪಲಿಯು ಹೊಸಪೇಟೆ ತಾಲೂಕಿಗೆ ಸೇರಿದ ತುಂಗಭದ್ರಾ ತಡಿಯ ಗ್ರಾಮ.

ವಿಪ್ರನಾರಾಯಣ ಎಂಬ ಗ್ರಾಮವು ಗಂಗಾವತಿಗೆ ಸಮೀಪದ ವಿಪ್ರ ಗ್ರಾಮವಾಗಿದ್ದು ಅದನ್ನು ಕೆಲವು ಕಾಲ ನೊಳಂಬರು ತಮ್ಮ ನೆಲೆವೀಡಾಗಿ ಮಾಡಿಕೊಂಡಿದ್ದ ಉಲ್ಲೇಖವನ್ನು ಶಾಸನವೊಂದು ತಿಳಿಸುತ್ತದೆ. ಅಲ್ಲಿಯೂ ಸಹ ನೊಳಂಬರ ಕಾಲದ ದೇವಾಲಯವೊಂದಿದ್ದು ಬಹುಶಃ ತ್ರೈಲೋಕ್ಯಮಲ್ಲ ಇಮ್ಮಡಿ ನೊಳಂಬನ ಕಾಲದಲ್ಲಿ ಅದು ರಚಿತವಾಗಿರಬೇಕು.

ಬಾಗಳಿ

ಬಾಗಳಿಯು ಯಾವ ಅಧಿಕಾರಿಯ ಆಡಳಿತಕ್ಕೂ ಒಳಪಟ್ಟಿದಂತೆ ತೋರುವುದಿಲ್ಲ. ಬಹುಶಃ ಬಾಳ್ಗುಳಿಯ (ಬಾಗಳಿ) ಮಹಾಜನರೆ ಈ ಗ್ರಾಮದ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಕ್ರಿ.ಶ. ೧೦೧೮ ರಲ್ಲಿ ನೊಳಂಬ ಉದಯಾದಿತ್ಯನು ಕಲ್ಲೇಶ್ವರ ದೇವಾಲಯವನ್ನು ಕಟ್ಟಿಸಿದ ಮೇಲೆ ಹೆಚ್ಚಿನ ಪ್ರಸಿದ್ಧಿ ಪಡೆಯಿತು. ಕಲ್ಲೇಶ್ವರ ದೇವಾಲಯವು ಚಟುವಟಿಕೆಗಳ ಆಗರವಾಗಿತ್ತು. ಇದಕ್ಕಿಂತ ಮೊದಲು ರಾಷ್ಟ್ರಕೂಟರ ಕಾಲದೇವಾಲಯಗಳು ಅಲ್ಲಿದ್ದವು.

ಈ ಮೇಲೆ ಉಲ್ಲೇಖಿತ ಅನೇಕ ಗ್ರಾಮಗಳಲ್ಲಿ ನೊಳಂಬರು ತಮ್ಮ ಕುಲದೈವದ ಹೆಸರಿನ ಶಿವ ಮತ್ತು ವಿಷ್ಣು ದೇವಾಲಯಗಳನ್ನು ಕಟ್ಟಿಸಿ ಆ ದೇವಾಲಯಗಳಿಗೆ ನೊಳಂಬೇಶ್ವರ, ನೊಳಂಬ

ನಾರಾಯಣೇಶ್ವರ ಎಂಬ ಹೆಸರುಗಳಿಂದ ಕರೆಯುತ್ತಿದ್ದುದನ್ನು ಅನೇಕ ಶಾಸನಗಳು ಉಲ್ಲೇಖಿಸಿವೆ. ಇವಲ್ಲದೇ ಕೆಲವು ಸ್ಥಳಗಳಲ್ಲಿ ಮೈಲಾರನ ಹೆಸರಿನ ದೇವಾಲಯಗಳನ್ನು ಮೊದಲು ನಿರ್ಮಿಸಿರುತ್ತಾರೆ. ಅನೇಕ ಗ್ರಾಮಗಳಲ್ಲಿ ನೀರಾವರಿ ಉಪಯೋಗಕ್ಕಾಗಿ ಹೊಸದಾಗಿ ಕೆರೆಗಳನ್ನು ಕಟ್ಟಿಸಿ ತಮ್ಮ ಹೆಸರಿನಲ್ಲಿ ಕರೆದಿದ್ದಾರೆ.

೨. ಆಡಳಿತ ಅಧಿಕಾರಿಗಳು

ಮಹಾ ಮಂಡಳೇಶ್ವರರು

ಬಲ್ಲಕುಂದೆ ೩೦೦ರ ಪ್ರದೇಶ ಮತ್ತು ಅದರ ಸುತ್ತಮುತ್ತಲ ಪ್ರದೇಶಕ್ಕೆ ಸಂಬಂಧಪಟ್ಟ ಕೆಲವು ಮಹಾಮಂಡಳೇಶ್ವರರ ಉಲ್ಲೇಖ ಶಾಸನಗಳಲ್ಲಿ ಬರುತ್ತಿದ್ದು, ಅವರಲ್ಲಿ ಅನೇಕರ ವಿವರಗಳು ತಿಳಿದು ಬರುವುದಿಲ್ಲ. ಆದರೆ ಶಾಸನಗಳಲ್ಲಿ ಉಲ್ಲೇಖಿತರಾದ ಕೆಲವು ಮಹಾಮಂಡಳೇಶ್ವರರ ವಿವರಗಳು ಇಂತಿವೆ.

ಮಹಾಮಂಡಳೇಶ್ವರ ಗಂಡರಾದಿತ್ಯರಸ

ಈತನು ಉಲ್ಲೇಖ ಹೂವಿನ ಹಡಗಲಿ[೨೭] ತಾಲೂಕಿನ ಮೈಲಾರದ ಶಾಸನದಲ್ಲಿದೆ. ಈತನು ಒಂದನೇ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿದ್ದನು. ಈತನು ಸಿಂಧವಾಡಿ ಸಾಸಿರ ವಿಭಾಗವನ್ನು ಕೋಗಳಿ೩೦೦ನ್ನು ಅಗ್ರಹಾರ ನರಗುಂದ ಬೆಳ್ವೊಲಮೂರ್ವ್ವ(ನ್ನೆರಡು) ವಿಭಾಗವನ್ನು ಆಳುತ್ತಿದ್ದನು. ಶಾಸನದಲ್ಲಿ ಚಕ್ರವರ್ತಿ ಸೋಮೇಶ್ವರನು ಉಪ್ಪು, ಸಕ್ಕರೆ ಮೊದಲಾದ ಐದು ರಸಗಳ ಮೇಲಿನ ಸುಂಕವನ್ನು ತೆಗೆದು ಹಾಕಿದಂತೆ ಉಲ್ಲೇಖವಿದೆ. ಇವನ ಕೈ ಕೆಳಗಿನ ಅಧಿಕಾರಿಯಾಗಿದ್ದ ಪೆಗ್ಗಡೆ ಕಾಳಿಮಯ್ಯನು ಈ ಗ್ರಾಮದೇವರಿಗೆ ಕೆಲವು ದಾನಗಳನ್ನು ನೀಡಿದಂತೆ ಉಲ್ಲೇಖವಿದೆ.

ಕಂಚಗಾರ ಬೆಳಗಲ್ಲು[೨೮] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನು ಕಂಚಗಾರ ಬೆಳ್ಗಲಿಯ ನಾಗಣ್ಣೋಜರ ವಿಷ್ಣುದೇವರಿಗೆ ಕರಿಯಮತ್ತರು ಅರನ್ನು ಬಿಟ್ಟ ವಿವರವಿದೆ.

ಮಹಾಮಂಡಳೇಶ್ವರ ಚಿದ್ದಣಚೋಳ ಮಹಾರಾಜ

ಚಕ್ರವರ್ತಿ ಒಂದನೇ ಸೋಮೇಶ್ವರ ಪಾದಪದ್ಮೋಪಜೀವಿಯಾಗಿದ್ದನು. ಇವನು ಸಿಂಧವಾಡಿ ೧೦೦೦ ವಿಭಾಗವನ್ನು ಆಳುತ್ತಿದ್ದನು. ಇವನ ಪ್ರಶಸ್ತಿಗಳಿಂದ ಇವನು ಚೋಳ ವಂಶಕ್ಕೆ ಸಂಬಂಧಪಟ್ಟಿರುವುದು ತಿಳಿದುಬರುತ್ತದೆ. ಅಲ್ಲದೇ 'ಕರಿಕಾಲ ಕುಲರತ್ನ' ಎಂಬುದು ಇವನು ಚೋಳನ ವಂಶಸ್ಥನೆಂಬುದನ್ನು ಸ್ಪಷ್ಟಪಡಿಸುತ್ತದೆ. ಇವನ ಆಳ್ವಿಕೆಯ ಸಿಂಧವಾಡಿಯು ಬಲ್ಲಕುಂದೆನಾಡಿನ ಪಕ್ಕದ ಪ್ರದೇಶವಾಗಿತ್ತು.

ಮಹಾಮಂಡಳೇಶ್ವರ ಮಲ್ಲರಸ

ಆರನೇ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಇವನು ಸಿಂಧವಾಡಿ ೧೦೦೦ ವಿಭಾಗವನ್ನಾಳುತ್ತಿದ್ದನು. ಕರ್ನಾಟಕ-ಆಂಧ್ರಪ್ರದೇಶದಲ್ಲಿ ದೊರೆತ ಶಾಸನಗಳಲ್ಲಿ ಇವನ ಕುರಿತು ವಿವರಗಳಿವೆ. ಗುತ್ತಿಯ[೨೮] ಶಾಸನದಲ್ಲಿ ಪಲ್ಲಿಕೊಂಡ ಪುರಾವರಾಧೀಶ್ವರನೆಂದು ಕರೆಯಲಾಗಿದೆ. ಮಲ್ಲಿರಸನು ಕೆಲವು ಧಾರ್ಮಿಕ ಕಾರ್ಯಗಳನ್ನು ಮಾಡಿರುವುದು ತಿಳಿದುಬರುತ್ತದೆ.

ಮಹಾಮಂಡಳೇಶ್ವರ ದಳವಪರಸ

ಪೆದ್ದಹೊಟೂರ[೨೯] ಶಾಸನೋಕ್ತನಾದ ಈತನು ಆರನೆಯ ವಿಕ್ರಮಾದಿತ್ಯನ ಕಾಲದ ಮಹಾಮಂಡಳೇಶ್ವರ. ವಿಕ್ರಮಾದಿತ್ಯ ಮನ್ನೆಯ ಕೆರೆಯ ನೆಲೆವೀಡಿನಲ್ಲಿದ್ದಾಗ ಕುಮಾರ ತೈಲಪದೇವರಿಗೆ ಸಿಂಧವಾಡಿ ೧೦೦೦ ವಿಭಾಗವನ್ನು ಕಾರುಣ್ಯದಿಂದ ಕೊಡುತ್ತಾನೆ.

ಮಹಾಮಂಡಳೇಶ್ವರ (ಆ) ಹವಮಲ್ಲದೇವ

ಚಿನ್ನತುಂಬಳ[೩೦] ಶಾಸನದಲ್ಲಿ ಈತನ ಉಲ್ಲೇಖವಿದೆ. ಶಾಸನಗಳು ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳು ಅಲಭ್ಯ. ಈತನು ಹರಿಹರಾಂಡರು ಮಾಡಿಸಿದ ದೇವರಿಗೆ ದಾನ ಬಿಟ್ಟ ವಿಷಯವಿದೆ.

ತ್ರೈಲೋಕ್ಯಮಲ್ಲ ಮಲ್ಲಿದೇವ ಮಹಾರಾಜ

ಪೆದ್ದ ತುಂಬಳ[೩೧] ಶಾಸನದಲ್ಲಿ ಈತನ ಉಲ್ಲೇಖವಿದೆ. ಭೂಲೋಕಮಲ್ಲನ ಪಾದ ಪದ್ಮೋಪಜೀವಿಯಾದ ಈತನು ಸಿಂಧವಾಡಿ ಸಾಸಿರ ಆಳುತ್ತಿದ್ದನು. ಮಹಾಪರ್ವ ನಿಮಿತ್ತ ತುಂಬಳ ಬೀಡಿನ ಶ್ರೀ ಪಂಚಲಿಂಗದೇವರ ಅಂಗಭೋಗ ನೈವೇದ್ಯ ದೀವಿಗೆಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ತೆರಿಗೆ, ಗಾಣ, ಗದ್ದೆ ಇವುಗಳನ್ನು ಬಿಟ್ಟಿದ್ದನು

ವೀರನೊಳಂಬ ಇರುಂಗೋಳಚೋಳ

ಭೂಲೋಕಮಲ್ಲನ ಪಾದಪದ್ಮೋಪಜೀವಿಯಾದ ಈತನು ಚೋಳವಂಶಕ್ಕೆ ಸೇರಿದವನಾಗಿದ್ದಾನೆ. ಈತನು ಸೂರ್ಯಗ್ರಹಣ ನಿಮಿತ್ತ ತುಂಗಭದ್ರ ನದೀ ತೀರದಲ್ಲಿ ಸಿಂಧವಾಡಿ ೧೦೦೦ದಲ್ಲಿಯ ತಮ್ಮಾಳ್ಕೆಯ ಬಾಡಂ ಇಂದವಲಿ ಬೇವಿಸೆಟ್ಟಿ ಮಾಡಿಸಿದ ಭೀಮೇಶ್ವರ ದೇವರಿಗೆ ದಾನ ಬಿಡುತ್ತಾನೆ. ಈ ಚೋಳರಾಜನು ಆಂಧ್ರಪ್ರದೇಶದಲ್ಲಾಳುತ್ತಿದ್ದ ಚೋಳರ ಒಂದು ಶಾಖೆಗೆ ಸೇರಿದವನು.

ಕಾಚರಸ, ಲೋಕರಸ, ಗಂಗರಸ

ಮಹಾಮಂಡಳೇಶ್ವರರಾದ ಇವರ ಉಲ್ಲೇಖ ಒರುವಾಯಿ[೩೨] ಶಾಸನದಲ್ಲಿದೆ. ೨ನೆಯ ಜಗದೇಕ ಮಲ್ಲನ ಪಾದಪದ್ಮೋಪಜೀವಿಯಾದ ಇವರು ದೊರವಡಿ ನಾಡಿನ ಮಹಾಮಂಡಲೇಶ್ವರರಾಗಿದ್ದಾರೆ.

ಇವರು ರಕ್ತಸಬಂಧಿಗಳಾಗಿದ್ದು ದೊರವಡಿ ೭೦ ವಿಭಾಗದ ಪ್ರಭುಗಳಾಗಿದ್ದರು. ಇವರು ಆಳುತ್ತಿದ್ದಾಗ ಇವರ ಮಹಾಪ್ರಧಾನ ಲಕ್ಕನಾಯಕನ ಮತ್ತು ಅವರ ತಮ್ಮಂದಿರು ಹೊಸಕುತ್ತಕನೂರು ಮತ್ತು ಕುರುಗೋಡಿನಲ್ಲಿ ದೇವಾಲಯಗಳನ್ನು ಕಟ್ಟಿಸಿ ದಾನ ನೀಡಿದಂತೆ ಹೇಳಿದೆ.

ಮಹಾಮಂಡಳೇಶ್ವರ ಭೀಮದೇವ ರಾಣೆಯ್ಯ

ಬಸರಕೋಡು[೩೩] ಶಾಸನದಲ್ಲಿ ಈತನ ಉಲ್ಲೇಖವಿದೆ. ಯಾದವ ರಾಮಚಂದ್ರದೇವ ದೇವಗಿರಿಯಿಂದ ಆಳುತ್ತಿರುವಾಗ ಅವನ ಕೈಕೆಳಗೆ ಸಿಂಧವಾಡಿಯನ್ನು ಆಳುತ್ತಿದ್ದನು. ಶಾಸನದಲ್ಲಿ 'ಶ್ರೀಮನುಮಹಾ ಮಂಡಳೇಶ್ವರಂ ರವಿತಡಕಭೀಮದೇವ ರಾಣೆಯ್ಯಂ' ಎಂದು ಹೇಳಲಾಗಿದೆ.

ದೇವರಾಣೆಯ್ಯ

ಯಾದವ ರಾಮಚಂದ್ರದೇವನಂ ಆಳುತ್ತಿರುವಾಗ ಆತನ ಪಾದಪದ್ಮೋಪಜೀವಿಯಾಗಿ ಇವನು ಸಿಂಧವಾಡಿ ೧೦೦೦ ಆಳುತ್ತಿದ್ದನು[೩೪]. ಈತನು ಶ್ರೀಕಂಠನಾಯ್ಕನ ಮಗ ನಾನೆಯನಾಯ್ಕನಿಗೆ ಸಿಂಧವಾಡಿಯಲ್ಲಿಯ ನೇರಳಿಕೆ, ಬೆಂಬುಗುಡಿ, ಅರಕೆಜ್, ಹೊಳಗುಂದ ಗ್ರಾಮಗಳನ್ನು ಕೊಡುತ್ತಾನೆ.

ಮಹಾಮಂಡಳೇಶ್ವರ ದೇವಪರಸ

ಸಿರುಗುಪ್ಪತಾಲೂಕಿನ ಕಲ್ಲುಕುಟಿಗನಹಾಳ ಶಾಸನದಲ್ಲಿ ಈತನು ಆಳುತ್ತಿರುವುದನ್ನು ಉಲ್ಲೇಖಿಸಲಾಗಿದೆ[೩೫]. ಇವನು ಆಳುತ್ತಿರುವಾಗ ಪೊನ್ನೆಯ ಗವುಂಡನು ಕಟ್ಟಿಸಿದ ಬಾವಿಗೆ ಬೀರಯ್ಯ ಗವುಂಡ ಮತ್ತು ಮಣಿಮಯ್ಯ ಗವುಂಡನು ೫ ಮತ್ತರು ಕರಿಯ ಮತ್ತರು ಭೂಮಿಯನ್ನು ಬಿಡಿಸುತ್ತಾರೆ.

ಮಂಡಳಿಕ ವಿದಯ್ಯ

ಹಚ್ಚೊಳ್ಳಿ[೩೬] ಶಾಸನದಲ್ಲಿ ಈತನ ಉಲ್ಲೇಖವಿದೆ. ತ್ರೈಲೋಕಮಲ್ಲನು ಕಸಮಡು ನೆಲೆವೀಡಿನಲ್ಲಿದ್ದಾಗ ವಿದ್ಯೆಯನ್ನು ಆಣತಿಯಂತೆ ತ್ರೈಲೋಕ್ಯಮಲ್ಲ ಜೀಯನಿಗೆ ನೂರುಮತ್ತರು ಕರಿಯ ಭೂಮಿಯನ್ನು ದಾನ ಬಿಟ್ಟದ್ದನ್ನು ಶಾಸನದಿಂದ ತಿಳಿದುಬರುತ್ತದೆ. ಈ ಹಚ್ಚೊಳ್ಳಿ ಅಥವಾ ಪಚ್ಚೊಳ್ಳಿಯು ಸಿಂಧವಾಡಿ ನಾಡಿನ ಕರೆದೊರೆಯ ದಡದಲ್ಲಿತ್ತೆಂದು ಹೇಳಿದೆ. ಈ ಕಿರು ದೊರೆಯೇ ತುಂಗಭದ್ರಾ ನದಿ.

ಮಹಾಸಾಮಂತರು

ಮಹಾಮಂಡಳೇಶ್ವರಿಗೆ ಆಧೀನರಾಗಿದ್ದು, ಚಿಕ್ಕ ವಿಭಾಗಗಳನ್ನು ಆಳುತ್ತಿದ್ದ ಪ್ರಭುಗಳೇ ಮಹಾಸಾಮಂತರು. ಸಾಮಂತ ಎಂಬುದು ಸ್ವಾಮ್ಯವಂತ ಸಾಮಂತ>ಸಾಮಂತ ಎಂಬ ರೂಪಾಂತರ ಹೊಂದುತ್ತಾ ಬಂದಿದೆ. ಇವರು ತಮ್ಮದೇ ಆದ ಸೈನ್ಯ ಅಧಿಕಾರ ವರ್ಗವನ್ನು ಹೊಂದಿದ್ದರು. ರಾಜನ ಕೈಕೆಳಗೆ ರಾಜನು ಸೂಚಿಸಿದ ಪ್ರದೇಶಗಳನ್ನು ಇವರು ಆಳುತ್ತಿದ್ದರು.

ಮಹಾಸಾಮಂತ ಶ್ರೀಮತ್ ಬಿಜ್ಜ

ರಾಷ್ಟ್ರಕೂಟ ಚಕ್ರವರ್ತಿ ನಿತ್ಯವರ್ಷ ಮೂರನೆಯ ಇಂದ್ರಬಲ್ಲಹ ಆಳುತ್ತಿರುವಾಗ ಆತನ ಆಧೀನನಾಗಿ ಮಹಾಸಾಮಂತ ಶ್ರೀಮತ್ ಬಿಜ್ಜನು ಕೋಗಳಿ ೫೦೦ ಮಾಸವಾಡಿ ೧೪೦ಗಳನ್ನು ಆಳುತ್ತಿದ್ದನು. ಕಡಬಗರೆಯ[೩೭] ಶಾಸನೋಕ್ತನಾದ ಇವನನ್ನು ಮಹಾಸಾಮನ್ತ ಬಿರುದರ ರೊಟ್ಟ ಬಿರುದರ ಮೈಕುತ್ತಿ ಶ್ರೀಮತ್ ಬಿಜ್ಜ ಎಂದು ಶಾಸನದಲ್ಲಿ ಕರೆಯಲಾಗಿದೆ.

ಅಯ್ಯಪಯ್ಯ

ರಾಷ್ಟ್ರಕೂಟ ದೊರೆ ಗೋವಿಂದರ ವಲ್ಲಭನು (ನಾಲ್ಕನೆಯಗೋವಿಂದ) ಆಳುತ್ತಿರುವಾಗ ಅಯ್ಯಪಯ್ಯ ಕೋಗಳಿನಾಡು ಮಾಸೆಯವಾಡಿ ೧೪೦ಗಳನ್ನು ಆಳುತ್ತಿದ್ದನು. ಈತನ ಉಲ್ಲೇಖ ಶಿರಸ್ತಹಳ್ಳಿ[೩೮] ಶಾಸನದಲ್ಲಿ ಬರುತ್ತದೆ. ಸಿಂಗಮದೇವ ಎರೆಯಮ್ಮನ ಮಗ ಪಡಿಗನು ದಂಡಿನಲ್ಲಿ ಕಾದು ಸಾಯುತ್ತಾನೆ. ಅಯ್ಯಪಯ್ಯನು ಪಡಿಗನ ವಂಶದವರಿಗೆ ಹೊಲಗದ್ದೆಯನ್ನು ಕೊಟ್ಟು ವೀರಗಲ್ಲನ್ನು ನೆಡಿಸುತ್ತಾನೆ.

ಕೊಂಗಣಿಂಬ ನಾಳ್ಗಾವುಂಡ

ಶಿರಸ್ತಹಳ್ಳಿ[೩೯] ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ರಾಷ್ಟ್ರಕೂಟ ದೊರೆ ಗೋವಿಂದನು ಚಕ್ರವರ್ತಿಯಾಗಿ ಆಳುತ್ತಿರುವಾಗ ಆತನ ಪಾದಪದ್ಮೋಪಜೀವಿಯಾಗಿ ಅಯ್ಯಪಯ್ಯನು ಕೋಗಳಿ, ಮಾಸೆವಾಡಿ ನಾಡನ್ನು ಆಳುತ್ತಿದ್ದಂತೆ ತಿಳಿಯುತ್ತದೆ.

ಮನ್ನೆಯ ಬಿಕ್ಕಿಗ

ಬಾಗಳಿಯ[೪೦] ಶಾಸನದಲ್ಲಿ ಈತನ ಉಲ್ಲೇಖವಿದೆ. ಈತನು ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯನ ಅಧೀನನಾಗಿ ಬಿಕ್ಕಿಗ ೭೦ ವಿಭಾಗವನ್ನು ಆಳುತ್ತಿದ್ದನು. ಕಲ್ಲೇಶ್ವರ ದೇವರಿಗೆ ಚಕ್ರವರ್ತಿ ಬಿಟ್ಟ ದತ್ತಿಯನ್ನು ಇವನು ಬಿಡುತ್ತಾನೆ. ಇವನೊಂದಿಗೆ ಭೀರಭಟ್ಟನೂ ಸೇರಿರುತ್ತಾನೆ. ಈ ವಿಷಯ ಶಾಸನದಲ್ಲಿದೆ.

ಮಹಾಸಾಮಂತ ಸಿಂಗರಸ

ಈತನ ಉಲ್ಲೇಖ ಗುಡಿಹಳ್ಳಿಯ[೪೧] ಕ್ರಿ.ಶ ೧೧೧೧ ಡಿಸೆಂಬರ್ ೧೨ರ ಶಾಸನದಲ್ಲಿ ಬರುತ್ತದೆ. ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯದೇವ ಪಾದಪದ್ಮೋಪಜೀವಿಯಾಗಿದ್ದ ಇವನದು

'ಬಾಯರ' ವಂಶ. ತಂದೆ ಪುಣಿಸೆಗಾಂತ, ತಾಯಿ ಚಟ್ಟಬ್ಬೆ. ಈತನು ದೇವರ ಸೇವೆಗೆ ಕೆರೆಯ ಕೆಳಗೆ ಬಂದು ತೋಟ ಗದ್ದೆ ದಾನ ಬಿಡುತ್ತಾನೆ. ಈ ವಿಷಯ ಈ ಶಾಸನದಲ್ಲಿದೆ.

ಮಹಾಸಾಮಂತ ಕತ್ತೆರ

ಚಾಲುಕ್ಯ ವಂಶೋದ್ಭವನಾದ ಇವನ ಉಲ್ಲೇಖ ಬಾಗಳಿ[೮೨] ಶಾಸನದಲ್ಲಿದೆ. ರಾಷ್ಟ್ರಕೂಟ ದೊರೆ ಮೂರನೇ ಕೃಷ್ಣ ಆಳುತ್ತಿರುವಾಗ ಮಹಾಸಾಮಂತ ಕತ್ತೆರ ಕೋಗಳಿ ೫೦೦ ಮಾಸೆಯವಾಡಿ ೧೪೦ ವಿಭಾಗಗಳನ್ನು ಆಳುತ್ತಿದ್ದನು. ಇವನು ಅಜವರ್ಮನೆಂಬುವವನಿಗೆ 'ಒಡ್ಡವಡಂಗೆಲ' ಎಂಬ ಗ್ರಾಮ ದಾನ ಬಿಡುತ್ತಾನೆ.

ಮಹಾಸಾಮಂತ ರೊಟ್ಟಯ್ಯ

ರಾಷ್ಟ್ರಕೂಟ ದೊರೆ ಶ್ರೀಮತ್ಕನ್ನರದೇವ ಆಳುತ್ತಿರುವಾಗ ಮಹಾಸಾಮಂತ ರೊಟ್ಟಯ್ಯ ಮಾಸಿವಾಡಿ ೧೪೦, ಕೋಗಳಿ ೫೦೦, ಕಕ್ಕುನೂರು ೩೦ಗಳನ್ನು ಆಳುತ್ತಿದ್ದನು. ಈತನು ಬಾಗಳಿ ಊರೊಡೆಯ ಪಶುಪತಿಭಟ್ಟನಿಗೆ ಬಾಬಂದಿಯ ಸಂಬಂಧದ ರಾಜದ್ರವ್ಯವೆಲ್ಲವನ್ನು ಬಿಡುತ್ತಾನೆ.[೮೩] ಇವನನ್ನು ಕೃತಯುಗಗಳ್ಳ ಎಂದು ಶಾಸನದಲ್ಲಿ ಕರೆದಿದೆ.

ಮಹಾಸಾಮಂತ ದೋರಪಯ್ಯ

ಬಾಗಳಿಯ ಶಾಸನೋಕ್ತನಾದ[೮೪] ಈತನು ಚಾಲುಕ್ಯ ವಂಶದವನಾಗಿದ್ದಾನೆ. ಇವನ ಆಳ್ವಿಕೆಗೊಳಪಟ್ಟ ಪ್ರದೇಶದ ವಿವರ ತಿಳಿದುಬಂದಿರುವುದಿಲ್ಲ. ಈತನು ಬಾಗಳಿಯ ಊರೊಡೆಯ ಪಶುಪತಿಭಟ್ಟನಿಗೆ ದಾನಕೊಟ್ಟ ಅಸ್ಪಷ್ಟ ಮಾಹಿತಿ ಇದೆ.

ಮನ್ನೆಯ ಮಲ್ಲಪ್ಪ

ಕದಂಬ ವಂಶದ ಮಹಾಮಂಡಳೇಶ್ವರ ಮಧುವರ್ಮದೇವನು ಆಳುತ್ತಿದ್ದುದನ್ನು ತಿಳಿಸಿ ನಂತರ ಈತನ ಅಧೀನವಾಗಿದ್ದ. ಮನ್ನೆಯ ಮಲ್ಲಪ್ಪನ ಉಲ್ಲೇಖ ಬರುತ್ತದೆ. ಈತನು ಭೂಮಿಯನ್ನು ಕೆರೆಗೆ ದಾನಬಿಟ್ಟಿರಬೇಕು.

ಮಹಾಸಾಮಂತ ಚಾಮುಂಡರಸ

ಕ್ರಿ.ಶ. ೧೧೯೩ ರ ಹೊಳಗುಂದಿ[೮೫] ಶಾಸನದಲ್ಲಿ ಈತನ ಉಲ್ಲೇಖವಿದೆ. ಶಾಸನದಲ್ಲಿ ಮಹಾಸಾಮಂತ ಚಾಮುಂಡರಸರ ಪೊಳಲ್ಗುಂನ್ದೆಯುಮಂ ಇನ್ನು ಮುಂತಾದ ದೇವಾಲಯ ನಿರ್ಮಿಸಿ ಸುರಲೋಕ ಪ್ರಾಪ್ತನಾಗುತ್ತಾನೆ ಈತನ ಮಗ ಮಹಾಮಂಡಲೇಶ್ವರ ಗಂಗರಸನು ತನ್ನ ತಂದೆ ಮಾಡಿಸಿದ ಬಾಳೇಶ್ವರದೇವರಿಗೆ ಚಕ್ರವರ್ತಿಯಲ್ಲಿ ಬಿನ್ನಪಮಾಡಿ ಒಪ್ಪಿಗೆ ಪಡೆದು ಭೂಮಿಯನ್ನು ಬಿಡುತ್ತಾನೆ.

ಮನ್ನೆಯ ಕೋಶರಸ

ಶಿರಸ್ತಹಳ್ಳಿ[೪೬] ಶಾಸನದಲ್ಲಿ ಇವನನ್ನು 'ಶ್ರೀಮತ್ಮನ್ನೆಯ ಬೂತಬ್ಬರಸಿಯರ ಕೋಕರಸ' ಎಂದು ಕರೆಯಲಾಗಿದೆ. ಈತನು ಊರೊಡೆಯ ಪುಟ್ಟಿಯಣ್ಣ ಪ್ರಮುಖ ಮಹಾಜನರ ಸಮ್ಮುಖದಲ್ಲಿ ವಿದ್ಯಾನಿಧಿ ಪಂಡಿತರ ಕಾಲು ತೊಳೆದು ಭೂಮಿ ಬಿಡುತ್ತಾನೆ. ಈ ವಿಷಯ ಶಾಸನದಲ್ಲಿದೆ.

ಮಹಾಸಾಮಂತ ಹೊಳ್ಳೆಯ

ಹನಸಿಯ[೪೭] ಕ್ರಿಶ ಜುಲೈ ೧೨ ರ ಶಾಸನದಲ್ಲಿ ಈತನ ಉಲ್ಲೇಖವಿದೆ. ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ ೩೨೦೦೦ ಆಳುತ್ತಿದ್ದುದನ್ನು ಹೇಳಿ 'ಮಹಾಸಾಮಂತ ಹೊಳ್ಳೆಯಂ ಸ್ತಿರಂ ಜೆಯಾತ್' ಎಂದು ಮಾತ್ರ ಬರುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರ ಇಲ್ಲ.

ಮಹಾಸಾಮಂತ ಮಣಂಬದೇವರಸ

ಕ್ರಿ.ಶ. ೧೧೫೪ ಜನೇವರಿ ೧೫ ಹಳ್ಯಂ[೪೮] ಶಾಸನದಲ್ಲಿ ಈತನ ಊಲ್ಲೇಖವಿದೆ. ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿದ್ದ ಈತನು ಯಳೆಹದ ಅಗಸ್ತ್ಯದೇವರಿಗೆ ಒಂದು ಎಲೆ ತೋಟವನ್ನು ದಾನವಾಗಿ ಬಿಡುತ್ತಾನೆ. ಹೀಗೆ ಬಿಟ್ಟಂಥ ತೋಟಕ್ಕೆ ಅನಂತಗಾವುಂಡ, ಗೋಪಾಳಗೌಡ, ದೇವಗೌಡ, ಸೇನಬೋವ ಬೊಮಣ್ಣ ವಾಮರಸಿ ದೇವರ ಮೊಮ್ಮಕ್ಕಳು ಪ್ರತಿಪಾಳಕರೆಂದು ಶಾಸನ ಸೂಚಿಸುತ್ತದೆ.

ಮಸಣೆಯ ಸಾವಂತ

ಹೊಯ್ಸಳ ವೀರನರಸಿಂಹ ಆಳುತ್ತಿರುವಾಗ ಈತನ ಮಹಾಸಾಮಂತನಾಗಿದ್ದುದು ಬೆಣ್ಣೆಹಳ್ಳಿ[೪೯] ಶಾಸನದಿಂದ ತಿಳಿದುಬರುತ್ತದೆ. ಶಾಸನದಲ್ಲಿ ಸೂರಿಯ ಸೋವೆಯ ಸಾವಂತನ ಮಗ ಮರಾಯ ಸಾವಂತನ ತಮ್ಮ ಮಸಣೆಯ ಸಾಮಂತ ಎಂದು ಬರುತ್ತದೆ.

ಮಾಂಡಲೀಕರು (ಮಂಡಳೇಶ್ವರರು)

ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆ ರಾಜನಿಗೆ ಸೇರಿತ್ತು. ರಾಜ್ಯದ ಜನಜೀವನವೂ ಆ ರಾಜನ ಏಳು ಬೀಳುಗಳನ್ನು ಅವಲಂಬಿಸಿರುತ್ತಿತ್ತು. ಹೀಗಾಗಿ ರಾಜನು ತನ್ನ ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ. ಪ್ರಜೆಗಳಿಗೆ ರಾಜ ಪ್ರತ್ಯಕ್ಷ ದೇವತೆ ಮತ್ತು ದೈವಾಂಶ ಸಂಭೂತ, ಪ್ರಜೆಗಳನ್ನು ರಕ್ಷಿಸುವುದು ಅವನ ಕರ್ತವ್ಯವಾಗಿತ್ತು. ಅದಕ್ಕಾಗಿ ರಾಜನಾದವನು ರಾಜ್ಯವನ್ನು ನಗರ, ಪಟ್ಟಣ, ನಾಡು, ಬಾಡ, ವಿಷಯ ಗ್ರಾಮ, ಹಳ್ಳಿ ಮುಂತಾಗಿ ವಿಂಗಡಿಸಿಕೊಂಡು; ಅಲ್ಲಿನ ಆಡಳಿತವನ್ನು ರಾಜನ ಪರವಾಗಿ

ನೋಡಿಕೊಳ್ಳಲು ಮಾಂಡಳಿಕ, ಮಂತ್ರಿ, ದಂಡನಾಯಕ, ಪೆರ್ಗಡೆ, ಪಟ್ಟಣಾಧಿಪತಿ, ಗಾವುಂಡ ಇತ್ಯಾದಿ ಹೆಸರುಗಳಿಂದ ರಾಜ್ಯದ ಅಧಿಕಾರಿಗಳನ್ನಾಗಿ ನಿಯಮಿಸಿಕೊಳ್ಳುತ್ತಿದ್ದ.

ನೊಳಂಬರ ಕಾಲದ ಆಡಳಿತದ ಸಮಗ್ರ ಚಿತ್ರಣ ನಮಗೆ ದೊರೆಯುತ್ತಿಲ್ಲ.ಇವರ ಸಮಕಾಲೀನ ಅರಸರ ಆಳ್ವಿಕೆಯಂತೆಯೇ ಇವರ ಕಾಲದಲ್ಲಿಯೂ ಆಡಳಿತ ನಡೆದಿರಬೇಕು. ರಾಜ್ಯಾಡಳಿತದ ಅಭಿವೃದ್ಧಿಗಾಗಿ ತೆರಿಗೆ ಹಾಕುವುದು, ಧಾರ್ಮಿಕ ಕಾರ್ಯಗಳಾದ ದೇವಾಲಯದ ರಚನೆ, ಕೆರೆ ಕಟ್ಟೆಗಳನ್ನು ಕಟ್ಟಿಸುವ ಅಥವಾ ಕಟ್ಟಿಸುವಂತೆ ಪ್ರಚೋದನೆಯೂ ನಡೆಯುತ್ತಿತ್ತು. ನೆರೆ ರಾಜ್ಯಗಳೊಡನೆ ಯುದ್ಧ ಮಾಡಲೇಬೇಕಾಗಿ ಬಂದಂತ ಸಂದರ್ಭಗಳಲ್ಲಿ ಅಥವಾ ಯುದ್ಧ ನಡೆಸುವ ಅಥವಾ ಸಂಧಿ ಮಾಡಿಕೊಳ್ಳುವ ಅಥವಾ ಇತರೆ ಅರಸರಿಗೆ ತಮ್ಮ ನೆರವು ನೀಡಬೇಕಾಗಿ ಬರುವ ಈ ಎಲ್ಲಾ ಸಂದರ್ಭಗಳಲ್ಲಿ ತನ್ನ ಆಡಳಿತದಲ್ಲಿನ ಅಮಾತ್ಯ, ಸಂಧಿವಿಗ್ರಹಿ, ಸೇನಾ ದಂಡನಾಯಕ ಮುಂತಾದ ಹಿರಿಯ ಅಧಿಕಾರಿಗಳನ್ನು ಸೇರಿಸಿ ಒಂದು ನಿರ್ಧಾರಕ್ಕೆ ಬರುತ್ತಿದ್ದರು.

ರಾಜನಾದವನು ತನ್ನ ನಂಬಿಕೆಗೆ ಅರ್ಹನಾದ ವ್ಯಕ್ತಿಗಳಿಗೆ ಅಧಿಕಾರ ನೀಡುತ್ತಿದ್ದ. ಇದಕ್ಕೆ ಕಾರಣ ಹಿಂದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಓಡಾಡಲು ಇದ್ದ ತೊಡರುಗಳು, ರಾಜ ಒಂದು ಕಡೆ ಯುದ್ಧ ಮಾಡಿ ಗೆದ್ದು ಹಿಂದಿರುಗಿದ ತಕ್ಷಣ ಅಲ್ಲಿಯ ಅಧಿಕಾರ ನಿರ್ವಹಿಸಿತ್ತಿದ್ದ ಮಾಂಡಲೀಕ ಅಥವಾ ಅಧಿಕಾರಿ ನಿಷ್ಠೆ ಬದಲಾಯಿಸುತ್ತಿದ್ದ ಘಟನೆಗಳೂ ನಡೆಯುತ್ತಿದ್ದವು. ಅನೇಕ ಮಾಂಡಲೀಕರು, ಅಧಿಕಾರಿಗಳು ತಮ್ಮನ್ನು 'ರಾಜ್ಯ ಮೂಳಸ್ತಂಭ'ರೆಂದು ಕರೆದುಕೊಂಡಿದ್ದಾರೆ. ಇದರಿಂದ ರಾಜನು ಅಧಿಕಾರಿ ಅಥವಾ ಮಾಂಡಳೀಕರ ಮೇಲೆ ಅವಲಂಬಿಸಿದ್ದುದನ್ನು ತಿಳಿಯಬಹುದು. ಇಂತಹ ಅಧಿಕಾರಿಗಳಿಂದ ಅಧಿಕಾರದ ದುರುಪಯೋಗವಾಗಿರುವ ಸಾಧ್ಯತೆಗಳು ಇರುವುದರಿಂದ ತನಗೆ ನಿಷ್ಠೆ ಮತ್ತು ಅರ್ಹರಾಗಿದ್ದವರಿಗೆ ಮಾತ್ರ ಅಧಿಕಾರ ನೀಡುತ್ತಿದ್ದ.

ರಾಜ್ಯದಲ್ಲಿ ರಾಜನು ಧಾರ್ಮಿಕ ಕಾರ್ಯಗಳನ್ನು ಮಾಡುತ್ತಿದ್ದದು ಸ್ವಲ್ಪವೇ. ಆದರೆ ಅಧಿಕಾರಿಗಳು ಪುರಜನರು ರಾಜನ ಹೆಸರಿನಲ್ಲಿ ದಾನ ದತ್ತಿಗಳನ್ನು ನೀಡುತ್ತಿದ್ದರು. ನೊಳಂಬರ ಶಾಸನಗಳು ಒಬ್ಬ ವ್ಯಕ್ತಿಯನ್ನು ಮಹಾಪ್ರಧಾನಿ, ಮಹಾಮಾತ್ಯ, ದಂಡನಾಯಕ,ಮಹಾದಂಡನಾಯಕ, ಸಂಧಿವಿಗ್ರಹಿ ಮುಂತಾದ ವಿಶೇಷಗಳಿಂದ ಕರೆದಿದೆ. ರಾಜನ ಕೈ ಕೆಳಗೆ ಮಂಡಲೇಶ್ವರ, ಅವನ ಕೆಳಗೆ ನಾಡಪ್ರಭು, ಅವನ ಕೈ ಕೆಳಗೆ ಊರಗಾವುಂಡ, ಊರೊಡೆಯ ಮುಂತಾದ ಕ್ರಮದಲ್ಲಿ ಅಧಿಕಾರ ನಿರ್ವಹಿಸುತ್ತಿದ್ದರೆಂದು ತಿಳಿಯುತ್ತದೆ.

ಮಂಡಲೇಶ್ವರನಿಗೂ, ನಾಡ ಪ್ರಭುವಿಗೂ ನಡುವೆ ಮನ್ನೆಯ ಎಂಬ ಹೆಸರಿನ ಅಧಿಕಾರಿಯ ಹೆಸರು ಕಾಣಬರುತ್ತಿದೆ. ಮನ್ನೆಯ ಎಂದರೆ ವಂಶ ಪಾರಂಪರ್ಯವಾಗಿ ಗ್ರಾಮಗಳನ್ನು

ಉಪಯೋಗಿಸುವ ಅಥವಾ ಗ್ರಾಮದ ಉತ್ಪನ್ನದ ಕೆಲವು ಭಾಗವನ್ನು ಉಪಯೋಗಿಸುವ ಅಧಿಕಾರ ಪಡೆದಿದ್ದವನು.

ಅಧಿರಾಜರ ಅಧೀನದಲ್ಲಿದ್ದು ಬೇರೆ ಬೇರೆ ರಾಜ್ಯಗಳನ್ನು ಆಳುತ್ತಿದ್ದವರು ಸಾಮಂತರು ಮತ್ತು ಮಂಡಲೇಶ್ವರರು ಮಂಡಳೇಶ್ವರರನ್ನು ಅಧಿರಾಜರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇಡುತ್ತಿದ್ದರು. ಅವರವರ ಆಳ್ವಿಕೆಯ ಪ್ರದೇಶದಲ್ಲಿ ಅಧಿರಾಜರಿಗಿದ್ದ ಸ್ಥಾನ ಮಾನಗಳೇ ಇವರಿಗೂ ಇರುತ್ತಿದ್ದವು. ಇವರು ಸಹ ಅಧಿರಾಜರಂತೆ ಮಂತ್ರಿಗಳನ್ನು, ಸೇನೆಯನ್ನು ಇತರ ಅಧಿಕಾರಿ ವರ್ಗದವರನ್ನು ಹೊಂದಿರುತ್ತಿದ್ದರು. ಅನೇಕ ಮಿತ್ರರಾಜರನ್ನೂ ಅವರ ಪಾರಂಪರಿಕ ಆಳ್ವಿಕೆಯ ಪ್ರದೇಶಗಳಲ್ಲಿಯೇ ತಮ್ಮ ಮಾಂಡಳೀಕರಾಗಿ ಆಳ್ವಿಕೆ ಮಾಡಲು ಬಿಡುತ್ತಿದ್ದರು. ಇಂತಹ ಮಾಂಡಲೀಕರು ಬೇರೆ ಬೇರೆ ಕಾರಣಗಳಿಂದ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡಾಗ ಅಂತಹವರನ್ನು ತಮ್ಮ ರಾಜ್ಯಾಡಳಿತದ ಮತ್ತೊಂದು ನೆಲೆಯಲ್ಲಿ ಜಾಗ ಕಲ್ಪಿಸುತ್ತಿದ್ದರು.

ಸಾಮಂತರು ಮೊದಲಿನಿಂದಲೇ ಒಂದು ಪ್ರದೇಶದ ಆಳ್ವಿಕೆ ಮಾಡುತ್ತಿದ್ದವರು.ಅಧಿರಾಜರು ಅವರನ್ನು ಗೆದ್ದಿರುವುದರಿಂದ ಅವನ ಅಧೀನದಲ್ಲಿದ್ದು ಅವಕಾಶ ಒದಗಿದಾಗ ಸ್ವತಂತ್ರರಾಗಲು ಹವಣಿಸುತ್ತಿದ್ದರು. ಅಂತಹ ಒಬ್ಬ ಸಾಮಂತಾಧಿಪತಿ ಪಙ್ಬಲದೇವನ ಹೆಸರು ಉಲ್ಲೇಖವಾಗಿದೆ. ಕ್ರಿ.ಶ. ೯೭೫ರಲ್ಲಿ ಪಡುವಗೆರೆಯಯ್ನೂರರ ಭೋಗಪತಿಯಾಗಿ ಪೆರ್ಗಡೆ ಗುಣ್ಣಮಯನು ಅಯ್ಯಪಮಂಗಲವನ್ನು ಆಳುತ್ತಿರುವಾಗ ಈತನ ಮೇಲೆ ಪೂರ್ವಮರ್ಯ್ಯಾದೆದಪ್ಪಿ ಆಕ್ರಮಣ ಮಾಡಿದಾಗ ಮಾರಮಯ್ಯನ ಮಗನಾದ ಏಚಮಯ್ಯನು ಆಕ್ರಮಣ ಮಾಡಿದವನನ್ನು ಇರಿದು ಕೊಂದು ಪೆರ್ಗ್ಗಡೆ ಗುಣ್ಣಯ್ಯನಿಗೆ ಕ್ಷಮೆ ಕೊಟ್ಟದ್ದನ್ನು ತಿಳಿಸುತ್ತದೆ[೫೦].

ದಂಡನಾಯಕ

ಕ್ರಿ.ಶ.ಸು. ೯೨೫ರಲ್ಲಿ ಅಣ್ಣಯ್ಯ ಬೀರನೊಳಂಬನು ಆಳುತ್ತಿದ್ದಾಗ ಪ್ರಚಂಡ ದಂಡನಾಯಕನ ಮಗ ಗೊಗ್ಗಿಲಾಱಿಲ್ಮಿಱಿಯನ್ನು ಆಳುತ್ತಿದ್ದ. ಆಗ ಗುಂಡಣ್ಣ ದಂಡನಾಯಕನಿದ್ದುದನ್ನು ಉಲ್ಲೇಖಿಸುತ್ತದೆ. ಈ ಗುಂಡಣ್ಣ ದಂಡನಾಯಕ ನಿಕ್ಕಪ್ಪಯ್ಯನ ಮಗ ಕಾನ್ತದ ಗೊಗ್ಗಿಯು ಊರಳಿವಿನಲ್ಲಿ ಸತ್ತದ್ದನ್ನು ತಿಳಿಸುತ್ತದೆ[೫೧]. ಕಮ್ಮಸಂದ್ರದ ಕ್ರಿ.ಶ. ೧೦೦೧ರ ಶಾಸನದಲ್ಲಿ ಅಯ್ಯಪದೇವನ ಮಗ ಗನ್ನರಸನು ದಡಿಗವಾಡಿಯ ಕುಱುಕ್ಷನ್ನಱ್ಬ[೫೨] ಆಳುತ್ತಿರುವಾಗ ಅವನ ದಂಡನಾಯಕ ಶ್ರೀಧರಯ್ಯನು ನಾಡುಂ ನಾಮ್ಗಿವುಣ್ಡಾಂ ನಿದ್ದಗಾವುಂಡಂ ಸೇರಿ ಸತ್ತಿಮಂಗಲದ ಭೂಮಿಯ ಸಮ್ಮನ್ದ ಮಾರಮಯ್ಯನು ಪುಣಿಸಿಯಮ್ಮ ಮೊದಲಾದವರು ಸೇರಿ ಚಾವುಂಡಯ್ಯನಿಗೆ ದಾನಶಾಸನ ನೀಡಿದ್ದನ್ನು ತಿಳಿಸುತ್ತದೆ[೫೩]. ಮೋರಿಗೇರಿಯ ಕ್ರಿ.ಶ.೧೦೨೫ರ ಮತ್ತು ೧೦೪೬ ಶಾಸನಗಳಲ್ಲಿ ನನ್ನಿನೊಳಂಬ ಪಲ್ಲವ ಪೆರ್ಮ್ಮಾನಡಿಗಳು ಆಳುತ್ತಿರುವಾಗ ದಂಡನಾಯಕ ಲೆಕಣ್ಣ ಪ್ರಮುಖ ಲೆಂಕಸಾಸಿರ್ವ್ವರು ಆರ್ಮ್ಮೆಳೆ,

ನೆಲ್ಲಿಕುದಿರು, ಸೊನ್ನ, ಪೊವಿಲ್ಲುಂದೆ, ಸೂಗೂರು ಮೋರಿಂಗೆರೆ ಮೊದಲಾದ ಆರು ಬಾಡವನ್ನು ಆಳುತ್ತಿದ್ದಂತೆ ಉಲ್ಲೇಖಿಸಿದೆ. ಈ ಲೆಂಕರಿಗೆ ಆರು ಗ್ರಾಮಗಳನ್ನು ಅವರ ಉಪಯೋಗಕ್ಕಾಗಿ ರಾಜ ನೀಡಿದ್ದಿರಬೇಕು. ಇವರು ಆ ಗ್ರಾಮದ ಉತ್ಪತ್ತಿಯನ್ನು ಸ್ವತಂತ್ರವಾಗಿ ಅನುಭವಿಸುತ್ತಾ ಆ ಗ್ರಾಮಗಳಲ್ಲಿ ಕೆಲವು ಸತ್ಕಾರ್ಯಗಳನ್ನು ಮಾಡಿಸುತ್ತಾರೆ. ಈ ಲೆಂಕರ ಪ್ರಮುಖನಾದ ಲೆಕಣ್ಣನು ಬ್ರಾಹ್ಮಣನೆಂಬುದು ಗಮನಾರ್ಹ, ಇದೇ ಶಾಸನದಲ್ಲಿ ಬಲ್ಲವಾಡಿಯಟ್ಟಿತ್ತರ ಪ್ರದೇಶವನ್ನು ಮನ್ನೆಯ ಚಟ್ಟರಸ ಅನುಭವಿಸುತ್ತಿದ್ದ[೫೪].

ಹಿರೇ ಮ್ಯಾಗಳಗೇರಿಯ ಕ್ರಿ.ಶ. ೧೦೫೪ರ ಶಾಸನದಲ್ಲಿ ದಂಡನಾಯಕ ಜಗದೇಕಮಲ್ಲನೊಳಂಬ ಬ್ರಹ್ಮಾದಿ ರಾಜನ ಉಲ್ಲೇಖವಿದ್ದು ಇವನು ನೊಳಂಬ ಬಿರುದುಗಳನ್ನೇ ಧರಿಸಿ ಅವರ ಸಾಮಂತನಾಗಿ ಹಿರೇಮ್ಯಾಗಳಗೇರಿಯಲ್ಲಿ ಆಳ್ವಿಕೆ ಮಾಡುತ್ತಿದ್ದ[೫೫]. ಉಚ್ಚಂಗಿ ದುರ್ಗದ ಕ್ರಿ.ಶ. ೧೦೭೦ರ ಶಾಸನದಲ್ಲಿ ನೊಳಂಬ ಪಲ್ಲವಪೆರ್ಮಾಡಿದೇವ ಜಯಸಿಂಘದೇವನು ಆಳುತ್ತಿರುವಾಗ ದಂಡನಾಯಕ ಮಾಳಪಯ್ಯಗಳ ಮಹಾಸನ್ಧಿವಿಗ್ರಹಿ ದಂಡನಾಯಕರ ಉಲ್ಲೇಖವಿದೆ. ಇವನನ್ನು ಕವಿಯು ವಿಶೇಷಣಗಳ ಸರಮಾಲೆಯಲ್ಲಿ ವರ್ಣಿಸಿದ್ದಾನೆ. ಮಹಾಸಾಮನ್ತಾಧಿಪತಿ ಮಹಾಪ್ರಚಣ್ಡದಂಡನಾಯಕ ಆಸ್ಥಾನ ವಸ್ತುನಾಯಕ ಮುಂತಾದವುಗಳು ಇದ್ದವು[೫೬]. ಗುತ್ತಿಯ ಕ್ರಿ.ಶ. ೧೦೭೪ರ ಶಾಸನದಲ್ಲಿ ನೊಳಂಬ ಪಲ್ಲವಪೆರ್ಮಾಡಿ ಜಯಸಿಂಗದೇವನು ಆಳುತ್ತಿರುವಾಗ ದಂಡನಾಯಕ ಚಾವುಂಡಯ್ಯನ ಉಲ್ಲೇಖವಿದೆ[೫೭]. ಹಳೆಬ್ಬೂರು ಗ್ರಾಮದ ಕ್ರಿ.ಶ. ೧೦೮೧ರ ಶಾಸನದಲ್ಲಿ ಜಯಸಿಂಗದೇವನ ದಂಡನಾಯಕ ತಂಬರಸರು ಬನವಾಸಿ ಸ್ತಾನಳಿಗೆಯನ್ನು ಆಳುತ್ತಿದ್ದುದನ್ನು ಹೇಳಿದೆ[೫೮].

ಪೆರ್ಗ್ಗಡೆ

ರಾಜನ ಪರವಾದ ಸ್ಥಳೀಯ ಅಧಿಕಾರಿಗಳಾಗಿ ರಾಜ್ಯದ ಸುಂಕ ವಸೂಲಿ ಮುಂತಾದವುಗಳ ಜವಾಬ್ದಾರಿಯನ್ನು ಪೆರ್ಗ್ಗಡೆ/ಹೆಗ್ಗಡೆಗಳು ವಹಿಸಿಕೊಂಡಿದ್ದರು. ಸ್ಥಳೀಯವಾಗಿ ಪ್ರಭಾವಿಗಳಾಗಿದ್ದರು. ಸಾಮಾನ್ಯವಾಗಿ ಬ್ರಾಹ್ಮಣರು ಈ ಹುದ್ದೆಗಳಲ್ಲಿದ್ದರು. ಹಿರೇಮದರಿ ಗ್ರಾಮದ ಶಾಸನದಲ್ಲಿ (ಕ್ರಿ.ಶ.ಸು.೯೭೦) ಸನ್ನಿಗಾವುಣ್ಡ ಲಗಾವುಣ್ಡ, ನಾಗಗಾವುಣ್ಡ ಎಳವರಿಗಾವುಣ್ಡ, ಎಮಾರಂ ಎಜಿಯಮ್ಮ ಗಾವುಂಡ ನೊಟಂಬ ಗಾವುಂಡನ ಮಗ ಅಂಣ್ಣಗಂ ಇನಿಬರುಮೀಮಲ್ಲಾ ರಕ್ಷಿಸಲು ಎಂದು ಹೇಳಿದೆ[೫೯]. ಶಿಥಿಲವಾದ ಈ ಶಾಸನದಲ್ಲಿ ಈ ಗಾವುಂಡರು ಊರಟಿವಿನಲ್ಲಿ ಸತ್ತಿರುವುದನ್ನು ತಿಳಿಸುತ್ತದೆ. ಬಲ್ಲಕುಂದೆ ಗ್ರಾಮದ ಕ್ರಿ.ಶ.೯೬೬ ಶಾಸನದಲ್ಲಿ ಪೆರ್ಗ್ಗಡೆ(ಜಿ)ನಮಯ್ಯ ಎಂಬುವನ ಉಲ್ಲೇಖವಿರುತ್ತದೆ[೬೦].

ತುಂಬಿಗೆರೆಯ ಕ್ರಿ.ಶ.ಸು.೧೦೧೮ರಲ್ಲಿ ಪೆರ್ಗ್ಗಡೆ ಚನ್ದಿಮಯ್ಯ[೬೧]. ಬಾಗುಳಿಯ ಇದೇ ಕಾಲದಲ್ಲಿ ಪೆರ್ಗ್ಗಡೆ ನರಸಿಂಘಯ್ಯನು ಹಿರೇಮ್ಯಾಗಳಗೇರಿಯ ಕ್ರಿ.ಶ. ೧೦೩೪ರಲ್ಲಿ ಮನೆವೆರ್ಗ್ಗಡೆ ಪಲ್ಲವ ಬ್ರಹ್ಮಾದಿರಾಜರನ್ನು ಉಲ್ಲೇಖಿಸಿದೆ[೬೨]. ಇದೇ ಕಾಲದ ಚಿಮ್ಮನಹಳ್ಳಿಯ ಶಾಸನದಲ್ಲಿ ಮನೆವೆರ್ಗಡೆ

ಕೇತನಾಯಕ ನೆಲ್ಕುದುರೆಯನ್ನು ಆಳುತ್ತಿದ್ದ[೬೩]. ಮುದಿಹಡದಿಯ ಕ್ರಿ.ಶ.೧೦೩೬ರ ಶಾಸನದಲ್ಲಿ ಬ್ರಹ್ಮದಿರಾಜನು ಮಹಾಮಾತ್ಯ ಪದವಿ ಮತ್ತು ಮನೆ ಪೆರ್ಗ್ಗಡೆಯ ಕಾರ್ಯಗಳನ್ನು ನೋಡಿಕೊಂಡು ಪದಡೆಪನ್ನೆರಡನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ[೬೪]. ಕಂಚಿಕೇರಿಯ ಕ್ರಿ.ಶ. ೧೦೩೯ರ ಶಾಸನದಲ್ಲಿ ಪೆರ್ಗ್ಗಡೆ ಬಾಚಿಮಯ್ಯ ಗಂಚಿಕೆರೆಯನ್ನು ಆಳುತ್ತಿದ್ದ. ಸಂಧಿವಿಗ್ರಹಿ ಅರಿದಾಸಯ್ಯ ಎಂಬುವವನ ಹೆಸರು ಉಲ್ಲೇಖವಾಗಿದೆ[೬೫]. ತುಂಬಿಗೆರೆಯ ಕ್ರಿ.ಶ. ೧೦೪೦ರ ಶಾಸನದಲ್ಲಿ ಪೆರ್ಗ್ಗಡೆ ಚನ್ನಿಮಯ್ಯ ನಾಯಕನು ದೊರೆಗೆ ಬಿನ್ನಹ ಮಾಡಿ ಆಲೂರಿನ ಮೂಲಸ್ಥಾನ ದೇವರಿಗೆ ಭೂದಾನ ಮಾಡುತ್ತಾನೆ[೬೬]. ಬದನೆಹಾಳು ಕ್ರಿ.ಶ. ೧೦೫೫ರ ಶಾಸನದಲ್ಲಿ ಪೆರ್ಗ್ಗಡೆ ವೀರರಾಕ್ಷಸ ಹಿರಾಯನ ಎಂಬುವವನು ಕವತಾಳು ಪನ್ನೆರಡರ ಬಳಿಯ ನೇಮಿಲ ಬದಲದಾಳದಲ್ಲಿದ್ದ ಧರ್ಮ್ಮೇತದ ಬಾವಿಗೆ ದಾನ ಕೊಟ್ಟ ಉಲ್ಲೇಖವಿದೆ[೬೭]. ಕ್ರಿ.ಶ.ಸು.೯೨೦ರಲ್ಲಿ ಅಣ್ಣಿಗನು[೬೮] ಬಿಲ್ಲಕೊತ್ತಮಂಗಲ ಆಳುತ್ತಿರುವಾಗ ಪೆರ್ಗ್ಗಡೆ ಬೊಯ್ಯಂನು ಗಂಗರ ಆನೆಯ ಕುಂಭಸ್ಥಳಕ್ಕೆ ಕುದುರೆಯಿಂಪಾಯಿಸಿ ಸತ್ತಿದ್ದಕ್ಕೆ ಕಲ್ನಾಡು ಕೊಟ್ಟ, ಕುಣ್ಣೋಜಿ ಗ್ರಾಮದ ಕ್ರಿ.ಶ.೧೦೬೮ರ ಈ ಶಾಸನದಲ್ಲಿ ಮಹಾಸಾಹಸಿ ಎಂದು ಬಲ್ಲರಸನನ್ನು ಕರೆದಿದೆ[೬೯]. ಹುಲೇಗುಂದಿಯ ಕ್ರಿ.ಶ. ೧೦೭೩ರಲ್ಲಿ ಮಹಸಾಮಂತ ಕೆರೆಯೂರ ಮಂಗಿಯೇಚಯ್ಯ ಸೋಳೂಲ್ಲೆಬ್ಬತ್ತನ್ನು ಆಳುತ್ತಿದ್ದದನ್ನು ಹೇಳಿದೆ[೭೦].

ಗಾವುಂಡರು

ಗಾವುಂಡರು ಸ್ಥಳೀಯ ಅಧಿಕಾರಿಗಳು. ಇವರ ಆಧಿಕಾರ ವಂಶ ಪಾರಂಪರ್ಯ ವೃತ್ತಿಯಾಗಿರುತ್ತಿತ್ತು. ಊರಿನಲ್ಲಿ ತಮ್ಮ ಹೊಲ ಗದ್ದೆಗಳ ಕೆಲಸದ ಜೊತೆಗೆ ಊರಿನ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದರು. ಊರಳಿವು, ಪೆಂಡಿರುಡೆಯರ್ಚು ತುರುಗಾಳಗ ಮುಂತಾದವು ನಡೆದಾಗ ಮುನ್ನುಗ್ಗಿ ಹೋರಾಡುತ್ತಿದ್ದವರು ಇವರೇ ಆಗಿದ್ದರು. ಕೆಲವು ಶಾಸನಗಳಲ್ಲಿ ಪೆರ್ಗ್ಗಡೆ, ಗಾವುಂಡರು ನೊಳಂಬ ದೊಡ್ಡ, ಪಾರ್ವರು ಮುಂತಾದವರು ಸೇರಿ ದಾನ ಮಾಡಿದ ಉಲ್ಲೇಖ ಬರುತ್ತದೆ. ಕಂಬದೂರಿನ ಕ್ರಿ.ಶ.೮೮೩ರ ಶಾಸನದಲ್ಲಿ ಸರ್ವಾಧಿಕಾರಿ ಪೆರ್ಗ್ಗಡೆ,ಕುರುಗಾವುಂಡ, ದಂಡಿಗಾವುಂಡ, ನೊಳಂಬ ದೊಡ್ಡ, ಗಾವುಂಡಸಾಮಿ ಇವರುಗಳ ಹೆಸರುಗಳು ಬಂದಿವೆ. ಗಾವುಂಡರು ಎಂದರೆ ಆ ಊರಿನ ಮುಖ್ಯಸ್ಥರನ್ನು ಗೌಡರೆಂದು ಕರೆಯುತ್ತಿದ್ದಿರಬೇಕು. ಇವರು ದಾನ ನೀಡುವ ಅಥವಾ ಸ್ವೀಕರಿಸುವ ಸಮಯದಲ್ಲಿರುತ್ತಿದ್ದ, ಊರಿನ ಆಗುಹೋಗುಗಳನ್ನು ಗಮನಿಸುತ್ತಿದ್ದರು. ಬೆಳ್ದುಗೊಂಡೆಯ ಗೌಡರುಗಳು ಸೇರಿ ಒಂದು ಕೊಲಿಮೆಗೆ ಭೂದಾನ ಕೊಟ್ಟ ಉಲ್ಲೇಖವಿದೆ[೭೧].

ನಿಟ್ಟೂರಿನ ಕ್ರಿ.ಶ. ೧೦೩೪ರಶಾಸನದಲ್ಲಿ ಗಾವುಂಡ ಬಲಯ್ಯ ಎಂಬುವವನು ಕದಂಬಗಳಿಗೆ ಸಾಯಿರದ ಬಳಿಯ ಕಂಡಣಕುನ್ನುರೆಬ್ಬಿತರೊಳಗಣ ಕನ್ನೂರು, ಬನ್ನಿಕೋಡು, ಹಪ್ಪವನಹಾಳು ನಿಟ್ಟೂರನ್ನು ಆಳುತ್ತಿದ್ದುದನ್ನು ಹೇಳುತ್ತದೆ. ಬಹುಶಃ ಇವನು ಪ್ರಭಾವಶಾಲಿಯಾದ ಗಾವುಂಡನಿದ್ದಿರಬೇಕು[೭೨]. ಮಾನ್ಯರ ಮಸಲವಾಡದ ಕ್ರಿ.ಶ.೧೦೩೬ರ ಶಾಸನದಲ್ಲಿ ಪನ್ನೆರಡರ ಮನ್ನೆಯ[೭೩]

ಅಯ್ಯ ಭೀವಬೋಗರಸ, ಮಾರಗಾವುಂಡ, ರಾಚಮ್ಮ ಗಾವುಂಡ, ಬೋಗಯ್ಯಬ್ಬಯ್ಯ, ಸಹಾದೇವಯ್ಯ ಇವರು ಕಲಿದೇವರ ಸೇವಾಕಾರ್ಯಕ್ಕೆ ಭೂದಾನ ಕೊಟ್ಟರು. ಅವರಗೆರೆಯ ಕ್ರಿ.ಶ.೧೦೪೨ರಲ್ಲಿ ಚಳಕಿ ಅಯ್ಯ ಹರಸಂನಾಳ್ಗಾವುಂಡನು, ಇಂದರ ಗಾವುಂಡನ ಮಗ ಬರ್ಮಿಸೆಟ್ಟಿಗೆ ದಾನ ಕೊಟ್ಟರು[೭೪]. ಕಮ್ಮರ ಚೇಡುವಿನ ಕ್ರಿ.ಶ.೧೦೫೪ರಲ್ಲಿ ಮಹಾಮಂಡಳೇಶ್ವರ ವೀರನೊಳಂಬ ಘಟ್ಟಿದೇವನು ಸಿಂಧವಾಡಿಯನ್ನು ಆಳುತ್ತಿರುವಾಗ ಕಮ್ಮರ ಚೇಡುವಿನ ಚಟ್ಟಿಗಾವುಂಡ, ಪಿರಿಯನಾಮ ಗಾವುಂಡ, ಮಾಚಿ ಗಾವುಂಡ, ಆಚಗಾವುಂಡ, ಚಾಮುಂಡಗಾವುಂಡ ತೆಕ್ಕಲಗಾವುಂಡ, ರುದ್ರಮಾರ, ಚಿಕ್ಕಗಾವುಂಡ, ಕೇತಗಾವುಂಡದ ಕಂಪಿಲಿಯ ಮೂಲಸ್ಥಾನ ದೇವರಿಗೆ ದಾನ ಕೊಟ್ಟರು[೭೫].

ಮಹಾಜನರು

ಡಾ॥ ಎಂ. ಚಿದಾನಂದ ಮೂರ್ತಿಯವರು 'ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ ಮಹಾಜನಗಳು'. ಅವರೇ ಅಗ್ರಹಾರದ ಪ್ರಭುಗಳು ಎಂದಿರುತ್ತಾರೆ.ಆದರೆ ಅನೇಕ ಅಗ್ರಹಾರಗಳನ್ನು ಅಭ್ಯಾಸ ಮಾಡಿದಾಗ ಅಗ್ರಹಾರಗಳಲ್ಲಿ ಬೇರೆ ಬೇರೆ ಜನರು ವಾಸಿಸುತ್ತಿದ್ದರೆಂಬುದು ತಿಳಿಯುತ್ತದೆ. ಹೀಗಾಗಿ ಬ್ರಾಹ್ಮಣರು ಅಗ್ರಹಾರವನ್ನು ದಾನವಾಗಿ ಪಡೆದಿದ್ದರೆಂಬ ವಿವರಣೆಯನ್ನುಮ ಎಲ್ಲ ಅಗ್ರಹಾರಗಳಿಗೂ ಅನ್ವಯಿಸುವುದು ಸರಿಯಲ್ಲ.ಯಾವುದೇ ಗ್ರಾಮಗಳಲ್ಲಿನ ಬ್ರಾಹ್ಮಣ ಕುಟುಂಬಗಳನ್ನು ಗುರುತಿಸಿ ಮಹಾಜನರ ಸಂಖ್ಯೆಯನ್ನು ಉಲ್ಲೇಖಿಸುತ್ತಿದ್ದರು. ಇದರಿಂದ ಶಾಸನಗಳಲ್ಲಿ ಮಹಾಜನರು ೫೨, ಮಹಾಜನರು೫೦೦, ಇತ್ಯಾದಿ ಸಂಖ್ಯೆಗಳು ಉಲ್ಲೇಖವಾಗಿವೆ. ಊರಿನಲ್ಲಿಯ ಮಹಾಜನರು ಆಡಳಿತಾಂಗದ ಭಾಗವಾಗಿರದೆ ದೈನಂದಿನ ಬ್ರಾಹ್ಮಣ ಚಟುವಟಿಕೆಗಳನ್ನು ನಡೆಸುವವರು ಮಾತ್ರ ಮಹಾಜನರಾಗಲು ಅರ್ಹರಾಗುತ್ತಿದ್ದರು. ಇವರಿಗೆ ಮಾತ್ರ ದಾನವನ್ನು ಪಡೆಯುವ, ಬ್ರಾಹ್ಮಣಿಕ ಕ್ರಿಯೆಗಳನ್ನು ನಡೆಸುವ ಅಧಿಕಾರವಿತ್ತು. ಉಳಿದವರಿಗೆ ಆಡಳಿತಾಂಗದಲ್ಲಿ ಅಧಿಕಾರಗಳಿರಲಿಲ್ಲ ಮತ್ತು ದಾನವನ್ನು ಸ್ವೀಕರಿಸುವ ಅಧಿಕಾರವೂ ಇರಲಿಲ್ಲ.

ಮಹಾಜನರ ಸಮ್ಮುಖದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯಬೇಕಿತ್ತು. ದಾನವನ್ನು ನೀಡುವಂತಹ ಸಮಯಗಳಲ್ಲಿ ಮಹಾಜನರ ಪಾದವನ್ನು ತೊಳೆದು ಅವರ ಸಾಕ್ಷಿಯಲ್ಲಿ ದಾನವನ್ನು ನೀಡಬೇಕಾಗಿತ್ತು. ಅಲ್ಲದೆ ಯಾವುದೇ ದೇವಾಲಯಕ್ಕೆ ದಾನವನ್ನು ನೀಡಿದಾಗ ಆ ದಾನದ ಉಪಯೋಗ, ಉಸ್ತುವಾರಿ ಈ ಮಹಾಜನರಿಗೆ ಸೇರಿತ್ತು. ಅತ್ತಿಮಬ್ಬೆ ಲಕ್ಕಿಗುಂಡಿಯಲ್ಲಿ ಬಸದಿಯನ್ನು ಕಟ್ಟಿಸಿದಾಗ ಬಸದಿಯ ಪೂಜಾ ನಿಮಿತ್ತವಾಗಿ ಅಗ್ರಹಾರದ ಮಹಾಜನರ ಅನುಮತಿ ಪಡೆದು ಬಸದಿಗೆ ದಾನ ನೀಡಿದ್ದಲ್ಲದೆ, ಆ ಅಗ್ರಹಾರದ ಬ್ರಾಹ್ಮಣರನ್ನು ಸಂಪ್ರೀತಗೊಳಿಸಲು ಬ್ರಹ್ಮನ ಮೂರ್ತಿಯನ್ನು ಸ್ಥಾಪಿಸುತ್ತಾಳೆ.

ಮಹಾಜನರು ದಾನವನ್ನು ಮಾತ್ರ ಸ್ವೀಕರಿಸುವವರಾಗಿರಲಿಲ್ಲ. ಅದರೊಂದಿಗೆ ತಾವು ದಾನ ಸ್ವೀಕರಿಸಿದ ಭೂಮಿಯಲ್ಲಿನ ಉತ್ಪತ್ತಿಯ ಕೆಲವು ಭಾಗವನ್ನು ದೇವರಿಗೆ ಮತ್ತು ವಿದ್ಯಾದಾನಕ್ಕೆ ನೀಡಿರುವ ಉದಾಹರಣೆಗಳು ಸಾಕಷ್ಟಿವೆ.

ನೊಳಂಬರ ಶಾಸನಗಳಲ್ಲಿ ತಾಯಲೂರು, ಕುರುಬೂರು, ಶಿವಾರ ಪಟ್ಟಣ, ಗುಣಿಮೊರ ಬಾಗಿಲು, ಅಗಳಿ, ಮುಂತಾದ ಗ್ರಾಮಗಳಲ್ಲಿನ ಮಹಾಜನರ ಸಂಖ್ಯೆ ಒಂದೇ ತೆರನಾಗಿರುವುದಿಲ್ಲ. ಆ ಗ್ರಾಮದ ಫಲವತ್ತತೆ, ವಾಸಾನುಕೂಲ ಇವುಗಳ ಆಧಾರದ ಮೇಲೆ ಮಹಾಜನರ ಸಂಖ್ಯೆ ಏರಿಳಿತವಾಗುತ್ತಿತ್ತು.

ಇವರ ಕಾಲದಲ್ಲಿ ಬ್ರಾಹ್ಮಣರಿಗೆ ದಾನ ನೀಡಿದ್ದ ಗ್ರಾಮಗಳನ್ನು 'ಮಂಗಲ'ವೆಂದು ಕರೆದಿದ್ದು ಮಂಗಲವೆಂದರೆ ಅಗ್ರಹಾರವೆಂದೇ ಅರ್ಥವಾಗುತ್ತದೆ. ಉದಾಹರಣೆಗೆ ಪ್ರಭುರಾಮಮಂಗಲ, ಅಯ್ಯಪ್ಪಮಂಗಲ, ಪೊಟಿರಮಂಗಲ, ಮಣ್ಣಿಮಂಗಲಗಳನ್ನು ಉದಾಹರಿಸಬಹುದು. ಹೀಗೆ ಮಂಗಲಗಳನ್ನು ನಿರ್ಮಿಸಿ ಅಲ್ಲಿನ ಭೂಮಿಯನ್ನು ಆ ಮಂಗಲಕ್ಕೆ ಸಂಬಂಧಿಸಿದ ಮಹಾಜನರಿಗೆ ಅವರ ವೃತ್ತಿಗೆ ಅನುಗುಣವಾಗಿ ಹಂಚುತ್ತಿದ್ದರು.

ಹಿರೇಹಡಗಲಿಯ ಕ್ರಿ.ಶ. ೮೪೮ರ ಶಾಸನದಲ್ಲಿ ಅನಾದಿಯಗ್ರಹಾರಂ ಪೊಸವಡಂಗಿಲೆ ಯೂರಡೆಯ ಪ್ರಮುಖ ೧೨೦ ಮಹಾಜನರು ದಾನ ಕೊಟ್ಟ ಭೂಮಿಯನ್ನು ರಚಿಸುವಂತೆ ಹೇಳಿದೆ[೭೬]. ತಾಯಲೂರಿನ ಕ್ರಿ.ಶ.೮೯೫ ರ ಶಾಸನದಲ್ಲಿ ನಾಲ್ವದಿಂಬರು ಅಂದರೆ ೪೨ರು ಜನರನ್ನು ನಾವು ಮಹಾಜನರೆಂದೇ ಭಾವಿಸಬಹುದು[೭೭]. ವರ್ತೂರಿನ ಕ್ರಿ.ಶ.ಸು.೯೧೦ರ ಶಾಸನದಲ್ಲಿ ಎರೆಯಪಮಂಗಲದ ಮಹಾಜನರ ಸಾಕ್ಷಿಯಾಗಿ ಕೈಲಾಸ ಪಂಡಿತರು ಬರೆದ ಶಾಸನವೊಂದು ಇರುವುದರಿಂದ ಮಹಾಜನರ ಸಾಕ್ಷಿಯಾಗಿ ದಾನ ನೀಡಿದ ಉದಾಹರಣೆ ದೊರೆಯುತ್ತದೆ[೭೮]. ಬೇತ ಮಂಗಲದ ಕ್ರಿ.ಶ.ಸು. ೯೨೦ ಶಾಸನದಲ್ಲಿ ಕಯ್ವಾರ-೫೦೦ ಮಹಾಜನರು ವಿಜಯಾದಿತ್ಯ ಮಂಗಲದ ಪರಿಯಕೆರೆಯ ಭಿನ್ನಪ್ರತಿ ಸಂಸ್ಥಾನ ಜೆಗ್ಗಿಯ್ಯು ಸ್ಥಿರೀಕರಿಸಿದ್ದನು ಹೇಳುತ್ತದೆ[೭೯]. ಇನ್ನು ಮುಂತಾದ[೮೦] ಶಾಸನಗಳು ಮಹಾಜನರ ಬಗ್ಗೆ ಹೇಳುತ್ತವೆ.

ಸೋಮಪುರದ ಕ್ರಿ.ಶ. ೧೦೮೦ರ ಶಾಸನದಲ್ಲಿ ೩೫ ಮಹಾಜನರ ಉಲ್ಲೇಖವಿದೆ. ಈ ಮಹಾಜನರ ವಿದ್ಯೆ ಪಾಂಡಿತ್ಯವನ್ನು ಕವಿ ಕಾವ್ಯದಲ್ಲಿ ವರ್ಣಿಸಿರುವುದನ್ನು ಕೆಲವು ಪದ್ಯಗಳಿಂದ[೮೧] ತಿಳಿಯಬಹುದಾಗಿದೆ. ಕ್ರಿ.ಶ.೧೦೮೨ರ ಶಾಸನದಲ್ಲಿ ಕುರ್ತುಕೋಟಿಯ ಊರೊಡೆಯನು ಪ್ರಮುಖ ೨೦೦ಮಹಾಜನರು ಕಡಲಗೆರೆಗೆ ಪುನರ್ದತ್ತಿಯಾಗಿ ಕೊಟ್ಟ ದಾನದ ಉಲ್ಲೇಖವಿದೆ.

ಹೀಗೆ ಮಹಾಜನರಾದ ಈ ಬ್ರಾಹ್ಮಣರು ಆಯಾ ಗ್ರಾಮ ಮತ್ತು ಊರುಗಳಲ್ಲಿ ನಡೆಯುತ್ತಿದ್ದ ಧಾರ್ಮಿಕ, ಸಾಂಸ್ಕೃತಿಕ ಶೈಕ್ಷಣಿಕ ಕೆಲಸಗಳನ್ನು ತಮ್ಮ ನಿಷ್ಠೆಯಿಂದ ಪ್ರತಿ ಪಾಲಿಸಿಕೊಂಡು ಬರುತ್ತಿದ್ದರು ಈ ಕೆಲಸಗಳ ಅವರ ಘನತೆ ಗೌರವಗಳನ್ನು ವ್ಯಕ್ತಪಡಿಸುತ್ತದೆ.

ಮಹಾಸಾಮಂತರು

ಕಣ್ಣಂ

ರಾಷ್ಟ್ರಕೂಟ ದೊರೆ ಶುಭತುಂಗ ಭಟಾರ (ಕೃಷ್ಣ ಕ್ರಿ.ಶ.೮೯೩-೯೪) ಆಳುತ್ತಿರುವಾಗ ಆತನ ಮಹಾಸಾಮಂತ 'ಸ್ವಸ್ತಿ ಸಮಸ್ತ ಗಂಗಾಶ್ರಯ ಶ್ರೀಮತು ಕಣ್ಣಂ' ಸಿಂಧವಾಡಿ ಸಾಸಿರ ಆಳುತ್ತಿದ್ದರು. ಈ ಕಣ್ಣನೂ 'ಮಂಚಾಳವನ್ನು' ದಾನ ಬಿಟ್ಟದ್ದು ತಿಳಿದುಬರುತ್ತದೆ.[೮೨] ಮಂಚಾಳವೇ ಇಂದಿನ ಮಂತ್ರಾಲಯ.

ಮಹಾಸಾಮಂತ ಕನ್ನರ

ದೊಡ್ಡಿಮಾಕಾಳ[೮೩] ಶಾಸನೋಕ್ತನಾದ ಇವನು ರಾಷ್ಟ್ರಕೂಟ ದೊರೆ ನಾಲ್ಕನೇ ಗೋವಿಂದ ಪಾದ ಪದ್ಮೋಪ ಜೀವಿಯಾಗಿದ್ದ ಮಹಾಸಾಮಂತ ಕನ್ನರನು ಇವನು ಸಿಂಧವಾಡಿ ಸಾಸಿರ ವಿಭಾಗವನ್ನು ಆಳುತ್ತಿದ್ದನು. ಹಾಲರವಿ[೮೪] ಶಾಸನದಿಂದ ಈತನ ಅರಸಿಚಂದಿಯೆಬ್ಬೆ ಎಂಬುದು ತಿಳಿದುಬರುತ್ತದೆ. ಈಕೆಯು 'ನನ್ನವರ'ದಲ್ಲಿ ಬಸದಿಯನ್ನು ಮಾಡಿಸುತ್ತಾಳೆ. ಈ ಬಸದಿಗೆ ಮಹಾಸಾಮಂತ ಕನ್ನರನು ರಾಜನೂರ ಗ್ರಾಮದ ಭೂಮಿ, ಸಿದ್ದಾಯದ ಪೊಂಗದ್ಯಾಣವನು ಬಿಡುತ್ತಾನೆ.

ಲಚ್ಚಿಯನಾಯಕ

ಚಾಳುಕ್ಯ ಮುಮ್ಮಡಿ ಜಗದೇಕಮಲ್ಲನ ಕಾಲದಲ್ಲಿ ಅವನ ಸಾಮಂತರಾದ ಕುರುಗೋಡಿನ ಸಿಂಧರ ಅಧೀನನಾಗಿ ಆಳುತ್ತಿದ್ದ ಮಹಾಸಾಮಂತ ಲಚ್ಚಿಯನಾಯಕನು "ಇಮ್ಮಡಿ ರಾಚಮಲ್ಲದೇವ ರಾಜ್ಯ ಸಮುದ್ಧರಣಂ" ಎನಿಸಿದ್ದನೆಂದು ಒರುವಾಯಿ[೮೫] ಶಾಸನದಲ್ಲಿ ಬರುತ್ತದೆ. ಮಹಾಮಂಡಳೇಶ್ವರ ದೊರವಾಡಿ ನಾಡ ಕಾಚರಸ, ಲೋಕರಸ, ಗಂಗರಸ, ಈ ಮೂವರು ಇದ್ದಾಗ ಅವರ ಸಮ್ಮುಖದಲ್ಲಿ ಈತನು ತನ್ನ ಸಹೋದರರಾದ ಮಾದೆಯನಾಯಕ,ವಿರುಪನಾಯಕ, ಆಚೆಯನಾಯಕರೊಂದಿಗೆ ಹೊಸ ಕುತಕನೂರು ಮತ್ತು ಕುರುಗೋಡಿನಲ್ಲಿ ದೇವಾಲಯಗಳನ್ನು ರಚಿಸಿ ದಾನ ನೀಡಿದಂತೆ ಹೇಳಿದೆ. ಶಾಸನದಲ್ಲಿ ಇವನ ಪ್ರಶಸ್ತಿಯನ್ನು "ಶ್ರೀಮನ್ಮಹಾಪ್ರಧಾನಂ ಮಾನನಿಧಾನಂ ಮಲೆಗಳಾದಿತ್ಯಂ ವಿತರಣ ವಿಕ್ರಮಾದಿತ್ಯಂ. ಇನ್ನು ಮುಂತಾದವುಗಳು ಕೊಡಲಾಗಿದೆ. ಈ ಮೇಲಿನ ಪ್ರಶಸ್ತಿಗಳಿಂದ ಲಚ್ಚಿಯ ನಾಯಕನು ಕುರುಗೋಡಿನ ಸಿಂಧರ ಪರವಾಗಿ ಹಲವಾರು ಯುದ್ಧಗಳನ್ನು ಮಾಡಿ ವಿಜಯಿಯಾಗಿದ್ದು, ಅವರ ನಿಷ್ಠಾವಂತ ಸಾಮಂತನೆನಿಸಿದ್ದುದು ಗೊತ್ತಾಗುತ್ತದೆ.

ಮನ್ನೆಯ ಚಾಕ

ವಿಕ್ರಮಾದಿತ್ಯನು ಬಲ್ಲಕುಂದೆ ೩೦೦, ತೆಕ್ಕೆಕಲ್ಲು ೧೨ನ್ನು ಆಳುತ್ತಿದ್ದಾಗ ಸಿಂಧ ವಂಶದ ಬಾಚಿಭೂಪನ ಕೈಕೆಳಗೆ ಗೌಡಪ್ರಭುನಾಗದೇವನಿದ್ದು, ಇವನ ಕೈ ಕೆಳಗೆ ಚಾಕರಸನಿದ್ದ. ಸಾಲಗುಂದೆಯ[೮೬] ಕ್ರಿ.ಶ.೧೦೬೩ರ ಶಾಸನದಲ್ಲಿ ಈತನ ಉಲ್ಲೇಖವಿದೆ. ಈತನು ತೆಕ್ಕೆಕಲ್ಲು ೧೨ನ್ನು ಆಳುತ್ತಿದ್ದನು. ಈತನು

ದೇವರಿಗೆ ಸಿರಿವುರದಲ್ಲಿ ಗದ್ದೆಯನ್ನು ದಾನ ಬಿಡುತ್ತಾನೆ. ಅಲ್ಲದೇ ಸಿರುಗುಪ್ಪದ ಹತ್ತಿರವೂ ಗದ್ದೆಯನ್ನು ದಾನ ಬಿಡುತ್ತಾನೆ. ಸಾಲಗುಂದೆಯ ಪಶ್ಚಿಮಕ್ಕೆ ಎಡೆಯವಳ್ಳಿಯನ್ನು ಭೂದಾನ ನೀಡಿದ ಉಲ್ಲೇಖವಿದೆ.

ಸಾಮಂತ ಮಾದೆಯ ನಾಯಕ

ಈತನ ಉಲ್ಲೇಖ ಹಂಪೆಯ[೮೭] ಶಾಸನದಲ್ಲಿ ಬರುತ್ತದೆ. ಇವನು ಕಾಮವ್ವೆ ನಾಯಕಿತಿಯ ಪುತ್ರ. ಈತನಿಗೆ ಲಕ್ಷ್ಮಣ ಮತ್ತು ಆಚೆಯ ನಾಯಕರು ಸಹೋದರರು. ಇವರು ಕುರುಗೋಡಿನ ಸಿಂಧವಂಶದ ಇಮ್ಮಡಿ ರಾಚಮಲ್ಲನ ಪುತ್ರ ವೀರ ಕಲಿದೇವರಸನ ಕೆಳಗೆ ಕಾರ್ಯ ನಿರ್ವಹಿಸುತ್ತಿದ್ದರು. ಇವರಲ್ಲಿ ಮಾದೇಯನಾಯಕನು ವಿರುಪಾಕ್ಷ ತೀರ್ಥದ ರಕ್ಷಣೆಯನ್ನು ಮಾಡುವುದಕ್ಕಾಗಿ ಕಲಿದೇವರಸನು ನೇಮಿಸುತ್ತಾನೆ. ಚಿಕ್ಕ ಸೈನ್ಯವೊಂದನ್ನು ಮತಂಗ ಪರ್ವತದ ಬಳಿ ಈತ ಇರಿಸಿಕೊಂಡಿದ್ದ.

ಸಾಮಂತ ಮಾದೆಯನಾಯಕನದು ಪಂಪಾಕ್ಷೇತ್ರದ ರಕ್ಷಣೆಯ ಹೊಣೆಯಾಗಿತ್ತು. ಶಾಸನ ಇವನ ಗುಣಗಳನ್ನು ಮರ್ಮಾತ್ಮಕವಾಗಿ ಮಾಡಿದೆ. ವೈರಿಗಳಿಗೆ ಬಾಣಗಳ ಸುರಿಮಳೆಯನ್ನು ಇವನು ಪಂಡಿತರಿಗೆ ಬಂಗಾರದ ಸುರಿಮಳೆಯನ್ನೆ ಹರಿಸುತ್ತಿದ್ದನಂತೆ. ಪಂಪಾವಿರೂಪಾಕ್ಷ ಮತ್ತು ಹಂಪಾದೇವಿ ದವಾಲಯಗಳಿಗೆ ಅನೇಕ ದಾನದತ್ತಿಗಳನ್ನು ನೀಡಿದ್ದಾನೆ.

ಪ್ರಭುಗಾವುಂಡರು

'ಪ್ರಭುಗಾವುಂಡ' ಮತ್ತು ನಾಳ್ಪ್ರಭು ಶಬ್ದಗಳು ಒಂದೇ ಹುದ್ದೆಯನ್ನು ಸೂಚಿಸುತ್ತವೆ. ಸಾಮಾನ್ಯವಾಗಿ ಯಾರೇ ಈ ಹುದ್ದೆಯಲ್ಲಿದ್ದರೂ ನಾಳ್ಪ್ರಭುಗಳಾಗಿ ಆಳಿದವರು ಅವರನ್ನು ಗಾವುಂಡರೆಂದು ಕರೆದಿರುತ್ತಾರೆ. ಇವರು ನಾಳ್ಪ್ರಭುತ್ವದಿಂದ ಗಾವುಂಡಗೆಯ್ಯುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆ. ಪ್ರಭುಗಾವುಂಡರು ಒಂದಕ್ಕಿಂತ ಹೆಚ್ಚು ಗ್ರಾಮಗಳ ಒಡೆಯರು ಇವರಿಗೆ ಇಂತಿಷ್ಟೇ ಗ್ರಾಮಗಳು ಇರಬೇಕೆಂಬ ನಿಯಮವಿರಲಿಲ್ಲ ಇವರು ತಮ್ಮದೇ ಆದ ಚಿಕ್ಕ ಸೈನ್ಯ ಮತ್ತು ಆಡಳಿತ ವರ್ಗದವರನ್ನು ಇವರು ಹೊಂದಿದ್ದರು ಮತ್ತು ದೇವಾಲಯ, ಮಠ, ಬಸದಿಗಳು ಹಾಳಾಗದಂತೆ ರಕ್ಷಿಸುವುದು ಇವರ ಕರ್ತವ್ಯಗಳಲ್ಲೊಂದು ಆಗಿತ್ತು.

ನಾಳ್ಪ್ರಭು ಬಮ್ಮದೇವಯ್ಯ

ದುಗ್ಗವತಿ[೮೮] ಶಾಸನದಲ್ಲಿ ಶಾಸನೋಕ್ತನಾದ ಮಹಾವಡ್ಡ ವ್ಯವಹಾರಿ ನಂಬಿಗಣ್ಣಿ, ಸೆಟ್ಟಿ ಸಮಸ್ತ ಪ್ರಜೆಗಳು ಇದ್ದು ಮಹದೇವರಿಗೆ ಗದ್ದೆ, ಭೂಮಿಯನ್ನು ನಂದಾದೀವಿಗೆಗಾಗಿ ಗಾಣ ದಾನ ಬಿಡುತ್ತಾರೆ. ಶಾಸನದಲ್ಲಿ ಈತನನ್ನು 'ಸ್ವಸ್ತಿಯಮ ನಿಯಮ ಸ್ವಾಧ್ಯಾಯ ಧಾರಣ ಮೋನಾನುಷ್ಠಾಣ ಜಪಸಮಾಧಿ ಶೀಲಗುಣ ಇನ್ನೂ ಮುಂತಾದವುಗಳೆಂದು ಪ್ರಶಂಸಿಸಲಾಗಿದೆ.

ಕೊಂಚಾಪುರದ ಯಿರುಂಗರಸ:

ಕುಂಚೂರು[೮೯] ಶಾಸನದಲ್ಲಿ ಈತನ ಉಲ್ಲೇಖವಿದ್ದು ಅಲ್ಲಿ ಇವನು ಕೊಂಚಾಪುರದ ನಾಳ್ಪ್ರಭುವಾಗಿ ಆಳುತ್ತಿದ್ದದ್ದು ಹೇಳಲಾಗಿದೆ. ಶಾಸನದಲ್ಲಿ ಈತನನ್ನು 'ಶ್ರೀಮನ್ಮಹಾನಾಳ್ಪ್ರಭು ಕೊಂಚಾಪುರದ ಯಿರುಂಗರಸ' ಎಂದು ಕರೆಯಲಾಗಿದೆ. ಇವನು ಮಾಹೇಶ್ವರನಾಗಿದ್ದುದೂ ತಿಳಿದುಬರುತ್ತದೆ.

ಯಗುವಟ್ಟಿಯ ಬೊಮ್ಮಗವುಡ:

ತಾಳೂರ[೯೦] ರ ಶಾಸನದಲ್ಲಿ ಈತನ ಪ್ರಸ್ತಾಪ ಬರುತ್ತದೆ. ಶಾಸನದಲ್ಲಿ 'ಶ್ರೀಮನುಮಹಾ ನಾಳುಪ್ರಭು ಯಗುವಟ್ಟಿಯ ಬೊಮ್ಮಗವುಡ' ಎಂದು ಈತನನ್ನು ಕರೆದಿದೆ. 'ತಲರ'ದ ಈಶ್ವರ ದೇವಾಲಯ ಮಾಡಿಸಿದ ಬೊಬ್ಬೋಜನಿಗೆ ಬೊಮ್ಮಗವುಡನು ದೇವಾಲಯದ ರಥದ ಹಣವನ್ನು ಮತ್ತು ಭೂಮಿಯನ್ನು ಕೊಡುತ್ತಾನೆ.

ನಾಳ್ಪ್ರಭು ಅಜ್ಜಗಾವುಂಡ:

ಉಲುವತ್ತಿ[೯೧] ಶಾಸನದಲ್ಲಿ ಇವನ ಉಲ್ಲೇಖವಿದೆ. 'ನಾಳ್ಪ್ರಭು ಉಯ್ಯಲ್ವತ್ತಿಯ ಸಿಂಗಗಾವುಂಡನ ಮಗ ಅಜ್ಜಗಾವುಂಡ' ಎಂದು ಇವನನ್ನು ಅಲ್ಲಿ ಕರೆಯಲಾಗಿದೆ. ಇವನು ತಮ್ಮ ತಂದೆ ಸಿಂಗಗಾವುಂಡ ಮತ್ತು ತಾಯಿ ಶಾಂತಿಕವ್ವೆಯರ ಶ್ರೇಯಸ್ಸಿಗಾಗಿ, ರಾಮೇಶ್ವರ ದೇವರ ಅಂಗಭೋಗಕ್ಕೆ, ನೈವೇದ್ಯಕ್ಕೆ, ನಂದಾದೀವಿಗೆಗೆ ತಪೋಧನರ ಆಹಾರ ದಾನಕ್ಕೆ, ಸಮಸ್ತ ಧರ್ಮಕಾರ್ಯಕ್ಕೆ, ಮಾಟಕೂಟಕ್ಕೆಂದು ಆರು ಎರೆಮತ್ತರನು ಪೂಜಾರಿಗೆ ಎರಡು ಎರೆಮತ್ತರನ್ನು ಒಟ್ಟು ಎಂಟು ಮತ್ತರನ್ನು ಗದ್ದೆ ತೋಟ ಇವುಗಳನ್ನು ಬ್ರಹ್ಮರಾಸಿ ಪಂಡಿತರ ಕಾಲು ತೊಳೆದು ಬಿಡುತ್ತಾನೆ.

ನಾಳ್ಪ್ರಭು ಬಾಗವಾಡಿಯ ಚೌಡಯ್ಯ

ರಂಗಾಪುರ[೯೨] ಶಾಸನೋಕ್ತವಾದ ನಾಳ್ಪಭು ಬಾಗವಾಡಿಯ ಚೌಡಯ್ಯನು ನರಸಿಂಹದೇವರ ತೀರ್ಥಸನ್ನಿಧಿಯಲ್ಲಿ ದಾನ ಬಿಟ್ಟಿರುವ ವಿಷಯ ತಿಳಿದುಬರುತ್ತದೆ. ಬೇರಾವ ವಿವರಗಳು ಲಭ್ಯವಿಲ್ಲ.

ನಾಳ್ಪ್ರಭು ಮಲ್ಲಿಗಾವುಂಡ

ನಾಳ್ಪ್ರಭು ಮಲ್ಲಿಗಾವುಂಡನ ಉಲ್ಲೇಖ ಹೊಳಗುಂದಿ[೯೩] ಶಾಸನದಲ್ಲಿ ಬಂದಿದೆ. ಇವನು ಉದಾರಗುಣಿ, ಸಮ್ಯಕ್ತ ರತ್ನಾರ್ಣವನೆನಿಸಿದನ್ನು ಈತನು ಜಿನ ಪೂಜೆ, ಜೀನಾಲಯ ನಿರ್ಮಾಣ, ಚತುರ್ವಿಧ ದಾನ, ವ್ರತಾಚರಣೆಯಲ್ಲಿ ನಿರತನಾಗಿರುತ್ತಿದ್ದ. ಆ ಕಾಲದಲ್ಲಿನ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ಈತನ ಶೌರ್ಯವನ್ನು ಶಾಸನದಲ್ಲಿ ಅತಿಶಯವಾಗಿ ವರ್ಣಿಸಲಾಗಿದೆ. ರಣಾಂಗಣದಲ್ಲಿ ಇವನ ಹೋರಾಟಕ್ಕೆ ಹೆಣಗಳ ರಾಶಿ ಬಿದ್ದು ರಕ್ತ ಹರಿಯುತ್ತಿತ್ತು. ಕಲಿಯಾಗಿದ್ದ ಈತನು

ಜಿನಧರ್ಮದಲ್ಲಿ ನಂಬಿಗೆಯಿಟ್ಟು ಆ ಧರ್ಮವನ್ನು ಆಚರಿಸುತ್ತಿದ್ದನು. ಇವನ ಧಾರ್ಮಿಕ ಮನೋಭಾವನೆಯನ್ನು ಶಾಸನದಲ್ಲಿ ನಾನಾ ರೀತಿಯಲ್ಲಿ ವರ್ಣಿಸಲಾಗಿದೆ. ಇವನ ಹೆಂಡತಿ ಮಲ್ಲಿಗಾವುಂಡಿ. ಬಾಚಣ, ಮೂಕ ಇವನ ಸಹೋದರರು. ಕೊಗನುರು, ಕೊಲೆ ಎಂಬ ಎರಡು ಗ್ರಾಮಗಳನ್ನು ಮೂಕಗಾವುಂಡನಿಗೆ; ಪೆತ್ತಮ್ಮವಳ್ಳಿಯನ್ನು ಸಹೋದರ ಬಾಚನಿಗೆ ಕೊಡುತ್ತಾನೆ. ಅಲ್ಲದೆ ಹೊಳಲ್ಗುಂದಿ, ಕೊಳವಿ ಗುಲ್ಲವಳ್ಳಿಗಳನ್ನು ಪುತ್ರನಿಗೆ; ಸಹೋದರನ ಮಗ ಮಲ್ಲಿ ವಿಭುಗೆ ಸಿರಿಯೂರುನ್ನು ಕೊಡುತ್ತಾನೆ. ನಾಳ್ಪ್ರಭು ಮಲ್ಲಗಾವುಂಡನು ಮಲ್ಲಿನಾಥ ಜಿನನಿಗಾಗಿ ಹೊಳಲ್ಗುಂದಿಯಲ್ಲಿ ಜಿನಾಲಯ ಕಟ್ಟಿಸುತ್ತಾನೆ. ಈ ಜಿನಾಲಯದ ಆಚಾರ್ಯರು ಸೂರಸ್ತಗಣ, ಚಿತ್ರಕೊಖ್ಯೆಗಚ್ಚ, ಶ್ರೀ ಪೂಜ್ಯಪಾದನ್ವಯರಾದ ಸಿದ್ಧಾಂತ ಚಕ್ರವರ್ತಿಯೆನಿಸಿದ್ದ ಶ್ರೀವಾಸುಪೂಜ್ಯಯತಿಯ ಶಿಷ್ಯರು ಹರಿಣಂದಿದೇವ, ಹೇಮಚಂದ್ರ ಮುನೀಂದ್ರ, ನಾಗಚಂದ್ರ ಭಟ್ಟಾರಕ ದೇವರು. ಇವರಲ್ಲಿ ನಾಗಚಂದ್ರ ಭಟ್ಟಾರಕದೇವರು ಬಸದಿಯ ಆಚಾರ್ಯರಾಗಿದ್ದು ಮಲ್ಲಿನಾಥ ಜಿನೇಶ್ವರನ ಅಂಗಭೋಗಕ್ಕೆ ನಿತ್ಯ ನೈವೇದ್ಯಕ್ಕೆ ಅಲ್ಲಿರುವ ಋಷಿಗಳ ಆಹಾರ ದಾನಕ್ಕೆಂದು ಕಲ್ಲಕೆರೆಯ ದಕ್ಷಿಣಕ್ಕೆ ಸೋಗಿಯ ದಾರಿಯಲ್ಲಿ, ಮೋರಿಗೇರಿಯ ದಾರಿಯಲ್ಲಿ, ಪೂಜಾರಿಗೆ ಭೂದಾನ ನೀಡಿದಂತೆ ಹೇಳಿದೆ.

ಗಾವುಂಡರು

ಗ್ರಾಮದ ಪ್ರಭುಗಳು ಗೌಡರೆಂದು ಕರೆಸಿಕೊಳ್ಳುವ ಇವರ ವೃತ್ತಿ ವಂಶಪಾರಂಪರ್ಯವಾಗಿರುತ್ತಿತ್ತು. ಗ್ರಾಮದ ಆಡಳಿತ ಗ್ರಾಮ ರಕ್ಷಣೆ ಧಾರ್ಮಿಕ ಕಾರ್ಯ ದತ್ತಿ ದಾನಗಳ ಸಂರಕ್ಷಣೆಯ ಹೊಣೆ ಇವರದಾಗಿತ್ತು. ಗಾವುಂಡರು ರಾಜರ ಪರವಾಗಿ ಯುದ್ಧದಲ್ಲಿ ಭಾಗವಹಿಸಿ ಯಶಸ್ಸು ಪಡೆಯಲು ವಿಷಮ ಸಂದರ್ಭದಲ್ಲಿ ಸಹಾಯವಾಗುತ್ತಿದ್ದರು. ವಿಷಮ ಸಂದರ್ಭದಲ್ಲಿ ಗಾವುಂಡರು ಗ್ರಾಮದ ಒಳಿತಿಗಾಗಿ ತಮ್ಮ ಪ್ರಾಣದ ಹಂಗು ತೊರೆದು ಹೋರಾಡುತ್ತಿದ್ದರು. ಇವರ ಬಗ್ಗೆ ಬಲ್ಲಕುಂದೆ ನಾಡಿನಲ್ಲಿ ದೊರೆತ ಅನೇಕ ಶಾಸನಗಳಲ್ಲಿ ಈ ವಿವರ ದೊರೆಯುತ್ತದೆ.

ಚಂಗಗಾವುಂಡ

ಕೊಳಗಲ್ಲು[೯೪] ಶಾಸನದಲ್ಲಿ ಈತನ ಉಲ್ಲೇಖವಿದೆ. ರಾಷ್ಟ್ರಕೂಟರ ದೊರೆ ಅಕಾಲ ವರ್ಷದೇವ ಚಲಕೆನಲ್ಲಾಥನು ಆಳುತ್ತಿರುವಾಗ ಈತನು ಸೂಜಿಗಲ್ಲಿನ ಪಶ್ಚಿಮಕ್ಕೆ ಮೂವತ್ತು ಮತ್ತರು ಹೊಲವನ್ನು ಉತ್ತರದಿಕ್ಕಿಗೆ ಒಂದು ತೋಟವನ್ನು ಮಠದ ಮುಂದಿರುವ ಒಂದು ಗಾಣವನ್ನು ೪೨ ಮಹಾಜನರ ಹಾಗೂ ನಾಲ್ಕು ಜನ ಗಾವುಂಡರ ಸಮ್ಮುಖದಲ್ಲಿ ವಿದ್ಯಾದಾನ, ಸತ್ರ ಮಠಕ್ಕೆಂದು ಸತ್ಯರಾಶಿ ಭಟ್ಟಾರರ ಕಾಲು ತೊಳೆದು ದಾನ ಮಾಡುತ್ತಾನೆ.

ಸೇನಾಗೌಡ, ಚಿಕ್ಕಗೌಡ, ನೇಮಗೌಡ

ಸೇನಾಗೌಡನ ಪುತ್ರ ಚಿಕ್ಕಗೌಡ, ಚಿಕ್ಕಗೌಡನ ಮಾವ ನೇಮಗೌಡ ಇವರ ಉಲ್ಲೇಖ ತಲವಾಗಲು[೧೫] ಶಾಸನದಲ್ಲಿ ಬರುತ್ತದೆ. ತಲವಾಗಿಲ ಶ್ರೀ ಬೋಗೇಶ್ವರ ದೇವರ ಸ್ಥಾನಿಕರು ಪರಲೋಕ ಪ್ರಾಪ್ತರಾದ ಬಳಿಕ ಈ ಮೂವರು ಗೌಡರು, ೬೧ವಕ್ಕಲು, ೧೨ಯಿಟ್ಟು ಸಹಿತವಾಗಿ ಪೂಜಾರಿ ನಾಗಯ್ಯನನ್ನು ಕರೆದು ಕಾಲು ತೊಳೆದು ಧಾರ ಪೂರ್ವಕವಾಗಿ ದಾನ ಬಿಡುತ್ತಾರೆ. ದಾನ ಬಿಟ್ಟ ವಿವರಗಳು ತಿಳಿದು ಬರುವುದಿಲ್ಲ.

ಮಾರಗಾವುಂಡ, ಮೂಕಗಾವುಂಡ, ರಾಚಮ್ಮಗಾವುಂಡ

ಮನ್ನೆರ ಮಸಲಾವಾಡ[೧೬] ಶಾಸನದಲ್ಲಿ ಇವರ ಉಲ್ಲೇಖವಿದೆ. ಸೋಮಗ್ರಹಣದಂದು ಈ ಮೂವರು ಗಾವುಂಡರು ಹಾಗೂ ಬೋಗಾಯ್ಯಯ್ಯ ಸಹಾದೇವಯ್ಯ ಗುರುದೇವರ ಸನ್ನಿಧಾನದಲ್ಲಿ ಎರೆಮತ್ತರು ೧೨ನ್ನು, ಕಿಸುಮತ್ತರು ೪ನ್ನು, ಮಹದೇವರ ಮುಂದಿನ ಕೆರೆಯನ್ನು, ದೇವರಿಗೆ ದತ್ತಿ ಬಿಟ್ಟುದು ತಿಳಿದು ಬರುತ್ತದೆ.

ಎರಕಗಾವುಂಡ

ಈತನ ಉಲ್ಲೇಖ ಹೊಳಗುಂದಿ[೧೭] ಶಾಸನದಲ್ಲಿ ಬರುತ್ತದೆ.ಮಹಾಮಂಡಳೇಶ್ವರ ಗಂಗರಸನು ತನ್ನ ತಂದೆ ಚಾವುಂಡರಸನು ಹೊಳಗುಂದಿಯಲ್ಲಿ ಮಾಡಿಸಿದ ಬಾಳೇಶ್ವರ ದೇವರಿಗಾಗಿ ಚಕ್ರವರ್ತಿಯ ಕೈಯಿಂದ ಕರಿಯ ಭೂಮಿಯನ್ನು ಮತ್ತು ಗದ್ದೆಯನ್ನು ಪಡೆದು ಪೊಳಲ್ಗುಂದೆಯ ಎರಕಗಾವುಂಡನ ಕೈಯಲ್ಲಿ ಧಾರಾಪೂರ್ವಕವಾಗಿ ಬಿಡುತ್ತಾನೆ. ಎರಕಗಾವುಂಡನ ಪ್ರಶಸ್ತಿಯನ್ನು ಶಾಸನದಲ್ಲಿ 'ಸಮಸ್ತ ಗುಣ ಸಂಪನ್ನಂ ನುಡಿದು ಮತ್ತೆನ್ನಂ ಗೋತ್ರ ಪವಿತ್ರಂ ಪರಾಂಗನಾ ಪುತರಂ ನೀತಿಚಾಣಿಕ್ಯಂ ಸುಜನ ಮಾಣಿಕ್ಯಂ ಚಲದಂಕರಾಮಂ ಸಂಗ್ರಾಮಭೀಮಂ ಸಾಹಸೋತ್ತುಂಗನಯ್ಯನಸಿಂಗಂ' ಎಂದು ಮಾಡಲಾಗಿದೆ.

ಬಮ್ಮಗಾವುಂಡ

ಇವನು ಶ್ರೀನಿವಾಸಪುರಂ ಶಾಸನದಲ್ಲಿ ಉಕ್ತನಾಗಿದ್ದಾನೆ[೧೮] ಪಲ್ಲವ ವಂಶದವನಾದ ಇವನು ಸಾಮಂತ ಮುಸುವರಾದಿತ್ಯನ ಸಹೋದರನಾಗಿದ್ದಾನೆ. ಶಾಸನದಲ್ಲಿ ಇವನನ್ನು ತ್ರಿಭುವನಸ್ತುತನಣ್ಣನ ಗಂಧವಾರಣ ಶಿವಸಮಯ ಮುಸುವ ವಂಶ ಶಿಖಾಮಣಿಯೆಂದು ಲೋಕಮುತ್ಸವದೊಳು ಬಣ್ಣಿಕು ನೆಗಟ್ಟಬಮ್ಮಗಾವುಂಡನ ನಾಜಿಗೌಂಡನ ಎಂದು ವರ್ಣಿಸಿದೆ. ಇವನು ಆಯ್ತೇಶ್ವರ ದೇವರಿಗೆ ಭೂಮಿಯನ್ನು ದಾನ ಬಿಡುತ್ತಾನೆ.

ರೇವಗಾವುಂಡ

ಕೋಳೂರಿನ್[೯೯] ಶಾಸನ ರೇವಗಾವುಂಡನ ವ್ಯಕ್ತಿತ್ವವನ್ನು ರಂಜನೀಯವಾಗಿ ವರ್ಣಿಸಿದೆ. ಶಾಸನದಲ್ಲಿ ಇವನ ವಂಶಾವಳಿ ಬರುತ್ತಿದ್ದು ಅದು ಹೀಗಿದೆ. ಕಾಳೆಯಗಾವುಂಡ ಆತನ ಹೆಂಡತಿ ಇವರ ಮಕ್ಕಳು ಮಲ್ಲಿಯಕ್ಕ ೧)ರೇವಗವುಂಡ ೨)ಹರಿಯಮ್ಮಗವುಂಡ ೩)ಸಂಕಗವುಂಡ ೪)ಮೈಲಮ್ಮ ೫)ಹಾಲಮ್ಮ. ಹಿರಿಯವನಾದ ರೇವಗವುಂಡನ ಹೆಂಡತಿ ಚಾಕಬೆಗೌಡಿ. ಇವರಿಗೆ ೧)ಹರಿಯಮ್ಮಗವುಂಡ ೨)ಕಾಳೆಯಗವುಂಡ ೩)ಮಾಧವಸಾ(ಸಾ)ಧರೆ ೪)ಮಹದೇವ ಎಂಬ ನಾಲ್ವರು ಪುತ್ರರು. ಮಾಧವ ಸೌಧರೆಯ ಹೆಂಡತಿ ಮಾರಮ್ಮ ಇವರೀರ್ವರಿಗೆ ರೇವಗವುಂಡನೆಂಬ ಪುತ್ರ ಹರಿಯಮ್ಮ ಎಂಬ ಪುತ್ರಿ ಜನಿಸುತ್ತಾರೆ. ಮಾಧವಸಾಧಕಿಯ ಪುತ್ರ ರೇವಗವುಂಡ. ಈತನು ತಾನು ಸಂಪಾದಿಸಿದ ಹಣವನ್ನು ಕೂಡಿಡದೆ ಊರಿನಲ್ಲಿ ಶಿವ, ಭೈರವ, ವಿನಾಯಕ ದೇವಾಲಯಗಳನ್ನು ನಿರ್ಮಿಸಲು ವ್ಯಯಿಸಿದ. ಇವನು ಮಾಡಿಸಿದ ದೇವಾಲಯಗಳಿಗೆ ಇಮ್ಮಡಿ ಭೀಮದೇವರಸ ಭೂಮಿದಾನ ಬಿಡುತ್ತಾನೆ.

ಹಂಪಗೌಡ

ಒರುವಾಯಿ[೧೦೦] ಶಾಸನದಲ್ಲಿ ಈತನ ಉಲ್ಲೇಖವಿದೆ. ಒರುವಾಯಿ ಕಲಿದೇವರ ಸ್ಥಾನಪತಿ ಭೀಮರಾಶಿ ಪಂಡಿತರು ಪೊಸಕುತ್ತುಕನೂರಲ್ಲಿ ಬ್ರಹ್ಮೇಶ್ವರ ನೀಲಕಂಠೇಶ್ವರ, ದೇವರನ್ನು ಪ್ರತಿಷ್ಠೆ ಮಾಡಿ ಎಂಟು ಹಿಟ್ಟುಗಳ ಸಮ್ಮುಖದಲ್ಲಿ ಭೂಮಿದಾನ ಬಿಡುತ್ತಾನೆ.

ಬೀರ ಗಾವುಂಡ

ಇವನ ಉಲ್ಲೇಖ ಉತ್ತಂಗಿ ಶಾಸನದಲ್ಲಿದೆ[೧೦೧] ಉತ್ತಂಗಿಯ ಗಾವುಂಡರ ವರ್ಣನೆಯ ಜೊತೆಗೆ ಬೀರಗಾವುಂಡನನ್ನು ವರ್ಣಿಸಲಾಗಿದೆ. ಪ್ರಜೆ ಮೆಚ್ಚೆಗಂಡನಾದ ಇವನು 'ಬೇಡರಗಂಡ'ನಾಗಿದ್ದನೆಂದು ಶಾಸನ ಕರೆದಿದೆ. ಬೇಡರು ಈ ಕಾಲಕ್ಕಾಗಲೇ ಈ ಜಿಲ್ಲೆಯಲ್ಲಿ ಒಗ್ಗಟ್ಟಾಗಿ ತಮ್ಮ ಪ್ರಭುತ್ವ ಸ್ಥಾಪಿಸಲು ಪ್ರಯತ್ನಿಸುತ್ತಿದ್ದ ಇವರನ್ನು ಬೀರಗಾವುಂಡನು ಎದುರಿಸಿದ್ದುದು ಸ್ಪಷ್ಟ

ಪೊನ್ನೆಯ ಗವುಂಡ, ಬೀರಯ್ಯ ಗವುಂಡ,ಮಣಿಯಮ ಗವುಂಡ

ಇವನ ಉಲ್ಲೇಖ ಕಲ್ಲುಕುಟಿಗನಹಾಳು[೧೦೨] ಶಾಸನದಲ್ಲಿದೆ. ಪೊನ್ನೆಯ ಗವುಂಡನು ಬಾವಿಯನ್ನು ನಿರ್ಮಿಸುತ್ತಾನೆ. ಮಹಾಮಂಡಳೇಶ್ವರ ದೇವಪರಸ ಆಳುತ್ತಿರುವಾಗ ಈ ಬಾವಿಗೆ ಬೀರಯ್ಯಗವುಂಡ ಮತ್ತು ಮಣಿಯಮಗವುಂಡನು ಇಬ್ಬರೂ ಸೇರಿ ೫ ಮತ್ತರು ಕರಿಯ ಭೂಮಿಯನ್ನು ಬಿಡುತ್ತಾರೆ.

ಮಲ್ಲಿಕಗವುಂಡ : ಕುರುವಳ್ಳಿ[೧೦೩] ಶಾಸನದಲ್ಲಿ ಈತನ ಉಲ್ಲೇಖವಿದೆ. ಈತನು ಊರಾಳಗೆ 'ವರಿಸವರಿಸಕ್ಕೆರಡು ವಟ್ಟದ ಜವಳಿ' ನಡೆಸುತ್ತಿದ್ದುದನ್ನು ಶಾಸನ ತಿಳಿಸುತ್ತದೆ. ಇದನ್ನು ಅಳಿದವನಿಗೆ ಪಾಪ ಬರುತ್ತದೆಂದೂ ಶಾಸನ ಎಚ್ಚರಿಸುತ್ತದೆ.

ಕನ್ನಗೌಡ

ವಿಜಯಪಾಂಡ್ಯನ ಪಾದ ಪದ್ಮೋಪಜೀವಿಯಾಗಿ ವಿಜಯ ಹೆಂಮಾಡಿದಣ್ಣಾಯಕ ನೊಳಂಬವಾಡಿ ೩೨೦೦೦ ಸರ್ವಾಧಿಕಾರಗೆಯ್ಯುತ್ತಿರುವಾಗ ಮಂಡೆಯನ ಹಳ್ಳಿಯ ಮಂಡೇಶ್ವರ ದೇವರಿಗೆ ಕೊತ್ತಗೌಡನ ಮಗ ಕಂನ್ನಗೌಡನು ತನ್ನ ಬಂಧು ವರ್ಗಸಹಿತ ಬಾಗಳಿಯ ಅಯ್ವದಿಂಬರ ಕೈಯಲ್ಲಿ ಮಂಡಹಳ್ಳಿಯ ಕ್ರಯ ಧಾರೆಯಾಗಿ ಪಡೆದು ಮಂಡೇಶ್ವರದೇವರಿಗೆ ಸರ್ವಬಾಧಾ ಪರಿಹಾರವಾಗಿ ಭೂಮಿ ಬಿಡುತ್ತಾನೆ[೧೦೪].

ಹೀಗೆ ಗಾವುಂಡರು ಗ್ರಾಮಗಳ ಒಡೆಯರಾಗಿ ಜವಾಬ್ದಾರಿಯುತವಾದ ಕಾರ್ಯನಿರ್ವಹಿಸುತ್ತ ಅವುಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ತಮ್ಮ ಆಳರಸರ ಆಜ್ಞೆಗಳನ್ನು ಚಾಚೂ ತಪ್ಪದೆ ಪರಿಪಾಲಿಸುತ್ತ ತಮ್ಮ ಗ್ರಾಮದ ಸರ್ವತೋಭಿವೃದ್ಧಿಗೆ ಪ್ರತಿಷ್ಠೆಗೆ ಹೋರಾಡಿದವರಾಗಿದ್ದಾರೆ.

ಆಡಳಿತಾಧಿಕಾರಿಗಳು

ಆಳುವರಸರ ಆಜ್ಞಾನುಸಾರ ಆಡಳಿತದ ಕಾರ್ಯನಿರ್ವಹಿಸುವವರು ಇವರು ಹಿಂದಿನ ಕಾಲದಲ್ಲಿ ಕೇಂದ್ರೀಯ ಆಡಳಿತ ಮತ್ತು ಪ್ರಾಂತೀಯ ಆಡಳಿತ ಎಂದು ಎರಡು ವಿಧದ ಆಡಳಿತ ಪದ್ಧತಿ ಜಾರಿಯಲ್ಲಿತ್ತು. ಕೇಂದ್ರಿಯ ಆಡಳಿತವು ಚಕ್ರವರ್ತಿಯ ಆಜ್ಞೆ ಪ್ರಕಾರ ನಡೆಯುತ್ತಿದ್ದರೆ, ಪ್ರಾಂತೀಯ ಆಡಳಿತವು ಚಕ್ರವರ್ತಿಗೆ ನಿಷ್ಠರಾಗಿದ್ದ ಆಯಾ ಪ್ರಾಂತ್ಯದ ಮಹಾಮಂಡಳೇಶ್ವರರ ಆಜ್ಞಾನುಸಾರ ನಡೆಯುತ್ತಿತ್ತು. ಸಾಮ್ರಾಜ್ಯದ ಆಡಳಿತವು ಸುಗಮವಾಗಿ ನಡೆಯಲು ರಾಜನು ವಿವಿಧ ವಿಭಾಗಗಳಿಗೆ ಹಲವಾರು ಅಧಿಕಾರಿಗಳನ್ನು ನೇಮಿಸುತ್ತಿದ್ದ. ಅಂದು ಇದ್ದ ವಿಭಾಗಗಳು ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದರೂ ಶಾಸನಗಳ ಆಧಾರದಿಂದ ಅವುಗಳನ್ನು ಹೀಗೆ ಗುರುತಿಸಬಹುದು. ಸುಂಕದ ವಿಭಾಗ, ಕಡತ ಪತ್ರಗಳ ವಿಭಾಗ, ವಿದೇಶಾಂಗ ವಿಭಾಗ, ರಕ್ಷಣಾ ವಿಭಾಗ, ಕಟಕ ರಕ್ಷಣಾ ವಿಭಾಗ, ವಾಹನ ವಸ್ತುಗಳ ವಿಭಾಗ, ಭಂಡಾರದ ವಿಭಾಗ, ವಿದ್ಯಾ ವಿಭಾಗ. ಈ ವಿಭಾಗಗಳಿಗೆ "ಮಹಾ ಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ" ಶ್ರೇಣಿಯ ಅಧಿಕಾರಿಗಳನ್ನು ಚಕ್ರವರ್ತಿಯು ನೇಮಿಸುತ್ತಿದ್ದನು. ಸುಂಕದ ಅಧಿಕಾರಿಗಳು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನೆಲೆನಿಂತು ಸುಂಕವನ್ನು ಸಂಗ್ರಹಿಸಿ ಚಕ್ರವರ್ತಿಗೆ ಕಳುಹಿಸಿಕೊಡುತ್ತಿದ್ದರು. ಸೈನ್ಯದ ಅಧಿಕಾರಿಗಳಲ್ಲಿ ಕೆಲವರು ರಾಜಧಾನಿಯಲ್ಲಿದ್ದರೆ ಮತ್ತೆ ಕೆಲವರು ಸಾಮ್ರಾಜ್ಯದ ಗಡಿಪ್ರದೇಶಗಳಲ್ಲಿ ಸೈನ್ಯದೊಂದಿಗೆ ಇರುತ್ತಿದ್ದರು. ವಿದೇಶಾಂಗ, ಭಂಡಾರ, ಶಿಕ್ಷಣ, ಕಡತಗಳ ವಾಹನ ವಸ್ತುಗಳ ವಿಭಾಗಗಳ ಅಧಿಕಾರಿಗಳು ರಾಜ್ಯದಲ್ಲಿದ್ದು ಆಡಳಿತ ನೋಡಿಕೊಳ್ಳುತ್ತಿದ್ದರು. ಇವರ ಕೆಳಗೆ ದಂಡನಾಯಕರು, ಪೆರ್ಗಡೆಗಳು ಮೊದಲಾದ ಅಧಿಕಾರಿ ವರ್ಗದವರು ಮತ್ತು ಇತರ ಸಿಬ್ಬಂದಿ ವರ್ಗದವರು ಕೆಲಸ ನಿರ್ವಹಿಸುತ್ತಿದ್ದರು. ಆಯಾ ಪ್ರಾಂತ್ಯಗಳಿಗೆ ಪ್ರಭುಗಳಾದ ಮಹಾಮಂಡಳೇಶ್ವರರು, ಅವರ ಕೈಕೆಳಗಿನ ಚಿಕ್ಕ ವಿಭಾಗಗಳಿಗೆ ಪ್ರಭುಗಳಾದ ಮಹಾಸಾಮಂತರು

ಹಲವು ಗ್ರಾಮಗಳಿಗೆ ಒಡೆಯರಾದ ಪ್ರಭುಗಾವುಂಡರು ಗ್ರಾಮಕ್ಕೆ ಒಡೆಯರಾದ ಗಾವುಂಡರು ತಮ್ಮದೇ ಆದ ಸಿಬ್ಬಂದಿ ವರ್ಗದವರನ್ನು ಹೊಂದಿದ್ದರು.

ರಾಜರು ವಿವಿಧ ವಿಭಾಗಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಅವರ ವಿದ್ಯೆ, ಪ್ರತಿಭೆ, ಚಾಣಕ್ಷತನ, ಬುದ್ಧಿವಂತಿಕೆ ಸಂಬಂಧಗಳನ್ನು ಗಮನಿಸಿ ನೇಮಕಾತಿ ಮಾಡಿಕೊಳ್ಳುತ್ತಿದ್ದರು. ಉತ್ತಮರಾದ, ಪ್ರಾಮಾಣಿಕ, ದಕ್ಷತೆ, ನಿಸ್ವಾರ್ಥ ಸೇವೆಗಳಿಂದ ಉನ್ನತಾಧಿಕಾರಿಗಳಾಗುತ್ತಿದ್ದರು. ಪ್ರಭುಗಾವುಂಡರು ಹಾಗೂ ಗಾವುಂಡರು ತಮ್ಮ ನಿತ್ಯದ ಕೆಲಸ ನಿರ್ವಹಣೆಗೆ ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು.ಗ್ರಾಮದಲ್ಲಿ ಮುಖ್ಯ ಅಧಿಕಾರಿಗಳೆಂದರೆ ಸೇನಬೋವ ಮತ್ತು ತಳವಾರ, ಸೇನ ಬೋವ ಲೆಕ್ಕಾಧಿಕಾರಿಯಾಗಿದ್ದರೆ. 'ತಳವಾರ'ನು ಗ್ರಾಮ ರಕ್ಷಣಾಧಿಕಾರಿಯಾಗಿದ್ದ. ಇಂಥ ಅಧಿಕಾರಿಗಳ ವಿವರವನ್ನು ಮುಂದೆ ನೋಡೋಣ.

ಮಹಾಸಾಮಂತಾಧಿಪತಿ ಚಕ್ರವರ್ತಿಯ ಅಧೀನದಲ್ಲಿರುವ ಮಹಾಪ್ರಚಂಡದಂಡನಾಯಕರು

ಅಧಿಕಾರಿಗಳಾದ ಇವರು ಚಕ್ರವರ್ತಿಯಿಂದ ನೇಮಿಸಲಾದ ಉನ್ನತಾಧಿಕಾರಿಗಳಾಗಿದ್ದಾರೆ. ಇವರು ಚಕ್ರವರ್ತಿಯ ಆದೇಶದ ಮೇರೆಗೆ ಸೀಮಿತ ಪ್ರದೇಶದ ಪ್ರಭುಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದುದು ತಿಳಿದುಬರುತ್ತದೆ. ಸಾಮಾನ್ಯವಾಗಿ ಸೈನ್ಯ, ಸುಂಕದ ಅಧಿಕಾರಿಗಳು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆನಿಂತು ತಮ್ಮ ಕಾರ್ಯ ನಿರ್ವಹಿಸುತ್ತಿದ್ದರು. ಚಕ್ರವರ್ತಿಯ ನೆರೆ ಪ್ರತಿನಿಧಿಗಳಾದ ಇವರು ಮಹಾಮಂಡಳೇಶ್ವರರ ಮೇಲೆ ಕಣ್ಣಿಟ್ಟು ಸುಂಕವನ್ನು ಸಂಗ್ರಹಿಸಿ ಚಕ್ರವರ್ತಿಗೆ ಕಳುಹಿಸುತ್ತಿದ್ದರು.

ಚಕ್ರವರ್ತಿಯಾದರೂ ವಿದ್ಯಾರ್ಹತೆ, ನಿಷ್ಠೆ, ಪ್ರತಿಭೆ, ಪ್ರಾಮಾಣಿಕತೆಗಳನ್ನು ಪರೀಕ್ಷಿಸಿ ಯಶಪಡೆದವರನ್ನು ಮಾತ್ರ ಇಂಥ ಉನ್ನತಾಧಿಕಾರಿಗಳನ್ನಾಗಿ ನೇಮಿಸುತ್ತಿದ್ದರು. ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಇಂಥ ಕೆಲವು ಅಧಿಕಾರಿಗಳ ಬಗ್ಗೆ ಬರುತ್ತಿದ್ದು ಅವರು ಇಂತಿದ್ದಾರೆ.

ಮಹಾಪ್ರಚಂಡ ದಂಡನಾಯಕ ಘಟೆಯಂಕಕಾರ ಬ್ರಹ್ಮಾದಿರಾಜ:

ತೆಕ್ಕಲಕೋಟೆ[೧೦೫] ಶಾಸನೋಕ್ತನಾದ ಇವನನ್ನು 'ಮಹಾಸೇನಾಧಿಪತಿ' ಎಂದು ಕರೆಯಲಾಗಿದೆ. ಶಾಸನದಲ್ಲಿ ಈತನ ಪ್ರಶಸ್ತಿಯನ್ನು 'ದುಷ್ಟ ನಿಷ್ಠುರಂ. ಕುಟಿಲಕೌಟಿಲ್ಯಂ ಕ್ಷುದ್ರವಿದ್ರಾವಣ ಇನ್ನೂ ಮುಂತಾದ ಪ್ರಶಸ್ತಿಯನ್ನು ಕೊಡಲಾಗಿದೆ. ಇವನು ಚಾಣಕ್ಯನ ಹಾಗೆ ಬುದ್ಧಿವಂತನೂ ಆಗಿದ್ದನೆಂದು ಪ್ರಶಸ್ತಿಯಿಂದ ತಿಳಿದು ಬರುತ್ತದೆ. ಇವನು ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಶ್ರೇಣಿಯ ಅಧಿಕಾರಿಯಾಗಿದ್ದು ಸೈನ್ಯದ ವಿಭಾಗಕ್ಕೆ ಸೇರಿದ್ದ. ಈತನು 'ಪಾಪೆಕಲ್ಲಂ' ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನು. ಈತನು ಪಾಪೆಕಲ್ಲುರೊಡೆಯರಿಗೆ ವ್ಯವಸಾಯಕ್ಕೆ ಭೂಮಿಯನ್ನು ನೀಡಿದ ಕೆರಾರಾಗಿ ಉಳ್ಳಿಯ ಬರಿಸ ವಟ್ಟೆಯ ಸನ್ತೆಯ ಕ್ರಮವನ್ನು 'ಉಳ್ಳಿಬರಿಸಂ ಮತ್ತರ್ಗೆ ಪತ್ತು

ವೀಸಮೆರಡನೆಯ ಬರಿಸವೊನ್ದು ಪಣಂಗ ಮೂರನೆಯ ಬರಿಸಮೆರಡು ಪಣಂಗ ಎಂದು ಮಾಡಿಕೊಡುತ್ತಾನೆ.

ಮಹಾಪ್ರಚಂಡ ದಂಡನಾಯಕ ಪೊಳಲಮಯ್ಯ

ಈತನ ಉಲ್ಲೇಖ ಹಿರೆಮೇಗಳಗೇರಿಯ[೧೦೬] ಶಾಸನದಲ್ಲಿದೆ. ಜಗದೇಕಮಲ್ಲ ಜಯಸಿಂಹನ ಪಾದ ಪದ್ಮೋಪಜೀವಿಯಾಗಿರುವ ಈತನು ವಖ್ಖಾಣ ಜೀಯರ ಶಿಷ್ಯನಾದ ಬ್ರಹ್ಮರಾಸಿಜೀಯರಿಗೆ ನೆಲ್ನಧಿಗೆರೆಯನ್ನು ದಾನ ಬಿಟ್ಟ ಅಸ್ಪಷ್ಟ ಮಾಹಿತಿ ಇದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಅಲಭ್ಯವಾಗಿದೆ. ಶಾಸನದಲ್ಲಿ ಈತನ ಪ್ರಶಸ್ತಿಯನ್ನು 'ಪತಿಹಿತಾಂಜನೇಯಂ ಫಣಿರತ್ನ ಭೂಷಣಂ ಸಮರ xxxx ಗಣ್ಡ ಗಿರಿದುರ್ಗಮಲ್ಲ ಸಿಂಗನಕೇಶರಿ' ಎಂದು ಮುಂತಾಗಿ ಕೊಡಲಾಗಿದೆ. ಇದರಿಂದ ಈತನು ತನ್ನ ಒಡೆಯನಿಗೆ ನಿಷ್ಠೆಯಿಂದ ಇದ್ದನೆಂದೂ, ಒಳ್ಳೆಯ ಭಟನಾಗಿದ್ದು ಗಿರಿದುರ್ಗಗಳನ್ನು ವಶಪಡಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದನೆಂದು ಗೊತ್ತಾಗುತ್ತದೆ. ಸರಸೀರುಹ ಮಧುಕರ, ನಿಯೋಗಯೋಗಗಂಧರ ಪತಿಕಾರ್ಯ್ಯ ಧುರಂದರ, ಚತುಸ್ಸಮಯ ಸಮುದ್ಧರಣ ವಿಶ್ವಾಮಿತ್ರ ಗೋತ್ರ ಪವಿತ್ರ ಎಂದು ಮೊದಲಾಗಿ ಪ್ರಶಸ್ತಿಯನ್ನು ಮಾಡಲಾಗಿದೆ[೧೦೭].

ಮಹಾಪ್ರಚಂಡದಂಡನಾಯಕ ಮಹಾದೇವರಸ

ಅಚ್ಚುಪನ್ನಾಯದಧಿಷ್ಠಾಯಕ ದಂಡನಾಯಕ ದಂಡಾಯದ ಮಹಾದೇವರಸನ ಉಲ್ಲೇಖ ಬಾಗಳಿ[೧೦೮] ಶಾಸನದಲ್ಲಿದೆ. ಇವನು ಸುಂಕದ ವಿಭಾಗಕ್ಕೆ ಸಂಬಂಧಪಟ್ಟಿದ್ದಾನೆ. 'ಶಿಷ್ಟೇಷ್ಟ ಜನಾಭೀಷ್ಟಪದ ಪ್ರದಾಯಕ ನಿಯೋಗಯೋಗಂಧರ ಪತಿಕಾರ್ಯದುರಂಧರ ಸಾಹಸೋತ್ತುಂಗ ತ್ರಿಭುವನಮಲ್ಲ ಪಾದಾಬ್ಜಬೃಂಗ' ಮೊದಲಾದ ಪ್ರಶಸ್ತಿಗಳನ್ನು ಈತನು ಹೊಂದಿದ್ದನು.

ಮಹಾಪ್ರಚಂಡ ದಂಡನಾಯಕ ಪ್ರಭುಸೋವರಸ

ಬಾಗಳಿ[೧೦೯] ಶಾಸನೋಕ್ತನಾದ ಇವನು ನೊಳಂಬವಾಡಿ ೩೨೦೦೦ ವಡ್ಡರಾವುಳ ಸುಂಕವನ್ನು ಆಳುತ್ತಿದ್ದನು. 'ಸಿಷ್ಟೇಷ್ಟ ಜನತುಷ್ಟದಾಯಕ' 'ಹರಿಚರಣ ಸರಸೀರುಹ' ಮಧುರರ ವಿನಯ ರತ್ನಾಕರ' 'ನಿಯೋಗ ಯೋಗಂಧರ' 'ಪತಿಕಾರ್ಯ ದುರಂಧರ', ಎಂದು ಈತನ ಪ್ರಶಸ್ತಿಯನ್ನು ಶಾಸನದಲ್ಲಿ ಹೇಳಲಾಗಿದೆ. ಈತನು ಅಯ್ವದಿಂಬರ ಸನ್ನಿಧಾನದಲ್ಲಿ ವಡ್ಡರಾವುಳದ ಸುಂಕ ಲಖ್ಖಕ್ಕೆ ಆರುಪಣವನ್ನು ಮುಪ್ಪಾಗದೊಳಗೆ ಒಂದು ಪಾಗವನ್ನು ಸ್ವಯಂಭೂ ಕಲಿದೇವಸ್ವಾಮಿ ದೇವರಗ್ರಾಸನದ ಸತ್ರಕ್ಕೆ ಬಿಡುತ್ತಾನೆ.


ಮಹಾಪ್ರಚಂಡ ದಂಡನಾಯಕ ಕಾಲಿದಾಸ

ಕಾಲಿದಾಸನ ಉಲ್ಲೇಖ ನೀಲಗುಂದ[೧೧೦] ದಲ್ಲಿ ದೊರೆತ ತಾಮ್ರ ಪಟಗಳಲ್ಲಿ ಬರುತ್ತದೆ. ಅದರಲ್ಲಿ 'ಶಾಸನಾಧಿಕಾರಿಕಾಕ್ಷಪಟಲಿಕ ಮಹಾಪ್ರಚಂಡ ದಂಡನಾಯಕ ಕಾಲಿದಾಸ ಎಂದು ಬರುತ್ತದೆ.

ಇದರಿಂದ ಕಾಲಿದಾಸನು ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕನಾಗಿದ್ದು ಕಡತ ಪತ್ರಗಳ ವಿಭಾಗಕ್ಕೆ ಸಂಬಂಧಪಟ್ಟಿದ್ದುದು ಗೊತ್ತಾಗುತ್ತದೆ.

ಮಹಾಪ್ರಚಂಡ ದಂಡನಾಯಕ ರವಿದೇವ

ಈತನ ಪ್ರಥಮ ಉಲ್ಲೇಖ ಯೇವೂರು[೧೧೧] ಶಾಸನದಲ್ಲಿ ಬರುತ್ತದೆ. ಇವನು ವಿಪ್ರಗ್ರಾಮ ಮುಕ್ಕುಂದೆಯಲ್ಲಿನ ಕಾಶ್ಯಪಗೋತ್ರದ ಬ್ರಾಹ್ಮಣ ವಂಶಕ್ಕೆ ಸೇರಿದವನು. ಶಾಸನದಲ್ಲಿ ಇವನ ವಂಶಾವಳಿಯನ್ನು ಹೀಗೆ ಕೊಡಲಾಗಿದೆ.



ಕೊಪ್ಪದೇವನ ಪುತ್ರ ರವಿದೇವನನ್ನು 'ಚಮೂಪತಿ' 'ಸೈನ್ಯಪತಿ' ಎಂದು ಹೇಳಿ ಶ್ರೀಮನ್ಮಹಾಪ್ರಧಾನಂ ಹೇರಿಲಾಳಸಂಧಿ ವಿಗ್ರಹಿ ದಂಡನಾಯಕ ಎಂದು ಶಾಸನದಲ್ಲಿ ಕರೆಯಲಾಗಿದೆ. ಇವನು ಹಂತಹಂತವಾಗಿ ಉನ್ನತಾಧಿಕಾರ ಹೊಂದಿದನೆಂದು ಶಾಸನ ವಿವರಿಸುತ್ತದೆ. ತನ್ನ ವಿದ್ಯೆ, ಜಾಣತನದಿಂದ ಚಕ್ರವರ್ತಿ ಒಂದನೆಯ ಸೋಮೇಶ್ವರನನ್ನು ಮೆಚ್ಚಿಸಿ 'ಲಾಳಸಂಧಿ ವಿಗ್ರಹಿ' ಪದವಿ ಪಡೆದುಕೊಳ್ಳುತ್ತಾನೆ. ಅಲ್ಲದೇ ಮುಕ್ಕುಂದೆ, ಗಂಗಾಪುರ, ಏಹೂರ ಮುಂತಾದ ಊರುಗಳನ್ನು ಪಡೆದುಕೊಳ್ಳುತ್ತಾನೆ.

ಈ ರವಿದೇವನಿಗೂ ನೊಳಂಬವಾಡಿಗೂ ಬಿಡಲಾರದ ನಂಟು ಕಾರಣ ಇವನ ಇನ್ನೊಬ್ಬ ಪತ್ನಿ ರೆಬ್ಬಲಬ್ಬೆ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯವಳು. ಹೂವಿನಹಡಗಲಿಯಲ್ಲಿ ಸ್ಥಾಪಿಸಿದ ಕೇಶವ

ದೇವಾಲಯದ ಖಂಡಸ್ಫುಟಿತಕ್ಕೆ ಮತ್ತು ಅಂಗಭೋಗಕ್ಕೆ ಈ ರವಿಯಣಭಟ್ಟರ ಭಿನ್ನಪದ ಮೇರೆಗೆ ಚಕ್ರವರ್ತಿಯು ಮಾಸವಾಡಿ ೧೪ರ ಬಳಿಯ 'ಉಚುಟಗೇರಿ' ಗ್ರಾಮವನ್ನು ದಾನ ಬಿಡುತ್ತಾನೆ.

ಮಹಾಪ್ರಚಂಡ ದಂಡನಾಯಕ ಸೋವಿಮಯ್ಯ

ಈತನ ಉಲ್ಲೇಖ ಮೋರಿಗೇರಿಯ[೧೧೨] ಶಾಸನದಲ್ಲಿದೆ. ಒಂದನೆಯ ಸೋಮೇಶ್ವರನ ಪಾದಪದ್ಮೋಪ ಜೀವಿಯಾಗಿರುವ ಈತನು ಕೆರೆಯ ಕೆಳಗೆ ಮೂರುಮತ್ತರು ಭೂಮಿಯನ್ನು ಕೊಂಡುಕೊಂಡು ಕೆರೆಯಲ್ಲಿ ಬಾವಿಯನ್ನು ತೋಡಿಸಿ ಅದಕ್ಕೆ ಸೋಮತೀರ್ಥವೆಂದು ಹೆಸರಿಟ್ಟು ಹೂದೋಟ, ನಂದನವನ ಇವುಗಳನ್ನು ಸೋಮೇಶ್ವರ ಪಂಡಿತರ ಕಾಲು ತೊಳೆದು ನೊಳಂಬೇಶ್ವರ ದೇವರಿಗೆ ಕೊಡುತ್ತಾನೆ. ಶೈವನಾದ ಈತನ ಪ್ರಶಸ್ತಿಯನ್ನು ಶಾಸನದಲ್ಲಿ 'ಶಿವಪಾದ ಶೇಖರ ನೀತಿರತ್ನಾಕರಂ ನುಡಿದಂತೆ ಗಂಡ ಪತಿಹಿತ ಗರುಡ' ಎಂದು ಮುಂತಾಗಿ ಕೊಡಲಾಗಿದೆ.

ಮಹಾಪ್ರಚಂಡ ದಂಡನಾಯಕ ಕೇಸಿಮಯ್ಯ

ಹಿರೆ ಮೇಗಳಗೇರಿ[೧೧೩] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನು ಹೇರಿಸಂಧಿ ವಿಗ್ರಹಿಯಾಗಿದ್ದು ಕದಂಬಳಿಕೆ ಸಾಸಿರ ವಿಭಾಗದೊಳಗಿರುವ ಮೇಗಣಗೆರೆಯನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಮೇಗಣಗೆರೆಯ ಸ್ವಯಂಭು ಕಲಿದೇವಸ್ವಾಮಿದೇವರಿಗೆ ನಂದಾದೀವಿಗೆಗೆ ಧೂಪಕ್ಕೆಂದು ಘಾಣದೆರೆ ಸೂಳೆದೆರೆ ಮೊದಲಾದವುಗಳನ್ನು ಶ್ರೀಮತ್ರೈಲೋಕ್ಯಮಲ್ಲನಲ್ಲಿ ಪರಮೇಶ್ವರದತ್ತಿಯಾಗಿ ಪಡೆಯುತ್ತಾನೆ.

ಅನಂತಪಾಳಯ್ಯ

ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಅನಂತಪಾಳನು ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ನೆಚ್ಚಿನ ಅಧಿಕಾರಿ. ಕಲ್ಯಾಣದ ಚಾಲುಕ್ಯರಲ್ಲಿ ದೀರ್ಘಾವಧಿಯವರೆಗೆ ಉನ್ನತ ಅಧಿಕಾರಿಯಾಗಿ ಬಾಳಿದ ವ್ಯಕ್ತಿಯೀತ. ನಾಡಿನ ಅಂಬಳಿ[೧೧೪] ಶಾಸನದಲ್ಲಿ ಇವನ ಉಲ್ಲೇಖವಿದೆ ಅಲ್ಲಿ 'ಶ್ರೀಮನ್ಮಹಾಪ್ರಧಾನಂ ಬಾಣಸವರ್ಗ್ಗಡೆ ಪಂನ್ನಾಯದಧಿಷ್ಠಾಯಕನನ್ತಪಾಳಯ್ಯ ದಣ್ಣನಾಯಕ' ಎಂದು ಈತನನ್ನು ಕರೆಯಲಾಗಿದೆ. ಇದರಿಂದ ಈತನು 'ಪನ್ನಾಯ'ದ ಮುಖ್ಯಸ್ಥನಾಗಿದ್ದು ಸುಂಕದಧಾಧಿಕಾರಿ ಯಾಗಿದ್ದು ಗೊತ್ತಾಗುತ್ತದೆ. ಪನ್ನಾಯವೆಂದರೆ ವೀಳೆಯದೆಲೆಯ ಮೂಲದಿಂದ ಬರುವ ಆದಾಯ ಇವನು ಸೇನಾಧಿಪತಿಯಾಗಿದ್ದ. ಗುಡಿಹಳ್ಳಿ[೧೧೫] ಶಾಸನದಲ್ಲಿ ಈತನು ಸಪ್ತಾರ್ಧಲಕ್ಕೆಯ ವಡ್ಡರಾವುಳದ ಸುಂಕವನ್ನು ಆಳುತ್ತಿದ್ದ ಉಲ್ಲೇಖವಿದೆ.

ಮಹಾಪ್ರಚಂಡದಂಡನಾಯಕ ಚಟ್ಟಯ್ಯ

ದುಗ್ಗವತ್ತಿಯ[೧೧೬] ಶಾಸನದಲ್ಲಿ ಈತನ ಉಲ್ಲೇಖವಿದೆ. ಮಹಾಮಾತ್ಯ ಪದವಿಯನ್ನು ಹೊಂದಿದ್ದ ಈತನನ್ನು 'ಶ್ರೀಮನ್ಮಹಾ ಪ್ರಧಾನಂ ಪ್ರಚಂಡ ದಂಡನಾಯಕ ಎಂದು ಕರೆಯಲಾಗಿದೆ. ಕದಂಬಳಿಕೆ

ಸಾವಿರ ಕೋಗಳಿ ೫೦೦ರ ಅಚ್ಚುಪನ್ನಾಯ ವಡ್ಡರಾವುಳಾದ ಅದಿಷ್ಠಾಯಕನಾದ ಈತನನ್ನು 'ಸಾವಾಸಿಯಿಂದಿರಾಣ ಚಟ್ಟಯ್ಯಗಳು' ಎಂದೂ ಶಾಸನದಲ್ಲಿ ಕರೆಯಲಾಗಿದೆ.

ಮಹಾಪ್ರಚಂಡ ದಂಡನಾಯಕ ತಿಕ್ಕಭಟ್ಟ

ಇವನು ಆರನೆಯ ವಿಕ್ರಮಾದಿತ್ಯನ ಕಾಲದಲ್ಲ ಅಚ್ಚುಪನ್ನಾಯದ ಅಧಿಷ್ಠಾನಾಯಕನಾಗಿದ್ದನು. ಇವನ ಪ್ರಶಸ್ತಿಯು 'ಸಿಷ್ಟೇಷ್ಟ ಜನಾಭೀಷ್ಟ ಫಳಪ್ರದಾಯಕ, ಸರಸೀರುಹ, ನಿಯೋಗಯೋಗಂಧರ , ಚತುಸ್ಸಮಯ ಸಮುದ್ಧರಣ ವಿಶ್ವಾಮಿತ್ರ ಗೋತ್ರ ಪವಿತ್ರ ಎಂದು ಮೊದಲಾಗಿ ಕೊಡಲಾಗಿದೆ. ಈತನು ಬಾಗಳಿಯ[೧೧೭] ಕಲಿದೇವಸ್ವಾಮಿಗೆ ಹಿರಿಯಕೆರೆಯ ಕೆಲಸಕ್ಕೆ, ಬ್ರಹ್ಮಜಿನಾಲಯದ ನೈವೇದ್ಯಕ್ಕೆ ವೀರಕೇಶವ ದೇವರಿಗೆ, ಭೂಮಿಬಿಟ್ಟ ಉಲ್ಲೇಖವಿದೆ.

ಸೋಮೇಶ್ವರ ಭಟ್ಟೋಪಾಧ್ಯಾಯ

ಕುಡುತಿನಿ[೧೧೮] ಶಾಸನದಲ್ಲಿ ಈತನ ಉಲ್ಲೇಖವಿದೆ. 'ಶ್ರೀಮತ್ತ್ರಿಭುವನ ಮಲ್ಲದೇವರಾರಾಧ್ಯರಪ್ಪ ಶ್ರೀಮನ್ಮಹಾ ಪ್ರಧಾನಂ ದಣ್ಣ ನಾಯಕಂ ಶ್ರೀ ಮದಯ್ಯಂಗಳು ಸೋಮೇಶ್ವರ ಭಟ್ಟೋಪಾಧ್ಯಾಯರು' ಎಂದು ಕರೆಯಲಾಗಿದೆ. 'ರುಗ್ವೇದ ರತ್ನಾಕರ' ಅಷ್ಟದಶ ಧರ್ಮಶಾಸ್ತ್ರ, ಕಲ್ಪವೃಕ್ಷ ಬಂಧು ಜನಾಧಾರ ಗೋತ್ರ ಪವಿತ್ರ ಮೊದಲಾದ ಪ್ರಶಸ್ತಿಗಳನ್ನು ಶಾಸನದಲ್ಲಿ ಕೊಡಲಾಗಿದೆ. ಅಚ್ಚು ಪನ್ನಾಯದ ಅದಿಷ್ಠಾಯಕ ದಂಡನಾಯಕ ಮಹಾವಿಷ್ಣುವರಸನು ಈತನ ಮೈದುನನಾಗಿದ್ದನು.

ಮಹಾಪ್ರಚಂಡದಂಡನಾಯಕ ಭೋಗಭಟ್ಟಯ್ಯ

ಕನ್ನಡ ಸಂಧಿ ವಿಗ್ರಹಿಯಾಗಿ ಸೇನಾಧಿಪತಿಯಾಗಿ ಸೇವೆಸಲ್ಲಿಸುತ್ತಿದ್ದ ಈತನ ಪ್ರಸ್ತಾಪ ರಾಗಿಮಸಲವಾಡ[೧೧೯] ಶಾಸನದಲ್ಲಿ ಬರುತ್ತದೆ. ಈತನು ಚಕ್ರವರ್ತಿ ಭೂಲೋಕ ಮಲ್ಲದೇವನ (ಮೂರನೆಯ ಸೋಮೇಶ್ವರ) ಪಾದ ಪದ್ಮೋಪಜೀವಿಯಾಗಿ ಎರಡರುನೂರು (ಬೆಳ್ವೊಲ ೩೦೦ + ಪುಲಿಗೆರೆ ೩೦೦) ಬನವಾಸಿ ೧೨೦೦ ಹಾಗೂ ಸಪ್ತಾರ್ಧಲಕ್ಷದ ವಡ್ಡರಾವುಳದ ಸುಂಕವನ್ನು ಆಳುತ್ತಿದ್ದನು. ಇದರಿಂದ ಈತನು ಸುಂಕದಧಿಕಾರಿಯಾಗಿದ್ದುದು ಗೊತ್ತಾಗುತ್ತದೆ.

ಮಹಾಪ್ರಚಂಡದಂಡನಾಯಕ ಇಂದರಾಣಿ ಭಟ್ಟಯ್ಯ

ಇವನು ರಾಗಿಮಸಲವಾಡ[೧೨೦] ಶಾಸನೋಕ್ತನಾಗಿದ್ದಾನೆ. ಇವನು ಚಕ್ರವರ್ತಿ ಭೂಲೋಕ ಮಲ್ಲದೇವನ ಪಾದಪದ್ಮೋಪಜೀವಿಯಾದ ಭೋಗಭಟ್ಟಯ್ಯನ ಪಾದಪದ್ಮೋಪಜೀವಿಯಾಗಿದ್ದಾನೆ. ಸುಂಕದ ಅಧಿಕಾರಿಯಾದ ಇವನ ಭೋಗಭಟ್ಟಯ್ಯನಿಗಿಂತ ಕಿರಿಯ ಅಧಿಕಾರಿಯಾಗಿದ್ದಾನೆ.ಇವನು ನೊಳಂಬವಾಡಿ ೩೨೦೦೦ವಿಭಾಗದ ವಡ್ಡರಾವುಳದ ಕೀಳ್ಗಟ್ಟೆಯಚ್ಚುಪನ್ನಾಯವನ್ನು ಆಳುತ್ತಿದ್ದನು. ಇವನ ಪತ್ನಿ ರತ್ನದೇವಿಯಕ್ಕ ಇವನಲ್ಲಿ ಉಜ್ಜಭಟ್ಟನು ಪೆರ್ಗಡೆತನ ಮಾಡುತ್ತಿದ್ದನು. ಈತನಿಗೆ ಆಸ್ಥಾನ

ವಸ್ತುನಾಯಕಂ ಭವಾನಿವಲ್ಲಭ ಚರಣಸರಸೀರುಹಕ್ಷಿಟ್ಪರರಾಂ! ಇನ್ನು ಮುಂತಾದ ಪ್ರಶಸ್ತಿಗಳನ್ನು ಕೊಡಲಾಗಿದೆ.

ಮಹದೇವ ದಂಡನಾಯಕ

ಸಂಡೂರಿನ ಕುಮಾರಸ್ವಾಮಿ ದೇವಾಲಯದ[೧೨೦] ಶಾಸನದಲ್ಲಿ ಇವನ ಉಲ್ಲೇಖವಿದೆ. ಇಮ್ಮಡಿ ವೀರಬಲ್ಲಾಳನ ಪಾದಪದ್ಮೋಪಜೀವಿಯಾಗಿರುವ ಇವನನ್ನು ಶಾಸನದಲ್ಲಿ ಮನಸಿಜಮೂರ್ತಿ ಮಾಗಥಜನಾಮರ ಭೂಜನ ಶೇಷ ವೈರಿಕಾನನದವ ಪಾವಕಂ 'ಶ್ರೀ ಮನ್ಮಹಾ ಪ್ರಧಾನಂ ಸೇನಾಪತಿ ಬಾಹತ್ತರ ನಿಯೋಗಾಧಿಪತಿಯನೇಕ ದೇಶಾಧಿಪತಿ ಸಕಳಲಕ್ಷ್ಮೀಪತಿ' ಎಂದು ಮುಂತಾಗಿ ಕರೆದಿರುವುದರಿಂದ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಶ್ರೇಣಿಯ ಅಧಿಕಾರಿಯಗಿರಬೇಕು. ಶರಣಾಗತರಿಗೆ ವಜ್ರಪಂಜರದಂತೆ ರಕ್ಷಣೆ ಕೊಡುವ ಇವನು ವೀರಬಲ್ಲಾಳನ ಆಜ್ಞೆಯ ಮೇರೆಗೆ ಶ್ರೀ ಸ್ವಾಮಿದೇವರಿಗೆ ಹಿಂದೆ ರಾಷ್ಟ್ರಕೂಟ ದೊರೆ ಕೃಷ್ಣರಾಜನು ಕೊಟ್ಟಿದ್ದ ದತ್ತಿಯನ್ನು ಪುನರ್ದತ್ತಿಯಾಗಿ ವಿಷ್ಣಕರ ಬ್ರಹ್ಮಚಾರಿಗೆ ನೀಡುತ್ತಾನೆ. ಕೆಜೆಯಪಳ್ಳಿ ಗ್ರಾಮವನ್ನು ಕೊಡುತ್ತಾನೆ. ಇವನು ವೀರಬಲ್ಲಾಳನ ರಾಜ್ಯದ ವಿಸ್ತರಣೆಗೆ ಕಾರಣಸಾದವನೆಂದು ಶಾಸನ ವರ್ಣಿಸಿದೆ.

ಕಟಕದ ಸೋಮಾ ದಂಡನಾಯಕ

ಹೊಯ್ಸಳ ಇಮ್ಮಡಿ ವೀರನರಸಿಂಹನ ಪಾದಪದ್ಮೋಪಜೀವಿಯಾದ ಸೋಮದಂಡ ನಾಯಕನನ್ನು ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಎಂದು ಕರೆಯಲಾಗಿದೆ. 'ಸರ್ವಾಧಿಕಾರಿ ಸೇನಾಧಿಪತಿ ಬಾಹತ್ತರ ನಿಯೋಗಾಧಿಪತಿ ಸಕಳಲಕ್ಷ್ಮೀಪತಿಯನೇಕ ದೇಶಾಧಿಪತಿ ಯಂಗರಿxಲಾಳಬಂಡೆxxxx ಅರಧಿಷ್ಟಾಯಕಂ ಮಹಾಪಸಾಯ್ತಂ' ಎಂದೆಲ್ಲ ಕರೆದಿವೆ. ಶಾಸನ ತ್ರುಟಿತವಾಗಿರುವದರಿಂದ ಹೆಚ್ಚಿನ ಮಾಹಿತಿ ಆಲಭ್ಯ

ಅಮ್ಮಣ್ಣದಣ್ಣಾಯಕ

ಹೊಯ್ಸಳ ಇಮ್ಮಡಿ ವೀರನರಸಿಂಹನ ಪಾದಪದ್ಮೋಪಜೀವಿಯಾದ ಇವನ ಉಲ್ಲೇಖ ಅಣಿಜಗೆರೆ[೧೨೨] ಶಾಸನದಲ್ಲಿ ಬರುತ್ತದೆ. ಶಾಸನವಲ್ಲಿ 'ಶ್ರೀಮನುಮಹಾಪ್ರಧಾನಂ ಸರ್ವಾಧಿಕಾರಿ ಮಹಾಪಸಾಯತಂ ಪರಮವಿಶ್ವಾಸಿ ರಾಯದಂಡನಾಥ ಅಂಮಣ್ಣದಣ್ಣಾಯಕರು' ಎಂದು ಇವನನ್ನು ಕರೆಯಲಾಗಿದೆ. ಇದರಿಂದ ಇವನು ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಶ್ರೇಣಿಯ ಅಧಿಕಾರಿಯಾಗಿರಬೇಕು. ಇವನು 'ಸಮಸ್ತದೇಶಾಧಿಕಾರ' ಹೊಂದಿದ್ದನೆಂದು ಶಾಸನ ತಿಳಿಸುತ್ತದೆ. ಇವನ ಪಾದಪದ್ಮೋಪ ಜೀವಿಯಾಗಿ ನಾಳ್ಪಭು ಆಸಗೋಡ ಪಲ್ಲವ ಸಾಮಂತನು ಕೊಚಿಗೊಳದ ಮೂಲಸ್ಥಾನ ಕಲಿದೇವ xxxxxನೈವೇದ್ಯ ನಂದಾದೀವಿಗೆಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದತ್ತಿ ಬಿಡುತ್ತಾನೆ.

ಅಮಿತಯ್ಯ ದಂಡನಾಯಕ

ಇಮ್ಮಡಿ ವೀರನರಸಿಂಹನ ಪಾದಪದ್ಮೋಪಜೀವಿಯಾದ ಈತನು ಸೈನ್ಯಾಧಿಕಾರಿಯಾಗಿದ್ದನು. ಇವನು ಮಹಾಸಾಮಂತ ಮಹಾಪ್ರಚಂಡದಂಡನಾಯಕ ಶ್ರೇಣಿಯ ಅಧಿಕಾರಿಯಾಗಿರಬೇಕು. ಬೆಣ್ಣೆಕಲ್ಲು ಶಾಸನದಲ್ಲಿ[೧೨೩] 'ಆ ನಾರಸಿಂಹದೇವ ಸಭಾನಳಿನೀರಾಜಹಂಸನಾಶ್ರಿತ ಜನತಾದಾನಾಭಿಮಾನನಮಿತ ಚಮೂನಾಥಂ. ರಾಯದಂಡನಾಯಕ ಹನುಮಂ' ಎಂದು ಇವನನ್ನು ಕರೆಯಲಾಗಿದೆ. ಇವನು ವಾಮರಸನ ಪುತ್ರನಾಗಿದ್ದಾನೆ. ಬೆಣ್ಣೆಕಲ್ಲು ೧೨ಕ್ಕೆ ಮುಖ್ಯವಾದ ಬೆಂಣ್ಣೆಕಲ್ಲಿನಲ್ಲಿ ಪದ್ಮಲೇಶ್ವರ, ಅಮೃತೇಶ್ವರ, ಲಕ್ಷ್ಮಿನಾರಾಯಣ, ರಾಮೇಶ್ವರ, ಬಲ್ಲಾಳೇಶ್ವರ ಮತ್ತು ನರಸಿಂಹ ದೇವಾಲಯಗಳನ್ನು ಕಟ್ಟಿಸುತ್ತಾನೆ. ಅಂಗಭೋಗ, ರಂಗಭೋಗ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ಬೆಂಣೆಕಲ್ಲಿನಲ್ಲಿ ಗದ್ದೆಯನ್ನು ದಾನ ಬಿಡುತ್ತಾನೆ. ಅಲ್ಲದೆ 'ಮಾನಿಲಿ' ಎಂಬ ಗ್ರಾಮವನ್ನು ಬಿಡುತ್ತಾನೆ.

ಕನ್ನರದೇವ

ಈತನು ದೇವಗಿರಿ ಯಾದವ ವಂಶದ ರಾಮಚಂದ್ರರಾಯನ ಪಾದಪದ್ಮೋಪಜೀವಿ ಹಲುವಾಗಲು[೧೨೪] ಶಾಸನದಲ್ಲಿ 'ಸಮಸ್ತ ರಾಜ್ಯಭಾರ ನಿರೂಪಿತಂ ಸಕಲ ಸೈನ್ಯಾಧಿಪತಿ ಶ್ರೀಮನ್ಮಹಾಪ್ರಧಾನಂ ಸರ್ವಾಧಿಕಾರಿ' ಎಂದು ಕರೆದಿರುವುದರಿಂದ ಈತನು ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಶ್ರೇಣಿಯ ಅಧಿಕಾರಿಯಾಗಿರಬೇಕು. ಹಲುವಾಗಲು ಶಾಸನದಲ್ಲಿ ಈತನು ಹುಲಿಗೆರೆ ಮುಖ್ಯವಾಗಿ ಹಲವು ದೇಶಗಳನ್ನು ಏಕಾಧಿಶ್ಚಿತವಾಗಿ ವಿಷಯಾಧಿಕಾರ ಮಾಡುತ್ತ ಇರುವಾಗ ಧರ್ಮ ಪ್ರಸಂಗವಾದಲ್ಲಿ ಹುಲುವಾಗಿಲ ಶ್ರೀಸ್ವಯಂಭು ಮೂಲಸ್ಥಾನ ಕಲಿನಾಥದೇವ ತೀರ್ಥಕ್ಷೇತ್ರದಲ್ಲಿ ವಿಶೇಷತೆಯನ್ನು ಕೇಳಿ ಆ ದೇವರ ಪೂರ್ವದ ಛತ್ರವನ್ನು ಸರ್ವನಮಸ್ಯವಾಗಿ ಬಿಡುತ್ತಾನೆ.

ದಂಡನಾಯಕ ಮಾರ್ತಂಡಯ್ಯ

ಸತ್ತೂರಿನ[೧೨೫] ಶಾಸನದಲ್ಲಿ ಈತನ ಉಲ್ಲೇಖವಿದೆ. ಜಗದೇಕಮಲ್ಲ ನನ್ನಿನೊಳಂಬ ಪಲ್ಲವದೇವನು ಆಳುತ್ತಿರುವಾಗ ದಂಡನಾಯಕ ಮಾರ್ತಂಡಯ್ಯನ ಅಳಿಯ ಸತ್ತಿಯೂರ ಒಡೆಯ ಸೋವಿಮಯ್ಯನು ಮತ್ತು ಮಾಸವಾಡಿ ೧೪೦ರ ಮನ್ನೆಯ ಯಾದವ ವಂಶದ ಕುಪ್ಪರಸ ಇವರು ಸತ್ತಿಯೂರ ಮಹಾದೇವರಿಗೆ ಭೂಮಿ ದಾನ ಬಿಡುತ್ತಾರೆ.

ದಂಡನಾಯಕ ತೀಕಣ್ಣ

ದಂಡನಾಯಕ ತೀಕಣ್ಣನು ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮ್ಮಾನಡಿಯ ಪಾದಪದ್ಮೋಪಜೀವಿಯಾಗಿದ್ದನು. ಮೋರಿಗೇರಿ[೧೨೬] ಶಾಸನದಲ್ಲಿ ಈತನು ಲೆಂಕಸಾಸಿರ್ವರ ಮುಖ್ಯಸ್ಥನಾಗಿದ್ದನೆಂದು ಹೇಳಲಾಗಿದೆ. ಈತನು ಅಮ್ಮಳೆ, ನೆಲ್ಲಿಕುದಿರು,ಸೊನ್ನ,ಮೊಳಲ್ಗುಂದೆ,ಸೂಗೂರು ಮತ್ತು ಮೋರಿಗೇರಿ ಇವುಗಳನ್ನು ಆಳುತ್ತಿದ್ದ.

ದಂಡನಾಯಕ ಬ್ರಹ್ಮಾದಿರಾಜ

ಮಹಾಮಂಡಳೇಶ್ವರ ಜಗದೇಕಮಲ್ಲ ನೊಳಂಬನ ಪಾದಪದ್ಮೋಪಜೀವಿಯಾಗಿರುವ ಇವನು ಮಹಾಮಾತ್ಯ ಪದವಿ ಹೊಂದಿದ್ದನು. ಇವನು ಮೋರಿಗೇರಿಯ ಸ್ವಯಂಭು ದೇವರಿಗೆ, ಪರೆಕಾರರಿಗೆ ಪಾತ್ರದವರಿಗೆ ಪೂಜಾರಿಗೆಂದು ಸ್ಥಾನಧಿಪತಿ ಚಂದ್ರಭೂಷಣ ಪಂಡಿತರ ಕಾಲುತೊಳೆದು ಭೂಮಿ, ಗದ್ದೆ, ಗಾಣಗಳನ್ನು ಬಿಡುತ್ತಾನೆ. ಈತನನ್ನು ಶಿವಪಾದಶೇಖರಂ. ನೀತಿರತ್ನಾಕರರಂ ಸಾರ್ವ್ವಲೋಕ ಸಮುದ್ಧರಣ ಎಂದು ಮೊದಲಾಗಿ ಪ್ರಶಂಸಿಸಲಾಗಿದೆ.

ದಂಡನಾಯಕ ಮಾಚಿದೇವ

ಇವನ ಉಲ್ಲೇಖ ಹಿರೇಹಡಗಲಿ[೧೨೭] ಶಾಸನದಲ್ಲಿ ಬರುತ್ತದೆ. ಅನಂತಪಾಳಯ್ಯನ ಅಳಿಯನಾದ ಇವನು ವಡ್ಡರಾವುಳ ಸುಂಕದ ದಂಡನಾಯಕನಾಗಿದ್ದಾನೆ. ಇವನು ದೇಮೇಶ್ವರ ದೇವರ ಅಂಗಭೋಗಕ್ಕೆ ಮೂರು ಲಕ್ಷವಡ್ಡರಾವುಳದ ಸುಂಕವನ್ನು ಕೊಡುತ್ತಾನೆ.

ದಂಡನಾಯಕ ದೇವಪಯ್ಯ

ಉಚ್ಚಂಗಿದುರ್ಗದ[೧೨೮] ಕ್ರಿ.ಶ.೧೦೬೪ ಶಾಸನದಲ್ಲಿ ದಂಡನಾಯಕ ದೇವಪಯ್ಯನ ಉಲ್ಲೇಖವಿದೆ. ಚಕ್ರವರ್ತಿ ಒಂದನೆಯ ಸೋಮೇಶ್ವರನ ಪುತ್ರನಾದ ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯನ ಪಾದಪದ್ಮೋಪಜೀವಿಯಾಗಿದ್ದ ಈತನನ್ನು 'ಶ್ರೀ ಮದ್ದಣ್ಣನಾಯಕ ದೇವಪಯ್ಯ' ಎಂದು ಮಾತ್ರ ಕರೆಯಲಾಗಿದೆ.ಈತನು ಉಚ್ಚಂಗಿ ೩೦ನ್ನು ಆಳುತಿದ್ದನೆಂದು ಹೇಳಲಾಗಿದೆ. ಕ್ರಿ.ಶ.೧೦೬೮ರ ಸುಮಾರಿಗೆ ಈತನು 'ಮಹಾಸಂಧಿವಿಗ್ರಹಿ ಸ್ಥಾನ ಪಡೆದುಕೊಳ್ಳುತ್ತಾನೆ'.

ದಂಡನಾಯಕ ಮೂಕರಾಜ

ಉಚ್ಚಂಗಿದುರ್ಗದ[೧೨೯] ಶಾಸನದಲ್ಲಿ ಇವನ ಪ್ರಸ್ತಾಪ ಬರುತ್ತಿದ್ದು ಇವನು ಚಕ್ರವರ್ತಿ ಒಂದನೆಯ ಸೋಮೇಶ್ವರನ ಪುತ್ರ ವಿಷ್ಣುವರ್ಧನ ವಿಜಯಾದಿತ್ಯದೇವನಲ್ಲಿ ದಂಡನಾಯಕನಾಗಿದ್ದನು. ಇವನು ಉಚ್ಚಂಗಿಯ ಗಳಗೇಶ್ವರ ದೇವರಿಗೆ ದಾನ ಕೊಟ್ಟದ್ದು ತಿಳಿದುಬರುತ್ತದೆ.

ದಂಡನಾಯಕ ನಾಗದೇವಯ್ಯ, ಎರಕಪಯ್ಯ, ಮಾರಮಯ್ಯ

ಈ ಮೂವರು ದಂಡನಾಯಕರಾದ ದೇವಯ್ಯ, ಎರಕಪಯ್ಯ ಮತ್ತು ಮಾರಮಯ್ಯ ಇವರ ಉಲ್ಲೇಖ ಉಚ್ಚಂಗಿದುರ್ಗದ[೧೩೦] ಶಾಸನದಲ್ಲಿ ಬರುತ್ತದೆ. ಈ ಮೂವರು ಚಕ್ರವರ್ತಿ ಒಂದನೆಯ ಸೋಮೇಶ್ವರನ ಪುತ್ರ ವಿಷ್ಣುವರ್ಧನ ವಿಜಯಾದಿತ್ಯದೇವನಲ್ಲಿ ದಂಡನಾಯಕರಾಗಿದ್ದರು. ದಂಡನಾಯಕ ದೇವಪಯ್ಯನು ಉಚ್ಚಂಗಿಯಲ್ಲಿ ಗಳಗೇಶ್ವರ ದೇವಾಲಯ, ಮಠ, ಬಾವಿ ಕಟ್ಟಿಸುತ್ತಾನೆ. ತಾನು ಕಟ್ಟಿಸಿದ

ದೇವಾಲಯಕ್ಕೆ ಒಂದು ಗ್ರಾಮ ಬಿಡಲು ಈ ಮೂವರು ದಂಡನಾಯಕರಿಗೆ ಬಿನ್ನವಿಸಿಕೊಂಡ ಉಲ್ಲೇಖ ಶಾಸನದಲ್ಲಿದೆ.

ದಂಡನಾಯಕ ಮೇಳಮಯ್ಯ

ತುಂಬಿಗೆರೆ[೧೩೧] ಶಾಸನದಲ್ಲಿ ದಂಡನಾಯಕ ಮೇಳಮಯ್ಯನ ಉಲ್ಲೇಖವಿದೆ. ಇವನು ಪೆರ್ಜುಂಕದ ದಂಡನಾಯಕ ಚಟ್ಟಯ್ಯನಾಯಕ ಮತ್ತು ದಂಡನಾಯಕ ಮೇಳಮಯ್ಯ, ನಂಬಿಯಣ್ಣ ಇವರು ಇದ್ದು, ದೇವರಿಗೆ ನಂದಾದೀವಿಗೆಗಾಗಿ ತಿಂಗಳು ತಿಂಗಳಿಗೆ 'ಎಲೆಯ ಪೇರು' ಒಂದನ್ನು ಬಿಟ್ಟ ಮಾಹಿತಿ ಶಾಸನದಲ್ಲಿ ಉಲ್ಲೇಖವಿದೆ.

ಶಿವರಾಜ ಚಮೂಪ

ಪ್ರಾಂತೀಯ ಸೈನ್ಯದ ದಂಡನಾಯಕನಾದ ಶಿವವರಾಜ ಚಮೂನಾಥನ ವಿವರಣೆಯು ಅಂಬಳಿ[೧೩೨] ಶಾಸನದಲ್ಲಿ ಬರುತ್ತದೆ. ಶಾಸನದಲ್ಲಿ ಈತನ ವಂಶಾವಳಿಯನ್ನು ಕೊಡಲಾಗಿದ್ದು ಪಶುಪತಿಭಟ್ಟನಿಂದ ಪ್ರಾರಂಭವಾಗುತ್ತದೆ. ಪಶುಪತಿಭಟ್ಟನು ದುರ್ವಿನೀತಗಂಗನಿಂದ ರಾಜ್ಯಚಿಹ್ನೆಗಳನ್ನು ಪಡೆದ ಅಂಬಳಿ ಗ್ರಾಮದ ಒಡೆಯನಾಗಿದ್ದನು. ಈ ಶಿವರಾಜನು ಭೂನಾಥನಿಂದ ಸಮಸ್ತ ಅಧಿಕಾರವನ್ನು ಸೇನಾಸ್ಪದವನ್ನು ಪಡೆದುಕೊಳ್ಳುತ್ತಾನೆ.ಈತನು ಅಂಬಳಿಯಲ್ಲಿ ಕಲಿದೇವಸ್ವಾಮಿ ದೇವಾಲಯ ನಿರ್ಮಿಸಿದ ಉಲ್ಲೇಖ ಶಾಸನದಲ್ಲಿದೆ.

ಕಾಳಿದಾಸ ದಂಡಾಧೀಶ

ಕಾಳಿದಾಸ ದಂಡಾಧೀಶನು ಬೆಳ್ವೊಲವೂರ೧೨ಸಿನ್ನು ಶ್ರೀಮತ್ ಸುರೇಶ್ವರ ಪಂಡೀತ ದೇವರು ಆಳುತ್ತಿರುವಾಗ ಆ ನಾಡಿನಲ್ಲಿಯ ಅಗ್ರಹಾರ 'ಕುರುವರ್ತಿ'ಯ ಒಡೆಯನಾಗಿದ್ದ ಸೋಮನಾಥನ ಹಿರಿಯ ಪುತ್ರನಾಗಿದ್ದಾನೆ. ಈತನನ್ನು ಪರೋಪಕಾರಿ, ಧರಾಮರಪೂಜ್ಯ, ಅಸಮಸಾಹಸನೆಂದು ಶಾಸನ[೧೩೩] ವರ್ಣಿಸುತ್ತದೆ. ಇವನು ದೇವರಿಗೆ ದಾನ ಬಿಟ್ಟ ವಿವರವಿದೆ.

ದಂಡನಾಯಕ ಪಾಲಿಮರಸ

ಗುಡಿಹಳ್ಳಿ[೧೩೪] ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ಸುಂಕದ ಅಧಿಕಾರಿಯಾದ ಈತನು ಅನಂತದಳನ ಅಳಿಯ ಮಾದಿರಾಜನ ಪಾದಪದ್ಮೋಪಜೀವಿಯಾಗಿದ್ದ ಇವನು ನೊಳಂಬವಾಡಿ ೩೨೦೦೦ದ ವಡ್ಡರಾವುಳ ಸುಂಕವನ್ನು ಆಳುತ್ತಿದ್ದನು.

ಅಣುಕ ಪಲ್ಲವರಾಯ

ಅಂಬಳಿಯ[೧೩೫] ಶಾಸನದಲ್ಲಿ ಅಣುಕ ಪಲ್ಲವರಾಯನ ಉಲ್ಲೇಖವಿದೆ. ಈತನು ನೊಳಂಬವಾಡಿ ೩೨೦೦೦ ವಡ್ಡರಾವುಳ, ಪೆರ್ಜುಂಕದ ಅಧಿಷ್ಠಾಯಕನಾಗಿದ್ದನು. ಅಣುಕಪಲ್ಲವರಾಯನು ಸ್ವಯಂಭೂ

ಕಲಿದೇವಸ್ವಾಮಿಯ ವೀಳೆಯಕ್ಕೆ ದೇವರ ತೋಟದ ಎಲೆಯ ಅಡಕೆಯ ಸುಂಕವನ್ನು ಸರ್ವನಮಸ್ಯವಾಗಿ ಬಿಟ್ಟ ಉಲ್ಲೇಖವಿದೆ.

ದಂಡನಾಯಕ ಬರ್ಮರಸ

ಬಾಗಳಿಯ[೧೩೬] ಶಾಸನೋಕ್ತನಾದ ದಂಡನಾಯಕ ಬರ್ಮರಸನು 'ಮಹಾಮಾತ್ಯ' ಪದವಿಯನ್ನು ಪಡೆದಿದ್ದನು. ಅನಂತಪಾಳನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈತನು ಚಕ್ರವರ್ತಿ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯೆಂದು ಕರೆದುಕೊಂಡಿದ್ದಾನೆ. ಸುಂಕದ ಅಧಿಕಾರಿಯಾಗಿದ್ದ ಈತನನ್ನು 'ಅಚ್ಚು ಪನ್ನಾಯದದಿಷ್ಠಾಯಕಂ ದಣ್ಡನಾಯಕಂ ಬರ್ಮ್ಮರಸರ್' ಎಂದು ಕರೆಯಲಾಗಿದೆ.

ದಂಡನಾಯಕ ಮುದ್ದರಸ:

ಬಾಗಳಿಯ[೧೩೭] ಕ್ರಿ.ಶ.೧೧೦೩ ಶಾಸನೋಕ್ತನಾದ ದಂಡನಾಯಕ ಮುದ್ದರಸನು ಚಕ್ರವರ್ತಿ ವಿಕ್ರಮಾದಿತ್ಯನ ಪಾದಪದ್ಮೋಪ ಜೀವಿಯೆಂದು ಹೇಳಿಕೊಂಡಿದ್ದಾನೆ. ಮಹಾಮಾತ್ಯ ಪದವಿಯನ್ನು ಹೊಂದಿದ್ದು ಈತನನ್ನು 'ಶ್ರೀ ಮದಚ್ಚುಪನ್ನಾಯದಧಿಷ್ಠಾಯಕಂ ದಂಡನಾಯಕಂ ಮುದ್ದರಸರು' ಎಂದು ಶಾಸನದಲ್ಲಿ ಕರೆಯಲಾಗಿದೆ. ಈತನು ಸುಂಕದ ಅಧಿಕಾರಿಯಾಗಿದ್ದನು. ನೀಲಗುಂದದ[೧೩೮] ಶಾಸನದಲ್ಲಿ ಇವನು ಕಿರ್ಬಟ್ಟೆಯ ಸುಂಕವನ್ನು ಆಳುತ್ತಿದ್ದನೆಂದು ಹೇಳಲಾಗಿದೆ.

ದಂಡನಾಯಕ ರಿಷಿಯಣ್ಣಭಟ್ಟ

ಬಾಗಳಿಯ[೧೩೯] ಶಾಸನೋಕ್ತನಾದ ಈತನು ಮಹಾಸಾಮಂತಾಧಿಪತಿ ಮಹಾ ಪ್ರಚಂಡದಂಡನಾಯಕ ಮಹಾದೇವರಸನ ಆಜ್ಞೆಯ ಮೇರೆಗೆ ಮಹಾಮಾತ್ಯ ದಂಡನಾಯಕ ರಿಷಿಯಣ್ಣಭಟ್ಟರು ಸೂರ್ಯಗ್ರಹಣದಂದು ದಿವ್ಯಲಿಂಗೇಶ್ವರ ದೇವರ ನೈವೇದ್ಯ ನಂದಾದೀವಿಗೆಗೆ ಒಂದಲೆಯ ಪೇರಿನ ಸುಂಕವನ್ನು ನೀಲೇಶ್ವರ ಪಂಡಿತರ ಕಾಲು ತೊಳೆದು ಬಿಟ್ಟನೆಂದು ಹೇಳಲಾಗಿದೆ.

ದಂಡನಾಯಕ ಘಟ್ಟಮಾನರ ಪೆರ್ಗಡೆಯತ್ತಿಮರಸ

ಹೂವಿನಹಡಗಲಿ[೧೪೦]ಯ ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ಮಹಾಮಂಡಳೇಶ್ವರ ಪಾಂಡ್ಯದೇವನ ಆದೇಶದ ಮೇರೆಗೆ ಈತನು ದೇಮೇಶ್ವರ ದೇವರಿಗೆ ಮೂರು ಲಕ್ಷದ ಅಡಕೆಯ ಪೆರ್ಜುಂಕವನ್ನು ಬಿಟ್ಟನೆಂದು ಹೇಳಲಾಗಿದೆ.

ದಂಡನಾಯಕ ಮಹಾವಿಷ್ಣುವರಸ

ಕುಡುತಿನಿ[೧೪೧] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನು ಅಚ್ಚುಪನ್ನಾಯದ ಅಧಿಷ್ಠಾಯಕನಾಗಿದ್ದು ಇವನು ಶ್ರೀ ಸ್ವಾಮಿದೇವರ ಅಂಗಭೋಗಕ್ಕೆ ಕೊಟ್ಟಿತ್ತೊತೆಯಲ್ಲಿ ಪನ್ನಾಯದ

ಸುಂಕವನ್ನು ತಿಂಗಳಿಗೆ ಎರಡು ಗದ್ಯಾಣ ಪೊನ್ನು ಇಲ್ಲಿ ಮಾರಿದ ಸ್ಥಳ ವಿಕ್ರಯ ಮೊದಲಾದವುಗಳನ್ನು ಬಿಟ್ಟನೆಂದು ಹೇಳಲಾಗಿದೆ.

ದಂಡನಾಯಕ ಮಾಚಿದೇವ

ಹಿರೇಹಡಗಲಿಯ ಶಾಸನದಲ್ಲಿ[೧೪೨] ಈತನ ಉಲ್ಲೇಖವಿದೆ. ಈತನು ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಅನಂತಪಾಳಯ್ಯನ ಅಳಿಯನಾಗಿದ್ದಾನೆ. ಶಾಸನದಲ್ಲಿ ಈತನನ್ನು 'ವಡ್ಡರಾವುಳದ ಸುಂಕದಧಿಕಾರಿ ದಂಡನಾಯಕ ಮಾಚಿದೇವ' ಎಂದು ಕರೆಯಲಾಗಿದೆ. ಈತನು ದೇಮೇಶ್ವರ ದೇವರ ಅಂಗಭೋಗಕ್ಕೆ 'ಮೂರುಲಕ್ಷ ವಡ್ಡರಾವುಳದ' ಸುಂಕ ಬಿಟ್ಟನೆಂದು ಹೇಳಲಾಗಿದೆ.

ಆನೆಯ ಸಾಹಣಿ ಪಸಾಯ್ತ ಕೆಂಗಣ:

ಆನೆಯ ಸಾಹಣಿ ಕೆಂಗಣನ ಉಲ್ಲೇಖ ರಾಮಘಟ್ಟ[೧೪೩] ಶಾಸನದಲ್ಲಿದೆ. ಇವನು ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯದೇವರಿಗೆ ಬಿನ್ನಪಮಾಡಿ ಆತನಿಂದ ಮತ್ತರು ೧ ಕಮ್ಮ೧೦೦ ಗದ್ದೆಯನ್ನು ಪಡೆದು ಅದನ್ನು ಶ್ರೀ ರಾಮೇಶ್ವರದೇವರಿಗೆ ಬಿಟ್ಟನೆಂದು ಹೇಳಲಾಗಿದೆ.

ಸಂಧಿವಿಗ್ರಹಿ ಮಲ್ಲಪರಾಜು

ಮಲ್ಲಪರಾಜನ ಉಲ್ಲೇಖ ಕೊಟ್ಟೂರಿನ[೧೪೪] ಶಾಸನದಲ್ಲಿ ಬರುತ್ತದೆ. ಮಹಾಮಂಡಳೇಶ್ವರ ಘಟ್ಟಿದೇವನ ಸಂಧಿವಿಗ್ರಹಿಯಾದ ಈತನು ಕೊಟ್ಟೂರಿನ ಶಾಸನದ ಕರ್ತೃವೆಂದು ಹೇಳಿಕೊಂಡಿದ್ದಾನೆ.

ದೇಮರಸ

ಹಿರೇಹಡಗಲಿ[೧೪೫] ಶಾಸನೋಕ್ತನಾದ ಈತನು ಕಲಿಮಯ್ಯನ ತಮ್ಮನಾಗಿದ್ದಾನೆ. ಆರನೆಯ ವಿಕ್ರಮಾದಿತ್ಯನು ಕುಮಾರ ವೃತ್ತಿಯಿಂದ ಗಂಗವಾಡಿ ೯೬೦೦೦, ಬನವಾಸಿ ೧೨೦೦೦ವನ್ನು ಆಳುತ್ತಿರುವಾಗ ಈತನು ದೇವಾಲಯ ನಿರ್ಮಿಸಿ 'ದೇಮೇಶ್ವರ'ನನ್ನು ಪ್ರತಿಷ್ಠಾಪಿಸುತ್ತಾನೆ. ಶಾಸನದಲ್ಲಿ ಇವನನ್ನು 'ವಿಟ ಚಕ್ರವರ್ತಿ' ಎಂದು ಕರೆದಿದೆ.

ವಿಜಯ ಹೆಮ್ಮಾಡಿ ದಂಡನಾಯಕ

ವಿಜಯ ಹೆಮ್ಮಾಡಿ ದಂಡನಾಯಕನು ವಿಜಯ ಪಾಂಡ್ಯನ ಪಾದಪದ್ಮೋಪಜೀವಿಯಾಗಿ ಆತನ ರಾಜ್ಯ ಸಮುದ್ಧರನೆನಿಸಿದ್ದನು. ಕ್ರಿ.ಶ. ೧೧೭೧ರ ಮಾಡಲಗೇರಿ[೧೪೬] ಶಾಸನದಲ್ಲಿ ಈತನು ನೊಳಂಬವಾಡಿ ೩೨೦೦೦ದ ಸರ್ವಾಧಿಕಾರ ಗೆಯ್ಯುತ್ತಿದ್ದನೆಂದು ಹೇಳಲಾಗಿದೆ. ಇವನು ಮಂಡೇಶ್ವರದೇವರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಅಂಗಭೋಗ, ರಂಗಭೋಗ ನೈವೇದ್ಯಕ್ಕೆಂದು ಭೂಮಿ ಬಿಟ್ಟ ಉಲ್ಲೇಖ ಶಾಸನದಲ್ಲಿದೆ.

ದಂಡನಾಯಕ ಮಾದಿರಾಜ

ಗುಡಿಹಳ್ಳಿ ಶಾಸನೋಕ್ತನಾದ[೧೪೭] ಇವನು ಬನವಾಸಿ ೧೨೦೦೦ ನೊಳಂಬವಾಡಿ ೩೨೦೦೦ ಪಲಸಿಗೆ೧೨೦೦೦ವಿಭಾಗಗಳ ವಡ್ಡರಾವುಳ ಸುಂಕವನ್ನು ಆಳುತ್ತಿದ್ದನು.

ದಂಡನಾಯಕ ದುರ್ಗರಾಜ

ದಂಡನಾಯಕ ದುರ್ಗರಾಜ ಮತ್ತು ಗೌರಕಬ್ಬರಸಿಯರ ಹಿರಿಯ ಮಗಳಾದ ಚಾವಣದೇವಿ ದೇವರಿಗಾಗಿ ಸ್ಥಳ ಬಿಟ್ಟ ಉಲ್ಲೇಖ ಬರುತ್ತಿದ್ದು, ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳು ತಿಳಿಯುವುದಿಲ್ಲ.[೧೪೮]

ದಂಡನಾಯಕ ಚೋಳಾಂಡರು

ರಾಗಿಮಸಲವಾಡ[೧೪೯] ಶಾಸನೋಕ್ತನಾದ ಈತನು ಮಹಾಮಾತ್ಯ ಪದವಿಯನ್ನು ಹೊಂದಿದ್ದನು. ಇವನು ಶ್ರೇಷ್ಠ ವೀರನಾಗಿದ್ದು ವೈರಿಬಲ ಸೂರೆಗೊಳ್ಳುವ ಸಾಮರ್ಥ್ಯ ಹೊಂದಿದ್ದಂತೆ ಶಾಸನದಲ್ಲಿ ತಿಳಿದುಬರುತ್ತದೆ. ಪರಸ್ತ್ರೀಯರ ಪುತ್ರನೂ, ನಯವಿನಯವಂತನಾದ ಇವನು ಕಾಮಿನಿಯರಿಗೆ ಮನೋರಂಜಕನೂ, ಆಶ್ರಯ ಪಡೆದ ಜನರಿಗೆ ಕಲ್ಪವೃಕ್ಷ, ಬಂಧುಗಳಿಗೆ ಚಿಂತಮಣಿಯಾಗಿದ್ದನು.

ಉಯ್ಯವಂದ ದಂಡನಾಯಕ

ಹೊಳಲ[೧೫೦] ಶಾಸನೋಕ್ತನಾದ ಇವನು ಮಹಾಮಂಡಲೇಶ್ವರ ವೀರಪಾಂಡ್ಯನಲ್ಲಿ ದಂಡನಾಯಕನಾಗಿದ್ದ. ವೀರಪಾಂಡ್ಯನಲ್ಲಿ ಪ್ರಮುಖ ಅಧಿಕಾರಿಗಳಾಗಿದ್ದ ವೀರಪಾಂಡ್ಯ ಅಣುಕ ಪಲ್ಲವರಾಯ ಮತ್ತು ಉಯ್ಯವಂದ ದಂಡನಾಯಕನ ಪುತ್ರ ನಾವಿದೇವ ಇವರೆಲ್ಲಾ ಸೇರಿ ಗಂಡರಾದಿತ್ಯನ ಪೊಳಲ ಗವರೇಶ್ವರದೇವರಿಗೆ ೩ಲಕ್ಷ ಅಡಕೆಯ ಸುಂಕ, ವಡ್ಡರಾವುಳ ಹೆಜ್ಜುಂಕವನ್ನು ಬಿಡುತ್ತಾರೆ.

ವತ್ಸ ದಂಡಾದೀಶ

ಬಾಗಳಿ[೧೫೧] ಶಾಸನದಲ್ಲಿ 'ಶುಭೋನ್ನತ ಲಸತುಕೀರ್ತಿ ಶೌರ್ಯಸಾಮರ್ಥ್ಯ ಶಾಲಿನಂ ವತ್ಸದಂಡಾಧಿಪಂ ರಕ್ಷ ವೀರಕೇಶವ ನಿತ್ಯತಃ' ಎಂದು ಮಾತ್ರ ಬರುತ್ತದೆ. ಶಾಸನ ತೃಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ತಿಳಿದು ಬರುವುದಿಲ್ಲ. ಹೀಗಾಗಿ ವತ್ಸದಂಡಾಧಿಪತಿಯ ಉಲ್ಲೇಖ ಈ ಶಾಸನದಲ್ಲಿ ಬಂದಿದೆ.

ಸಂಧಿವಿಗ್ರಹಿ ಶಂಕರದೇವ

ಶಂಕರದೇವನು ವೀರಪಾಂಡ್ಯನಲ್ಲಿ ಸಂಧಿವಿಗ್ರಹಿಯಾಗಿದ್ದನು. ವಿಪ್ರವಂಶ ಚೂಡಾರತ್ನನೆನಿಸಿದ ಇವನು ಕೊಟ್ಟೂಕಲ್ಲು[೧೫೨] ಶಾಸನಕರ್ತೃವಾಗಿದ್ದಾನೆ.

ದಂಡನಾಯಕ ಚಿದ್ದರಾಜ

ಬಾಗಳಿಯ[೧೫೩] ಶಾಸನದಲ್ಲಿ ದಂಡನಾಯಕ ಚಿದ್ದರಾಜನ ಉಲ್ಲೇಖವಿದೆ. ಈತನು ಮಾಳಪಯ್ಯ ಮತ್ತು ಕಾಮಿಯಕ್ಕರ ಪುತ್ರನಾಗಿದ್ದ. ಇವನ ಹೆಂಡತಿ ಧರ್ಮಿಯಕ್ಕ. ಗಂಡನ ಮನೆಯಲ್ಲಿ ಈಕೆಯನ್ನು ನಾಗಾಂಬಿಕ ಎಂಬ ಹೆಸರಿನಿಂದ ಕರೆಯುತ್ತಿದ್ದರು.

ಕಲ್ಲಿಮಯ್ಯ ದಂಡನಾಯಕ

ನೀಲಗುಂದ[೧೫೪] ಶಾಸನದಲ್ಲಿ ಈತನ ಉಲ್ಲೇಖವಿದೆ. ಈತನು ಮಹಾಮಂಡಳೇಶ್ವರ ತ್ರಿಭುವನ ಮಲ್ಲವೀರ ಪಾಂಡ್ಯದೇವರ ಪಾದಪದ್ಮೋಪಜೀವಿಯಾಗಿದ್ದನು. ಈತನು ಕೋಗಳಿ ೫೦೦ ಕದಂಬಳಿಕೆ ೧೦೦೦ದ ಹೆಜ್ಜುಂಕ ವಡ್ಡರಾವುಳ, ಪನ್ನಾಯ ಸುಂಕಗಳ ಅಧಿಕಾರಿಯಾಗಿದ್ದನು. ವೀರ ಹಾಗೂ ದಾನ ಗುಣಕ್ಕೆ ಖ್ಯಾತನಾದ ಇವನು ವೀರ ಪಾಂಡ್ಯದೇವರ ಆಜ್ಞೆಯ ಮೇರೆಗೆ ಸುಂಕದಧಿಪತ್ಯವನ್ನು ಹೊಂದಿ ಧರ್ಮ ಕಾರ್ಯದಲ್ಲಿ ನಿರತನಾಗಿದ್ದನು.

ಮಹದೇವ ದಣ್ಣಾಯಕ

ಇಮ್ಮಡಿ ವೀರ ಬಲ್ಲಾಳನ ಕುರುವತ್ತಿ[೧೫೫] ಶಾಸನದಲ್ಲಿ ಈತನನ್ನು 'ಅರಸಿಯಕೇಱಿಯ ಮಹಾದೇವ ದಣ್ಣಾಯಕ 'ಎಂದು ಕರೆಯಲಾಗಿದೆ. ಕುರುವತ್ತಿಯ ಆಹವಮಲ್ಲೇಶ್ವರ ದೇವರ ಅಖಂಡ ದೀವಿಗೆಯ ಧೂಪಕ್ಕೆಂದು ಮಹಾಪ್ರಧಾನ ಉತ್ತರಾಕ್ಕ ಹೆಗ್ಗಡೆ, ಮಹಾದೇವ ದಣ್ಣಾಯಕ, ಹೆಗ್ಡೆ ಜನ್ನಯ್ಯ ಇವರು ಶ್ರೀಮದ್ರಾಜಗುರು ಲೋಕಾಭರಣ ಗುರುದೇವರಿಗೆ ಆಚಂದ್ರಾರ್ಕ ತಾರಂಬರವಾಗಿ ದಾನ ಬೀಡುತ್ತಾರೆ.

ಧರ್ಮಪಾಳ ದಂಡಾಧಿಪ

ಹಿರೇಮೇಗಳಗೇರಿ[೧೫೬] ಶಾಸನದಲ್ಲಿ ಈತನ ಉಲ್ಲೇಖವಿದೆ. ವಿಜಯಪಾಂಡ್ಯನ ಪಾದಪದ್ಮೋಪಜೀವಿಯಾದ ಇವನ ಹೆಂಡತಿ ಚಿತ್ತಲದೇವಿ. ಮಗ ಗೋಪಿದೇವ. ಶಾಸನ ತ್ರುಟಿತವಾಗಿರುವುದರಿಂದ ಇವರ ಬಗ್ಗೆ ಹೆಚ್ಚಿನ ಮಾಹಿತಿ ಅಲಭ್ಯ.

ಬಸವಣ್ಣ ದಂಡನಾಯಕ:

ಹೊಯ್ಸಳ ವೀರಬಲ್ಲಾಳನಲ್ಲಿ ರಕ್ಷಣಾ ಇಲಾಖೆಯ ದಂಡನಾಯಕನಾಗಿದ್ದ ಇವನ ಉಲ್ಲೇಖ ಒರುವಾಯಿ[೧೫೭] ಶಾಸನದಲ್ಲಿ ಬರುತ್ತದೆ. ಇತನ ತಂದೆ ಅಮೃತ ದಂಡನಾಥ ಶಾಸನದಲ್ಲಿ ಈತನನ್ನು ಹೊಯ್ಸಳ ವೀರಬಲ್ಲಾಳದೇವರಾಜ್ಯ ಸಮುದ್ಧರಣ, 'ರಣಧವಳ ಬಸವಚಮೂಪ' ಎಂದು ಕರೆಯಲಾಗಿದೆ. ಇವನು ಒಳ್ಳೆಯ ಯೋಧನಾಗಿರುವಂತೆ ಮುತ್ಸದ್ದಿಯಾಗಿದ್ದನೆಂದು ಗೊತ್ತಾಗುತ್ತದೆ. ಇವನು ವಿನಾಯಕ ದೇವರಿಗೆ ಭೂಮಿದಾನ ಬಿಟ್ಟನೆಂದು ಹೇಳಲಾಗಿದೆ.

ಕೇಶವ ದಂಡನಾಯಕ

ಹೊಯ್ಸಳ ವೀರನರಸಿಂಹನಲ್ಲಿ ದಂಡನಾಯಕನಾಗಿದ್ದನು. ಇವನು ಶಂಕರನಾರಾಯಣಭಟ್ಟ, ಬೇರುಂಡನ ಬಮ್ಮಯ್ಯ, ಅಚ್ಯುತ ಭಟ್ಟ ಮತ್ತು ಚೀಲಮನಾಯಕನ ಮಗನಿಗೆ 'ಸತ್ರ' ಕ್ಕೆಂದು 'ಮಾವಿನ ಮಾಗೆ' ಎಂಬ ಗ್ರಾಮವನ್ನು ಕೊಡುತ್ತಾನೆ.

ಮಹಪ್ರಧಾನ ಗಂಗಿಮಯ್ಯನಾಯಕ

ಹಿರೇಹಡಗಲಿ[೧೫೮] ಶಾಸನದಲ್ಲಿ ಇವನ ಉಲ್ಲೇಖವಿದೆ. ಇವನು ಇಮ್ಮಡಿ ಬಲ್ಲಾಳನ ಪಟ್ಟಮಹಾದೇವಿ ಪದುಮಲದೇವಿಯ ಮಾವ. ಪದುಮಲದೇವಿ ಹೊಸ ಹಡಂಗಿಲೆ ಆಳುತ್ತಿರುವಾಗ ೧೨೦ ಮಹಾಜನಗಳ ಪಾದಗಳಿಗೆ ಮಹಾಪ್ರಧಾನ ಗಂಗಿಮಯ್ಯನಾಯಕ, ದಾವಣ್ಣರು ನಮಸ್ಕಾರ ಮಾಡಿದಾಗ ನೀವು ಮಹಾಜನಗಳ ಧರ್ಮದ ಕೆಲಸವನ್ನು ಮಾಡಬೇಕೆಂದು ಆಜ್ಞಾಪಿಸುತ್ತಾರೆ.

ಮಸಣೆಯ ದಂಡನಾಥ

ಇಮ್ಮಡಿ ಬಲ್ಲಾಳನ ಪಾದಪದ್ಮೋಪಜೀವಿಯಾಗಿರುವ ಈ ಮಸಣೆಯ ದಂಡನಾಥನೆ ಉಲ್ಲೇಖ ಮಾಗಳ[೧೫೯] ಶಾಸನದಲ್ಲಿದೆ. ಕಾಮನಿಗಿಂತಲೂ ಸುಂದರನೂ, ಕರ್ಣನಿಗಿಂತಲೂ ಅಧಿಕ ಕೊಡುಗೈದಾನಿ ಎಂದು ಶಾಸನ ಇವನನ್ನು ವರ್ಣಿಸುತ್ತದೆ.

ಬೊಮ್ಮಯ್ಯ ದಣ್ಣಾಯಕ

ಸೋಗಿಯ[೧೬೦] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನನ್ನು ಶಾಸನದಲ್ಲಿ 'ಶ್ರೀಮನುಮಹಾಪ್ರಧಾನಂ ರಾಯಭಲಾಬಳ ಗಜಾಂಕುಶ ವಿಜಯ ವಿನೋದಿ ಬೊಂಮಯ ದ(೦)ಣ್ಣಾಯಕ ಎಂದು ಕರೆದಿದೆ.

ಉತ್ತಂಗಿ[೧೬೧] ಶಾಸನದಲ್ಲಿ ಈತನ ಉಲ್ಲೇಖವಿದೆ. ಹೆಗ್ಗಡೆಯ ದೇವಯ್ಯದೇವಕರ ಹೆಗಡೆ ಇವರು ಕೋಗಳಿನಾಡಿನ "ಪಸಾಯಾ, ಅಧಿಕಾರ' ಪಡೆದಿದ್ದರು. ಕೋಗಳಿನಾಡ ಪಸಾಯ, ಊರಡಿ ಕಾಹೆಯಲ್ಲಿ ಶ್ರೀರಾಮನಾಥ ದೇವರ ಅಂಗರಂಗಭೋಗಕ್ಕೆ ದತ್ತಿ ಬಿಟ್ಟ ಉಲ್ಲೇಖವಿದೆ.

ಬೊಪ್ಪಯ್ಯ ದಣ್ಣಾಯಕ

ಸೋಗಿಯ[೧೬೨] ಶಾಸನದಲ್ಲಿ ಈತನ ಉಲ್ಲೇಖವಿದೆ. 'ಬಿಲುಕೊಡೆ'ಸುಂಕದ ಅಧಿಕಾರಿಯಾಗಿದ್ದು ಶಾಸನದಲ್ಲಿ 'ಬಿಲುಕೊಡೆಯಧಿಕಾರಿ ಬೊಪ್ಪಯ್ಯ ದಣ್ಣಾಯಕ' ಎಂದು ಇವನನ್ನು ಕರೆಯಲಾಗಿದೆ. ಸೋಗಿಯ ಶಾಸನದಲ್ಲಿ ಸೋಗಿಯ ಶ್ರೀಸ್ವಯಂಭು ಕಲಿನಾಥ ದೇವರಿಗೆ ಈತನ ಹೆಗ್ಗಡೆ ಹರಿಯಣ್ಣನ ಅಪ್ಪಣೆಯಿಂದ ಹೆಗ್ಗಡೆದೇವಯ್ಯ, ಕೊಮಯ್ಯ, ನೆಲ್ಲಕೊಳ ಮಾದಯ್ಯ ಇವರು ದವಸಾಯದಲ್ಲಿ ಎರಡು ಗದ್ಯಾಣ ಬಿಟ್ಟ ಉಲ್ಲೇಖ ಶಾಸನದಲ್ಲಿದೆ.

ಸುಸಂಗ ದಣ್ಣಾಯಕ

ಕುರುವತ್ತಿ[೧೬೩] ಶಾಸನೋಕ್ತನಾದ ಇವನು ಗುತ್ತರ ವಿಕ್ರಮಾದಿತ್ಯದೇವನಲ್ಲಿ ದಂಡನಾಯಕನಾಗಿದ್ದು ವಿಜಯಪಾಂಡ್ಯನ ಆಜ್ಞೆಯ ಮೇರೆಗೆ ಬೆಣ್ಣೆಯೂರ ಬಾಚರಸ, ಕುರುವತ್ತಿ ಊರೊಡೆಯ ಪ್ರಮುಖ ಆಶೇಷ ಜನರ ಸನ್ನಿಧಿಯಲ್ಲಿ ಈ ಹಿಂದೆ ಹಿರಿಯ ವಿಕ್ರಮಾದಿತ್ಯ ಕೊಟ್ಟ ಸ್ಥಳವೃತ್ತಿ ಸಹಿತ ೨೦ ಮತ್ತರು ಭೂಮಿಯನ್ನು ಶ್ರೀ ಮದಾಹವಮಲ್ಲೇಶ್ವರ ದೇವರಿಗೆ ಕೊಟ್ಟ ವಿಷಯ ಶಾಸನದಲ್ಲಿದೆ.

ಪೋಲಾಳ್ವ ದಂಡನಾಯಕ

ವೀರನರಸಿಂಹನಲ್ಲಿ ದಂಡನಾಯಕನಾಗಿದ್ದ ಇವನನ್ನು ಶಾಸನದಲ್ಲಿ 'ಶ್ರೀಮನ್ಮಹಾಪ್ರಧಾನಿ'ಎಂದು ಕರೆದಿದೆ. ಇವನು ಅಗ್ರಹಾರ ಮಾಂಗೊಳದ ಶ್ರೀ ನರಸಿಂಹದೇವರ ನಂದಾದೀವಿಗೆಗೆ ಅಲ್ಲಿಯ ಊರೊಡೆಯ ಪ್ರಮುಖ ಮಹಾಜನ ಇನ್ನೋರ್ವರು ಮನೆ, ಗಾಣವನ್ನು ಬಿಟ್ಟ ಮಾಹಿತಿ ಶಾಸನದಲ್ಲಿದೆ.

ಚಿಕ್ಕಕ್ಕನ ಸಿಂಗಯ್ಯ

ರಂಗಾಪುರ[೧೬೪] ಶಾಸನದಿಂದ ನರಸಿಂಹದೇವರಿಗೆ ಎರಡು ಮತ್ತರು ಗದ್ದೆಯನ್ನು ಖರೀದಿ ಮಾಡಿ ದತ್ತಿ ಬಿಟ್ಟದ್ದು ತಿಳಿದು ಬರುತ್ತದೆ. ರಂಗಾಪುರದ[೧೬೫] ಇನ್ನೊಂದು ಶಾಸನದಲ್ಲಿ ಇವನ ಉಲ್ಲೇಖವಿದೆ. ಅಲ್ಲಿ ಇವನನ್ನು ಶ್ರೀ ವೀರಬಲ್ಲಾಳದೇವನ ಮನೆವರ್ಗ್ಗಡೆ ಸರ್ವ್ವಾಧಿಷ್ಠಾಯಕ ಚಿಕ್ಕಕ್ಕಯ್ಯನ ಸಿಂಗಯ್ಯ ಎಂದು ಕರೆದಿದೆ.

ದಂಡನಾಯಕ ಮುದ್ದರಸರು

ತ್ರುಟಿತವಾದ ಹೂವಿನಹಡಗಲಿ[೧೬೬] ಶಾಸನೋಕ್ತನಾದ ದಂಡನಾಯಕ ಮುದ್ದರಸನು 'ಮಹಾಮಾತ್ಯ'ಪದವಿಯನ್ನು ಪಡೆದುಕೊಂಡಿದ್ದನು. ಈ ಹೂವಿನಹಡಗಲಿಯ ಶಾಸನದ ಕಾಲ ಕ್ರಿ.ಶ.೧೧೧೧ಆಗಿದೆ. ಕ್ರಿ.ಶ.೧೧೧೦ರ ನೀಲಗುಂದ, ಸೋಗಿಯ ಶಾಸನದಲ್ಲಿ ದಂಡನಾಯಕ ಮುದ್ದರಸನನ್ನು ನೊಳಂಬವಾಡಿ ೩೨೦೦೦ದ ಅಚ್ಚುಪನ್ನಾಯದ ಧಿಷ್ಠಾಯಕನಾಗಿದ್ದನೆಂದು ಹೇಳಲಾಗಿದೆ.

ಮಹಾಮಾತ್ಯ ಪೊತ್ಯಣ್ಣ ಭಟ್ಟರು

ಹೊಳಲಿನ[೧೬೭] ಶಾಸನದಲ್ಲಿ ಈತನ ಉಲ್ಲೇಖವಿದೆ. ಪಾಂಡ್ಯದೇವ ನೊಳಂಬವಾಡಿ ೩೨೦೦೦ ಆಳುತ್ತಿರುವಾಗ ಸೋಮೇಶ್ವರ ಭಟ್ಟರ ಮಗ ಪೋತ್ಯಣಭಟ್ಟನು ಮಹಾಮಾತ್ಯ ಪದವಿ ಹೊಂದಿದ್ದು ಶರಣಾಗತ ವಜ್ರಪಂಜರನೆನಿಸಿದ್ದನು. ಇವನು ನಾರಾಯಣದೇವರಿಗೆ ಅಡಕೆ ಹೇರಿಗೆ ಲಕ್ಕಕ್ಕೆ ಒಂದು ಹಾಗವನ್ನು ಬಿಡುತ್ತಾನೆ.

ಸರ್ವಾಧಿಕಾರಿ ತಿಪ್ಪರಸ

ಇವನ ಉಲ್ಲೇಖ ಉಜ್ಜಿನಿ[೧೬೮] ಶಾಸನದಲ್ಲಿ ಸರ್ವ್ವಾಧಿಕಾರಿ ತಿಪ್ಪರಸ' ಎಂದು ಬರುತ್ತದೆ. ಈತನ ಅಳಿಯ ಚವುಡರಸನ ನಿರೂಪದಿಂದ ಬಮ್ಮರಸನು ಮಲ್ಲಿನಾಥದೇವರ ನಂದಾದೀವಿಗೆಗೆ ದಾನ ಬಿಟ್ಟ ಉಲ್ಲೇಖವಿದೆ.

ಮಹಾಪ್ರಧಾನ ಸಾವಂತ ಪಂಡಿತರ ಕಂನಾಯಿ

ಈತನು ಬಹುಶಃ ದಂಡನಾಯಕ ಶ್ರೇಣಿಯ ಅಧಿಕಾರಿಯಾಗಿರಬೇಕು. ಮನ್ನೆರಮಸಲವಾಡ[೧೬೯] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನು ಮಹಾಮಂಡಳೇಶ್ವರ ಸಾಳಿವೆಯ ತ್ರೀಕಮದೇವರಾಣೆಯರ ಮಹಾಪ್ರಧಾನನಾಗಿದ್ದಾನೆ. ಈತನ ಪುತ್ರ ಕೇಶವ ಪಂಡಿತ. ಈತನು ಮೊಸಳೆವಾಡದಲ್ಲಿ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸುತ್ತಾನೆ.ಬೈರವದೇವರಸರೂ ಗೌಡರು, ಸಮಸ್ತ ಪ್ರಜೆ ಪರಿವಾರವೂ ಸಾಮಾನ್ಯ ಮುಖ್ಯವಾಗಿ ಭೂಮಿದಾನ ಬಿಟ್ಟ ಉಲ್ಲೇಖವಿದೆ. ಹೀಗೆ ದಂಡನಾಯಕರು ದೇವಾಲಯ ಬಸದಿಗಳಿಗೆ ದತ್ತಿ ದಾನ ಮಾಡಿ ತಮ್ಮ ಹಿರಿಮೆಯನ್ನು ತೋರಿದ್ದಾರೆ. ಈ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ಚಿರಸ್ಥಾನ ಪಡೆದುಕೊಂಡಿದ್ದಾರೆ.

ಸಾಹಣಿಗರು

ಆನೆ, ಕುದುರೆಗಳನ್ನು ಪಳಗಿಸಿ ಅವುಗಳಿಗೆ ಯುದ್ಧ, ಪ್ರಯಾಣ ಮೊದಲಾದ ಕಾರ್ಯಗಳಲ್ಲಿ ನೆರವಾಗಲು ತರಬೇತಿ ನೀಡಲಾಗುತ್ತಿತ್ತು. ಈ ತರಬೇತಿ ನೀಡುವವರನ್ನು 'ಸಾಹಣಿಗರು' ಎಂದು ಕರೆಯಲಾಗುತ್ತಿತ್ತು. ಇವರು ಅಶ್ವಶಾಸ್ತ್ರ, ಗಜಶಾಸ್ತ್ರಗಳಲ್ಲಿ ಪ್ರವೀಣರಾಗಿದ್ದರು.

ಕೇತೆಯ ಸಾಹಣಿ

ಇವನು ಸಿಂಧ ರಾಜಮಲ್ಲನಲ್ಲಿ ಸಾಹಣಿಯಾಗಿದ್ದನು.[೧೭೦] ಇವನು ಕಾಚಗಾಹಕಲ್ಲುಪುರದ ದೆಕ್ಕಮ ಸಾಹಣಿಗನ ಪುತ್ರ, ಶಿವ, ವಿಷ್ಣು, ವಿನಾಯಕ ದೇವಾಲಯಗಳನ್ನು ಮಾಡಿಸಿ ಖ್ಯಾತಿಯನ್ನು ಹೊಂದಿದ್ದನು. ಈತನು ಮಾಡಿಸಿದ ಸಿದ್ಧನಾಥ ದೇವರಿಗೆ, ನಾರಸಿಂಹದೇವರಿಗೆ, ವಿನಾಯಕ ದೇವರಿಗೆ ಆರು ಮತ್ತರನ್ನೂ ನಾರಾಯಣ ದೇವರಿಗೆ ಹಿರಿಯ ಕೋಲಲ್ಲಿ ಮತ್ತರೊಂದನ್ನು ಬಿಟ್ಟ ಉಲ್ಲೇಖ ಕಂಡುಬರುತ್ತದೆ.

ಭಂಡಾರಿಗರು

ಆಡಳಿತಗಾರರಾದ ರಾಜರು, ಅಧಿಕಾರಿಗಳು ಇವರಲ್ಲಿ ಹೇರಳವಾಗಿ ಸಂಪತ್ತಿನ ಸಂಗ್ರಹವಿರುತ್ತಿತ್ತು. ಖಜಾನೆಯ ಲೆಕ್ಕಪತ್ರ ಕಾರ್ಯ ಬಿಡುವಿಲ್ಲದೇ ನಡಯುತ್ತಿತ್ತು. ಇವರು ಸಂಗ್ರಹಿಸಿದ ಖಜಾನೆಯಲ್ಲಿ ನಾಣ್ಯಗಳು ಜೊತೆಗೆ ಬೆಳ್ಳಿ, ಬಂಗಾರ, ವಜ್ರ, ವೈಢೂರ್ಯ, ಮುತ್ತು ರತ್ನ, ಮಾಣಿಕ್ಯ

ಮೊದಲಾದ ಬೆಲೆಬಾಳುವ ವಸ್ತುಗಳು ಇರುತ್ತಿದ್ದವು. ಇವೆಲ್ಲವುಗಳ ಲೆಕ್ಕಪತ್ರ ಇಟ್ಟು ಸಂರಕ್ಷಣೆ ಮಾಡುವವರು ಭಂಡಾರಿಗರು. ಇಂಥ ಭಂಡಾರಿಗರ ಪ್ರಸ್ತಾಪ ಇಲ್ಲಿಯ ಶಾಸನಗಳಲ್ಲಿ ಬರುತ್ತದೆ. ಕೆಲವರು ಭಂಡಾರಿಯ ಕೆಲಸದ ಜೊತೆಗೆ ದಂಡನಾಯಕರೂ ಆಗಿದ್ದರು. ಶಾಸನಗಳಲ್ಲಿ ಭಂಡಾರಿಗಳ ಉಲ್ಲೇಖ ಬರುತ್ತದೆಯೇ ಹೊರತು ಅವರ ಕಾರ್ಯ ವೈಖರಿ ಬಗ್ಗೆ ವಿವರಗಳು ತಿಳಿಯುವುದು ಕಡಿಮೆ.

ಭಂಡಾರಿ ಸೋಮರಸ

ಮೂರನೆಯ ವೀರಬಲ್ಲಾಳನ ಪಟ್ಟಮಹಾದೇವಿಯಾಗಿದ್ದ ಪದುಮಲದೇವಿಯ ಮಹಾಪ್ರಧಾನ ಭಂಡಾರಿ ಸೋಮರಸನ ಉಲ್ಲೇಖ ಶಾಸನ[೧೬] ದಲ್ಲಿದೆ. ಇವನು ಹಿರಿಯ ಕುರುವತ್ತಿಯ ಶ್ರೀಆಹಮಲ್ಲ ದೇವರ ನೈವೇದ್ಯಕ್ಕೆ ತನ್ನ ಆಳ್ವಿಕೆಯ ಗುತ್ತೊಳಲನಾಡ ಚಿಕ್ಕ ಕುರುವತ್ತಿಯಲ್ಲಿ ರಾಜಗುರು ಲೋಕಾಭರಣದೇವರ ಕಾಲುತೊಳೆದು ಧಾರಾಪೂರ್ವಕವಾಗಿ ಭೂಮಿಯನ್ನು ಬಿಟ್ಟ ವಿಚಾರವು ಶಾಸನಗಳಲ್ಲಿ ಕಂಡುಬರುತ್ತದೆ.

ಭಂಡಾರಿ ಸಿಂಗಯ್ಯ

ಇಮ್ಮಡಿ ಬಲ್ಲಾಳನ ಭಂಡಾರಿಯಾಗಿದ್ದ ಸಿಂಗಯ್ಯನ ಉಲ್ಲೇಖ ಮಾಗಳ[೧೭] ಶಾಸನದಲ್ಲಿ ಬರುತ್ತದೆ. ಈತನನ್ನು 'ಹಿರಿಯ ಮಾಣಿಕ್ಯ ಭಂಡಾರಿ ಸಿಂಗಯ್ಯ'ನೆಂದು ಕರೆಯಲಾಗಿದೆ. ಈತನು ಶ್ರೀ ಸೋಮನಾಥ ದೇವರಿಗೆ, ಪ್ರಸನ್ನ ಕೇಶವದೇವರಿಗೆ, ಸೂರ್ಯ ದೇವರಿಗೆ ಅಂಗರಂಗ ಭೋಗ ನೈವೇದ್ಯಾದಿ ಶ್ರೀ ಕಾರ್ಯಕ್ಕೆ ಭೂಮಿ ಬಿಟ್ಟ ಉಲ್ಲೇಖ ಶಾಸನದಲ್ಲಿದೆ.

ನಿಯೋಗಿಗಳು

ನಿಯೋಗಿಗಳು ವಿದೇಶಾಂಗ ವಿಭಾಗಕ್ಕೆ ಸಂಬಂಧಿಸಿದ ಅಧಿಕಾರಿಗಳು ಇವರು ಚಕ್ರವರ್ತಿ, ಮಹಾಮಂಡಳೇಶ್ವರ, ಮಹಾಸಾಮಂತರಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ನಿಯೋಗಿಗಳ ಇನ್ನೊಂದು ಹೆಸರು 'ರಾಯಭಾರಿ'. ಶತ್ರು ಅರಸರೊಂದಿಗೆ ನೇರವಾಗಿ ಮಾತನಾಡುವವರು, ವ್ಯವಹರಿಸುವವರು ಇವರಾಗಿದ್ದಾರೆ. ತಮ್ಮ ಒಡೆಯನ ಅಭಿಪ್ರಾಯವನ್ನು ಇನ್ನೊಂದು ರಾಜ್ಯದ ಅಥವಾ ಪ್ರಾಂತ್ಯದ ಅರಸನಿಗೆ ತಿಳಿಸಿ ಇಬ್ಬರ ನಡುವೆ ಶಾಂತಿ ಒಪ್ಪಂದ ಮಾಡಲು, ಇವರು ಪ್ರಯತ್ನಿಸುತ್ತಿದ್ದರು. ಇಂಥ ನಿಯೋಗಿಯಾದ ಶ್ರೀಧರಾರ್ಯನ ಪ್ರಸ್ತಾಪ ಬಲ್ಲಕುಂದೆ ಶಾಸನದಲ್ಲಿ ಬರುತ್ತದೆ.

ನಿಯೋಗಿ ಶ್ರೀಧರಾರ್ಯ

ಈತನ ಉಲ್ಲೇಖ ಕ್ರಿ.ಶ.೯೮ರ ಬಲ್ಲಕುಂದೆ ಶಾಸನದಲ್ಲಿ ಬರುತ್ತದೆ. ಇವನು ಮಹಾಮಂಡಳೇಶ್ವರ ಪಲ್ಲವ ವಂಶದ ಘಟೆಯಂಕಕಾರ ಚಿತ್ರವಡಂಗ ನೊಳಂಬಾಧಿರಾಜನ ನಿಯೋಗಿಯಾಗಿದ್ದನು. ಇವನು ಕೌಶಿಕ ಗೋತ್ರದವನಾಗಿದ್ದು ಮಾಚಣಾರ್ಯನ ಪುತ್ರನಾಗಿದ್ದಾನೆ.

ಇವನು ಶಿಲಾಮಯದೇವರನ್ನು ಪ್ರತಿಷ್ಠಾಪಿಸಿ ಐದುನಿವರ್ತನ ಕರಿಯ ಭೂಮಿಯನ್ನು ಬಿಟ್ಟ ವಿಚಾರವು ಶಾಸನಗಳಲ್ಲಿ ಕಂಡುಬರುತ್ತದೆ.

ಪೆರ್ಗಡೆಗಳು

ಪೆರ್ಗಡೆಗಳು ಸುಂಕದ ಅಧಿಕಾರಿಗಳಾಗಿದ್ದಾರೆ. ವಿವಿಧ ಸುಂಕವನ್ನು ಸಂಗ್ರಹಿಸುವ ಇವರು ಗಾವುಂಡರಿಗಿಂತ ಹಿರಿಯರು 'ಪಿರಿಯಗಾವುಂಡ' ಎಂಬುದೇ ಪೆರ್ಗಾವುಂಡ > ಪೆರ್ಗಾವುಡ > ಪೆರ್ಗಡೆ > ಹೆಗ್ಗಡೆ ಎಂದಾಗಿದೆ. ಇವರು ಸುಂಕವನ್ನು ಸಂಗ್ರಹಿಸುವ ಅಧಿಕಾರವನ್ನು ಮಾತ್ರ ಇವರು ಹೊಂದಿದ್ದಾರೆ. ಸಂಗ್ರಹವಾದ ಸುಂಕವನ್ನು ತಮ್ಮ ಮೇಲಾಧಿಕಾರಿಗಳಾದ ದಂಡನಾಯಕರಿಗೆ ಒಪ್ಪಿಸುತ್ತಿದ್ದರು. ಸಂಗ್ರಹಿಸಿದ ಒಟ್ಟು ಸುಂಕದಲ್ಲಿ ಇಂತಿಷ್ಟು ಭಾಗ ಪೆರ್ಗಡೆಗಳಿಗೆ ಸಲ್ಲುತ್ತಿತ್ತು. ಅದೇ ಅವರಿಗೆ ಸಂಬಳವಾಗಿರುತ್ತಿತ್ತು. ಇವರೂ ದೇವಾಲಯಗಳಿಗೆ ದತ್ತಿ ಬಿಟ್ಟಿದ್ದಾರೆ. ಸಾಮಾನ್ಯವಾಗಿ ಬ್ರಾಹ್ಮಣರು ಅಥವಾ ಜೈನರು ಈ ಹುದ್ದೆಯನ್ನು ಪಡೆಯುತ್ತಿದ್ದರು. ಸ್ಥಳೀಯವಾಗಿ ಪ್ರಭಾವೀ ವ್ಯಕ್ತಿಗಳು ಇವರಾಗಿದ್ದರು.

ಪೆರ್ಗಡೆ ತೊಮ್ಮ

ಕೋಗಳಿ[೧೭೩] ಶಾಸನದಲ್ಲಿ ಈತನ ಉಲ್ಲೇಖವಿದೆ. ಹೆಗ್ಗಡೆ ತೊಮ್ಮನು ಯುದ್ಧದಲ್ಲಿ ಹೋರಾಡಿ ಸಾಯುತ್ತಾನೆ. ಆತನ ಮಡದಿ ಬಳಕ್ಕ ವೀರಗಲ್ಲನ್ನು ನೆಡಿಸುತ್ತಾಳೆ.

ದೇವಯ್ಯ ಪೆರ್ಗಡೆ

ಬಾಗಳಿ[೧೭೪] ಶಾಸನದಲ್ಲಿ ದೇವಯ್ಯ ಪೆರ್ಗಡೆಯ ಉಲ್ಲೇಖವಿದೆ. ಮಹಾಸಾಮಂತ ಚಾಳುಕ್ಯವಂಶದ ಕತ್ಯೆರನು ಕೋಗಳಿ ೫೦೦ ಆಳುತ್ತಿರುವಾಗ ಆತನಲ್ಲಿ ಪೆರ್ಗಡೆಯಾಗಿದ್ದನು. ಈತನು ಪೆರ್ಗಡೆ ತನಗೆಯ್ಯುತ್ತಿರುವಾಗ ಅಜವರ್ಮನು ತನ್ನ ಊರಾದ 'ಒಡ್ಡವಡಜ್ಯಾಲಕ್ಕೆ' ದತ್ತಿ ಪಡೆದುಕೊಂಡ ವಿಷಯವು ಈ ಶಾಸನದಲ್ಲಿದೆ.

ಪೆರ್ಗಡೆ ನಾರಸಿಂಘಯ್ಯ

ಮಹಾಮಂಡಳೇಶ್ವರ ಉದಯಾದಿತ್ಯನಲ್ಲಿ ಪೆರ್ಗಡೆಯಾಗಿದ್ದ ಈತನ ಉಲ್ಲೇಖ ಬಾಗಳಿ[೧೭೫] ಶಾಸನದಲ್ಲಿ ಬರುತ್ತದೆ. ಮಹಾಮಾತ್ಯ ಪದವಿಯನ್ನು ಹೊಂದಿದ್ದ ಈತನು ತನ್ನ ಒಡೆಯನಾದ ಮಹಾಮಂಡಳೇಶ್ವರ ಉದಯಾದಿತ್ಯದೇವನ ಆಜ್ಞೆಯ ಮೇರೆಗೆ ಸೋಮಸಿಂಘ ಭಳಾರರ ಜೊತೆಗೆ ಬಾಗಳಿಗೆ ಬಂದು ಬಿಕ್ಕಿಗ ೭೦ರ ಮನೆಯ ಬೀರಭಟ್ಟರನನ್ನು ಬಾಗಳಿಗೆ ಕರೆಯಿಸಿ ಬಾಗಳಿಯ ೫೨ ಮಹಾಜನರಧ್ಯಕ್ಷದಲ್ಲಿ ದಾನಬಿಟ್ಟುದ್ದು ತಿಳಿದುಬರುತ್ತದೆ. ಯುದ್ಧದಲ್ಲಿ ನೈಪುಣ್ಯತೆಯನ್ನು ಶ್ರೀಕೃಷ್ಣನ ಹಾಗೆ ದೌತ್ಯ ಕಾರ್ಯವನ್ನು, ಶೌರ್ಯದಲ್ಲಿ ಕುಂತಿಯ ಮಗನ ಹಾಗೆ ಇವನಿದ್ದನೆಂದು ಹೇಳಲಾಗಿದೆ.

ಮನೆವೆರ್ಗಡೆ ಕೇತಯನಾಯಕ

ಈತನ ಉಲ್ಲೇಖ ಬೊಮ್ಮನಹಳ್ಳಿ[೧೭೬] ಶಾಸನದಲ್ಲಿ ಬರುತ್ತದೆ. ಈತ ನೆಲ್ಕುದುರೆಯನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಬಹುಶಃ ನೆಲ್ಕುದುರೆ ಈತನ ಭತ್ತ ಗ್ರಾಮವಾಗಿರಬೇಕು. ಈತನು ಉತ್ತರಾಯಣ ಸಂಕ್ರಾತಿಯಂದು ನೆಲ್ಕುದುರೆಯ ಕಲಿದೇವರಿಗೆಂದು ದುಗ್ಗರಾಜ ಪಂಡಿತರ ಕಾಲು ತೊಳೆದು ಭೂದಾನ ಬಿಡುತ್ತಾನೆ. ಕಲಿದೇವರ ನಂದಾದೀವಿಗೆಗೆ ಒಂದು ಗ್ರಾಮವನ್ನು ಬಿಟ್ಟಿರುವನು.

ಪೆರ್ಗಡೆ ಕಾಳಿದಾಸಯ್ಯ

ಪೇರ್ಗಡೆ ಕಾಳಿದಾಸಯ್ಯನ ಉಲ್ಲೇಖ[೧೭೭] ಬಾಗಳಿಯ ಶಾಸನದಲ್ಲಿ ಬರುತ್ತದೆ. ಈತನು ಮಂಡಳಿಕ ಬಿಜ್ಜರಸನ ಪೆರ್ಗಡೆಯಗಿದ್ದಾನೆ. ಪ್ರಸ್ತುತ ಶಾಸನ ರಚಿಸಿದಾತ ಇವನೇ ಆಗಿದ್ದು 'ಮಣ್ಡಳಿಕ ಬಿಜ್ಜರಸನ ಪೆರ್ಗಡೆ ಕಾಳಿದಾಸಯ್ಯ ಬರೆದಂ' ಎಂದು ಹೇಳಿಕೊಂಡಿದ್ದಾನೆ. ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

ಪೆರ್ಗಡೆ ಬಾಚಿಮಯ್ಯ

ಮಹಾಮಂಡಳೇಶ್ವರ ಜಗದೇಕಮಲ್ಲ ನೊಳಂಬ ಪಲ್ಲವ ಶಾಸನ ಒಡೆದಿದ್ದು ಹೆಚ್ಚಿನ ವಿವರಗಳು ಲಭ್ಯವಿಲ್ಲ. ಪೆರ್ಮಾನಡಿಯ ಪಾದಪದ್ಮೋಪ ಜೀವಿಯಾದ ಈತನ ಉಲ್ಲೇಖ ಕಂಚಿಕೆರೆ[೧೭೮] ರ ಶಾಸನದಲ್ಲಿ ಬರುತ್ತದೆ.

ಕಡಿತವೆರ್ಗಡೆ ಚಂದಿಮಯ್ಯ

ತುಂಬಿಗೆ[೧೭೯] ಶಾಸನದಲ್ಲಿ ಈತನ ಉಲ್ಲೇಖ ಬರುತ್ತದೆ. ಈತನು ಮಹಾಮಂಡಳೇಶ್ವರ ಜಗದೇಕಮಲ್ಲ ನಿರ್ಮ್ಮಡಿನೊಳಂಬxxxಪೆರ್ಮ್ಮನಡಿದೇವxxx ಪಾದಪದ್ಮೋಪ ಜೀವಿಯಾಗಿದ್ದಾನೆ. ಜಗದೇಕಮಲ್ಲ ಇಮ್ಮಡಿ ನೊಳಂಬxxxಪೆರ್ಮ್ಮಾನಡಿ ದೇವನು 'ಗಂಗತಿ'ಯ ನೆಲೆವೀಡಿನಲ್ಲಿದ್ದಾಗ ಈ ಚಂದಿಮಯ್ಯ ನಾಯಕನು ಬಿನ್ನಪಮಾಡಿ ಬಿಕ್ಕಿಗ ೭೦ರಲ್ಲಿಯ ತುಂಬಿಗೆರೆಯ ಮೂಲಸ್ಥಾನ ದೇವರಿಗೆ ಪಿರಿಯಕೆರೆಯ ಕೆಳಗೆ ದೇವರ ನೈವೇದ್ಯಕ್ಕೆಂದು ಕಮ್ಮ೪೦೦ ಗದ್ದೆಯನ್ನು ಅಲ್ಲಿಯ ಮಠದ ನೈಷ್ಠಿಕ ತಪೋಧನರಿಗೆ ಕಮ್ಮ ೩೦೦ ಗದ್ದೆಯನ್ನು ದಾನವಾಗಿ ಬಿಡಿಸುತ್ತಾನೆ.

ಪೆರ್ಗಡೆ ಕಾಳಿದಾಸಯ್ಯ

ಪೆರ್ಗಡೆ ಕಾಳಿದಾಸಯ್ಯನು ಮಹಾಮಂಡಳೇಶ್ವರ ಗಂಡರಾದಿತ್ಯರಸನ ಪೆರ್ಗಡೆಯಾಗಿದ್ದಾನೆ. ಮಹಾಮಾತ್ಯ ಪದವಿ ಹೊಂದಿದ್ದ ಈತನ ಉಲ್ಲೇಖ ಮೈಲಾರ[೧೮೦] ದ ಶಾಸನದಲ್ಲಿ ಬರುತ್ತದೆ. ಈತನು ಮಂತ್ರಿಮಾಣಿಕ್ಯ ಮುಂತಾಗಿ ಪ್ರಶಸ್ತಿಯನ್ನು ಹೊಂದಿದ್ದನು. ಈತನು ಚೆಲ್ಲುಕಾರ್ಯರಿಗೆ ಹಿರಣ್ಯ ಸಹಿತವಾಗಿ ಸ್ವಯಂಭು ದೇವರಿಗಾಗಿ ಮೂಲಸ್ಥಾನದ ದೇವರಿಗೆ ಗದ್ದೆ, ಭೂಮಿಯನ್ನು ಬಿಟ್ಟಿರುವನು.

ಪೆರ್ಗಡೆ ಮಾಕಿಮಯ್ಯ

ಪುಣಬಘಟ್ಟ[೧೮೧] ಶಾಸನದಲ್ಲಿ ಈತನ ಉಲ್ಲೇಖವಿದೆ. ಕೋಟೆಯ ನಾಗಾತ್ಯರಸರು ಕದ ೧೦೦೦ ಆಳುತ್ತಿರುವಾಗ ಆತನ ಪೆರ್ಗಡೆಯಾದ ಈ ಮಾಕಿಮಯ್ಯನು ಸೋಮೇಶ್ವರ ಪಂಡಿತರ ಕಾಲು ತೊಳೆದು ಪುಳಿದೆಯ ಘಟ್ಟದ ಕದಂಬೇಶ್ವರ ದೇವರಿಗೆ 'ಮನ್ನೆಯದೆಱೆ'ಯನ್ನು ಸರ್ವನಮಸ್ಯ ಮಾಡಿ ಬಿಟ್ಟುದನ್ನು ಶಾಸನದಲ್ಲಿ ಹೇಳಲಾಗಿದೆ.

ಪೆರ್ಗಡೆ ಗೇತಯ್ಯ

ಇಂದ್ರನಂದಿ ಪಂಡಿತರ ಪಾದಪಂಕಜ ಬೃಂಗರಾದ ಪೆರ್ಗಡೆ ಗೇತಯ್ಯನ ಉಲ್ಲೇಖ ಕೋಗಳಿ[೧೮೨] ಶಾಸನದಲ್ಲಿ ಬರುತ್ತದೆ. ಈತನ ಬಗ್ಗೆ ಹೆಚ್ಚಿನ ವಿವರಗಳು ತಿಳಿಯುವುದಿಲ್ಲ.

ಮೂಕಯ್ಯ ಹೆಗ್ಗಡೆ

ಕೋಗಳಿಯ[೧೮೩] ಶಾಸನದಲ್ಲಿ ಈತನ ಉಲ್ಲೇಖ ಮಾತ್ರ ಬರುತ್ತಿದ್ದು ಬೇರಾವ ಮಾಹಿತಿ ತಿಳಿದು ಬರುವುದಿಲ್ಲ.

ಪೆರ್ಗಡೆ ದಾಸಯ್ಯ

ಹೊಳಲ[೧೮೪] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನು ವಡ್ಡರಾವುಳ ಸುಂಕದ ಹೆಗ್ಗಡೆಯಾಗಿದ್ದಾನೆ. ತೃಟಿತವಾದ ಈ ಶಾಸನದಲ್ಲಿ ಗವರೇಶ್ವರದೇವರಿಗೆ ದಾನ ಬಿಟ್ಟುದು ತಿಳಿದು ಬರುತ್ತದೆ.

ಕಣಕ ಪಿರಿಯಾಂಡ ಪೆರ್ಗಡೆ

ಬಾಗಳಿ[೧೮೫] ಶಾಸನದಲ್ಲಿ ಈತನ ಉಲ್ಲೇಖವಿದೆ. ಇವನ ಹೆಂಡತಿ ಬಾಚಲದೇವಿಯು ಸೂರ್ಯಗ್ರಹಣದಂದು ಆರಸಿಯ ಕೆರೆಯ ಗೌಡಿಕೆಯಿಂದ ನಡೆವ ತೇಜಸ್ವಾಮದಿಂದುಳ್ಳ ಧನ, ಭೂಮಿ ಎಲ್ಲವನ್ನು ಸ್ವಯಂಭು ಕಲಿದೇವರ ಅಂಗಭೋಗ ರಂಗಭೋಗಗಳಿಗೆ ಬ್ರಾಹ್ಮಣರ ಆಹಾರಕ್ಕೆ, ಪುರಾಣಕ್ಕೆ, ಶಿವಶಕ್ತಿ, ಪಂಡಿತರ ಕಾಲು ತೊಳೆದು ಭೂಮಿದಾನ ಬಿಟ್ಟ ವಿಚಾರವು ಬಾಗಳಿ ಶಾಸನದಿಂದ ತಿಳಿಯುತ್ತದೆ.

ಪೆರ್ಗಡೆ ಕಾವರಾಜ

ಮಹಾಮಂಡಳೇಶ್ವರ ಪಾಂಡ್ಯದೇವನಲ್ಲಿ ಪೆರ್ಗಡೆತನಗೆಯ್ಯುತ್ತಿದ್ದ ಈತನ ಉಲ್ಲೇಖ ಬಾಗಳಿ[೧೮೬] ಶಾಸನದಲ್ಲಿ ಬರುತ್ತದೆ. ಪಾಂಡ್ಯದೇವರ ಆಜ್ಞೆಯ ಮೇರೆಗೆ ಈತನಿಗೆ ದೀಪಾವಳಿ ಹಬ್ಬದಲ್ಲಿ ಮಹಾಜನರು ಉದಲುಕೊಡುವ ೨ ಗದ್ಯಾಣದೊಳಗೆ ಒಂದು ಗದ್ಯಾಣವನ್ನು ನೀಲೇಶ್ವರ ದೇವರ ಅಂಗಭೋಗಕ್ಕೆ ಬಿಟ್ಟ ಉಲ್ಲೇಖವಿದೆ.

ಹೆಗ್ಗಡೆ ಕೇಶಿರಾಜ

ಅಂಬಳಿಯ[೧೮೭] ಶಾಸನದಲ್ಲಿ ಹೆಗ್ಗಡೆ ಕೇಶಿರಾಜನ ಉಲ್ಲೇಖ ಬರುತ್ತದೆ. ನೊಳಂಬವಾಡಿ ೩೨೦೦೦ ವಡ್ಡರಾವುಳ ಹೆರ್ಜ್ಜುಂಕದಧಿಷ್ಠಾಯಕನಾದ ಮಹಾಪ್ರಧಾನ ಅಣುಕಪಲ್ಲವರಾಯ ದಂಡನಾಯಕರ ಆಜ್ಞೆಯ ಮೇರೆಗೆ ದೇವರ ಸುಂಕದ ಹೆಗ್ಗಡೆ ಕೇಶಿರಾಜ ಕಾಳಿಮರಸ ಇವರು ಅಮ್ಮಳೆಯೂರಿನ ಮಹಾಜನವಯ್ಯಾವ ದಿಂಬರ ಕಾಲ್ಗರ್ಚಿ' ತಮ್ಮ ಸುಂಕವಾದ ಪನ್ನಾಯದ ಎಲೆಯ ಹೇರಿನ ವಡ್ಡರಾವುಳ ಪೆರ್ಜುಂಕದಲ್ಲಿ ಬರುವ ೫ ಪಣದಲ್ಲಿ ಹೇರಿಗೆ ಹಾಗ ೧ ರ ಲೆಕ್ಕದಲ್ಲಿ ದಾನಬಿಡುತ್ತಾರೆ.

ಹೆಗ್ಗಡೆ ಉಜ್ಜಿಭಟ್ಟಯ್ಯ

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಇಂದಿರಾಣಿ ಭಟ್ಟಯ್ಯನ ಪೆರ್ಗಡೆ ಈತನಾಗಿದ್ದನು. ಮೇರು ಪರ್ವತದಂತೆ ಸ್ಥಿರಮನಸ್ಸನ್ನು ಹೊಂದಿರುವ, ಕರ್ಣನಂತೆ ಸತ್ಯಯುತ ನಾಗಿರುವ, ಕಾಮನಂತೆ ಅತ್ಯಂತ ಸುಂದರನೂ, ಅರ್ಜುನನಂತೆ ಪ್ರತಾಪವುಳ್ಳವನೂ, ಸರಭೂಜನಂತೆ ತ್ಯಾಗಿಯೂ, ಪರನಾರಿ ದೂರನೂ ಆಗಿರುವ ಇವನು ತನ್ನ ಒಡೆಯ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಇಂದಿರಾಣಯ್ಯಗಳ ಆಜ್ಞೆಯ ಮೇರೆಗೆ ರತ್ನಭೂಷಣ ವಿನಾಯಕ ದೇವರನ್ನು ಪ್ರತಿಷ್ಠಾಪಿಸಿ ದಾನ ನೀಡಿದ್ದಾನೆ.

ಪೆರ್ಗಡೆ ಜೋಗದೇವಯ್ಯ

ಈತನ ಉಲ್ಲೇಖ ರಾಗಿಮಸಲವಾಡ[೧೮೮] ಶಾಸನದಲ್ಲಿ ಬರುತ್ತದೆ. ದಂಡನಾಯಕ ಚೋಳಾಣ್ಣನ ಪೆರ್ಗಡೆಯಾದ ಈತನು 'ನಾಡಿಂಗ ಬೀಡಿಂಗ ನಾನಾದೇಸಿಗು ಜಿನ್ನಪಂಗೆಯ್ದುಯೀ ಠಾಣಾಂತರದ ಧರ್ಮಕ್ಕನುಕೂಲತೆಯಾದನೆಂದು ಶಾಸನ ತಿಳಿಸುತ್ತದೆ.

ಹೆಗ್ಗಡೆ ಚಾಕಣಯ್ಯ

ಸಿಂಧವಾಳ[೧೮೯] ಶಾಸನೋಕ್ತವಾದ ಇವನು ಮಹಾಮಾತ್ಯ ಪದವಿ ಹೊಂದಿ 'ಸಿಂಧಮೊಳಲಿ'ನಲ್ಲಿ ಅಧಿಕಾರಿಯಾಗಿದ್ದನು. ಈತನು ಸಿಂಧಮೊಳಲಿನಲ್ಲಿ ಕೇಸಿಯಣ್ಣ, ಕೇತಗಾವುಂಡ, ಮಾಚಗಾವುಂಡ, ಚೊಕ್ಕಿಸೆಟ್ಟಿ ಇವರು ಕೂಡಿ ಮಾಡಿಸಿದ ಶ್ರೀ ಸೋಮೇಶ್ವರ ದೇವರಿಗೆ ಹಾಗೂ ಭೈರವದೇವರಿಗೂ ಭೂಮಿಯನ್ನು ಚಂದ್ರಭೂಷಣನಿಗೆ ಒಂದು ನಿವೇಶನವನ್ನು ಕೊಟ್ಟ ಉಲ್ಲೇಖವಿದೆ.

ಹೆಗ್ಗಡೆಯ್ಯಚಣ ಮತ್ತು ಹೆಗ್ಗಡೆ ಹೊಲ್ಲಣ

ಮನ್ನೇರ ಮಸಲವಾಡ[೧೯೦] ಶಾಸನದಲ್ಲಿ ಇವರಿಬ್ಬರ ಉಲ್ಲೇಖ ಬರುತ್ತದೆ. ಇವರು ಹಾಗೂ ಹಡವಳ ರಾಜಣ್ಣ, ಗೌಡರ ಗಟ್ಟಿಗಾವುಂಡ, ಇಮ್ಮಡಿ ಗೇತಗಾವುಂಡ, ಸೇನಬೋವದುಗ್ಗಣ್ಣ ಇವರು

ಸಮಸ್ತ ಪ್ರಜೆಗಳ ಮುಂದೆ ಮೂಲಸ್ಥಾನ ಕಲಿದೇವರ ಅಂಗಭೋಗ ನೈವೇದ್ಯಕ್ಕೆ ದೇವರಿಂದ ಮೂಡಣ ಕೆರೆಯಲ್ಲಿ ಒಂದು ಮತ್ತರು ಭೂಮಿಯನ್ನು ಬಿಡುತ್ತಾನೆ.

ಉತ್ತರಾಕ್ಕ ಹೆಗ್ಗಡೆ ಮತ್ತು ಜನಯ್ಯ ಹೆಗ್ಗಡೆ

ಬೆಣ್ಣೆಹಳ್ಳಿ[೧೯೧] ಶಾಸನೋಕ್ತರಾದ ಈರ್ವರು ಹೆಗ್ಗಡೆಗಳು ಕೋಗಳಿನಾಡ ಪ್ರಭುಗೌಂಡುಗಳ ಮುಂದೆ ಚಂಡೇಶ್ವರದೇವರ ಸನ್ನಿಧಾನದಲ್ಲಿ ತಮ್ಮ ಧರ್ಮವಾಗಿ ಅಮಾವಾಸ್ಯೆ ವ್ಯತೀಪಾತದಂದು ವಿರೂಪಾಕ್ಷ ದೇವರ ಲಕ್ಷಗಡುಗೆಗೆ ನೈವೇದ್ಯಕ್ಕೆ ಬ್ರಾಹ್ಮಣಭೋಜನಕ್ಕೆಂದು 'ಮೂಲಿಗದೆಜು', 'ಪಂಚಕರುಕದೆಜು', 'ಮಗದೆಜು', 'ಗಾಣದೆಜು', ಸಮಸ್ತ 'ಕಿರುಕುಳ' ತೆಜು ಮಾರಾಟಗಳನ್ನು ಬಿಡುತ್ತಾರೆ.

ಹೆಗ್ಗಡೆ ಹರಿಯಣ್ಣ

ಮುತ್ತಿಗಿ[೧೯೨] ಶಾಸನದಲ್ಲಿ ಈತನ ಉಲ್ಲೇಖವಿದೆ. ಹೊಯ್ಸಳ ವೀರಬಲ್ಲಾಳನ 'ಲೆಂಕ'ನೆನಿಸಿದ್ದ ರಂಗಯ್ಯನ ಹೆಗ್ಗಡೆ ಈತನಾಗಿದ್ದಾನೆ. ಈತನು ಅಮ್ಮಳೆ ಊರೊಡೆಯನೂ ಆಗಿದ್ದನು. ಈತನು ಮುತ್ತಗೆಯ ಹೆಗ್ಗಡೆತನ ಮಾಡುವಾಗ ಪ್ರಭುಬೊಪ್ಪಯ್ಯ ಬಮ್ಮಯ್ಯನ ಕೈಯಲ್ಲಿ ಭೂಮಿಯನ್ನು ಧಾರಪೂರ್ವಕವಾಗಿ ಪಡೆದುಕೊಂಡು ಅದನ್ನು ಅರವಟಿಗೆಗೆ ಉದಕದಾನಕ್ಕೆಂದು ಬಿಡುತ್ತಾನೆ.

ನಾರಣವೆಗ್ಗಡೆ

ಬೆಣ್ಣೆಹಳ್ಳಿ[೧೯೩] ಶಾಸನದಲ್ಲಿ ಈತನ ಪ್ರಸ್ತಾಪವಿದೆ. ಅಲ್ಲಿ ಈತನನ್ನು 'ನಲ್ಲಂಮೆಯ ಉಗ್ರಾಣಿ ನಾರಣವೆಗ್ಗಡೆ' ಎಂದು ಕರೆದಿದೆ. ಈತನು ಹಿರಿಯಣ್ಣ, ಗಿರಿಪಯ್ಯ ಸೇರಿ ಬೆಣ್ಣೆವೂರಿನ ವಿರೂಪಾಕ್ಷ ದೇವರ ಗಡುಗೆ ನೈವೇದ್ಯಕ್ಕೆ ನಂದಾದೀವಿಗೆಗೆ ೧೨ ಮಹಾಜನಗಳ ಭೋಜನಕ್ಕೆ 'ನಲ್ಲೆಂಮೆ ನಲ್ಲಾವು' ಬಿಡುತ್ತಾರೆ. ಈ ಧರ್ಮವನ್ನು ಹೆಗ್ಗಡೆಗಳಾರೇ ಬರಲಿ ಅವರು ತಮ್ಮ ಧರ್ಮವಾಗಿ ಪ್ರತಿಪಾಳಿಸಬೇಕು ಎಂದು ಶಾಸನ ತಿಳಿಸುತ್ತದೆ.

ಹೆಗ್ಗಡೆ ಮಲ್ಲಯ್ಯ

ಬಾಗಳಿ[೧೯೪] ಶಾಸನದಲ್ಲಿ ಈತನ ಉಲ್ಲೇಖವಿದೆ. ಅಂಗಡಿಯ ಕಾಳಯ್ಯನ ಮಗಳು 'ಜಾತಿಸಂಕರ' ವಾಗುತ್ತಾಳೆ. ಆಗ ಕಾಳಯ್ಯನು ಮಹಾಪ್ರಧಾನ ಕುಮಾರಪಂಡಿತಯ್ಯನ ಹೆಗ್ಗಡೆ ಮಲ್ಲಯ್ಯ, ಗೋಪಾಲಯ್ಯಗಳ ಸಮ್ಮುಖದಲ್ಲಿ ಶ್ರೀ ಸ್ವಯಂಭುದೇವರ ಸನ್ನಿಧಿಯಲ್ಲಿ ಧಾರೆಯರೆದು ಭೂದಾನ ಕೊಡುತ್ತಾನೆ.

ಹೆಗ್ಗಡೆಯ ದೇವಯ್ಯ ಮತ್ತು ದೇವಕರ ಹೆಗ್ಗಡೆ

ಉತ್ತಂಗಿಯ[೧೯೫] ಹೊಯ್ಸಳ ವೀರನರಸಿಂಹನ ಕಾಲದ ಶಾಸನದಲ್ಲಿ ಇವರಿಬ್ಬರ ಉಲ್ಲೇಖವಿದೆ. ಇವರು 'ಪಸಾಯಾಧಿಕಾರ'ವನ್ನು ಪಡೆದಿದ್ದರು.

ಹೆಗ್ಗಡೆ ಹರಿಯಣ್ಣ

ಇವನು ವೀರನರಸಿಂಹನ ಕಾಲದಲ್ಲಿ ಬಪ್ಪಯ್ಯ ದಣ್ಣಾಯಕರ ಹೆಗ್ಗಡೆಯಾಗಿದ್ದ. ಇವನು ಶ್ರೀ ರಾಮನಾಥ ದೇವರ ಅಂಗರಂಗಭೋಗಕ್ಕೆ ಒಂದು ಗದ್ಯಾಣ ಬಿಡುತ್ತಾನೆ[೧೯೬].

ಹೆಗ್ಗಡೆ ಸೋವರಸ

ಈತನ ಉಲ್ಲೇಖ ದುಗ್ಗವತಿ[೧೯೭] ಶಾಸನದಲ್ಲಿದೆ. ಕಲಿಮಯ್ಯ ದಣ್ಣಾಯಕ, ಹೆಗ್ಗಡೆ ಸೋವರಸ ಇವರು ಬಿಕ್ಕಿಗ ೭೦ರಲ್ಲಿಯ ದುಗ್ಗವತಿಯ ದೇವರುಗಳಿಗೆ ನಂದಾದೀವಿಗೆಗೆ ಸ್ತಾನದ ತೋಟಗಳ ಹೆಜ್ಜುಂಕ, ವಡ್ಡರಾವುಳ ವೀರಬೀರವಣ ಇವುಗಳನ್ನು ವಾಮಶಕ್ತಿಗಳ ಕಾಲುತೊಳೆದು ಬಿಡುತ್ತಾರೆ.

ಪೆರ್ಗಡೆದಾಸಿಯಣ್ಣ

ಅಲಗಿಲವಾಡ[೧೯೮] ಶಾಸನದಲ್ಲಿ ಈತನ ಉಲ್ಲೇಖವಿದೆ. ಇದು ವಿಜಯಪೆರ್ಮಾಡಿ ದಂಡನಾಯಕನ ಚಮೂಪತಿ ಕೇತದಂಡನಾಥನ ಪಾದಪದ್ಮೋಪಜೀವಿಯಾಗಿದ್ದ. ಇವನ ಹೆಂಡತಿ ಅರಸಿಯಕ್ಕ ಇವರಿಗೆ ಬಮ್ಮದೇವ ಜನಿಸುತ್ತಾನೆ. ಶಾಸನದ ಕೊನೆಯ ಭಾಗ ಹೆಚ್ಚು ತ್ರುಟಿತವಾಗಿರುವುದರಿಂದ ದೇವರಿಗೆ ದಾನಬಿಟ್ಟ ಅಸ್ಪಷ್ಟ ಮಾಹಿತಿ ಇದೆ.

ಸೇನ ಬೋವರು

ಇವರು ಗ್ರಾಮದ ಲೆಕ್ಕಾಧಿಕಾರಿಗಳು. ಈ 'ಸೇನುಬೋವ' ಎಂಬುದೇ ಇಂದಿನ 'ಶಾನುಭೋಗ' ಎಂದಾಗಿದೆ. ಗ್ರಾಮದ ಆಡಳಿತದಲ್ಲಿ ಮತ್ತು ತೆರಿಗೆ ವಸೂಲಿಯಲ್ಲಿ ಇವರದು ಪ್ರಮುಖ ಪಾತ್ರವಿರುತ್ತಿತ್ತು. ಇಂಥ ಕೆಲವು ಸೇನುಬೋವರ ಪ್ರಸ್ತಾಪ ಇಲ್ಲಿಯ ಶಾಸನಗಳಲ್ಲಿ ಅಲ್ಲಲ್ಲಿ ಬಂದಿವೆ. ಅವರು ಇಂತಿದ್ದಾರೆ:

ಸೇನುಬೋವ ಪದ್ಮಣ

ಬಾಗಳಿ[೧೯೯] ಶಾಸನದಲ್ಲಿ ಈತನ ಉಲ್ಲೇಖವಿದ್ದು, ಈತನು ದೇವರಿಗೆ ಗದ್ದೆ ಕಮ್ಮ ೧೨೦ನ್ನು ಬಿಡುತ್ತಾನೆ. ಶಾಸನದಲ್ಲಿ ಈತನನ್ನು 'ಸಮಸ್ತ ವಸ್ತುಗುಣ ಗುಣಾಳಂಕಾರ ಚಾರುಚರಿತ್ರ ನಯವಿನಯ ಶೀಲಾಚಾರ ಸಂಪನ್ನರಪ್ಪ ಶ್ರೀಮತು ಸೇನಬೋವxxಣ್ಣಂಗಳ ಪುತ್ರ ಸೇನುಬೋವ ಪದ್ಮಣನು' ಎಂದು ಕರೆಯಲಾಗಿದೆ.

ಸೇನುಬೋವ ಸಂಕಣ್ಣ

ಕುರುವತ್ತಿಯ ಈಶ್ವರ ಭಟ್ಟನ ಪುತ್ರನಾದ ಇವನು ದೇವರಿಗೆ ಹೂವಿನ ತೋಟದ ಎರೆಕಮ್ಮ ೬೦ನ್ನು ಬಿಡುತ್ತಾನೆ.[೨೦೦] ಬಾಗಳಿಯ[೨೦೧] ಇನ್ನೊಂದು ಶಾಸನದಲ್ಲಿ ಈತನನ್ನು 'ಬಾಗಳಿಯ ಶ್ರೀಮದ್ವಯದಿಂಬರ ಪ್ರಿಯಪುತ್ರ'ನೆಂದು ಕರೆಯಲಾಗಿದೆ.

ಸೇನಬೋವ ಹೊನ್ನಬಾಚಯ್ಯ

ಬಾಗಳಿಯ[೨೦೨] ಶಾಸನೋಕ್ತನಾದ ಈತನು ಶ್ರೀ ಹೊನ್ನಾದೇವಿಯ ನೈವೇದ್ಯಕ್ಕೆ ನಂದಾದೀವಿಗೆಗೆ ಹನ್ನಾಸಿ ಮತ್ತರು ಕಮ್ಮ ೧೦೦ನ್ನು ಬಿಡುತ್ತಾನೆ.

ಸೇನಬೋವ ಸೋಮನಾಥಯ್ಯ:

ಹನಸಿ[೨೦೩] ಶಾಸನದಲ್ಲಿ ಇವನ ಉಲ್ಲೇಖವಿದೆ. ಹನಸಿಯ ಪ್ರಸ್ತುತ ಶಾಸನವನ್ನು ಇವನು ಬರೆದನೆಂದು ಅಲ್ಲಿ ಹೇಳಲಾಗಿದೆ.

ಸೇನಬೋವ ಅಣ್ಣಮಯ್ಯ

ಬಾಗಳಿ[೨೦೪] ಶಾಸನದಲ್ಲಿ ಸೇನಬೋವ ಅಣ್ಣಮಯ್ಯನ ಪ್ರಸ್ತಾಪವಿದ್ದು, ಇವನು ಗಂಗರಸರ ಸೇನಬೋವನಾಗಿದ್ದ. ಒಡೆಯನ ಹಿತ ಬಯಸುವವ, ಪರನಾರಿಯರಿಗೆ ಸಹೋದರ, ನಂಟರ ತೋಳು (ಸೇವಕ), ಬಂಟರ ದಾಸಿ ಎಂದು ಇವನ ವ್ಯಕ್ತಿತ್ವವನ್ನು ಶಾಸನ ವರ್ಣಿಸುತ್ತದೆ.

ತಳಾರರು

ತಳಾರ ಚಂದಿಯಣ್ಣ

'ತಳವಾರ', 'ತಳಾರ' ಎಂಬ ಪದಗಳು ಒಂದೇ ಅರ್ಥವನ್ನು ನಿರ್ದೇಶಿಸುತ್ತಿದ್ದು, ಗ್ರಾಮರಕ್ಷಣಾಧಿಕಾರಿಯ ಹುದ್ದೆಯನ್ನು ಇದು ಸೂಚಿಸುತ್ತದೆ. ಗ್ರಾಮದ ರಕ್ಷಣೆಯ ಹೊಣೆ ಈತನದು. ಕಳ್ಳತನ, ಹಾದರ ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ಈತನು ಹೋರಾಡಬೇಕಾಗುತ್ತಿತ್ತು. ಇವರು ಸದಾ ಗ್ರಾಮರಕ್ಷಣೆಯಲ್ಲಿ ನಿರತರಾಗಿರುತ್ತಿದ್ದರು. ಅಪರೂಪಕ್ಕೆ ಶಾಸನಗಳಲ್ಲಿ ಇವರ ಉಲ್ಲೇಖ ಬರುತ್ತದೆ.

ತಳಾರ ಚಂದಿಯಣ್ಣನ ಉಲ್ಲೇಖ ಕುರುವತ್ತಿ[೨೦೫] ಶಾಸನದಲ್ಲಿ ಬರುತ್ತದೆ. ಕುರುವತ್ತಿಯ ಸೋಮೇಶ್ವರ ದೇವರಿಗೆ ತಳಾರ ಚಂದಿಯಣ್ಣನು ಗದ್ದೆದಾನ ಬಿಡುತ್ತಾನೆ. ಶಾಸನದಲ್ಲಿ 'ತಳಾಱ ಚಂದಿಯಣ್ಣನಿಂ ಹಿರಿಯನುದಯಣ್ಣಂ ಗದ್ದೆ ಕಮ್ಮ' ಎಂಬ ವಾಕ್ಯ ಬರುತ್ತಿದ್ದು, ಇದು ಚಂದಿಯಣ್ಣನು ತನ್ನ ಅಣ್ಣ ಉದಯಣ್ಣನೊಂದಿಗೆ ಗದ್ದೆದಾನ ಬಿಟ್ಟಿದ್ದನ್ನು ಸೂಚಿಸುತ್ತದೆ.

ಅಡಿಟಿಪ್ಪಣಿಗಳು

೧) SII IX(i) ೨೫೩, ೧೦೭೧ ಡಿಸೆಂಬರ್ ೨೨ ಒರುವಾಯಿ, ಬಳ್ಳಾರಿ (ತಾ).

೨) SII IV ೨೬೦, ಕ್ರಿ.ಶ. ೧೧೯೯ ಹಂಪಿ, ಹೊಸಪೇಟೆ (ತಾ).

೩) MAR ೧೯೩೫, ನಂ.೩೯, ೧೨೮೨ ಮಾರ್ಚ್ ೨೫, ಹಿರೆಕೋಗಿಲೂರು, ಸಂತೆ ಬೆನ್ನೂರು (ಹೋ), ಶಿವಮೊಗ್ಗ (ಜಿ).

೪) SII IX (i) ೧೫೯, ೧೦೯೧-೯೨ ಸಿರುಗುಪ್ಪ.

೫) Ibid ೯೨, ೧೦೩೬ ಡಿಸೆಂಬರ್ ೨೪, ಒರುವಾಯಿ, ಬಳ್ಳಾರಿ (ತಾ).

೬) ಕ.ವಿ.ಶಾ.ಸಂ. I ಸಿರುಗುಪ್ಪ ೫೯, ೧೦೧೭ ಮಾರ್ಚ್ ೨೬ ಮಲ್ಲಯ್ಯನ ಗುಡ್ಡ ಸಿರುಗುಪ್ಪ (ತಾ)

೭) EC XI C ೩೪

೮) ಕ.ವಿ.ಶಾ.ಸಂ. ೧ ಹಗರಿ ೨೪.

೯) ಕ.ವಿ.ಶಾ.ಸಂ. ೧ ಹಗರಿ ೨೭.

೧೦) ಕ.ವಿ.ಶಾ.ಸಂ. ೧ ಹಗರಿ ೨೪.

೧೧) ಕ.ವಿ.ಶಾ.ಸಂ. ೧ ಹರಪ ೪.

೧೨) ಕ.ವಿ.ಶಾ.ಸಂ. ೧ ಹರಪ ೯೭.

೧೩) SII IX Pt I ನಂ. ೫೫೧.

೧೪) ಕ.ವಿ.ಶಾ.ಸಂ. ೧ ಸಿರುಗು.೫೯.

೧೫) ಕ.ವಿ.ಶಾ.ಸಂ. ೧ ಹರಪ ೨೧೦, ೨೧೧.

೧೬) ಎಚ್.ಜಯಮ್ಮ ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ೨೦೦೨ ಪು.೧೩೫.

೧೭) ಕ.ವಿ.ಶಾ.ಸಂ. ೧ ಹಡಗ ೫೬.

೧೮) SII IX (i) ೨೪೯, ೧೧೪೭ ಡಿಸೆಂಬರ್ ೨೫, ಕೋಳೂರು.

೧೯) EC XI CI ೩೩.

೨೦) EC XI CI ೩೪.

೨೧) SI XI Pt ೨ ನಂ. ೧೦೯.

೨೨) ಕ.ವಿ.ಶಾ.ಸಂ. I ಹರಪ ೨೧೦, ೨೧೧.

೨೩) ಕ.ವಿ.ಶಾ.ಸಂ. ೧ ನಂ. ೯೨, ೨೧೦, ೨೧೧.

೨೪) SII XI Pt I ೧೭೫.

೨೫) ಅದೇ

೨೬) SII IX (i) ೧೦೨, ೧೦೪೬ ಫೆಬ್ರವರಿ ೧, ಮೈಲಾರ, ಹಡಗಲಿ (ತಾ).

೨೭) Ibid ೧೦೫, ಮಾರ್ಚ್ ೨೯ ಕಂಚಗಾರ ಬೆಳಗಲ್ಲು(ತಾ)

೨೮) Ibid ೧೭೨, ೧೧೦೬ ಜುಲೈ ೧೭, ಕರೆಕಂಠಪುರ, ಆದೋನಿ (ತಾ)

೨೯) Ibid ೧೯೦, ಪೆದ್ದಹೊಟ್ಟೂರು, ಗುತ್ತಿ (ತಾ)

೩೦) Ibid ೨೬೫, ೧೧೫೫, ನವೆಂಬರ್ ೩೦, ಚಿನ್ನತುಂಬಳಂ ಆದೋನಿ(ತಾ)

೩೧) Ibid ೨೨೮, ೧೧೩೨ ಡಿಸೆಂಬರ್ ೨೩ ಪೆದ್ದತುಂಬಳಂ ಆದೋನಿ (ತಾ)

೩೨) SII IX (i) ೨೫೩, ೧೧೪೯, ಒರುವಾಯಿ, ಬಳ್ಳಾರಿ (ತಾ).

೩೩) SII IX (i) ೩೭೭, ೧೨೭೮ ಮೇ ೨೪, ಬಸರಕೋಡು, ಆದೋನಿ (ತಾ)

೩೪) SII IX (i) ೩೮೪, ೧೨೮೭ ಜುಲೈ ೨೪ ನೆರನಿಕ, ಆಲೂರು (ತಾ)

೩೫) ARIE ೧೦೨/೭೮-೭೯ ಕ್ರಿ.ಶ. ೧೦೬೭ ಕಲ್ಲುಕುಟಿಗನಹಾಳು.

೩೬) ಕ.ವಿ.ಶಾ.ಸಂ. I ಸಿರುಗುಪ್ಪ ೧೮, ೧೦೪೪ ನವೆಂಬರ್ ೩, ಹಚ್ಚೊಳ್ಳಿ ಸಿರುಗುಪ್ಪ (ತಾ).

೩೭) SII IX (i) ೫೭, ೯೨೨ ಸೆಪ್ಟೆಂಬರ್ ೯ ಕಡಬಗೆರೆ, ಹರಪನಹಳ್ಳಿ (ತಾ).

೩೮) Ibid ೬೧, ೯೩೧-೩೨ ಶಿರಸ್ತಹಳ್ಳಿ, ಹರಪನಹಳ್ಳಿ (ತಾ).

೩೯) Ibid ೬೧, ೯೩೧-೩೨ ಶಿರಸ್ತಹಳ್ಳಿ, ಹರಪನಹಳ್ಳಿ (ತಾ).

೪೦) ಕವಿಶಾ ಸಂ-I ಹರಪ, ೯೭ ೧೦೧೮ ಡಿಸೆಂಬರ್ ೨೩, ಬಾಗಳಿ, ಹರಪನಹಳ್ಳಿ (ತಾ).

೪೧) Ibid ೧೮೬, ೧೧೧೧ ಡಿಸೆಂಬರ್, ೧೨ ಗುಡಿಹಳ್ಳಿ, ಹರಪನಹಳ್ಳಿ (ತಾ).

೪೨) SII IX (i) ೬೪, ೯೪೪-೪೫, ಬಾಗಳಿ, ಹರಪನಹಳ್ಳಿ (ತಾ).

೪೩) Ibid ೬೬, ೯೫೬ ಡಿಸೆಂಬರ್ ೨೩, ಬಾಗಳಿ, ಹರಪನಹಳ್ಳಿ (ತಾ).

೪೪) Ibid ೯೦, ೧೦೩೬, ಮನ್ನೇರಮಸಲವಾಡ, ಹರಪನಹಳ್ಳಿ (ತಾ).

೪೫) SII IX (i) ೧೬೩, ೧೦೯೩ ಸೆಪ್ಟೆಂಬರ್ ೨೩, ಹೊಳಗುಂದಿ, ಹಡಗಲಿ (ತಾ).

೪೬) SII IX (i) ೧೦೭, ೧೦೫೦ ಜನೇವರಿ ೧೧, ಶಿರಸ್ತಹಳ್ಳಿ, ಹರಪನಹಳ್ಳಿ (ತಾ).

೪೭) Ibid ೧೮೪, ೧೧೧೧ ಜುಲೈ ೧೨, ಹನಸಿ, ಕೂಡ್ಲಿಗಿ (ತಾ).

೪೮) Ibid ೨೬೪, ೧೧೩೪ ಜನೇವರಿ ೧೫, ಹಳ್ಯಂ, ಕೂಡ್ಲಿಗಿ (ತಾ).

೪೯) SII IX (i) ೩೫೦, ೧೨೮೨ ಬೆಣ್ಣೆಹಳ್ಳಿ, ಹರಪನಹಳ್ಳಿ (ತಾ).

೫೦) ಎಚ್.ಜಯಮ್ಮ ೨೦೦೨ ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೧೪೩

೫೧) EC XI HR ೧

೫೨) EC XI CI ನಂ.೬

೫೩) EC IX Ht ೧೧೧

೫೪) ಕ.ವಿ.ಶಾ.ಸಂ. ೧ ಹಗರಿ. ೨೪, ೨೭

೫೫) ಅದೇ ೩೧.

೫೬) ಎಚ್.ಜಯಮ್ಮ ೨೦೦೨, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೮೪.

೫೭) EC VIII ನಂ.೩೬೯.

೫೮) MAR ೧೯೨೯, ನಂ.೫೪.

೫೯) EC XI CI ೩೧.

೬೦) ಕ.ವಿ.ಶಾ.ಸಂ.೧ ಸಿರುಗು. ೨೯.

೬೧) SII IX Pt. ೧, ೯೬.

೬೨) ಕ.ವಿ.ಶಾ.ಸಂ. ೧, ಹಂಪಿ ೧.೫೮

೬೩) ಅದೇ ಹಗರಿ ೨೮.

೬೪) EC XI D.g. ೧೨೬

೬೫) ಕ.ವಿ.ಶಾ.ಸಂ. ೧, ಹರಪ ೨೮.

೬೬) ಅದೇ ಹಡಗಲಿ ೫೮.

೬೭) SII XI Pt. ೧, ೧೧೬.

೬೮) EC XII Mi ೭೧.

೬೯) SII XI Pt. ೧ ನಂ. ೧೦೭.

೭೦) EC XI Cd ೮೨.

೭೧) ಕ.ವಿ.ಶಾ.ಸಂ. ೧, ೨೭೦.

೭೨) EC XI Dg ನಂ.೭೧.

೭೩) ಕ.ವಿ.ಶಾ.ಸಂ. ೧ ನಂ.೬೦

೭೪) EC XI Dg ನಂ.೧೯.

೭೫) SII IX Pt. ೧, ನಂ.೧೧೪.

೭೬) ಕ.ವಿ.ಶಾ.ಸಂ. ೧, ಹಡಗ ೫೬.

೭೭) EC VII (R) ನಂ.೫೭

೭೮) EC IX Bg ೪೦.

೭೯) EC X KI ೪.

೮೦) ಎಚ್.ಜಯಮ್ಮ ೨೦೦೨, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೯೭

೮೧) ಎಚ್.ಜಯಮ್ಮ ೨೦೦೨, ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೯೯.

೮೨) SII IX (i) SS, ೮೯೩-೯೪ ಮಂಚಾಳ, ಆದೋನಿ (ತಾ).

೮೩) Ibid ೬೦, ೯೩೧ ಫೆಬ್ರವರಿ ೨೫ ದೊಡ್ಡಿಮಾಕಾಳ, ಆದೋನಿ (ತಾ)

೮೪) Ibid ೬೨, ಹಾಲಹರವಿ, ಆಲೂರು (ತಾ)

೮೫) SII IX (i) ೨೫೩, ೧೧೪೯ ಡಿಸೆಂಬರ್ ೨೨, ಒರುವಾಯಿ, ಬಳ್ಳಾರಿ (ತಾ).

೮೬) ARIE ೧೦೫ / ೧೯೮೫-೮೬, ೧೦೬೩, ಸಾಲಗುಂದೆ, ಸಿಂಧನೂರು (ತಾ) ರಾಯಚೂರು (ಜಿ).

೮೭) SII IV ೨೬೦, ೧೧೯೯, ಹಂಪೆ, ಹೊಸಪೇಟೆ (ತಾ), ಬಳ್ಳಾರಿ (ಜಿ).

೮೮) SII IX (i) ೨೧೫, ೧೧೨೬ ಡಿಸೆಂಬರ್ ೧೬, ದುಗ್ಗವತ್ತಿ, ಹರಪನಹಳ್ಳಿ (ತಾ).

೮೯) Ibid ೨೧೬ (?() ಕುಂಚೂರು, ಹರಪನಹಳ್ಳಿ (ತಾ).

೯೦) Ibid ೩೩೫, ೧೨೧೮ ಜೂನ್ ೪ ತಾಳೂರು, ಸಂಡೂರು (ತಾ)

೯೧) ಕ.ವಿ.ಶಾ.ಸಂ. I ಹಗರಿಬೊಮ್ಮನಹಳ್ಳಿ ೨೨, ೧೧೪೬ ಜುಲೈ ೧೬, ಉಲುವತ್ತಿ ಹಗರಿಬೊಮ್ಮನಹಳ್ಳಿ (ತಾ).

೯೨) Ibid ಹಡಗಲಿ ೭೪, ೧೨೧೪ ಜೂನ್, ೨೫, ರಂಗಾಪುರ, ಹಡಗಲಿ (ತಾ).

೯೩) Ibid ಹಡಗಲಿ ೯೪, ೧೧೬೯, ಫೆಬ್ರವರಿ ೪, ಹೊಳಗುಂದಿ. ಹಡಗಲಿ (ತಾ).

೯೪) SII IX (i) ೬೭, ೯೮೪ ಜೂನ್ ೧೬ ಕೊಳಗಲ್ಲು ಬಳ್ಳಾರಿ (ತಾ).

೯೫) Ibid ೮೬, ೧೦೯೩ ಮಾರ್ಚ್ ೭, ತಲವಾಗಲು, ಹರಪನಹಳ್ಳಿ (ತಾ).

೯೬) SII IX (i) ೯೦, ೧೦೩೬, ಮನ್ನೇರ ಮಸಲವಾಡ, ಹರಪನಹಳ್ಳಿ (ತಾ).

೯೭) Ibid ೧೬೩, ೧೦೯೩ ಸೆಪ್ಟೆಂಬರ್ ೨೩, ಹೊಳಗುಂದಿ, ಹಡಗಲಿ (ತಾ).

೯೮) SII IX (i) ೨೪೭, ಶ್ರೀನಿವಾಸಪುರಂ, ಹರಪನಹಳ್ಳಿ (ತಾ).

೯೯) Ibid ೨೪೯, ೧೧೪೭ ಡಿಸೆಂಬರ್ ೨೫, ಕೋಳೂರು, ಬಳ್ಳಾರಿ (ತಾ).

೧೦೦) SII IX (i) ೨೫೩, ೧೧೪೯ ಡಿಸೆಂಬರ್ ೨೨ ಒರುವಾಯಿ, ಬಳ್ಳಾರಿ (ತಾ).

೧೦೧) Ibid ೨೫೭, ೧೧೫೦ ಮಾರ್ಚ್ ೩೦ ಉತ್ತಂಗಿ ಹಡಗಲಿ (ತಾ).

೧೦೨) ARIEf ೧೦೨/೭೮-೭೯ ಕ್ರಿ.ಶ. ೧೦೬೭ ಕಲ್ಲುಕುಟಿಗನಹಾಳು, ಸಿರುಗುಪ್ಪ (ತಾ).

೧೦೩) Ibid ೧೦೯ / ೭೮-೭೯, ಕ್ರಿ.ಶ. ೧೦ ನೇ ಶತಮಾನ, ಕುರುವಳ್ಳಿ, ಸಿರುಗುಪ್ಪ (ತಾ). ಪು.೩೨೭

೧೦೪) ಕ.ವಿ.ಶಾ.ಸಂ. I ಹರಪನಹಳ್ಳಿ ೯೨, ೧೧೭೧ ಎಪ್ರಿಲ್ ೨೧, ಮಾಡಲಗೇರಿ ಹರಪನಹಳ್ಳಿ (ತಾ).

೧೦೫) ARIE ೧೧೭ / ೭೭-೭೮, ಕ್ರಿ.ಶ. ೧೦೨೦ ಆಕ್ಟೋಬರ್ ೨೦, ತೆಕ್ಕಲಕೋಟೆ, ಶಿರುಗುಪ್ಪ (ತಾ)

೧೦೬) SII IX (i) ೮೨, ೧೦೨೧-೨೨ ಹಿರೇಮೇಗಳಗೇರಿ, ಹರಪನಹಳ್ಳಿ (ತಾ).

೧೦೭) SII IX (i) / ೯೨, ೧೧೧೫ ಫೆಬ್ರವರಿ ೧೦, ಬಾಗಳಿ, ಹರಪನಹಳ್ಳಿ (ತಾ).

೧೦೮) Ebid ೧೯೮, ೧೧೧೯ ಮೇ ೧೧, ಬಾಗಳಿ, ಹರಪನಹಳ್ಳಿ (ತಾ).

೧೦೯) SII IX (i) ೨೦೧, ೧೧೨೨ ಮಾರ್ಚ್ ೧೦ ಬಾಗಳಿ, ಹರಪನಹಳ್ಳಿ (ತಾ).

೧೧೦) EI ೧೨ ನಂ. ೧೯, ೧೦೮೭ ಡಿಸೆಂಬರ್ ೨೫, ನೀಲಗುಂದ, ಹರಪನಹಳ್ಳಿ (ತಾ).

೧೧೧) Ibid 32 G, ೧೦೭೭ ಆಗಸ್ಟ್ ೬, ಯೆವೂರು, ಸುರಪುರ, (ತಾ) ಗುಲಬರ್ಗ (ಜಿ).

೧೧೨) SII IX (i) ೧೦೪, ೧೦೪೬ ಅಕ್ಟೋಬರ್ ೧೭ ಮೋರಿಗೇರಿ ಹಡಗಲಿ (ತಾ).

೧೧೩) Ibid ೧೨೫, ೧೦೬೧ ಜೂನ್ ೨೦ ಹಿರೇಮೇಗಳಗೇರಿ, ಹರಪನಹಳ್ಳಿ (ತಾ).

೧೧೪) SII IX (i) ೧೫೩, ೧೦೮೩ ಜನವರಿ ೨೦, ಅಂಬಳಿ, ಕೂಡ್ಲಿಗಿ (ತಾ).

೧೧೫) Ibid ೧೮೮, ೧೧೧೨ ಡಿಸೆಂಬರ್ ೩೦ ಗುಡಿಹಳ್ಳಿ, ಹರಪನಹಳ್ಳಿ (ತಾ).

೧೧೬) Ibid ೨೧೫, ೧೧೨೬ ಡಿಸೆಂಬರ್ ೧೬, ದುಗ್ಗವತ್ತಿ, ಹರಪನಹಳ್ಳಿ (ತಾ).

೧೧೭) SII IX (i) ೧೯೨, ೧೧೧೫ ಫೆಬ್ರವರಿ ೧೦ ಬಾಗಳಿ, ಹರಪನಹಳ್ಳಿ (ತಾ).

೧೧೮) Ibid ೧೬೪, ೧೦೯೮ ನವೆಂಬರ್ ೧೮ ಕುಡುತಿನಿ, ಬಳ್ಳಾರಿ (ತಾ).

೧೧೯) Ibid ೨೨೩, ೧೧೨೭ ಜುಲೈ ೧೦ ರಾಗಿ ಮಸಲವಾಡ, ಹರಪನಹಳ್ಳಿ (ತಾ).

೧೨೦) Ibid.

೧೨೧) SII IX (i) ೩೨೬, ೧೨೦೬ ಮಾರ್ಚ್ ೧೧, ಕುಮಾರಸ್ವಾಮಿ ದೇವಾಲಯ, ಸಂಡೂರು.

೧೨೨) Ibid ೩೧೭, ೧೨೨೩ ಕೋಗಳಿ, ಹಡಗಲಿ (ತಾ).

೧೨೩) SII IX (i) ೩೪೩, ೧೨೨೬ ಮಾರ್ಚ್ ೧೧, ಬೆಣ್ಣೆಕಲ್ಲು, ಕೂಡ್ಲಿಗಿ (ತಾ).

೧೨೪) Ibid ೩೮೦, ೧೨೮೨ ಎಪ್ರಿಲ್ ೨೩, ಹುಲುವಾಗಲು, ಹರಪನಹಳ್ಳಿ (ತಾ).

೧೨೫) SII IX (i) ೯೯, ೧೦೪೪ ಡಿಸೆಂಬರ್ ೨೪, ಸತ್ತೂರು, ಹರಪನಹಳ್ಳಿ (ತಾ).

೧೨೬) Ibid ೧೦೧, ೧೦೪೫ ಅಕ್ಟೋಬರ್ ೨೮ ಮೋರಿಗೇರಿ, ಹಗರಿಬೊಮ್ಮನಹಳ್ಳಿ (ತಾ).

೧೨೭) SII IX (i) ೧೧೮, ೧೦೫೭ ಎಪ್ರಿಲ್ ೨೧ ಹಿರೇಹಡಗಲಿ, ಹಡಗಲಿ (ತಾ).

೧೨೮) SII IX (i) ೧೨೬, ೧೦೬೪ ಎಪ್ರಿಲ್ ೪, ಉಚ್ಚಂಗಿದುರ್ಗ, ಹರಪನಹಳ್ಳಿ (ತಾ).

೧೨೯) Ibid ೧೨೬, ೧೦೬೪ ಎಪ್ರಿಲ್ ೪ ಉಚ್ಚಂಗಿದುರ್ಗ, ಹರಪನಹಳ್ಳಿ (ತಾ).

೧೩೦) Ibid.

೧೩೧) SII IX (i) ೧೪೯, ೧೦೮೧ ಡಿಸೆಂಬರ್ ೨೪, ತುಂಬಿಗೆರೆ, ಹರಪನಳ್ಳಿ (ತಾ).

೧೩೨) Ibid ೧೫೩, ೧೦೮೩ ಜನವರಿ ೩೦ ಅಂಬಳಿ, ಕೂಡ್ಲಿಗಿ (ತಾ).

೧೩೩) Ibid ೧೬೫, ೧೦೯೯ ಜೂನ್ ೫ ಕುರುವತ್ತಿ, ಹಡಗಲಿ (ತಾ).

೧೩೪) Ibid ೧೮೮, ೧೧೧೨ ಡಿಸೆಂಬರ್ ೩೦ ಗುಡಿಹಳ್ಳಿ, ಹರಪನಹಳ್ಳಿ (ತಾ).

೧೩೫) SII IX (i) ೧೭೦, ೧೧೦೬ ಜನವರಿ ೭, ಅಂಬಳಿ ಕೂಡ್ಲಿಗಿ (ತಾ).

೧೩೬) Ibid ೧೭೩, ೧೧೦೭ ಡಿಸೆಂಬರ್ ೧೬, ಬಾಗಳಿ, ಹರಪನಹಳ್ಳಿ (ತಾ).

೧೩೭) Ibid ೧೬೮, ೧೧೦೩ ಡಿಸೆಂಬರ್ ೨೫ ಬಾಗಳಿ, ಹರಪನಹಳ್ಳಿ (ತಾ).

೧೩೮) SII IX (i) ೧೮೧, ೧೧೧೦ ಸೆಪ್ಟೆಂಬರ್ ೧೧ ನೀಲಗುಂದ, ಹರಪನಹಳ್ಳಿ (ತಾ).

೧೩೯) Ibid ೧೧೮, ೧೧೧೯ ಮೇಲಬಾಗಳಿ, ಹರಪನಹಳ್ಳಿ (ತಾ)

೧೪೦) Ibid ೧೧೮, ೧೦೫೭ ಎಪ್ರಿಲ್ ೨೧ ಹೂವಿನ ಹಡಗಲಿ, ಹಡಗಲಿ (ತಾ).

೧೪೧) SII IX (i) ೧೯೮, ನವೆಂಬರ್ ೧೮, ಕುಡುತಿನಿ, ಬಳ್ಳಾರಿ (ತಾ).

೧೪೨) Ibid ೧೧೮, ೧೦೫೭ ಎಪ್ರಿಲ್ ೨೧ ಹಿರೇಹಡಗಲಿ, ಹೂವಿನ ಹಡಗಲಿ (ತಾ).

೧೪೩) Ibid ೨೦೬, ೧೧೨೨ ಡಿಸೆಂಬರ್ ೨೫, ರಾಮಘಟ್ಟ, ಹರಪನಹಳ್ಳಿ (ತಾ).

೧೪೪) Ibid ೧೮೭, ೧೧೧೨ ಕೊಟ್ಟೂರು, ಕೂಡ್ಲಿಗಿ (ತಾ).

೧೪೫) Ibid ೧೧೮, ೧೦೫೭ ಎಪ್ರಿಲ್ ೨೧ ಹಿರೇಹಡಗಲಿ, ಹೂವಿನ ಹಡಗಲಿ (ತಾ).

೧೪೬) ಕ.ವಿ.ಶಾ.ಸಂ. I ಹರಪನಹಳ್ಳಿ ೯೨, ೧೧೭೧ ಎಪ್ರಿಲ್ ೨೧ ಮಾಡಲಗೇರಿ, ಹರಪನಹಳ್ಳಿ(ತಾ).

೧೪೭) SII IX (i) ೧೮೮, ೧೧೧೨ ಡಿಸೆಂಬರ್ ೩೦ ಗುಡಿಹಳ್ಳಿ, ಹರಪನಹಳ್ಳಿ (ತಾ).

೧೪೮) ಕ.ವಿ.ಶಾ.ಸಂ. I ಬಳ್ಳಾ, ೩೩ ೧೧೨೦ ಅಕ್ಟೋಬರ್ ೮ ಕುಡುತಿನಿ ಬಳ್ಳಾರಿ (ತಾ).

೧೪೯) SII IX (i) ೨೩೮, ೧೧೪೨ ಮೇ ೨೭ ಹೊಳಲ, ಹಡಗಲಿ (ತಾ).

೧೫೦) Ibid

೧೫೧) Ibid ೨೬೦, ಬಾಗಳಿ, ಹರಪನಹಳ್ಳಿ (ತಾ).

೧೫೨) Ibid ೨೫೪, ೧೧೪೮ ಡಿಸೆಂಬರ್ ೨೪ ಕೊಟ್ಟಕಲ್ ಹಡಗಲಿ (ತಾ).

೧೫೩) SII IX (i) ೨೬೭, ೧೧೬೦ ಆಗಸ್ಟ್ ೧೮, ಬಾಗಳಿ, ಹರಪನಹಳ್ಳಿ (ತಾ).

೧೫೪) Ibid ೨೯೩, ೧೧೬೨ ನೀಲಗುಂದ, ಹರಪನಹಳ್ಳಿ (ತಾ).

೧೫೫) SII IX (i) ೩೨೩, ೧೧೯೭ ಜೂನ್ ೧ ಕುರುವತ್ತಿ ಹರಪನಹಳ್ಳಿ (ತಾ).

೧೫೬) ಕ.ವಿ.ಶಾ.ಸಂ. I ಅನುಬಂಧ, ಹರಪನಹಳ್ಳಿ ೨೨೧, ೧೧೭೨ ಮಾರ್ಚ್ ೧೦ ಹಿರೇಮೇಗಳಗೇರಿ ಹರಪನಹಳ್ಳಿ (ತಾ).

೧೫೭) SII IX (i) ೧೨೧೭ ಆಗಸ್ಟ್ ೪ ಒರುವಾಯಿ, ಬಳ್ಳಾರಿ (ತಾ).

೧೫೮) Ibid ೩೩೦, ೧೨೧೨ ಜನವರಿ ೮ ಹಿರೇಹಡಗಲಿ ಹೂವಿನ ಹಡಗಲಿ (ತಾ).

೧೫೯) Ibid ೩೩೩. ೧೨೧೪-೧೫ ಮಾಗಳ, ಹೂವಿನಹಡಗಲಿ (ತಾ).

೧೬೦) Ibid ೩೪೧, ೧೨೨೬ ಮಾರ್ಚ್ ೯ ಸೋಗಿ, ಹಡಗಲಿ (ತಾ).

೧೬೧) ಕ.ವಿ.ಶಾ.ಸಂ. I ಹಡಗಲಿ ೧೦೮, ೧೨೨೬ ಸೆಪ್ಟೆಂಬರ್ ೬ ಉತ್ತಂಗಿ ಹಡಗಲಿ.

೧೬೨) SII IX ೩೪೧, ೧೨೨೬ ಮಾರ್ಚ್ ಸೋಗಿ, ಹಡಗಲಿ (ತಾ).

೧೬೩) Ibid ೩೮೯, ೧೧೮೧ ಡಿಸೆಂಬರ್ ೨೫, ಕುರುವತ್ತಿ, ಹರಪನಹಳ್ಳಿ (ತಾ).

೧೬೪) Ibid ೭೪, ೧೨೧೪ ಜೂನ್ ೨೫ ರಂಗಾಪುರ, ಹಡಗಲಿ (ತಾ).

೧೬೫) Ibid ೭೩, ೧೨೦೮ ಅಕ್ಟೋಬರ್ ೧೧ ರಂಗಾಪುರ, ಹಡಗಲಿ (ತಾ).

೧೬೬) ಕ.ವಿ.ಶಾ.ಸಂ. I ಹಡಗಲಿ ೮೪, ೧೧೧೧ ಹೂವಿನ ಹಡಗಲಿ.

೧೬೭) ಕ.ವಿ.ಶಾ.ಸಂ. I ಹಡಗಲಿ ೪೦ (?) ಹೊಳಲು, ಹಡಗಲಿ (ತಾ).

೧೬೮) Ibid ಕೂಡ್ಲಿಗಿ ೭(?) ಉಜ್ಜಿನಿ, ಕೂಡ್ಲಿಗಿ (ತಾ).

೧೬೯) SII IX (i) ೩೮೭, ೧೨೯೭ ನವೆಂಬರ್ ೨೦ ಮನ್ನೇರಮಸಲವಾಡ ಹರಪನಹಳ್ಳಿ(ತಾ).

೧೭೦) ARIE ೬೩/೮೫-೮೬ ಕ್ರಿ.ಶ. ೧೨ ನೇ ಶತಮಾನ ತೆಕ್ಕಲಕೋಟೆ, ಸಿರುಗುಪ್ಪ (ತಾ).

೧೭೧) Ibid ೩೨೯, ೧೨೦೯ ಮಾಗಳ, ಹೂವಿನ ಹಡಗಲಿ (ತಾ).

೧೭೨) SII IX (i) ೩೨೫, ೧೨೦೫ ಬೆಣ್ಣೆಹಳ್ಳಿ ಹರಪನಹಳ್ಳಿ (ತಾ).

೧೭೩) SII IX (i) ೫೬, ೯೦೮.೦೯ ಕೋಗಳಿ, ಹಗರಿಬೊಮ್ಮನಹಳ್ಳಿ (ತಾ).

೧೭೪) SII IX (i) ೬೪, ೯೪೪-೪೫, ಬಾಗಳಿ ಹರಪನಹಳ್ಳಿ (ತಾ).

೧೭೫) Ibid ೮೦, ೧೦೧೮ ಡಿಸೆಂಬರ್ ೨೩, ಬಾಗಳಿ, ಹರಪನಹಳ್ಳಿ (ತಾ).

೧೭೬) SII IX (i) ೮೮, ೧೦೩೪-೩೫ ಬೊಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ(ತಾ).

೧೭೭) SII IX (i) ೮೯, ೧೦೩೫ ಡಿಸೆಂಬರ್ ೨೫ ಬಾಗಳಿ ಹರಪನಹಳ್ಳಿ (ತಾ).

೧೭೮) Ibid ೯೪, ೧೦೩೯ ಎಪ್ರಿಲ್ ೨೩, ಕಂಚಿಕೆರೆ ಹರಪನಹಳ್ಳಿ (ತಾ).

೧೭೯) Ibid ೯೬, ತುಂಬಿಗೆರೆ, ಹರಪನಹಳ್ಳಿ (ತಾ).

೧೮೦) SII IX (i) ೧೦೨, ೧೦೪೬, ಫೆಬ್ರವರಿ, ಮೈಲಾರ ಹಡಗಲಿ (ತಾ).

೧೮೧) Ibid ೧೩೦, ಸೋಮೇಶ್ವರ ೧ ಕೋಗಳಿ, ಹಗರಿಬೊಮ್ಮನಗಳ್ಳಿ (ತಾ).

೧೮೨) Ibid ೧೩೦, ಸೋಮೇಶ್ವರ ೧ ಕೋಗಳಿ, ಹಗರಿಬೊಮ್ಮನಗಳ್ಳಿ (ತಾ).

೧೮೩) Ibid ೧೩೦, ಸೋಮೇಶ್ವರ ೧ ಕೋಗಳಿ, ಹಗರಿಬೊಮ್ಮನಗಳ್ಳಿ (ತಾ).

೧೮೪) Ibid ೧೩೯, ೧೦೭೪ ಮೇ ೩೧, ಹೊಳಲ, ಹೂವಿನ ಹಡಗಲಿ (ತಾ).

೧೮೫) SII IX (i) ೧೪೫, ೧೦೭೯ ಡಿಸೆಂಬರ್ ೨೬ ಬಾಗಳಿ ಹರಪನಹಳ್ಳಿ (ತಾ).

೧೮೬) Ibid ೧೯೮, ೧೧೧೯ ಮೇ ೧೧, ಬಾಗಳಿ, ಹರಪನಹಳ್ಳಿ (ತಾ).

೧೮೭) Ibid ೧೭೦, ೧೧೦೬ ಜನವರಿ ೭, ಅಂಬಳಿ, ಕೂಡ್ಲಿಗಿ (ತಾ).

೧೮೮) SII IX (i) ೨೨೩, ೧೧೨೭ ಜುಲೈ ೧೦, ರಾಗಿಮಲಸವಾಡ, ಹರಪನಹಳ್ಳಿ (ತಾ).

೧೮೯) Ibid ೨೨೪, ೧೧೩೪ ಅಕ್ಟೋಬರ್ ೪, ಸಿಂಧವಾಳ, ಬಳ್ಳಾರಿ (ತಾ).

೧೯೦) Ibid ೨೭೬, ೧೧೮೩ ಜೂನ್ ೭, ಮುನ್ನೇರ, ಮಸಲವಾಡ, ಹರಪನಹಳ್ಳಿ (ತಾ).

೧೯೧) SII IX (i) ೩೨೪, ೧೧೯೭-೯೮ ಬೆಣ್ಣಹಳ್ಳಿ ಹರಪನಹಳ್ಳಿ (ತಾ).

೧೯೨) SII IX (i) ೩೩೨, ೧೨೧೪ ಎಪ್ರಿಲ್ ೧೨, ಮುತ್ತಿಗಿ, ಹಡಗಲಿ (ತಾ).

೧೯೩) Ibid ೩೪೯, ೧೨೮೨ ಬೆಣ್ಣಹಳ್ಳಿ ಹರಪನಹಳ್ಳಿ (ತಾ).

೧೯೪) ಕ.ಪ್ರಿ.ಶಾ.ಸಂ. I ಹರಪನಹಳ್ಳಿ ೧೩೫, ೧೨೩೧-೩೨, ಬಾಗಳಿ, ಹರಪನಹಳ್ಳಿ (ತಾ).

೧೯೫) Ibid ಹಡಗಲಿ ೧೦೮, ೧೨೨೬ ಸೆಪ್ಟೆಂಬರ್ ೬ ಉತ್ತಂಗಿ, ಹಡಗಲಿ (ತಾ).

೧೯೬) Ibid

೧೯೭) Ibid ಹರಪನಹಳ್ಳಿ ೩೭, ೧೧೬೨ ಡಿಸೆಂಬರ್ ೨೫, ದುಗ್ಗವತಿ, ಹರಪನಹಳ್ಳಿ(ತಾ).

೧೯೮) Ibid ಹರಪನಹಳ್ಳಿ ೪೮, ೧೧೬೨ ಡಿಸೆಂಬರ್ ೨೪, ಅಲಗಿಲವಾಡ, ಹರಪನಹಳ್ಳಿ(ತಾ).

೧೯೯) SII IX (i) ೧೭೮, ೧೧೦೮ ಡಿಸೆಂಬರ್ ೨೮, ಬಾಗಳಿ ಹರಪನಹಳ್ಳಿ (ತಾ).

೨೦೦) Ibid

೨೦೧) Ibid ೧೮೨, ೧೧೧೦ ಡಿಸೆಂಬರ್ ೩, ಬಾಗಳಿ, ಹರಪನಹಳ್ಳಿ (ತಾ).

೨೦೨) Ibid ೧೭೮, ೧೧೦೮ ಡಿಸೆಂಬರ್ ೨೮, ಬಾಗಳಿ, ಹರಪನಹಳ್ಳಿ (ತಾ).

೨೦೩) Ibid ೧೮೪, ೧೧೧೧ ಜುಲೈ ೧೨, ಹನಸಿ, ಕೂಡ್ಲಿಗಿ (ತಾ).

೨೦೪) ಕ.ವಿ.ಶಾ.ಸಂ. I ಹರಪನಹಳ್ಳಿ ೧೫೫ (೧), ಬಾಗಳಿ, ಹರಪನಹಳ್ಳಿ (ತಾ).

೨೦೫) SII IX (i) ೧೬೫, ೧೦೯೯ ಜೂನ್ ೫ ಕುರುವತ್ತಿ, ಹರಪನಹಳ್ಳಿ (ತಾ).

ಅಧ್ಯಾಯ ೫

ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ ೫

ಸಾಂಸ್ಕೃತಿಕ ಅಧ್ಯಯನ

ಕನ್ನಡ ನಾಡಿನ ಸಾಮಾಜಿಕ ಸ್ಥಿತಿಗತಿಗಳು ತಲೆಮಾರಿನಿಂದ ತಲೆಮಾರಿಗೆ, ಶತಮಾನದಿಂದ ಶತಮಾನಕ್ಕೆ ಮುಂದುವರಿಕೆಯ ಅಂಶಗಳನ್ನು ಹೊಂದಿರುತ್ತಿದ್ದವು. ರಾಜಕೀಯ ಏಳು ಬೀಳುಗಳು ಜನ ಸಾಮಾನ್ಯರ ನಿತ್ಯಜೀವನದ ಮೇಲೆ ಸ್ವಲ್ಪ ಪರಿಣಾಮವನ್ನುಂಟು ಮಾಡಿದರೂ ಸಮಾಜದ ಸ್ಥೂಲರಚನೆ ಮತ್ತು ಜೀವನ ಕ್ರಮಗಳನ್ನು ಆಳವಾಗಿ ಪ್ರಭಾವಿಸುತ್ತಿರಲಿಲ್ಲ. ಬಲ್ಲಕುಂದೆ ನಾಡು ಸಹ ಪುರಾತನ ಕಾಲದಲ್ಲಿ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದ್ದು, ಸಾಮಾಜಿಕವಾಗಿ ಶಾಂತಿ-ಸಮೃದ್ಧಿಯನ್ನು ಸಾಧಿಸಿತ್ತೆಂದು ಈ ನಾಡಿನ ಶಾಸನಗಳು ಸ್ಪಷ್ಟಪಡಿಸುತ್ತವೆ.

I. ಚತುರ್ವರ್ಣದವರ ಸ್ಥಾನಮಾನ:

ಭಾರತೀಯ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಷ್ಣವ ಮತ್ತು ಶೂದ್ರ ಎಂಬ ಚತುರ್ವರ್ಣಗಳಾಗಿ ವಿಭಜಿಸಿದ್ದನ್ನು ಪುರುಷಸೂಕ್ತದಲ್ಲಿ ಕಾಣಬಹುದು. ಇದು ವೃತ್ತಿಯನ್ನವಲಂಬಿಸಿ ವಿಭಜಿಸಲಾಗಿದ್ದು, ಕಾಲಾಂತರದಲ್ಲಿ ಈ ವರ್ಣವ್ಯವಸ್ಥೆ ಬದಲಾವಣೆ ಹೊಂದುತ್ತಾ ಜಾತಿ ವ್ಯವಸ್ಥೆಗಳಾಗಿ ಮಾರ್ಪಾಡು ಹೊಂದಿದವು.

ಬ್ರಾಹ್ಮಣರು

ವರ್ಣಗಳಲ್ಲಿ ಉತ್ತಮವಾದ ಬ್ರಾಹ್ಮಣ ಮಹಾಜನರು ಅಂದಿನ ದಿನಗಳಲ್ಲಿ ಅಗ್ರಸ್ಥಾನದಲ್ಲಿದ್ದರು. ಯಜನ (ಯಜ್ಞ ಮಾಡುವುದು), ಯಾಜನ (ಯಾಗ ಮಾಡಿಸುವುದು), ಅಧ್ಯಯನ (ಓದುವುದು), ಅಧ್ಯಾಪನ (ಓದಿಸುವುದು), ದಾನ ಪ್ರತಿಗ್ರಹ (ದಾನ ಸ್ವೀಕರಿಸುವುದು) ಇವು ಅವರ ಬಹುಮುಖ್ಯ ಕರ್ತವ್ಯಗಳಾಗಿದ್ದವು. ಈ ಕರ್ತವ್ಯಗಳು ಷಟ್ಕರ್ಮಗಳೆನಿಸಿದ್ದು, ಕ್ರಿ.ಶ. ೧೦೧೮ ರ ಶಾಸನದಲ್ಲಿ ಪಿರಿಯ ಮೊಸಂಗಿಯ ಪರದಾಸಿ ಉಪಸೆಟ್ಟಿಯ ಮಗ ಪೋತಿಸೆಟ್ಟಿಯು ಮೂಲಸ್ಥಾನ ದೇವಾಲಯದ ತಪೋಧನರ ಬ್ರಾಹ್ಮಣರ ಛತ್ರಕ್ಕೆಂದು ೩೫ ಮತ್ತರು ಭೂಮಿಯನ್ನು ದಾನ ನೀಡಿದ ವಿಷಯವಿದೆ. ಹೀಗೆ ಈ ನಾಡಿನಲ್ಲಿ ದೊರೆಯುವ ಶಾಸನಗಳು ಬ್ರಾಹ್ಮಣರ ಸ್ಥಾನಮಾನಗಳು, ಕರ್ತವ್ಯಗಳು, ಬ್ರಾಹ್ಮಣರಿಗೆ ನೀಡಿದ ದಾನ ದತ್ತಿಗಳ ಬಗ್ಗೆ ಉಲ್ಲೇಖ ಹೊಂದಿವೆ.

ಕ್ಷತ್ರಿಯರು

ಬ್ರಾಹ್ಮಣರ ತರುವಾಯ ಸಮಾಜದಲ್ಲಿ ಕ್ಷತ್ರಿಯರ ಸ್ಥಾನ ಹಿರಿದಾಗಿದೆ. ಅಂದಿನ ಸಮಾಜದ ಧಾರ್ಮಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣನು ಸರ್ವೋತ್ತಮನೆನಿಸಿದರೆ, ಆಡಳಿತ ವ್ಯವಸ್ಥೆಯಲ್ಲಿ ರಾಜನು

ಸರ್ವಾಧಿಕಾರಿ ಎನಿಸಿದ್ದನು. ಬ್ರಾಹ್ಮಣರು ಕ್ಷತ್ರಿಯರನ್ನು ಆರ್ಥಿಕವಾಗಿ ಅವಲಂಬಿಸಿದ್ದರೆ, ಕ್ಷತ್ರಿಯರು ತಮ್ಮ ಪುಣ್ಯಾರ್ಜನೆಯ ವೈದಿಕ ಆಚರಣೆಗಳಿಗಾಗಿ ಬ್ರಾಹ್ಮಣರನ್ನು ಅವಲಂಬಿಸಿದ್ದರು. ಧೈರ್ಯ, ಸಾಹಸ, ಶೌರ್ಯ, ತೇಜಸ್ಸು ಮುಂತಾದವುಗಳು ಕ್ಷತ್ರಿಯರ ಗುಣಗಳಾಗಿವೆ. ರಾಜ್ಯ ರಕ್ಷಣೆ ಇವರ ಹೊಣೆಯಾಗಿತ್ತು.

ಕ್ಷತ್ರೀಯರು ಎಂದು ಯಾರೂ ಇರಲಿಲ್ಲ. ಆಳುವವರೇ ಕ್ಷತ್ರೀಯರಾಗುತ್ತಿದ್ದರು. ಬಲ್ಲಕುಂದೆ ನಾಡಿನ ಶಾಸನದಲ್ಲಿ ಈ ಕ್ಷತ್ರಿಯರ ಕುರಿತಾದ ಸಾಮಾನ್ಯವಾಗಿ ರಾಜಾಡಳಿತವನ್ನು ನೋಡಿಕೊಂಡು ಹೋಗುವ ಅರಸ ಮತ್ತು ಅವನ ಪರಿವಾರದವರೆಲ್ಲರು ಕ್ಷತ್ರಿಯರಾಗಿದ್ದರೆಂದು ತಿಳಿದು ಬರುತ್ತದೆ. ಆಡಳಿತದ ಸಹಾಯಕ್ಕಾಗಿ ರಾಜ್ಯವನ್ನು ವಿಭಾಗಗಳನ್ನಾಗಿ ಮಾಡಿ ಸಹಾಯಕ್ಕಾಗಿ ಅಧಿಕಾರಿಗಳನ್ನು ನೇಮಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದರು.

ವೈಶ್ಯರು

ಮೂರನೆಯ ವರ್ಗದವರಾದ ವೈಶ್ಯರು ವರ್ತಕರು ಅಥವಾ ವ್ಯಾಪಾರಿಗಳು, ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸಿದ್ದರು. ಅಲ್ಲದೆ ಕೃಷಿ ಮತ್ತು ವಾಣಿಜ್ಯದಲ್ಲಿ ತೊಡಗುವುದು ಇವರ ವೃತ್ತಿಗಳಾಗಿದ್ದು, ಇವರು ರಾಷ್ಟ್ರದ ಸುಃಖ ಜೀವನಕ್ಕೆ ಸಹಕಾರಿಯಾಗುತ್ತಿದ್ದರೆಂದು ಹೇಳಬಹುದು. ಬಲ್ಲಕುಂದೆ ನಾಡಿನ ಶಾಸನಗಳಲ್ಲಿ ಸೆಟ್ಟಿ, ಶ್ರೇಷ್ಠಿ, ಸೆಟ್ಟಿಗುತ್ತ, ನಖರ, ಮುಂಮುರಿದಂಡ, ಗವರೆ–ಗಾತ್ರಿಗ, ಬಣಂಜಿಕ ಮುಂತಾದವರುಗಳು ಉಲ್ಲೇಖಗೊಂಡಿದ್ದಾರೆ. ಚಾಲುಕ್ಯರ ಕಾಲದಲ್ಲಿ ವರ್ತಕರು ತಮ್ಮ ವ್ಯಾಪಾರದ ಚಟುವಟಿಕೆಗಳನ್ನು ಭಾರತದಲ್ಲಿಯೂ, ಪರದೇಶದಲ್ಲಿಯೂ ನಡೆಸಿದ್ದರು. ಜೊತೆಗೆ ಆಡಳಿತದಲ್ಲಿ ಪಾಲ್ಗೊಂಡರು. ಇವರು ಆಡಳಿತಾತ್ಮಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಸಮಾಜದೊಂದಿಗೆ ಬೆರೆಯುವುದರ ಮೂಲಕ ವೈಶ್ಯರು ಬ್ರಾಹ್ಮಣರೊಂದಿಗೆ, ಅರಸರೊಂದಿಗೆ ಒಳ್ಳೆಯ ಸಾಮಾಜಿಕ ಬಾಂಧವ್ಯವನ್ನು ಹೊಂದಿದ್ದರು. ಅವರು ಮಾಡುವ ವ್ಯವಹಾರದ ವಸ್ತುಗಳು, ಪ್ರಮಾಣ, ವಾಸಸ್ಥಳ, ವ್ಯವಹಾರದ ರೀತಿ ಮುಂತಾದವು ವಿಭಿನ್ನವಾಗಿದ್ದುದರ ಕಾರಣ ಅವರಲ್ಲಿ ಬೇರೆ–ಬೇರೆ ಒಳಪಂಗಡಗಳಿದ್ದವೆಂಬ ಅಭಿಪ್ರಾಯವು ಇದೆ. ಆದ್ದರಿಂದ ಡಾ॥ ಬಿ.ಆರ್.ಹಿರೇಮಠರು ವರ್ತಕರನ್ನು ವಿನಿಮಯ ವರ್ತಕರು ಮತ್ತು ಉತ್ಪಾದಕ ವಿನಿಮಯ ವರ್ತಕರೆಂದು ಎರಡು ವಿಭಾಗ ಮಾಡಿಕೊಂಡು ಅಧ್ಯಯನ ಮಾಡಿದ್ದಾರೆ.

ಪ್ರಾಚೀನ ಕರ್ನಾಟಕದ ವರ್ತಕ ಶ್ರೇಣಿಗಳಲ್ಲಿ 'ಬಲ್ಲಕುಂದೆ ನಾಡಿನ' ವರ್ತಕರ ಶ್ರೇಣಿ ಪ್ರಸಿದ್ಧವಾಗಿದೆ. ಇವರು ಕುದುರೆ, ಕತ್ತೆ, ಎತ್ತಿನಬಂಡಿ ಅಥವಾ ಗಾಡಿಗಳನ್ನು ಬಳಸಿಕೊಳ್ಳುತ್ತಿದ್ದರು. ಯುದ್ಧದಲ್ಲಿ ಸೈನಿಕರಿಗೆ ಬೇಕಾದ ಆಹಾರ ಮುಂತಾದ ಸಾಮಗ್ರಿಗಳನ್ನು ಸರಬರಾಜು ಮಾಡುವವರಾಗಿದ್ದರು.

ಶೂದ್ರರು

ಸಮಾಜದ ಕೆಳವರ್ಗದ ವೃತ್ತಿಗಳನ್ನು ಅನುಸರಿಸಿದವರು, ಚತುರ್ಥವರ್ಣದವರೇ ಶೂದ್ರರೆನಿಸಿದರು. ಸಾಮಾಜಿಕವಾಗಿ ಕೆಳಸ್ಥರದಲ್ಲಿದ್ದ ಶೂದ್ರರು ಉಳಿದ ವರ್ಣದವರಿಗೆ ದೊರೆಯುತ್ತಿದ್ದ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದರಲ್ಲದೆ ಮೇಲಿನ ಮೂರು ವರ್ಣದವರು ಮಾಡದೆ ಬಿಟ್ಟ ಕೆಲಸಗಳನ್ನು ನಿರ್ವಹಿಸುತ್ತಿದ್ದರೆಂದು ಹೇಳಬಹುದು. ಈ ವರ್ಗಕ್ಕೆ ಸೇರಿದವರು ಹೆಚ್ಚಾಗಿ ಇನ್ನೊಬ್ಬರ ಆಶ್ರಯದಲ್ಲಿರುವುದರಿಂದ ಇವರಿಗೆ ಸ್ವತಂತ್ರವಾದ ಯಾವ ಆಸ್ತಿ ಅಥವಾ ಅಂತಸ್ತು ಇಲ್ಲದೆ ಬಡವರಾಗಿದ್ದರೆಂದು ಹೇಳಬಹುದು. ಶೂದ್ರರು ಯಾವಾಗಲೂ ತಮ್ಮ ಕೆಲಸವನ್ನು ಕೀಳೆಂದು ಪರಿಗಣಿಸುತ್ತಿರಲಿಲ್ಲ. ಉಳಿದ ವರ್ಣದವರಂತೆ ಇವರು ಪ್ರಮುಖರಾಗಿದ್ದು, ಸಮಾಜವು ನಿರ್ಮಲವಾಗಿರಬೇಕಾದರೆ ಹೊಲಸನ್ನು ತೆಗೆದುಹಾಕುವ ಜನರಿರಬೇಕಾದುದು ಅವಶ್ಯಕ.

ಶೂದ್ರರ ಜೀವನ ಕುರಿತು ಶಾಸನಗಳು ಮೌನವಾಗಿವೆ. ಈ ದಿಸೆಯಲ್ಲಿ ಆ ಕಾಲದ ಶಿಲ್ಪಗಳು ಈ ವರ್ಗದ ಸ್ಥಿತಿಗತಿಗಳನ್ನು ಗುರುತಿಸಲು ಸ್ವಲ್ಪ ನೆರವಾಗುತ್ತವೆ. ಆನೆಯನ್ನೇರಿದ ಮಾವುತ, ಹಾವನ್ನಾಡಿಸುವ ಹಾವಾಡಿಗ, ವಿಲಕ್ಷಣ ಮುಖವಾಡ ಧರಿಸಿ ಕುಣಿಯುವ ವೇಷಗಾರ, ಕಸರತ್ತು ಮಾಡುವ ಡೊಂಬ, ದ್ವಾರಪಾಲಕರು, ಅರಮನೆಯ ಸೇವಕರು, ಮೊದಲಾದವರು ಬಲ್ಲಕುಂದೆ ನಾಡಿನಲ್ಲಿಯ ಶಿಲ್ಪಗಳಲ್ಲಿ ಕಾಣಸಿಗುತ್ತಾರೆ. ಅವರ ಸಾದಾ ವೇಷ-ಭೂಷಣಗಳು, ಸಣ್ಣ-ಪುಟ್ಟ ಆಭರಣಗಳು ಅವರ ಆರ್ಥಿಕ ಸ್ಥಿತಿಯನ್ನು ಸಂಕೇತಿಸುತ್ತದೆ.

ಅಸ್ಪೃಶ್ಯರು

ಬಲ್ಲಕುಂದೆ ನಾಡಿನಲ್ಲಿ ಅಸ್ಪೃಶ್ಯರು ಮಲ(ಸಗಣಿ) ತೆಗೆಯುವ ಕೆಲಸ, ಜಮೀನಿನಲ್ಲಿ ಬೇಸಾಯ ಮಾಡಿಸುವುದು, ಭಾರವಾದ ವಸ್ತುಗಳನ್ನು ಹೊರುವುದು ಒಟ್ಟಿನಲ್ಲಿ ಸಮಾಜದ ಎಲ್ಲಾ ಜಾತಿಯ ಜನರು ಬಿಟ್ಟ ಕೆಲಸವನ್ನು ನಿರ್ವಹಿಸುತ್ತಿದ್ದರು. ಸಾರ್ವಜನಿಕರು ಉಪಯೋಗಿಸುವ ಕೆರೆ, ಬಾವಿ, ದೇವಾಲಯ, ಮನೆಯೊಳಗೆ ಮೊದಲಾದ ಕಡೆ ಅವರನ್ನು ಬಿಟ್ಟುಕೊಳ್ಳುತ್ತಿರಲಿಲ್ಲ. ಅಂದಿನ ದಿನಗಳಲ್ಲಿ ಈ ಜನರು ರಸ್ತೆಯಲ್ಲಿ ಹೋಗಬೇಕಾದರೆ ಇತರರು ಮುಟ್ಟದಂತೆ ಕೋಲುಕಟ್ಟಿ ಶಬ್ದ ಮಾಡುತ್ತ ಜನರನ್ನು ಎಚ್ಚರಿಸುತ್ತ ಹೋಗಬೇಕಾದುದನ್ನು ವಿದೇಶಿ ಪ್ರವಾಸಿಗರು ಗಮನಿಸಿದ್ದಾರೆ.

ಹೊಲೆಯರು

ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರುವವರು ಹೊಲೆಯರಾಗಿದ್ದಾರೆ. ಇವರನ್ನು ಬಲ್ಲುಕುಂದೆ ನಾಡಿನಲ್ಲಿ ಚಲವಾದಿ, ಬ್ಯಾಗಾರರು, ಹೊಲೆಯರು ಎಂಬ ಹೆಸರುಗಳಿಂದ ಕರೆಯುತ್ತಾರೆ. ಯಲ್ಲಾಪುರದ ಕ್ರಿ.ಶ. ೧೨೨೩ ರ ಶಾಸನದಲ್ಲಿ ಹೊರಹೊಲಗೇರಿ ಎಂದು ತಿಳಿದು ಬರುತ್ತದೆ. ಹೊಲೆಯರ ಮನೆಗಳು ಊರ ಹೊರಗಡೆ ಇರುತ್ತಿದ್ದವೆಂದು ತಿಳಿಯುತ್ತದೆ.

ಹೊಲೆಯರ ಬಗ್ಗೆ ಎರಡು ಶಾಸನಗಳು ದೊರೆಯುತ್ತವೆ. ಬಳಾರೆ ೩೦ರ ಹೊಲೆಯರಿಗೆ ನೊಳಂಬ ಮಂಗಪರಸನು ಕೆಲವು ತೆರಿಗೆಗಳನ್ನು ಬಿಟ್ಟಂತೆ ಶಾಸನವೊಂದು ತಿಳಿಸುತ್ತದೆ.[೧] ಇನ್ನೊಂದು ಶಾಸನದಲ್ಲಿ ಸಿಂಧರು ಹೊಲೆಗೆಯನ್ನು ಮಾಡಿ ಸಿಂಧರ ಹೊಲೆಗೆರೆ ಎಂದು ಹೆಸರು ನೀಡಿದಂತೆ ಉಲ್ಲೇಖವಿದೆ.[೨]

ವೀರಗಲ್ಲು

ವೀರನೊಬ್ಬ ಮಡಿದ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರಶಾಸನ ಅಥವಾ ವೀರಗಲ್ಲುಗಳನ್ನು ಗುರುತಿಸುವುದು ಸಾಮಾನ್ಯ ಮತ್ತು ಸುಲಭ. ಕಾರಣ ಅವುಗಳ ಮೇಲೆ ವೀರ ಶತ್ರುಗಳೊಡನೆ ಹೋರಾಡುವ ದೃಶ್ಯ, ಮಧ್ಯದಲ್ಲಿ ದೇವತಾ ಸ್ತ್ರೀಯರು ಆತನನ್ನು ಸ್ವರ್ಗಕ್ಕೆ ಕೊಂಡೊಯ್ಯುವುದು, ಎರಡನೇ ಹಂತದಲ್ಲಿ ಅವನನ್ನು ದೇವರ ಸಾನಿಧ್ಯದಲ್ಲಿರುವಂತೆ ಕೆತ್ತಲಾಗಿದೆ. ವೀರಗಲ್ಲಿನ ಮೇಲೆ ಬರಹವಿರಬಹುದು, ಇಲ್ಲದಿರಬಹುದು. ಮಡಿದ ವೀರನ ಶಾಶ್ವತ ನೆನಪಿಗಾಗಿ ಈ ಶಾಸನಗಳನ್ನು ಕೆತ್ತಿಸಲು ಪ್ರಾರಂಭಿಸಿದರು. ಯಾವುದೇ ಕಾಲದಲ್ಲಿಯಾದರೂ ನಿಲ್ಲಿಸಿದ ವೀರಗಲ್ಲುಗಳು ಇಂದಿಗೂ ಬಲ್ಲಕುಂದೆ ನಾಡಿನ ಹಂಪಿ, ಕಂಪ್ಲಿ, ಕುರುಗೋಡು, ಬಲ್ಲಕುಂದೆ, ಬಳ್ಳಾರಿ, ತೆಕ್ಕಲಕೋಟೆ ಮುಂತಾದ ಸ್ಥಳಗಳಲ್ಲಿ ಕಂಡುಬಂದಿದೆ. ವೀರಗಲ್ಲು ಯಾವ ವೀರನ ಸ್ಮಾರಕವಾಗಿದೆಯೋ ಆ ವೀರನ ಪರಾಕ್ರಮವನ್ನು ಸಾರುವಂತವೇ ಆಗಿರುತ್ತವೆ. ಈ ಲೋಕದಲ್ಲಿ ಇಬ್ಬರು ಮಾತ್ರ ಸೂರ್ಯ ಮಂಡಲವನ್ನು ಭೇದಿಸಿಕೊಂಡು ಹೋಗುವ ಶಕ್ತಿ ಉಳ್ಳವರಾಗಿದ್ದಾರೆ. ಅವರು ಯಾರೆಂದರೆ ಸಾಧನೆಯನ್ನು ಮಾಡಿ ಸಿದ್ಧಿಪಡೆದವನು ಒಬ್ಬನಾದರೆ, ಯುದ್ಧರಂಗದಲ್ಲಿ ಅಸಾಧಾರಣ ಪರಾಕ್ರಮವನ್ನು ಮೆರೆದು ಮಡಿದವನು ಮತ್ತೊಬ್ಬ. ವೀರಗಲ್ಲುಗಳಲ್ಲಿ ದೊರೆಯುವ ಶ್ಲೋಕವೆಂದರೆ

"ಜಿತೇನ ಲಭ್ಯತೆ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾಮರಣೇ ರಣೇ"

ಅಂದರೆ ಕ್ಷಣಾರ್ಧದಲ್ಲಿ ನಾಶವಾಗುವ ಈ ಅಶಾಶ್ವತ ದೇಹದ ಬಗ್ಗೆ ಏಕೆ ಇಲ್ಲದ ಮೋಹ, ಗೆದ್ದರೆ ರಾಜ್ಯಲಕ್ಷ್ಮಿಯು ದೊರೆಯುತ್ತಾಳೆ. ಮಡಿದರೆ ಅಪ್ಸರೆಯು ಒಲಿಯುತ್ತಾಳೆ. ಆದ್ದರಿಂದ ದೇಹದ ಮೇಲಿನ ಮೋಹವನ್ನು ತೊರೆದು ಯುದ್ಧಪ್ರವೃತ್ತನಾಗು ಎಂದು ಈ ಶ್ಲೋಕ ವೀರರನ್ನು ಹುರಿದುಂಬಿಸುತ್ತದೆ.

ಬಲ್ಲಕುಂದೆ ನಾಡಿನಲ್ಲಿ ಅನೇಕ ವೀರಗಲ್ಲುಗಳು ದೊರೆತಿವೆ. ಆದರೆ ಬಹಳಷ್ಟು ವೀರಗಲ್ಲುಗಳಲ್ಲಿ ಪಾಠಗಳಿಲ್ಲ. ಬಲ್ಲಕುಂದೆಯಲ್ಲಿ ದೊರಕಿರುವ ಎರಡು ವೀರಗಲ್ಲುಗಳ ಪಾಠ ಪೂರ್ಣವಾಗಿ ದೊರೆತಿಲ್ಲ ಅಪೂರ್ಣವಾಗಿವೆ. ಹೀಗಾಗಿ ಇಲ್ಲಿ ನಡೆದಿರಬಹುದಾದ ಯುದ್ಧಗಳ ವಿವರಗಳಾಗಲೀ, ಸತ್ತ ವೀರರ ಬಗ್ಗೆ ಯಾಗಲೀ ವಿವರಗಳು ದೊರೆಯುವುದಿಲ್ಲ.[೩] ಒಂದು ಶಾಸನದಲ್ಲಿ ದೇಪಯ್ಯ ಎಂಬುವವನು ನನ್ನಿನೊಳಂಬನ ಮಾತನ್ನು ಕೇಳಿ ತೇರ್ಗಡೆ ಜಿಳಮಯ್ಯ ಸಿನ್ದರನ್ನು ತಾಗಿದಂತೆ ಹೇಳಿದೆ.[೪]

ವೀರಗಲ್ಲುಗಳ ಪರಿಚಯವನ್ನು ಹೋರಾಟದ ಸ್ವರೂಪವನ್ನು ಅನುಸರಿಸಿ ೮ (ಎಂಟು) ವಿಧಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಅನೇಕ ವಿಧದ ವೀರಗಲ್ಲುಗಳು ಬಲ್ಲಕುಂದೆ ನಾಡಿನಲ್ಲಿ ಕಂಡುಬರುತ್ತವೆ.

ಮಹಾಸತಿ

ಪತಿಯ ಯಾವುದೇ ರೀತಿಯ ಮರಣಾನಂತರ ಮಡದಿ ಪ್ರಮುಖವಾಗಿ ಅಗ್ನಿಪ್ರವೇಶದ ಮೂಲಕ ಅಥವಾ ಇತರ ವಿಧಾನಗಳ ಮೂಲಕ ತನ್ನ ಪ್ರಾಣವನ್ನು ಬಲಿಕೊಡುತ್ತಿದ್ದಳು. ಹೀಗೆ ಪ್ರಾಣವನ್ನು ಅರ್ಪಿಸಿದವಳೇ ಮಹಾಸತಿ, ಮಾಸ್ತಿ ಎಂದೂ ಕರೆಯುತ್ತಾರೆ. ಪತ್ನಿಯು ಸಹಗಮನ ಮಾಡಲು ಗಂಡನು ಇಂತಹದೇ ಕಾರಣಕ್ಕಾಗಿ ಮಡಿದಿರಬೇಕೆಂಬ ಯಾವುದೇ ನಿಯಮವಿದ್ದಂತೆ ತೋರುವುದಿಲ್ಲ. ಗಂಡನಾದವನು ಯುದ್ಧದಲ್ಲಿ ಮರಣಹೊಂದಿರಬಹುದು ಅಥವಾ ಸಹಜ ಮರಣವನ್ನು ಹೊಂದಿರಬಹುದು. ಈ ಮಾಸ್ತಿ ಪದ್ಧತಿ ಉಗಮಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು.

೧) ಮರಣಹೊಂದಿದ ವ್ಯಕ್ತಿಯ ಜೊತೆಗೆ ಅವನಿಗಿಷ್ಟವಾದ ವಸ್ತುಗಳನ್ನು ಇಡುವುದು.

೨) ಮರಣಹೊಂದಿದ ಗಂಡನ ಜೊತೆ ಸಾಯುವುದರಿಂದ ಸ್ವರ್ಗ ಪ್ರಾಪ್ತಿಯಾಗುವುದಲ್ಲದೇ ತಾನೂ ಸ್ವರ್ಗ ಪಡೆದು ಮುಂದಿನ ಜನ್ಮದಲ್ಲಿ ಮತ್ತೆ ಪತಿಪತ್ನಿಯರಾಗಿ ಹುಟ್ಟುವುದು.

೩) ತಾನು ಮಡಿದ ನಂತರ ತನ್ನ ಮಡದಿ ಪರಪುರುಷರ ವಶವಾಗಬಾರದು ಅಥವಾ ತನ್ನಿಂದ ಅಗಲಿರಬಾರದೆಂಬ ಪುರುಷನ ಸ್ವಾರ್ಥ ಭಾವನೆ.

೪) ಪತಿಯ ಮರಣದ ತರುವಾಯ ತನ್ನ ಬದುಕುಪಿಕೆ ಮತ್ತು ಪಾವಿತ್ರ್ಯಗಳ ಅನಿಶ್ಚಿತತೆ ಕಾರಣವಾಗಿ ಸ್ತ್ರೀವರ್ಗವೇ ಇದನ್ನು ರೂಪಿಸಿಕೊಂಡಿರಬಹುದು.

೫) ಮಹಾಸತಿ ಬಗ್ಗೆ ಬಲ್ಲಕುಂದೆ ನಾಡಿನ ಒಂದು ಶಾಸನ ಮಾತ್ರ ವಿವರ ನೀಡುತ್ತದೆ. ಕುರುಗೋಡು ಶಾಸನವೊಂದರಲ್ಲಿ (ಕ್ರಿ.ಶ. ೧೧೭೩) ಬೈಚಮನು ಕುರುಗೋಡು ಸೀಂಧರ ಅರಸ ರಾಚಮಲ್ಲನೊಡನೆ ಅಗ್ನಿ ಪ್ರವೇಶ ಮಾಡುತ್ತಾನೆ. ಆಗ ಅವನ ಪತ್ನಿಯರಾದ ಬೈಳಿಯಕ್ಕ ಮತ್ತು ಮಳ್ವಾಣಿಯಕ್ಕ ಇಬ್ಬರೂ ಬೈಚಯನೊಡನೆ ಅಗ್ನಿ ಪ್ರವೇಶ ಮಾಡಿದಂತೆ ಉಲ್ಲೇಖವಿದೆ.[೫] ಉಳಿದಂತೆ ಅಂತಹ ಉಲ್ಲೇಖಗಳು ಕಂಡುಬಂದಿಲ್ಲ.

ಶಿಕ್ಷಣ ವ್ಯವಸ್ಥೆಯ ವಿವಿಧ ಕೇಂದ್ರಗಳು

ಒಂದು ಪ್ರದೇಶದ ಪ್ರಗತಿಯ ಮಟ್ಟವನ್ನು ಅಳೆಯಲು ಅಲ್ಲಿಯ ಸಂಸ್ಕೃತಿ ಮತ್ತು ನಾಗರೀಕತೆಗಳು ಆಧಾರಗಳಾಗಿವೆ. ಬಲ್ಲಕುಂದೆ ನಾಡಿನ ವೈಶಿಷ್ಟ್ಯಪೂರ್ಣ ಸಂಸ್ಕೃತಿಯನ್ನು ರೂಪಿಸಿದ ಹಲವು ಸಾಧನೆಗಳಲ್ಲಿ ಪ್ರಾಚೀನ ಶಿಕ್ಷಣ ಪದ್ಧತಿ ಮಹತ್ವಪೂರ್ಣವೆನಿಸಿದೆ. ಅನ್ನದಾನ, ವಿದ್ಯಾದಾನ, ವಸ್ತ್ರದಾನ ಮುಂತಾದ ದಾನಗಳನ್ನು ಮಾಡುವುದರಿಂದ ಮೋಕ್ಷಸಾಧನೆಯಾಗುತ್ತದೆ ಎಂಬ ಭಾವನೆ

ನಮ್ಮಲ್ಲಿ ಸಂಪ್ರದಾಯಿಕವಾಗಿ ಬೆಳೆದುಬಂದಿದೆ. ಈ ಎಲ್ಲಾ ದಾನಗಳಲ್ಲಿ ವಿದ್ಯಾದಾನವೇ ಶ್ರೇಷ್ಠದಾನವೆಂದು ಆ ಕಾಲದಲ್ಲಿ ಪರಿಗಣಿಸಲ್ಪಟ್ಟಿತು. ಇಂತಹ ಶಿಕ್ಷಣಕ್ಕೆ ವೇದಿಕೆಯೆನಿಸಿದ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಅವುಗಳಿಗೆ ಹೇರಳವಾಗಿ ದಾನಗಳನ್ನು ನೀಡಲು ಮುಂದೆಬರುತ್ತಿದ್ದ ದಾನಿಗಳಿಂದ ಪೋಷಿತಗೊಂಡು ಅಭಿವೃದ್ಧಿಗೆ ಬಂದ ವಿದ್ಯಾಸಂಸ್ಥೆಗಳು ಬಲ್ಲಕುಂದೆ ನಾಡಿನಲ್ಲಿ ಹೇರಳವಾಗಿದ್ದವು. ಅವುಗಳಲ್ಲಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ, ಭತ್ತಗ್ರಾಮ, ದೇವಾಲಯ, ಮಠಗಳೆಂದು ಕರೆಯಲ್ಪಡುತ್ತಿದ್ದವು. ಇವು ಕೇವಲ ವಿದ್ಯಾಕೇಂದ್ರಗಳಾಗಿ ಉಳಿಯದೇ ಜನಜೀವನದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಲವು ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದವೆಂದು ಹೇಳಬಹುದು.

ಅಗ್ರಹಾರಗಳು

ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರಿಗೆ ದಾನವಾಗಿ ನೀಡುತ್ತಿದ್ದ ಭೂಮಿ ಅಥವಾ ಗ್ರಾಮಗಳನ್ನು ಅಗ್ರಹಾರಗಳೆಂದು ಕರೆಯಲಾಗಿದೆ. ಅಗ್ರಹಾರವೆಂದರೆ (ಬ್ರಾಹ್ಮಣರಿಗೆ) ಶ್ರೇಷ್ಠರಿಗೆ ಕೊಟ್ಟಿರುವಂತಹ ಸ್ಥಳ ಅಥವಾ ಊರು ಎಂದರ್ಥ.

ಅಗ್ರಹಾರಗಳನ್ನು ನೀಡುವ ಉದ್ದೇಶ

ಸಾಮಾನ್ಯವಾಗಿ ಅಗ್ರಹಾರಗಳನ್ನು ನೀಡುತ್ತಿದ್ದವರೆಂದರೆ ಅರಸರು, ಸಾಮಂತರು ಮತ್ತು ಮಹಾಮಂಡಳೇಶ್ವರರು. ಇವರು ಅಗ್ರಹಾರಗಳನ್ನು ನಿರ್ಮಿಸಿ ದಾನ ನೀಡುತ್ತಿದ್ದರು. ಇದರ ಉದ್ದೇಶವೆಂದರೆ ವಿದ್ಯೆ ಪ್ರಸಾರದೊಂದಿಗೆ ಬ್ರಾಹ್ಮಣರ ವಸತಿ ನೆಲೆಗೊಳಿಸುವುದಕ್ಕಾಗಿ ಎಂದು ಹೇಳಬಹುದು. ಕೆಲವು ಸಂದರ್ಭಗಳಲ್ಲಿ ಮಂತ್ರಿಗಳು ಮತ್ತು ಪುರೋಹಿತರುಗಳ ಕೋರಿಕೆಯ ಮೇರೆಗೆ ರಾಜರುಗಳು ಅಗ್ರಹಾರಗಳನ್ನು ನಿರ್ಮಾಣ ಮಾಡುತ್ತಿದ್ದರೆಂದು ಬಲ್ಲಕುಂದೆ ನಾಡಿನ ಶಾಸನಗಳು ಸ್ಪಷ್ಟಪಡಿಸುತ್ತವೆ.

ಅಗ್ರಹಾರಗಳಲ್ಲಿ ವಿದ್ಯಾಭ್ಯಾಸ

ಅಗ್ರಹಾರಗಳನ್ನು ದತ್ತಿಯಾಗಿ ಪಡೆದ ಬ್ರಾಹ್ಮಣರು ಮಹಾವಿದ್ವಾಂಸರಾಗಿರುವದರೊಂದಿಗೆ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು. ವೈದಿಕರಿಗೆ ವಿದ್ಯೆ ಕಲಿಯುವುದಕ್ಕೆ ನಿರ್ದಿಷ್ಟ ವಯೋಮಿತಿ ಇದ್ದಿರಲಿಲ್ಲ. ವಿದ್ಯೆ ಕಲಿಕೆ ಕೇವಲ ಬಾಲ್ಯಕ್ಕೆ ಸೀಮಿತವಾಗಿರದೇ ವೈದಿಕರು ಗೃಹಸ್ಥರಾದ ಮೇಲೂ ಅಭ್ಯಾಸವನ್ನು ಮುಂದುವರೆಸುತ್ತಿದ್ದರು. ಇದಕ್ಕೆ ಅಧ್ಯಯನ ಎಂದು ಹೆಸರು. ತಾವು ಸ್ವತಃ ಅಧ್ಯಯನ ಮಾಡುವುದಲ್ಲದೇ ಅನೇಕ ಶಿಷ್ಯರನ್ನು ಕೂಡಿಸಿಕೊಂಡು ಅವರಿಗೆ ಬೋಧನೆಯನ್ನೂ ನೀಡುತ್ತಿದ್ದರು. ಇದೇ ಅಧ್ಯಾಪನ. ವಿದ್ಯಾರ್ಥಿಯು ಗೃಹಸ್ಥನಾದ ಬಳಿಕವೂ ವಿದ್ಯಾಭ್ಯಾಸವನ್ನು ಮುಂದುವರೆಸಬಹುದಿತ್ತು. ಶಾಸನಗಳಲ್ಲಿ ಬ್ರಾಹ್ಮಣರು ಮಾಡಬೇಕಿದ್ದ ಷಟ್ಕರ್ಮಗಳನ್ನು ಹೀಗೆ ಹೇಳಿದೆ. ಯಜನ, ಯಾಜನ,

ಅಧ್ಯಯನ, ಅಧ್ಯಾಪನ, ದಾನ, ಪರಿಗ್ರಹ ಇವುಗಳನ್ನು ಮಾಡಬೇಕೆಂದು ಹೇಳಿದೆ. ಇವುಗಳು ಬಲ್ಲಕುಂದೆ ನಾಡಿನ ಅನೇಕ ಶಾಸನಗಳಲ್ಲಿ ಉಕ್ತವಾಗಿವೆ.

ಬ್ರಹ್ಮಪುರಿಗಳು

ನಗರಗಳು ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪುರಿ. ಅಗ್ರಹಾರಗಳು ಊರುಗಳಾದರೆ, ಬ್ರಹ್ಮಪುರಿಗಳು ಪಟ್ಟಣಗಳ ಭಾಗಗಳು. ಅಗ್ರಹಾರಗಳಲ್ಲಿದ್ದ ಬ್ರಾಹ್ಮಣರುಗಳು ಆ ಊರುಗಳ ಒಡೆಯರು. ಆದರೆ ಬ್ರಹ್ಮಪುರಿಗಳಲ್ಲಿದ್ದ ಬ್ರಾಹ್ಮಣರು ಆ ಊರಿನ ಇತರ ಪಂಗಡಗಳ ಜನರಿದ್ದಂತೆ ಅಷ್ಟೆ ಅನೇಕವೇಳೆ ಇವರಿಗೆ ಅದೇ ಊರಿನಲ್ಲಿ ಭೂಮಿದಾನವನ್ನು ಇವರ ಅಧ್ಯಯನ ಮತ್ತು ಅಧ್ಯಾಪನಕ್ಕಾಗಿ ನೀಡಿದ್ದರು.

ಭತ್ತಗ್ರಾಮಗಳು

ಶಾಸನಗಳಲ್ಲಿ ಭತ್ತಗ್ರಾಮದ ಉಲ್ಲೇಖಗಳನ್ನು ಗಮನಿಸಿದ ಡಾ॥ ಪಿ.ಬಿ. ದೇಸಾಯಿಯವರು ಸಂಸ್ಕೃತದ ಬಜ್ ಧಾತುವಿನಿಂದ ಭತ್ತ ಎಂಬುದು ನಿಷ್ಪನ್ನವಾಗಿದೆಯೆಂದು ಹೇಳಿದ್ದಾರೆ. ಇದಕ್ಕಾಗಿ ನೀಡಿದ ಗ್ರಾಮ ಭತ್ತಗ್ರಾಮ. ಅಂದರೆ ಈಗಿನ ಅರ್ಥದಲ್ಲಿ ಇನಾಮು ಅಥವಾ ಜಹಗೀರು ಗ್ರಾಮ ಎಂದರ್ಥೈಸಬಹುದು. ಶಾಸನಗಳಲ್ಲಿ ವಿಶೇಷವಾಗಿ ಬಳಕೆಗೊಂಡಿರುವ ಭತ್ತಗ್ರಾಮದ ಉಲ್ಲೇಖಗಳನ್ನು ಗಮನಿಸಿದರೆ ಅದು ರಾಜನು ತನ್ನ ಹೆಂಡತಿ, ಮಕ್ಕಳು ಅಥವಾ ಅಧಿಕಾರಿಗಳಿಗೆ ನೀಡಿರುವ ಸ್ವಯಮಾಡಳಿತ ಗ್ರಾಮವೆನಿಸಿದಂತಿದೆ. ಭತ್ತಗ್ರಾಮದ ಪರಿಕಲ್ಪನೆ ಚಾಳುಕ್ಯರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದುದೆಂದು, ವಿಶೇಷವಾಗಿ ಭತ್ತಗ್ರಾಮವನ್ನು ಉಪಯೋಗಿಸುವುದರಲ್ಲಿ ಚಕ್ರವರ್ತಿಗಳ ರಾಣಿಯರೇ ಪ್ರಮುಖರಾಗಿದ್ದಾರೆ. ಈ ಭತ್ತಗ್ರಾಮಗಳು ಪ್ರಮುಖ ನೀರಾವರಿ, ಕೃಷಿ ಮತ್ತು ವ್ಯಾಪಾರ ಕೇಂದ್ರಗಳಾಗಿದ್ದವೆಂದು ಈ ನಾಡಿನ ಶಾಸನಗಳು ಸ್ಪಷ್ಟಪಡಿಸುತ್ತವೆ.

ದೇವಸ್ಥಾನ ಮತ್ತು ಮಠಗಳು

ಪ್ರಾಚೀನ ಬಲ್ಲಕುಂದೆ ನಾಡಿನಲ್ಲಿ ದೇವಸ್ಥಾನಗಳು ಶೈವಯತಿಗಳ ವಾಸಸ್ಥಾನವೂ ಆಗಿದ್ದವು. ಈ ಶೈವ ಯತಿಗಳು ಇತರ ಪರಿವ್ರಾಜಕರಂತೆ ಇರದೆ, ಒಂದೇ ಕಡೆ ನೆಲೆನಿಂತ ಬಿಡಿ ಸನ್ಯಾಸಿಗಳಾಗಿದ್ದಾರೆ. ಈ ಯತಿಗಳು ತಮ್ಮ ದೈನಂದಿನ ಪೂಜಾಕಾರ್ಯಗಳ ಜೊತೆಗೆ ತಮ್ಮ ಆತ್ಮೋನ್ನತಿಗಾಗಿ ವಿದ್ಯಾದಾನವನ್ನು ಮಾಡುತ್ತಿದ್ದರು. ಹೀಗೆ ದೇವಸ್ಥಾನವು ಕೇವಲ ಭಕ್ತಿಯ ಕೇಂದ್ರವಾಗಿರದೆ ವಿದ್ಯಾಕೇಂದ್ರವಾಗಿತ್ತು. ದೇವಸ್ಥಾನಗಳು ಬಹುಮಟ್ಟಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದರೂ ಕೆಲವು ಪ್ರೌಢಶಿಕ್ಷಣ ಸಂಸ್ಥೆಗಳಾಗಿದ್ದವು.

ಘಟಿಕಾಸ್ಥಾನ

ಅಗ್ರಹಾರ, ಬ್ರಹ್ಮಪುರಿ, ದೇವಾಲಯ, ಮಠಗಳಂತೆಯೇ ಘಟಿಕಾಸ್ಥಾನಗಳೆಂದು ಹೇಳಲ್ಪಡುವ ವಿದ್ಯಾಕೇಂದ್ರ ಸಂಸ್ಥೆಗಳು ಉಚ್ಚಮಟ್ಟದ ವಿದ್ಯಾಕೇಂದ್ರಗಳೆನಿಸಿದ್ದವು. ಘಟೀ ಎನ್ನುವುದು ಘಳಿಗೆಯ ಸೂಚಕವಾದ ಅಳತೆ. ಘಳಿಗೆಯನ್ನು ಅಳೆಯುವ ಘಟಿಕಯಂತ್ರಗಳಿದ್ದ ಪ್ರೌಢ ವಿದ್ಯಾಕೇಂದ್ರಗಳೇ ಘಟಿಕಾಸ್ಥಾನಗಳು. ಕಾಲದ ಅಳತೆಗೆ ಘಟಿಕಾ ಗಡಿಗೆ ಮಡಕೆಯನ್ನು ಬಳಸುತ್ತಿದ್ದರಿಂದ ಈ ಅರ್ಥ ಬಂದಿರುವ ಸಾಧ್ಯತೆಯಿದೆ.

ಘಟಿಕಾಸ್ಥಾನವೆಂದರೆ ಉಚ್ಚಶಿಕ್ಷಣ ಕೇಂದ್ರಗಳೆಂಬ ಈ ಬಗ್ಗೆ ಅಭಿಪ್ರಾಯಭೇದವಿಲ್ಲ. ಅವುಗಳ ಸ್ವರೂಪದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಧಾರ್ಮಿಕ ಕೇಂದ್ರದಲ್ಲಿ ಬ್ರಾಹ್ಮಣರು ಒಂದೆಡೆ ಸೇರುತ್ತಿದ್ದ ಸಾರ್ವಜನಿಕ ಮಂದಿರ, ಬ್ರಹ್ಮಪುರಿ ಎಂಬ ಅಭಿಪ್ರಾಯಗಳಲ್ಲದೆ, ಉಪಾಧ್ಯಾಯರೂ, ವಿದ್ವಾಂಸರೂ, ವಿದ್ಯಾರ್ಥಿಗಳು ಒಟ್ಟಾಗಿ ಪರಸ್ಪರ ಚರ್ಚೆಯಿಂದ ಧರ್ಮದ ವಿಷಯದಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯಲು ಸಾಧ್ಯವಾಗಿದ್ದ ಸಂಸ್ಥೆ ಎಂಬ ಅಭಿಪ್ರಾಯವಿದೆ. ಉಚ್ಚಶಿಕ್ಷಣ ನೀಡುವ ಸಂಸ್ಥೆಯ ಪ್ರತಿಯೊಂದು ಕಾರ್ಯದಲ್ಲಿ ಸಮಯದ ಶಿಸ್ತು ಅನಿವಾರ್ಯವಾಗಿರುವುದರಿಂದ ಅಲ್ಲಿ ಘಟಿಕಾಯಂತ್ರಗಳನ್ನು ಸ್ಥಾಪಿಸಲಾಗುತ್ತಿತ್ತು. ಅದನ್ನು ನೋಡಿಕೊಳ್ಳಲು ಘಳಿಗೆಯ ಮಾಣಿ ಅಥವಾ ಘಳಿಯಾರದ ಮಾಣಿಯರನ್ನು ನೇಮಿಸಲಾಗುತ್ತಿತ್ತು.

ಆಯಾ ಸಮಯಕ್ಕೆ ಸರಿಯಾಗಿ ಕಾಲಸೂಚಕ ಸದ್ದನ್ನು ಮಾಡುತ್ತಿದ್ದವನೇ ಘಟಿಕಾಪ್ರಹಾರಿ. ನಿಗದಿತ ಸಮಯದಲ್ಲಿ ಗೆಲುವನ್ನು ಪಡೆಯುತ್ತಿದ್ದ ಅಥವಾ ಸಮಸ್ಯೆಯನ್ನು ಬಿಡಿಸುತ್ತಿದ್ದ ವಿದ್ವಾಂಸನನ್ನು ಘಟಿಕಾಸಾಹಸಿ, ಘಳಿಸಾಹಸಿ, ಘೈಸಾಸಿ ಎಂಬ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು.

ಆರ್ಥಿಕ ವ್ಯವಸ್ಥೆ

ಬಲ್ಲಕುಂದೆ ನಾಡಿನ ಆರ್ಥಿಕ ವ್ಯವಸ್ಥೆಯನ್ನರಿಯಲು ಶಾಸನಗಳು ವಿಪುಲವಾದ ಸಾಮಗ್ರಿಗಳನ್ನು ಒದಗಿಸುತ್ತವೆ. ಶಾಸನಗಳು ಆರ್ಥಿಕ ವ್ಯವಸ್ಥೆಯ ಒಂದು ಸಮಗ್ರ ಚಿತ್ರಣವನ್ನು ನೀಡುತ್ತವೆ. ಇದರಿಂದ ಅಂದಿನ ಕಾಲದ ಆರ್ಥಿಕ ಸ್ಥಿತಿಗತಿಗಳಾದ ಕೃಷಿ ವ್ಯವಸ್ಥೆ, ತೆರಿಗೆ, ವ್ಯಾಪಾರ, ನಾಣ್ಯ, ಉತ್ಪನ್ನ ಇತರೆ ವಿಷಯಗಳ ಬಗ್ಗೆ ತಿಳಿಯಲು ಸಾಧ್ಯವಾಗಿದೆ.

ಬಲ್ಲಕುಂದೆ ನಾಡಿನ ಭೂಪ್ರದೇಶವು ತುಂಗಭದ್ರಾ ಮತ್ತು ಹಗರಿ ನದಿಗಳ ದಡದ ಪ್ರದೇಶ ವಾಗಿರುವುದರಿಂದ ಫಲವತ್ತಾದ ಪ್ರದೇಶವಾಗಿತ್ತು. ಜಲ, ಖನಿಜ, ಅರಣ್ಯ ಸಂಪತ್ತುಗಳು ಸಮಾವೇಶಗೊಂಡಿವೆ.

ವಿದ್ವಾಂಸರಲ್ಲಿ ಭೂಮಾಲಿಕತ್ವದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಸ್ಮಿತ್, ಹಾಪ್‌ಕಿನ್ಸ್ ಮುಂತಾದ ವಿದ್ವಾಂಸರು ರಾಜನೇ ಭೂಮಿಗೆ ನಿಜವಾದ ಒಡೆಯನೆಂದು, ಕಂದಾಯವೆಂಬುದು ರೈತ ಪ್ರತಿಯಾಗಿ

ಕೊಡುವ ಬಾಡಿಗೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಜೆಯಸ್ವಾಲ್ ಮುಂತಾದ ವಿದ್ವಾಂಸರು ಭೂಮಿಗೆ ನಿಜವಾದ ಒಡೆಯ ರೈತನೇ ಹೊರತು ರಾಜನಲ್ಲವೆಂದು ರೈತನು ಕೊಡುವ ಕಂದಾಯವು ರಾಜ್ಯವನ್ನು ದೇಶವನ್ನು ರಕ್ಷಿಸುವುದಕ್ಕಾಗಿ ಕೊಡುವ ಹಣವೇ ಹೊರತು ಮತ್ತೇನು ಅಲ್ಲವೆಂದು ಅಭಿಪ್ರಾಯಪಡುತ್ತಾರೆ.

ಬಲ್ಲಕುಂದೆ ನಾಡಿನ ಭೂಮಿಯು ರಾಜನಿಗೆ ಸೇರಿತ್ತು. ಕೆಲವೆಡೆ ರಾಜ ಗ್ರಾಮದ ಮಹಾಜನರಿಗೆ, ಅಗ್ರಹಾರಗಳ ಬ್ರಾಹ್ಮಣರಿಗೆ ಹಂಚಿದ್ದ. ಮಹಾಜನರು ರಾಜನ ಭೂಮಿಯನ್ನು ಉತ್ತು ಬಿತ್ತು ಬೆಳೆದು ರಾಜನಿಗೆ ತೆರಿಗೆ ರೂಪದಲ್ಲಿ ಪ್ರತಿಫಲ ನೀಡಬೇಕಿತ್ತು. ಆದರೆ ಅಗ್ರಹಾರವಾಗಿ ರಾಜನಿಂದ ಪಡೆದ ಭೂಮಿಯ ಒಡೆತನ ಅದನ್ನು ಪಡೆದ ಬ್ರಾಹ್ಮಣನದಾಗಿತ್ತು. ಆತ ರಾಜನಿಗೆ ಯಾವುದೇ ತೆರಿಗೆ ಕೊಡುವಂತಿರಲಿಲ್ಲ. ಇದಲ್ಲದೆ ಕೆಲವೊಮ್ಮೆ ಭೂಮಿಯ ಒಡೆತನ ಆ ಪ್ರದೇಶದ ದೇವತೆಯ ಹೆಸರಿನಲ್ಲಿರುತ್ತಿತ್ತು. ಕೋಳೂರುನಿಂದ ಸಂಡೂರಿನ ಸ್ವಾಮಿಮಲೆವರೆಗಿದ್ದು ಪ್ರದೇಶ ಕಾರ್ತಿಕೇಯ ಸ್ವಾಮಿಯ ಹೆಸರಿನಲ್ಲಿತ್ತು. ಇಲ್ಲಿ ರಾಜನ ಹಸ್ತಕ್ಷೇಪವಿರಲಿಲ್ಲ. ಬಲ್ಲಕುಂದೆ ನಾಡಿನ ಅಂತಹದೇ ಇನ್ನೊಂದು ಪ್ರದೇಶವೆಂದರೆ ಹಂಪೆ. ಇಲ್ಲಿಯೂ ಈ ಗ್ರಾಮದ ಸುತ್ತಮುತ್ತ ೧೨ ಕ್ರೋಶದಷ್ಟು ಭೂಮಿ ಹಂತೆ ವಿರೂಪಾಕ್ಷನ ಸೀಮೆ ಎಂದೇ ಹೆಸರುಗೊಂಡಿತ್ತು. ಇಲ್ಲಿಯೂ ರಾಜನ ಹಸ್ತಕ್ಷೇಪವಿರಲಿಲ್ಲ. ಇಂತಹ ಕ್ಷೇತ್ರಗಳನ್ನು ಕಾಪಾಡಲು ರಾಜ ತನ್ನ ಸೈನ್ಯವನ್ನು ದೂರದಲ್ಲಿಟ್ಟು ಕಾಯುತ್ತಿದ್ದ. ಹಂಪೆಯನ್ನು ಕಾಯಲು ಕುರುಗೋಡ ಸಿಂಧರ ರಾಜನು ಅದೇ ಕ್ಷೇತ್ರದ ಮತಂಗ । ಪರ್ವತದ ಬೀಡಿನಲ್ಲಿ ಸಣ್ಣ ಸೈನ್ಯವನ್ನು ಇಟ್ಟಿದ್ದಂತೆ ಶಾಸನ ತಿಳಿಸುತ್ತದೆ.[೬] ಹೀಗಾಗಿ ಭೂಮಾಲೀಕತ್ವವು ನೇರವಾಗಿ ಕೆಲವೆಡೆ ಪರೋಕ್ಷವಾಗಿ ರಾಜನ ಅಂಕಿತದಲ್ಲಿಯೇ ಇತ್ತು. ಕೆಲವೊಮ್ಮೆ ರಾಜನ ಅನುಮತಿ ಪಡೆದ ಸ್ಥಳೀಯ ಅಧಿಕಾರಿಗಳು ಬೀಳು ಬಿದ್ದಿದ್ದ ಭೂಮಿಯನ್ನು ವ್ಯವಸಾಯಗಾರರಿಗೆ ನೀಡಿದ್ದರು.[೭] ಕೆಲವೊಮ್ಮೆ ಭೂದಾನ ಮಾಡಬೇಕಾದಲ್ಲಿ ರಾಜನ ಅನುಮತಿ ಪಡೆಯಬೇಕಿತ್ತು. ಇಲ್ಲವೇ ಮಹಾಜನರ ಅಥವಾ ಅಗ್ರಹಾರರ, ಒಡೆಯರ ಭೂಮಿಯನ್ನು ಕ್ರಯಕ್ಕೆ ಪಡೆದು ದೇವಾಲಯಕ್ಕೆ ದಾನ ನೀಡಬೇಕಿತ್ತು. ಹೀಗಾಗಿ ಭೂಮಿಗೆ ಒಡೆಯರು ರಾಜ, ರಾಜ ಪರಿವಾರದವರು, ಬ್ರಾಹ್ಮಣರಾಗಿದ್ದರು.

ಒಣಭೂಮಿಯನ್ನು ಬೇಸಾಯಕ್ಕೆಂದು ಬಿಡುವಾಗ ರಾಜನಿಗೆ ವರ್ಷಕ್ಕೆ ಇಷ್ಟು ಹಣ ಎಂದು ನೀಡಬೇಕಿತ್ತು. ಮೊದಲ ವರ್ಷ ಭೂಮಿ ಉತ್ತಿ ಬೆಳೆ ಬೆಳೆದರೆ ಒಂದು ಮತ್ತರಿಗೆ ಒಂದು ಪಣ. ಎರಡನೆಯ ವರ್ಷ ಅದೇ ಭೂಮಿಯನ್ನು ಉತ್ತಿ ಬಿತ್ತಿ ಬೆಳೆ ಬೆಳೆದರೆ ಮತ್ತರಿಗೆ ಎರಡು ಹಣ ನೀಡಬೇಕಿತ್ತು. ಮೂರನೆಯ ವರ್ಷ ಮೂರು ಹಣ, ನಾಲ್ಕನೆಯ ವರ್ಷ ನಾಲ್ಕು ಹಣದಂತೆಯೂ, ಐದನೆಯ ವರ್ಷಕ್ಕೆ ೫ ಹಣ ನೀಡಬೇಕಿತ್ತು. ಅಲ್ಲಿಂದ ಮುಂದೆ ವರ್ಷಕ್ಕೆ ಮತ್ತರಿಗೆ ಐದು ಹಣದಂತೆ ನೀಡಬೇಕಿತ್ತು.[೮] ಇದೇ ಪದ್ಧತಿ ಎಲ್ಲಾ ಕಡೆ ಇತ್ತು. ತೆಕ್ಕಲಕೋಟೆ ಶಾಸನದಲ್ಲಿ ವರ್ಷಕ್ಕೆ ಒಂದು ಮತ್ತರಿಗೆ

೧೦ ವೀಸ ಎರಡನೆಯ ವರ್ಷ ಒಂದು ಪಣ. ಮೂರನೆಯ ವರುಷ ಪಣ ನೀಡಬೇಕೆಂದಿದೆ.[೯]

ಪ್ರಾಚೀನ ಕಾಲದಿಂದ ಇಂದಿನವರೆಗೆ ಕುಟುಂಬದ ಎಲ್ಲಾ ಬೇಡಿಕೆಗಳನ್ನು ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಪೂರೈಸುವ ಭೂಮಿಯ ಒಡೆತನವು ಆರ್ಥಿಕ ವ್ಯವಸ್ಥೆಯಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ತೆರಿಗೆ ಪದ್ಧತಿ

ಬಲ್ಲಕುಂದೆ ನಾಡು ಕೃಷಿ ಪ್ರಧಾನವಾಗಿರುವುದರಿಂದ ಭೂ ಕಂದಾಯ ಸರಕಾರದ ಬಹುದೊಡ್ಡ ಉತ್ಪನ್ನದ ಮಾರ್ಗವೆನಿಸಿದೆ. ಪ್ರಾಚೀನ ಕಾಲದಿಂದಲೂ ಭೂಕಂದಾಯ ಒಂದು ಪರಂಪರೆಯಂತೆ ಸಾಗಿಬಂದಿದೆ. ಭೂಕಂದಾಯಕ್ಕೆ ಸೇರುವ ತೆರಿಗೆಗಳಲ್ಲಿ ಸಿದ್ದಾಯ, ದಶವಂಶ, ಒಕ್ಕಲುತೆರೆ, ಅರುವಣ, ಬಣವೆದೆರೆ ಮುಂತಾದವುಗಳಾಗಿವೆ.

ಸಾಮಾನ್ಯವಾಗಿ ಭೂ ಕಂದಾಯವನ್ನು ಮತ್ತರಿಗೆ ಇಂತಿಷ್ಟು ಎಂದು ನಿಗದಿಮಾಡುತ್ತಿದ್ದರೆಂಬುದನ್ನು ಹಿಂದೆಯೇ ಹೇಳಲಾಗದೆ. ಕೆಲವೊಮ್ಮೆ ನೀಡಬೇಕಾದ ದವಸವನ್ನು ಹಣದ ಲೆಕ್ಕದಲ್ಲಿ ನಿಷ್ಕರ್ಷಿಸಿ ಹಣದ ರೂಪದಲ್ಲಿ ನೀಡಬೇಕಾಗಿತ್ತು.

ಎ) ಸಿದ್ದಾಯ: ಭೂಕಂದಾಯ ಪದ್ಧತಿ ಪಾರಂಪರಿಕವಾಗಿ ನಡೆದುಕೊಂಡು ಬಂದರೂ ಸಾಗುವಳಿ ಭೂಮಿಯ ಫಲವತ್ತತೆ ಮತ್ತು ಅಳತೆಯ ಪ್ರಮಾಣಕ್ಕನುಗುಣವಾಗಿ ನಿರ್ಧರಿತವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಶಾಸನಗಳು ಕರಭೂಮಿಗಾಗಿ ವಿಶೇಷ ಭೂಮಾಪನವನ್ನು ಹೇಳಿ, ಹೀಗೆ ಮೌಲ್ಯಮಾಪನ ಮಾಡಿದ ನಂತರ ಕರಾಕರಣೆ ಮಾಡುತ್ತಿದ್ದು, ಅಂಥದನ್ನು ಸೂಕ್ತಿಸುಧಾರ್ಣವ ಸಿದ್ದಾಯ ಎಂದು ಕರೆದಿದೆ.

ಬಿ) ದಶವಂದ: ದಶಬಂಧವೆಂದರೆ ಕೆರೆಕಟ್ಟಿದ ಮೇಲೆ ಗದ್ದೆಯ ಪ್ರದೇಶದ ಮೇಲೆ ಹಾಕುತ್ತಿದ್ದ ತೆರಿಗೆ. ದಶವಂದ, ದಶಬಂಧ ಎಂದೂ ಕರೆಯಲಾಗಿದೆ. ಉತ್ಪಾದನೆಯ ಹತ್ತನೆಯ ಒಂದು ಭಾಗವನ್ನು (೧/೧೦) ತೆರಿಗೆಯಾಗಿ ಕೊಡುತ್ತಿದ್ದರೆಂದು ಹೇಳಬಹುದು. ಇದು ನೇರವಾಗಿ ರಾಜ್ಯಭಂಡಾರಕ್ಕೆ ಸೇರುತ್ತಿತ್ತು.

ಸಿ) ಒಕ್ಕಲುತೆರೆ (ಒಕ್ಕಲುದೆರೆ): ರೈತರು ಕೊಡಬೇಕಾದ ಸುಂಕದ ಹೆಸರು ಒಕ್ಕಲುದೆರೆ.

ಡಿ) ಅರುವಣ: ಈ ತೆರಿಗೆಯನ್ನು ಕುರಿತು ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅರುವಣಕ್ಕೆ ಒಂದು ತೆರಿಗೆ, ನೇಗಿಲು ತೆರಿಗೆ ಎಂಬರ್ಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ ಹೇಳಿದೆ. ಇದಕ್ಕೆ ಅರುವಣಗಳ ತೆರಿಗೆ, ಮಾನ್ಯ ಭೂಮಿಗಳ ಮೇಲಿನ ತೆರಿಗೆ, ಹೆಸರಿಗೆ ಮಾತ್ರ ತೆಗೆದುಕೊಳ್ಳುತ್ತಿದ್ದ ಭೂತೆರಿಗೆ ಇತ್ಯಾದಿಯಾಗಿ ವಿದ್ವಾಂಸರು ಅರ್ಥೈಸಿದ್ದಾರೆ.

ಭೂಮಾಪನ (ಉದ್ದಳತೆ)ಗಳು

ಹೊಲಗಳನ್ನು ಎರಡು ರೀತಿಯಾಗಿ ಅಳೆಯುತ್ತಿದ್ದರು. ಒಂದು ಅದರಲ್ಲಿ ಬಿತ್ತಬಹುದಾದ ಬೀಜದ ಪ್ರಮಾಣದ ಮೇಲೆ ಉದಾ: ಎರಡು ಸಲಗೆ ಗದ್ದೆ ಎಂದರೆ ಎರಡು ಸಲಗೆಯಷ್ಟು ಬೀಜವನ್ನು ಬಿತ್ತಬಹುದಾದ ಗದ್ದೆ ಎಂದರ್ಥ. ಹಾಗೆಯೇ ಇನ್ನೋಂದು ಪ್ರಕಾರವಾದ ಅಳತೆ ಮಾಪನಗಳಿದ್ದುದು ರಾಜಾದಿತ್ಯನು ತನ್ನ ವ್ಯವಹಾರ ಗಣಿತದಲ್ಲಿ ಹೊಲಗಳನ್ನಳೆಯಲು ಗಳೆ (ಕೋಲು) ಬಳಸುವುದನ್ನು ಒಂದೊಂದೂರಿಗೆ ಪ್ರತ್ಯೇಕವಾಗಿದ್ದ ಬಗ್ಗೆ ತಿಳಿಸುತ್ತಾನೆ.

ಬಲ್ಲಕುಂದೆ ನಾಡಿನ ಶಾಸನಗಳಲ್ಲಿ ಬೇರೆ–ಬೇರೆ ಪ್ರಮಾಣದ ಅಳತೆಗೋಲುಗಳ ಹೆಸರುಗಳಿವೆ. ೧೮ ಗೇಣ ಕೋಲು, ೩೬ ಗೇಣಕೋಲು, ೪೮ ಗೇಣಕೋಲು, ೩೨ ಗೇಣಗಳೆ, ರಾಜಮಾನಗಳೆ, ಗಂಡಭೇರುಂಡನ ೪೨ ಗೇಣಗಳೆ; ಸಿಡಿಲ ಮಾರ್ಕೊಳ್ವನ ಕೋಲು, ಮಂಡಲಗಾವನ ೪೦ ಗೇಣಗಳೆ ಮತ್ತು ಮಂಡಲಗಾವನ ಗಳೆಗಳಿದ್ದುದು ಕಾಣಬಹುದಾಗಿದೆ.

ಬಲ್ಲಕುಂದೆ ನಾಡಿನ ಆಯಾ ಊರುಗಳಿಗೆ ರಾಜನು ಅಳತೆಗೋಲುಗಳನ್ನು ನಿರ್ಧರಿಸುತ್ತಿದ್ದನು. ಕುರುಕುಂದೆಯ ಕೋಲು, ಕುರುಕುಂದೆಯ ಗಡಿಂಬ, ಕುರುಕುಂದೆಯ ಹಿರಿಯಗಡಿಂಬ, ಸಾಲುಗುಂದೆಯ ಕಲಿಯಮಗೆರೆಯ ಕೋಲುಗಳಿದ್ದುದು ತಿಳಿದುಬರುತ್ತದೆ. ವ್ಯಕ್ತಿಯ ಹೆಸರು, ಬಿರುದಿನೊಂದಿಗೆ ಕೆಲವು ಕೋಲಗಳು ಭೂ ತೆರಿಗೆಯನ್ನು ನಿರ್ಧರಿಸುವಲ್ಲಿ ಸಹಾಯಕವಾಗಿದ್ದವು. ಪಿರಿಯಕೋಲು, ಹಿರಿಯಕೋಲು, ಹಿರಿಯ ಕೋಲುಗಡಿಂಬ ಪ್ರಾಮುಖ್ಯತೆ ಪಡೆದಿದದ್ದವು. ಇವುಗಳ ಬಗ್ಗೆ ಬಲ್ಲಕುಂದೆ ನಾಡಿನ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಹಾಗೆಯೇ ಭೂಮಿಯನ್ನು ವಿವಿಧ ಅಳತೆಗಳಲ್ಲಿ ನಿರ್ಧರಿಸಿ ಅವುಗಳಿಗೆ ಮೇರೆಗಲ್ಲುಗಳನ್ನು ಹಾಕಲಾಗುತ್ತಿತ್ತು. ಇವು ಹೊಲದ ಮೇರೆ ಗುರುತಿಸುವ ಮೇರೆಗಲ್ಲುಗಳಾಗಿದ್ದವು. ಕೆಲವೊಮ್ಮೆ ದೇವಾಲಯಗಳಿಗೆ ನೀಡುವ ದಾನದ ಸ್ಥಳದ ಎಲ್ಲೆಕಲ್ಲುಗಳು ಧಾರ್ಮಿಕ ಚಿಹ್ನೆ ಹೊಂದಿರುತ್ತಿದ್ದವೆಂಬ ಬಗ್ಗೆ ಶಾಸನಗಳು ಪುಷ್ಠಿ ಕೊಡುತ್ತವೆ. ಒಟ್ಟಾರೆ ಅಳತೆಯ ಬಗ್ಗೆ ಈ ನಾಡಿನ ಶಾಸನಗಳು ತಿಳಿಸುತ್ತವೆ.

ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಅಳತೆಯ ಮಾಪನಗಳು ಬಳಕೆಯಲ್ಲಿದ್ದವು. ಸಾಮಾನ್ಯವಾಗಿ ಇವೆಲ್ಲಾ ಗೇಣಿನ ಲೆಕ್ಕದಲ್ಲಿದ್ದವು. ಕುರುಗೋಡು ಶಾಸನದಲ್ಲಿ ಅಲ್ಲಿ ಬಳಕೆಯಲ್ಲಿದ್ದ ಕೋಲಿನ ಬಗ್ಗೆ ಹಾಗೂ ನಾಣ್ಯದ ಬಗ್ಗೆ ಉಲ್ಲೇಖ ಬಂದಿದೆ.[೧೦] ಇಲ್ಲಿ ೧೮ ಗೇಣ ಕೋಲು ಬಳಕೆಯಲ್ಲಿದ್ದ ಲೊಕ್ಕಿ ಗದ್ಯಾಣಕ್ಕೆ ಇಲ್ಲಿನ ನವಿಲಚ್ಚಿನ ಪೊನ್ನು ಸಮನಾಗಿತ್ತೆಂಬ ಅಂಶವನ್ನು ತಿಳಿಸುತ್ತದೆ. ಸಿರಗುಪ್ಪ ಶಾಸನವೊಂದರಲ್ಲಿ ೩೨ ಗೇಣ ಕೋಲು ಬಳಕೆಯಲ್ಲಿತ್ತೆಂಬ ಉಲ್ಲೇಖ ಬಂದಿದೆ. ಇದೇ ತಾಲ್ಲೂಕಿನ ಹಚ್ಚೊಳ್ಳಿಯಲ್ಲಿ ಆದಿತ್ಯದೇವರ ಕೋಲು[೧೧] ಬಳಕೆಯಲ್ಲಿತ್ತು. ಇದಲ್ಲದೆ ತೆಕ್ಕಲಕೋಟೆಯಲ್ಲಿ ಹಿರಿಯ ಕೋಲು ಬಳಕೆಯಲ್ಲಿತ್ತು.[೧೨] ಇವಲ್ಲದೆ ಗಂಗನ ಗಳೆ, ನವಿಲು ಕೋಲುಗಳೂ ಬಳಕೆಯಲ್ಲಿದ್ದವು. ಶಾಸನವೊಂದರಲ್ಲಿ ಹೊಲದ ಅಳತೆಯನ್ನು ಅಳೆಯುವ ಕ್ರಮವನ್ನು ತಿಳಿಸಿದ್ದಾರೆ. ಐವತ್ತರ ಗೇಣ

ಘಳೆಯ ನೀಳದ ಭುಜೆಯಂ ದ್ವಿಗುಣಗೊಳಿಸಿ ಅಗಲದೊಳೊಂದಂ ಕೂಡಿ ಗುಣಿಸುವ ಕ್ರಮವೊಂದಿದೆ.[೧೩] ಬಹಳಷ್ಟು ಕಡೆಗಳಲ್ಲಿ ಬಳಕೆಯಲ್ಲಿರುವ ಮಾಣಿಕ್ಕೇಶ್ವರ ಕೋಲು ಈ ನಾಡಿನಲ್ಲಿ ಬಳಕೆಯದ್ದ ಸೂಚನೆಗಳಿಲ್ಲ.

ನಾಣ್ಯಗಳು

ಅತಿ ಪ್ರಾಚೀನ ಕಾಲದಲ್ಲಿ ಪದಾರ್ಥಗಳ ವಿನಿಮಯದಿಂದಲೇ ವ್ಯಾಪಾರವು ಎಲ್ಲಾ ಪ್ರದೇಶಗಳಲ್ಲಿ ನಡೆಯುತ್ತಿತ್ತು. ಈ ವಿನಿಮಯಕ್ಕೆ ನಮ್ಮ ದೇಶದಲ್ಲಿ ಎತ್ತು ಅಥವಾ ಆಕಳು ಮೇಲಿನ ಮಾನದಂಡವಾಗಿದ್ದರೆ, ಕವಡೆಗಳು ಕೆಳಗಿನ ಮಾನದಂಡಗಳಾಗಿದ್ದವು. ಬರ ಬರುತ್ತ ಧಾತುಗಳು ಶೋಧವಾದ ಮೇಲೆ ಅವುಗಳಿಂದ ನಾಣ್ಯಗಳನ್ನು ಮುದ್ರಿಸಿಕೊಳ್ಳುವ ಪದ್ಧತಿಯು ರೂಢವಾಯಿತು.

ಕಮ್ಮಟಗಳು

ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟಗಳೆಂದೂ, ಅಚ್ಚಿನ ಟಂಕಸಾಲೆಗಳೆಂದೂ ಕರೆಯುತ್ತಿದ್ದರು. ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗರನ್ನು ರಾಜನು ಕಮ್ಮಟಗಳಲ್ಲಿ ನೇಮಿಸಿಕೊಳ್ಳುತ್ತಿದ್ದನು. ಈ ಅಕ್ಕಸಾಲಿಗಳು ಅಥವಾ ಕಮ್ಮಟದೋಜಗಳು ತಾವೇ ಪ್ರತ್ಯೇಕವಾಗಿ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ಇದಕ್ಕೆ ಆಧಾರವೆಂಬಂತೆ ಈ ನಾಡಿನ ಅನೇಕ ಕಡೆಗಳಲ್ಲಿ ಟಂಕಸಾಲೆಗಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.

ಈ ನಾಡಿನ ಅನೇಕ ಶಾಸಗಳಿಂದ ತಿಳಿದುಬರುವುದೇನೆಂದರೆ, ಒಂದು ಕಮ್ಮಟಕ್ಕೆ ಒಬ್ಬ ಒಡೆಯನಿರುತ್ತಿದ್ದು, ಅವನ ಜೊತೆಯಲ್ಲಿ ಕೆಲವು ಓಜಗಳು ಅಥವಾ ಆಚಾರಿಗಳು ಸಾಂಘಿಕವಾಗಿ ದುಡಿಯುತ್ತಿದ್ದರು. ಕಮ್ಮಟವು ಚೆನ್ನಾಗಿ ಬೆಳೆದು ಒಂದು ಸಂಸ್ಥೆಯಾದ ಮೇಲೆ ಅಲ್ಲಿ ಮೂರು ರೀತಿಯ ಕೆಲಸ ಮಾಡುವವರು ಕಾಣಬರುತ್ತಾರೆ. ಚಿನ್ನಕ್ಕೆ ಗೊತ್ತಾದ ಆಕಾರವನ್ನು ಕೊಡುತ್ತಿದ್ದವನು ಬಿಡಿ ಗಮ್ಮಟವಾದರೆ, ಮುದ್ರೆಯನ್ನು ಒತ್ತುತ್ತಿದ್ದವನು ಉಂಡೆಗೆಯ ಕಮ್ಮಟವಾಗಿದ್ದರೆ. ಆನಂತರ ನಾಣ್ಯಗಳ ಅಂಚನ್ನು ಕತ್ತರಿಸಿ ಅರದಿಂದ ಉಜ್ಜಿ ಸಮನಾದ ಆಕಾರವನ್ನು ಕೊಡುತ್ತಿದ್ದವರು ಸಮಕಟ್ಟುಕಾರರಾಗಿದ್ದರು ಇವರು ನಾಣ್ಯಗಳ ತೂಕ ಮತ್ತು ಧಾತುವಿನ ಶುದ್ಧತೆಯ ಬಗ್ಗೆ ಹೆಚ್ಚಿನ ದಕ್ಷತೆ ವಹಿಸುತ್ತಿದ್ದರೆಂದು ತೋರುತ್ತದೆ. ಕುರುಗೋಡಿನಲ್ಲಿ ಕಮ್ಮಟವಿದ್ದಂತೆ ಶಾಸನಗಳಿಂದ ತಿಳಿಯುತ್ತದೆ.[೧೪]

ಗದ್ಯಾಣ ಅಥವಾ ಪೊನ್ನು

ಬಲ್ಲಕುಂದೆ ನಾಡಿನಲ್ಲಿ ಹೆಚ್ಚು ಪ್ರಸಿದ್ಧ ಮತ್ತು ಬಳಕೆಗೊಂಡ ನಾಣ್ಯಗಳು ಗದ್ಯಾಣ. ಲ್ಯಾಟಿನ್ ಭಾಷೆಯ ಗಾರ್ಡಿಯನ್‌ದಿಂದ ಈ ಪದ ಬಂದಿದೆ. ಇದು ಚಿನ್ನದ ನಾಣ್ಯವಾಗಿದ್ದರಿಂದ ಇದನ್ನು ಪೊನ್ ಅಥವಾ ಹೊನ್ನು ಎಂದು ಶಾಸನಗಳಲ್ಲಿ ಉಲ್ಲೇಖವಿದೆ. ಬಲ್ಲಕುಂದೆ ನಾಡು ಕುರುಗೋಡಿನ ಶಾಸನದಲ್ಲಿ ಈ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಗದ್ಯಾಣ ನವಿಲ ಪೊನ್ನು, ಇದು ಲೊಕ್ಕಿಗದ್ಯಾಣಕ್ಕೆ ಸಮನಾಗಿತ್ತು ಎಂದು

ಉಲ್ಲೇಖಿಸಿದೆ.[೧೫] ನವಿಲು ಪೊನ್ನು ಎಂಬುದು ಕುಡುತಿನಿಯ ಕುಮಾರಸ್ವಾಮಿ ದೇವಾಲಯದ ನೆನಪಿನಲ್ಲಿ ಹೊರಡಿಸಿದ ನಾಣ್ಯ.

ವರಾಹ

ಈ ನಾಣ್ಯ ಬಲ್ಲಕುಂದೆ ನಾಡಿನ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದರೂ ಗದ್ಯಾಣಕ್ಕೆ ಹೋಲಿಸಿದರೆ ವರಾಹದ ಸಂಖ್ಯೆ ತೀರ ಕಡಿಮೆ. ಹಂಪಿ, ಕಂಪ್ಲಿ, ಕಲ್ಕಂಬ ಇತರೆ ಸ್ಥಳಗಳಲ್ಲಿ ದೊರೆತ ಶಾಸನಗಳಲ್ಲಿ ಉಲ್ಲೇಖಗೊಂಡಿವೆ.

ಪಣ ಅಥವ ಹಣ

ಬಲ್ಲಕುಂದೆ ನಾಡಿನ ಶಾಸನಗಳಿಂದ ಈ ನಾಡಿನಲ್ಲಿ ಬಹಳ ಸ್ಥಳಗಳಲ್ಲಿ ಈ ನಾಣ್ಯಗಳು ಚಾಲ್ತಿಯಲ್ಲಿದ್ದವೆಂದು ತಿಳಿದು ಬರುತ್ತದೆ. ಇದು ಗದ್ಯಾಣಕ್ಕಿಂತ ಚಿಕ್ಕ ನಾಣ್ಯ. ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿದೆ.

ವ್ಯಾಪಾರ–ವಾಣಿಜ್ಯ

ವ್ಯಾಪಾರಕ್ಕಾಗಿ ವಸ್ತುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಭೂಮಾರ್ಗವಾಗಿಯೂ, ಜಲಮಾರ್ಗವಾಗಿಯೂ ಸಾಗಿಸಲಾಗುತ್ತಿತ್ತು. ಸಣ್ಣಮಟ್ಟ ವ್ಯಾಪಾರಿಗಳು ಸರಕುಗಳನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದರು. ಬಲ್ಲಕುಂದೆ ನಾಡಿನ ವರ್ತಕರು ಅಂದಿನ ದಿನಗಳಲ್ಲಿ ಕಿತ್ತಳೆ, ಕಬ್ಬು, ಅಡಿಕೆ, ಎಲೆ, ಭತ್ತ, ಗೋಧಿ, ಜೋಳ, ಎಣ್ಣೆ, ಮೆಣಸು, ಶುಂಠಿ, ಬೆಲ್ಲ, ಸಕ್ಕರೆ, ಸಾಸುವೆ, ಜೀರಿಗೆ, ಉಪ್ಪು, ಹಿಪ್ಪಲು, ವಿವಿಧ ಹಣ್ಣು, ವಸ್ತುಗಳು ಸರಕುಗಳನ್ನು ಎತ್ತು, ಕತ್ತೆ, ಕೋಣ ಮತ್ತು ಬಂಡಿಗಳ ಮೂಲಕ ವಿವಿಧ ಸ್ಥಳಗಳಿಗೆ ಸಾಗಿಸುತ್ತಿದ್ದರು.

ಆಹಾರ ಧಾನ್ಯಗಳನ್ನು ಹಾಗೂ ದ್ರವಪದಾರ್ಥಗಳನ್ನು ಅಳೆಯಲು ಕೊಳಗ, ಬಳ್ಳೆ, ಮಾನ, ಸೊಲ್ಲಗೆ, ಸೌಟು, ಅಡ್ಡನ, ಸೊಂಟಿಗೆ, ಸೇರು, ಗಿದ್ದ, ಪಾವು, ಚಟಾಕಿ ಮುಂತಾದ ಮಾಪನಗಳನ್ನು ವರ್ತಕರೊಂದಿಗೆ ಸಾಮಾನ್ಯ ಜನರು ಬಳಸುತ್ತಿದ್ದರು. ಈ ನಾಡಿನ ಪ್ರದೇಶದೊಂದಿಗೆ ಪ್ರಾಚೀನ ಕರ್ನಾಟಕವು ವಿದೇಶಿಯರೊಂದಿಗೆ ವ್ಯಾಪಾರ ಸಂಪರ್ಕ ಹೊಂದಿತ್ತು. ಈಜಿಪ್ಟ್, ಬ್ಯಾಬಿಲೋನಿಯಾ, ರೋಮ್‌ದೇಶಗಳೊಂದಿಗೆ ತನ್ನ ವ್ಯಾಪಾರ ಬಾಂಧವ್ಯ ಬೆಳೆಸಿಕೊಂಡಿತ್ತು ಎಂಬ ವಿಷಯ ಈ ನಾಡಿನ ಅನೇಕ ಶಾಸನಗಳಿಂದ ಮತ್ತು ಬರಹಗಳಿಂದ ತಿಳಿದುಬರುತ್ತದೆ.

ಬಲ್ಲಕುಂದೆ ನಾಡಿನಲ್ಲಿ ಆಯಾ ಮನೆತನದ ಸೇವಾವೃತ್ತಿಗನುಸಾರವಾಗಿ ಆಯಾಗಾರರಾದ ಕಂಬಾರ, ಬಡಿಗ, ನಾವಿಂದ, ಮಾದಿಗ, ಅಗಸ ಮುಂತಾದವರಿಗೆ ವರ್ಷಕ್ಕೆ ಇಂತಿಷ್ಟು ಚೀಲ ಇಲ್ಲವೇ ನಾಲ್ಕು ಮಾನ ಅಥವಾ ಎಂಟು ಮಾನಗಳನ್ನು ಇಲ್ಲವೇ ಜೋಳ, ಭತ್ತ, ದವಸ ಧಾನ್ಯಗಳನ್ನು ಮಾನಗಳಲ್ಲಿ ಅಳೆದು ನೀಡುತ್ತಿದ್ದರು.

ಕಬ್ಬು, ಅಡಿಕೆ, ಎಲೆ, ಹಣ್ಣು ಹಂಪಲು ಮುಂತಾದ ವಸ್ತುಗಳನ್ನು ಎಣಿಸಿ ಕೊಡುತ್ತಿದ್ದರು. ಅಲ್ಲದೆ ದ್ರವ ಪದಾರ್ಥಗಳಾದ ಎಣ್ಣೆ, ತುಪ್ಪಗಳಂಥ ವಸ್ತುಗಳನ್ನು ಸೌಟು, ಅದ್ದನ ಸೊಂಟಿಗೆ, ಸೇರು, ಸೊಳಸ ಮುಂತಾದ ಮಾಪನಗಳಿಂದ ಅಳೆಯುತ್ತಿದ್ದರೆಂದು ಅನೇಕ ದಾಖಲೆಗಳಿಂದ ಮತ್ತು ದೊರೆತ ಹಿಂದಿನ ಅಳತೆಯ ವಸ್ತುಗಳಿಂದ ತಿಳಿದುಬರುತ್ತದೆ.

ವರ್ತಕರು

ಸಾಮಾನ್ಯವಾಗಿ ವರ್ತಕರೆಂದರೆ ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡವರು. ಇವರಲ್ಲಿಯು ವಿಭಿನ್ನ ಪಂಗಡಗಳಿದ್ದವು. ಬಣಂಜಿಗ ಸೆಟ್ಟಿ, ವೀರಬಣಂಜು (ಸೆಟ್ಟಿ), ಬೀರರು–ಬೀರವಣಿಗರು, ವಡ್ಡವ್ಯವಹಾರಿ, ಸೆಟ್ಟಿಗುತ್ತ, ನಿಕರ, ಮುಂಮರಿದಂಡ, ನಾನಾದೇಶಿ, ಉಭಯನಾನಾದೇಶಿ, ಗವರೆಗಾತ್ರಿಗರು, ಮೂಲಿಗರು ಮುಂತಾದವರು ಈ ಪಂಗಡಗಳು ವರ್ತಕರಾಗಿದ್ದಾರೆ.

ಬಣಂಜಿಗ, ಸೆಟ್ಟಿ

ಸೆಟ್ಟಿ, ಬಣಂಜಿಗ ಎಂಬ ಕನ್ನಡ ರೂಪವು ಸಂಸ್ಕೃತದ ಶ್ರೇಷ್ಠಿನ್, ವಣಿಜ ಪದದಿಂದ ಬಂದಿದೆ. ಮೂಲದಲ್ಲಿ ವಣಿಜ ವೃತ್ತಿ ಸೂಚಿಯಾದರೆ, ಸೆಟ್ಟಿ (ಶ್ರೇಷ್ಠಿನ್) ಎಂಬುದು ಪ್ರತಿಷ್ಠಾಸೂಚಿ ಆಗಿರಬೇಕೆನಿಸುತ್ತದೆ. ನಂತರ ಎರಡು ಪದಗಳು ವೃತ್ತಿವಾಚಿಯಾಗಿ ಪರಿಣಮಿಸಿರಬಹುದು. ಕಾರಣ ಸೆಟ್ಟಿ, ಬಣಂಜಿಗ ಮೂಲತಃ ವೃತ್ತಿವಾಚಿಗಳಾಗಿದ್ದು ಕ್ರಮೇಣ ಜಾತಿ ಸೂಚಕವಾಗಿ ಬೆಳೆದವು. ಸೆಟ್ಟಿ, ಬಣಂಜಿಗ ವರ್ತಕರ ಸಮನಾರ್ಥ ಶಬ್ದಗಳು ಇವರ ವ್ಯಾಪಾರ ವೃತ್ತಿಯನ್ನು ಜೀವನೋಪಾಯದ ಸಾಧನವನ್ನಾಗಿಸಿಕೊಂಡಿದ್ದರು. ಸರಕುಗಳನ್ನು ಎತ್ತು, ಕತ್ತೆ, ಕೋಣಗಳ ಮೇಲೆ ಹೇರಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಸಂತೆ ಪಟ್ಟಣಗಳಲ್ಲಿ ವ್ಯಾಪಾರ ಮಾಡುತ್ತಿದ್ದರು.

ಇತರ ತೆರಿಗೆಗಳು

ಮೇಲಿನ ಗುಂಪಿಗೆ ಸೇರದ ಮತ್ತು ಈ ನಾಡಿನಲ್ಲಿ ಶಾಸನಗಳಲ್ಲಿ ಉಲ್ಲೇಖಗೊಂಡ ತೆರಿಗೆಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು.

ಹನ್ನಸ

ನಿಂದಿಸುವವ ಅಥವಾ ಅಪವಾದ ಮಾಡುವವರ ಮೇಲೆ ವಿಧಿಸುವ ತೆರಿಗೆಯಾಗಿರಬಹುದು. ಕೆಲವು ತೆರಿಗೆಗಳನ್ನು ಹೆಸರಿಸುವಾಗ ಹನ್ನಸದ ಉಲ್ಲೇಖವನ್ನು ಮಾಡಲಾಗಿದೆ. ಈ ಹನಸವು 'ಪನ್ನವ' ಎಂಬ ಶಬ್ದದಿಂದ ನಿಷ್ಪತ್ತಿಯಾಗಿದೆ.

ಬಿಟ್ಟಿ

ಹೆಸರೇ ಸೂಚಿಸುವಂತೆ ಬಿಟ್ಟಿ ಎಂಬುದು ಪುಕ್ಕಟೆ ಕೆಲಸವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಕೆಳವರ್ಗದ ಮತ್ತು ತೆರಿಗೆಯನ್ನು ಸಂದಾಯ ಮಾಡದ ಜನ ಬಿಟ್ಟಿ ಕೆಲಸವನ್ನು ನಿರ್ವಹಿಸುತ್ತಿದ್ದಂತೆ ತೋರುತ್ತದೆ. ರಾಜನು ತನಗೆ ಇಷ್ಟ ಬಂದಾಗ ತನ್ನ ಅಧೀನದಲ್ಲಿರುವ ಯಾರನ್ನೇ ಆಗಲಿ ಪ್ರತಿಫಲವಿಲ್ಲದೇ ಕೆಲಸ ಮಾಡುವಂತೆ ಆಜ್ಞಾಪಿಸಬಹುದಿತ್ತು. ಕೆಲ ಶಾಸನಗಳಲ್ಲಿ ಈ ವಿಷಯ ಕಂಡುಬರುತ್ತದೆ.

ದಂಡ, ದೋಷ, ಕಾಣಿಕೆಗಳು

ದಂಡ ಮತ್ತು ಕಾಣಿಕೆಗಳು ತೆರಿಗೆಯನ್ನು ಹೊರತುಪಡಿಸಿ ಆದಾಯಕ್ಕೆ ಬರುವ ಪ್ರಮುಖ ಮೂಲಗಳಾಗಿವೆ. ಗ್ರಾಮಸಭೆಗಳು, ತಪೋಧನರು ಇನ್ನಿತರರುಗಳು ಅನ್ಯಾಯ ಮಾಡಿದ ತಪ್ಪಿತಸ್ಥರಿಗೆ ದಂಡ ವಿಧಿಸುತ್ತಿದ್ದರೆಂದು ತೋರುತ್ತದೆ.[೧೬] ಶಾಸನಗಳ ಉಲ್ಲೇಖದಂತೆ ಪ್ರಮುಖ ತಪೋಧನರು ಸೇರಿ ವ್ಯಾಪಾರಿಗಳಿಗೆ ಕೆಲವು ಕಟ್ಟಳೆಗಳನ್ನು ವಿಧಿಸಿದ್ದಾರೆ. ಅವುಗಳಲ್ಲಿ ಒಂದು ಕಟ್ಟಳೆಯು ಬೀದಿಯಲ್ಲಿನ ನಡೆಮುಡಿಗೆ ಸಂಬಂಧಿಸಿದ್ದು, ಕೆಳಜಾತಿಯವರು ಯಾರೂ ಅಂಗಡಿ ಬೀದಿಯಲ್ಲಿ, ಮದುವೆಯಲ್ಲಿ ಬಂಡಿಯನ್ನೇರಿ ಬಂದರೆ ಹನ್ನೆರಡು ಗದ್ಯಾಣ ದಂಡವನ್ನು ವಿಧಿಸಲಾಗುವುದೆಂದು ಹೇಳಿದೆ.

ಕಾಣಿಕೆ

ಪ್ರಭುತ್ವದ ಬಗೆಗೆ ಭಕ್ತಿ, ಗೌರವ, ಹೆದರಿಕೆಗಳನ್ನಿಟ್ಟುಕೊಂಡು ಜನ ಅಂದು ರಾಜ್ಯ ಅಧಿಕಾರಿ ಮತ್ತು ಧಾರ್ಮಿಕ ಕಾರ್ಯಗಳಿಗಾಗಿ ಕೆಲವು ವಿಶೇಷ ಸಂದರ್ಭಗಳಲ್ಲಿ ಕಾಣಿಕೆಗಳನ್ನು ನೀಡುತ್ತಿದ್ದರು. ಕ್ರಿ.ಶ. ೧೦೮೫ರ ಬಲ್ಲಕುಂದೆಯ ಸಮೀಪದ ಎಡದೊರೆ ೨೦೦೦ ನಾಡಿನ ಶಾಸನವೊಂದರಲ್ಲಿ ಒಕ್ಕಲುತನ ಮಾಡುವವರನ್ನು ಮೇಳೆಸಾಸಿರ್ವರು ಎಂದು ಗುರುತಿಸಲಾಗಿದ್ದು, ಇವರನ್ನು ಶಾಸನದಲ್ಲಿ ಅನೇಕ ಹೆಸರುಗಳಿಂದ ಗುರುತಿಸಿದೆ/ವರ್ಣಿಸಿದೆ. ಇವರು ಮೇಳೇಶ್ವರ ದೇವಾಲಯ ಕಟ್ಟಿಸಿ ಅದಕ್ಕೆ ಕಾಣಿಕೆಗಳನ್ನು ಕೊಟ್ಟ ಪ್ರಸ್ತಾಪವಿದೆ. ಹೀಗೆ ಅನೇಕ ಶಾಸನಗಳಲ್ಲಿ ಈ ಕಾಣಿಕೆಯ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ.

ಹೀಗೆ ಬಲ್ಲಕುಂದೆ ನಾಡಿನಲ್ಲಿ ಹಿಂದಿನ ದಿನಗಳಲ್ಲಿ ವ್ಯಾಪಾರ ತೆರಿಗೆಯನ್ನು ಗಮನಿಸಿದಾಗ ಅವು ಅಂದಿನ ಜನತೆಗೆ ಹೊರಲಾರದ ಭಾರವಾಗಿರಬೇಕು. ಒಬ್ಬ ರೈತ ಮನೆ, ಹೊಲ, ತೋಟ, ತಿಪ್ಪೆ, ಬಣವೆ, ದನಕರುಗಳು, ತಾನು ಬೆಳೆದ ಬೆಳೆ ಮಾರಾಟ ಮಾಡಿದರೆ, ತನಗೆ ಅಗತ್ಯವಿದ್ದ ವಸ್ತು ಕೊಂಡರೆ ಹೀಗೆ ಎಲ್ಲಾ ಕಡೆ ಸುಂಕ ತೆತ್ತ ಬಳಿಕ ಅವನಿಗೆ ಉಳಿಯಬಹುದಾದದ್ದು ಏನು? ತೆರಿಗೆಗಳೊಂದಿಗೆ ದಂಡ, ದೋಷ, ಕಾಣಿಕೆ ಬಿಟ್ಟ ಕೆಲಸಗಳು ಸಾಮಾನ್ಯ ಜನರನ್ನು ವ್ಯವಸ್ಥಿತ ಶೋಷಣೆಗೆ ಈಡುಮಾಡಿವೆ ಎನಿಸುತ್ತದೆ. ಸುಂಕಕ್ಕೆ ಜನ ಬೇರೆ ಮಾರ್ಗವನ್ನು ಹಿಡಿದು ಇಲ್ಲವೇ ರಾತ್ರಿಹೊತ್ತು ಪ್ರಯಾಣ ಮಾಡಿ

ಅದರಿಂದ ತಪ್ಪಿಸಿಕೊಳ್ಳುತ್ತಿದ್ದುದನ್ನು ಅಂಥವರಿಗೆ ಹಿಡಿದು ದಂಡ ವಿಧಿಸುತ್ತಿದ್ದುದನ್ನು ವಚನಕಾರರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕೆಲವರು ಇದೇ ಸಮಯವೆಂದು ಸುಂಕವನ್ನು ಕೊಡುವಾಗ ಕಳ್ಳ ಹಣವನ್ನು ಕೊಡಲು ಪ್ರಯತ್ನಿಸುತ್ತಿದ್ದಿರಬೇಕು. ಹೀಗೆ ತೆರಿಗೆಯ ಕುರಿತು ಈ ನಾಡಿನ ಶಾಸನಗಳಿಂದ ದಾಖಲೆಗಳಿಂದ ತಿಳಿದುಕೊಳ್ಳಲು ಸಹಾಯವಾಗುತ್ತದೆ.

ಧಾರ್ಮಿಕ ಜೀವನ

ಕರ್ನಾಟಕವು ಪ್ರಾಚೀನ ಕಾಲದಿಂದಲೂ ಹಲವಾರು ಧರ್ಮಗಳನ್ನು ಪೋಷಿಸಿಕೊಂಡು ಬಂದಿದೆ. ಈ ಮಾತು ಸಮಗ್ರ ಕರ್ನಾಟಕದಂತೆ ಬಲ್ಲಕುಂದೆ ನಾಡಿಗೂ ಅನ್ವಯಿಸುತ್ತದೆ. ಕರ್ನಾಟಕದ ಇತಿಹಾಸದೊಂದಿಗೆ ಚತುಸ್ಸಮಯಗಳಾದ ಬೌದ್ಧ, ಜೈನ, ವೈಷ್ಣವ ಮತ್ತು ಶೈವ ಧರ್ಮಗಳು ಕಾಣಿಸಿಕೊಂಡಿವೆ. ಇವುಗಳಲ್ಲಿ ಯಾವುದು ಮೊದಲು ಯಾವುದು ಅನಂತರವೆಂದು ಖಚಿತವಾಗಿ ಹೇಳುವುದು ಸಾಧ್ಯವಿಲ್ಲವಾದರೂ ತೀರ ಪ್ರಾಚೀನ ಕಾಲದಲ್ಲಿಯೇ ಕರ್ನಾಟಕವು ವೈದಿಕ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದಿತು. ವೈದಿಕ ಸಂಸ್ಕೃತಿಯ ಚತುರ್ವರ್ಣ ಪದ್ಧತಿಯು ಕ್ರಮೇಣ ಜಾತಿಗಳಾಗಿ ಪರಿಣಮಿಸಿ ಶೋಷಣೆ ಹೆಚ್ಚಿತು. ಆಗ ಬೌದ್ಧ, ಜೈನಧರ್ಮಗಳು ಜನ್ಮತಾಳಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡವು. ಮುಂದೆ ಇವುಗಳು ಸ್ಥಳೀಯ ಮತ ಭೇದಗಳೊಂದಿಗೆ ಕೂಡಿ ಶೋಷಣೆಗಿಳಿದವು. ಇವೆಲ್ಲವುಗಳಿಂದ ಬೇಸತ್ತ ಜನತೆ ಹೊಸ ಸಿದ್ಧಾಂತ,ಸಾಮಾಜಿಕ, ಧಾರ್ಮಿಕ, ಸುಧಾರಣೆಗಾಗಿ ಕಾತರರಾದರು. ಜನತೆಯ ನೋವುಗಳಿಗೆ ಸ್ಪಂದಿಸಿದ ೧೨ನೇ ಶತಮಾನದ ಶಿವಶರಣರು ವೀರಶೈವ ಸಿದ್ಧಾಂತವನ್ನು ಮುಂದಿಟ್ಟರು.

ಬೌದ್ಧ ಧರ್ಮ

ಕರ್ನಾಟಕದಲ್ಲಿ ಬೌದ್ಧ ಧರ್ಮದ ಹೆಚ್ಚಿನ ಪ್ರಸಾರ ಪ್ರಾರಂಭವಾದುದು ಮೌರ್ಯವಂಶದ ಸಾಮ್ರಾಟ ಅಶೋಕನ ಕಾಲದಲ್ಲಿ. ಆದರೆ ಅದಕ್ಕೂ ಮುಂಚೆಯೇ ಬೌದ್ಧ ಧರ್ಮವು ದಕ್ಷಿಣ ಭಾರತದಲ್ಲಿ ಹರಡಿರುವ ಸಾಧ್ಯತೆಗಳಿವೆ. ಇದಕ್ಕೆ ಪ್ರಾಚೀನ ಬೌದ್ಧ ಸಾಹಿತ್ಯವಾದ 'ಸುತ್ತನೀಪಾತ' ಎಂಬ ಬೌದ್ಧ ಗ್ರಂಥದಲ್ಲಿ ದಕ್ಷಿಣಪಥದ ಉಲ್ಲೇಖವಿದೆ. ಇದರಲ್ಲಿ ಬಾವರಿ ಎಂಬ ವ್ಯಕ್ತಿಯನ್ನು ಹೆಸರಿಸುತ್ತಿದ್ದು, ಅವನ ಆಶ್ರಮವು ಗೋದಾವರಿ ತೀರದಲ್ಲಿತ್ತೆಂದು ತಿಳಿಸುತ್ತದೆ.[೧೭] ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮದ ಪ್ರಸಾರದ ಸ್ಪಷ್ಟ ಸೂಚನೆಗಳು ಸಿಗುವುದು ಮಹಾವಂಶ ಎಂಬ ಕೃತಿಯಲ್ಲಿ ಅದು ಇಂತಿದೆ.

"ಸಂಗೀತಿಯ ಕೊನೆಯಲ್ಲಿ ಗುರು ಥೇರಮೊಗಲಿಪುತ್ತಯ ಭವಿಷ್ಯದ ಬೆಳವಣಿಗೆಯ ಬಗೆಗೆ ಚಿಂತಿಸಿ ನೆರೆಯ ದೇಶಗಳಲ್ಲಿಯೂ ಧರ್ಮ ಪ್ರಸಾರ ಮಾಡಲು ಇಚ್ಛಿಸಿ ಕಾರ್ತಿಕಮಾಸದಲ್ಲಿ ಥೇರರನ್ನು ಬೇರೆ ಬೇರೆ ಕಡೆಗೆ ಕಳುಹಿಸುತ್ತಾನೆ. ಆ ಪ್ರಕಾರ ಕಾಶ್ಮೀರ ಗಾಂಧಾರ ದೇಶಗಳಿಗೆ ಥೇರ ಮಜ್ರಂತಿಕನನ್ನು, ಮಹೀಷ ಮಂಡಲಕ್ಕೆ ಥೇರ ಮಹಾದೇವನನ್ನು, ತೇರ ರಖ್ಖಿತ ಮುಂತಾದವರನ್ನು ವನವಾಸ

ಮುಂತಾದ ದೇಶಗಳಿಗೆ ಕಳುಹಿಸಿದಂತೆ ಹೇಳಿದೆ.[೧೮] ಇದರಿಂದ ಬೌದ್ಧ ಧರ್ಮವು ದಕ್ಷಿಣ ಭಾರತದಲ್ಲಿ ಹರಡುವ ಸಮಯದಲ್ಲಿಯೇ ಕರ್ನಾಟಕದಲ್ಲಿ ಪ್ರಚಾರಕ್ಕೆ ಬಂದಿತೆಂದು ಹೇಳಬಹುದಾಗಿದೆ.

ಅಶೋಕನು ಕರ್ನಾಟಕ ಭಾಗದಲ್ಲಿ ತನ್ನ ಧರ್ಮ ಶಾಸನಗಳನ್ನು ಹಾಕಬೇಕಾದರೆ ಅವನಿಗಿಂತ ಹಿಂದೆಯೇ ಈ ಪ್ರದೇಶದಲ್ಲಿ ಬೌದ್ಧ ಭಿಕ್ಷುಗಳು ಸಂಚರಿಸಿ ಕೆಲವು ಆಯ್ದ ಪ್ರದೇಶಗಳಲ್ಲಿ ನೆಲೆ ನಿಂತಿರಬೇಕು. ಇವರು ನೆಲೆ ನಿಂತಿದ್ದ ಪ್ರದೇಶಗಳಲ್ಲಿ ಅಶೋಕನು ಶಾಸನಗಳನ್ನು ಹಾಕಿಸಲು ಅಶೋಕನಿಗೆ ಪ್ರೇರಣೆಯೊದಗಿರಬೇಕು. ಹೀಗಾಗಿ ಕರ್ನಾಟಕ ರಾಜ್ಯದ ಅನೇಕ ಸ್ಥಳಗಳಲ್ಲಿ ಅಶೋಕನ ಶಾಸನಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ರಾಯಚೂರು ಜಿಲ್ಲೆ ಮಸ್ಕಿ ಶಾಸನವು "ದೇವನಾಂಪ್ರಿಯ ಅಶೋಕ" ಎಂಬುದಾಗಿ ಹೇಳಿರುವುದರಿಂದ ಇದು ಮೊಟ್ಟ ಮೊದಲಬಾರಿಗೆ ಭಾರತ ದೇಶದಲ್ಲಿ ಅಶೋಕನ ಬಿರುದಿನೊಂದಿಗೆ ಅವನ ಹೆಸರನ್ನು ಉಲ್ಲೇಖಿಸಿರುವ ಪ್ರಮುಖ ಶಾಸನವಾಗಿದ್ದು ಇದರಲ್ಲಿ ಪ್ರೀತಿ ಪಾತ್ರನಾದ ಅಶೋಕ ಮಹಾರಾಜನ ಉಲ್ಲೇಖ ಬಂದಿದೆ.

ಮಸ್ಕಿಯಲ್ಲಿನ ಬಂಡೆಗಲ್ಲು ಮೇಲೆ ಅಶೋಕನ ಒಂದು ಲಘು ಶಿಲಾಶಾಸನ ದೊರೆತಿದ್ದರೆ ಅದಕ್ಕೆ ಸಮೀಪವಿರುವ ಬಲ್ಲಕುಂದೆ ನಾಡಿನ ನಿಟ್ಟೂರು ಉಡೆಗೋಳಗಳಲ್ಲಿ ಅಶೋಕನ ಎರಡೆರಡು ಲಘುಶಿಲಾಶಾಸನಗಳು ದೊರೆತಿವೆ.

ಮೂರುಸ್ಥಳಗಳ ಶಾಸನಗಳಲ್ಲಿ ಒಂದು ಸಾಮ್ಯತೆಯಿದೆ. ಅದೆಂದರೆ ಅಶೋಕನ ಹೆಸರಿನ ಉಲ್ಲೇಖ ಬಂದಿರುವುದು. ದಕ್ಷಿಣ ಭಾರತದಲ್ಲಿ ಮಾತ್ರ ಹೆಚ್ಚಾಗಿ ಅಶೋಕನನ್ನು ಹೆಸರಿರುವ ಶಾಸನಗಳು ದೊರೆತಿರುವುದು ಗಮನಾರ್ಹ. ಅದರಲ್ಲೂ ಬಲ್ಲಕುಂದೆ ನಾಡಿಗೆ ಸಂಬಂಧಿಸಿದ ಉಡೆಗೋಳ ಮತ್ತು ನಿಟ್ಟೂರುಗಳಲ್ಲಿ ನಾಲ್ಕು ಶಾಸನಗಳಲ್ಲಿ ಅವನ ಹೆಸರು ಬಂದಿದೆ.

ಮೌರ್ಯರ ಕಾಲದಲ್ಲಿ ಈ ಸ್ಥಳಗಳು ಹೊಂದಿದ್ದ ಪ್ರಾಮುಖ್ಯತೆಯನ್ನು ಇವು ಸೂಚಿಸುತ್ತದೆ. ಕರ್ನಾಟಕದಲ್ಲಿ ಅಶೋಕನ ಶಾಸನಗಳು ದೊರೆತಿರುವ ಸನ್ನತಿ ಮಸ್ಕಿ, ನಿಟ್ಟೂರು, ಉಡುಗೋಳ, ಬ್ರಹ್ಮಗಿರಿ ಪ್ರದೇಶಗಳು ಒಂದು ನೇರದಲ್ಲಿದ್ದು, ಬೌದ್ಧ ಭಿಕ್ಷುಗಳು ಈ ಊರುಗಳಿಗೆ ಒಂದು ನೆಲೆಸಿರುವುದನ್ನು ತಿಳಿಯಬಹುದು. ಇನ್ನೊಂದು ಶಾಖೆ ಮಸ್ಕಿಯಿಂದ ಕೊಪ್ಪಳದ ಕಡೆಗೆ ಹೊರಟು ಗದಗ ಜಿಲ್ಲೆ ಸೇರಿರಬೇಕು.

ಬೌದ್ಧಧರ್ಮವು ಜಾತಿ ಪದ್ಧತಿಗೆ ವಿರುದ್ಧವಾದ ಧರ್ಮವಾದರೂ ಭಾರತದಲ್ಲಿ ಆರು ಬೇರೂರದಿದ್ದುದು ಆಶ್ಚರ್ಯ. ಹಾಗೆಯೇ ಬಲ್ಲಕುಂದೆ ನಾಡಿನಲ್ಲಿ ಈ ಅಶೋಕನ ಶಾಸನಗಳನ್ನು ಬಿಟ್ಟರೆ ಬೌದ್ಧ ಧರ್ಮದ ಮುಂದುವರಿಕೆಗಾಗಿ ಈ ಬಲ್ಲಕುಂದೆ ಪ್ರದೇಶದಲ್ಲಿ ಯಾವುದೇ ಕುರುಹುಗಳು ಕಂಡುಬಂದಿಲ್ಲ. ಹೀಗಾಗಿ ಅಶೋಕನ ಕಾಲಾನಂತರ ಕೆಲವು ಶತಮಾನಗಳು ಇಲ್ಲಿ ಬೌದ್ಧರಿದ್ದರ ಬಹುರಾದರೂ ಅವರು ಬಿಟ್ಟುಹೋಗಿರುವ ಕುರುಹುಗಳು ಇಲ್ಲವೆಂದರೂ ತೀರಿತು. ಕೆಲವೆಡೆ ದೊರೆಯುವ ಮೋರೆರ ಮನೆಗಳು ಮೌರ್ಯ ಕಾಲದ ಜನವಸತಿಯ ಬಗ್ಗೆ ಮಾಹಿತಿ ನೀಡಿದರೂ ಅಲ್ಲಿ

ಬೌದ್ಧ ಧರ್ಮದ ಕುರುಹುಗಳು ಕಂಡುಬಂದಿಲ್ಲ. ಈ ಮಾತು ಕೇವಲ ಬಲ್ಲಕುಂದೆ ನಾಡಿಗೆ ಮಾತ್ರ ಅನ್ವಯಿಸುವುದಿಲ್ಲ, ಕರ್ನಾಟಕಕ್ಕೆ ಅನ್ವಯಿಸುತ್ತದೆ.

ಮಸ್ಕಿ ಶಾಸನದಲ್ಲಿ[೧೯] "ಈಗ ಎರಡೂವರೆ ಸಂವತ್ಸರಗಳ ಆಚೆಯ ಕಾಲದಿಂದ ನಾನು ಬುದ್ಧದೇವನ ಅನುಯಾಯಿಯಾಗಿದ್ದೇನೆ. ಈಗ ಒಂದು ಸಂವತ್ಸರಕ್ಕೆ ಅಧಿಕ ಕಾಲದಿಂದ ನಾನು ಬುದ್ಧ ಸಂಘದಲ್ಲಿ ಆಸಕ್ತಿಯುಳ್ಳವನಾಗಿ ಶ್ರದ್ಧೆಯಿಂದ ಶ್ರಮಿಸುತ್ತಲಿದ್ದೇನೆ. ಇದರ ಫಲವಾಗಿ ಈ ಜಂಬೂ ದ್ವೀಪದಲ್ಲಿ ಹಿಂದೆ ದೇವರುಗಳು ಮಾನವರೊಡನೆ ಮಿಳಿತವಾಗಿರಲಿಲ್ಲ. ಈಗ ಮಿಳಿತರಾಗಿದ್ದಾರೆ. ನಾನು ಸಾಧಿಸಿದ ಈ ಕಾರ್ಯವನ್ನು ಬಡವನಾದವನು ಸಾಧಿಸಬಹುದು. ಆದರೆ ಆತನಿಗೆ ಧರ್ಮದಲ್ಲಿ ಶ್ರದ್ಧೆ ಮಾತ್ರ ಅವಶ್ಯಕ. ಈ ಕಾರ್ಯ ಬಲ್ಲವರಿಗೆ ಮಾತ್ರ ಸಾಧ್ಯವೆಂದು ಯಾರು ತಿಳಿಯಲಾಗದು. ಬಡವರಾಗಲಿ, ಬಲ್ಲಿದರಾಗಲಿ ಈ ಮಾತನ್ನು ತಿಳಿದುಕೊಳ್ಳಬೇಕು. ನೀವು ಈ ಮಾರ್ಗವನ್ನು ಅನುಸರಿಸುವಿರಾದರೆ, ಈ ಘನ ಸಾಧನೆ ಬಹುಕಾಲ ಬಾಳೀತು. ಒಂದೂವರೆಯಷ್ಟು ಅಭಿವೃದ್ಧಿಯಾದೀತು." ಎಂದು ವಿವರ ನೀಡಲಾಗಿದೆ. ಉಡೆಗೋಳ ಮತ್ತು ನಿಟ್ಟೂರು ಶಾಸನಗಳಲ್ಲಿಯೂ ಇದೇ ಸಂದೇಶವನ್ನು ಬರೆಯಲಾಗಿದೆ. ಇದನ್ನು ಗಮನಿಸಿದಾಗ ಬಲ್ಲಕುಂದೆ ನಾಡಿನ ನಿಟ್ಟೂರು ಮತ್ತು ಉಡೊಗೊಳಗಳಲ್ಲಿ ದೊರೆತ ಅಶೋಕನ ನಾಲ್ಕು ಶಾಸನಗಳು[೨೦] ಬೌದ್ಧ ಧರ್ಮವು ಈ ಪ್ರದೇಶದಲ್ಲಿ ೨೩೦೦ ವರ್ಷ ಹಿಂದೆಯೇ ಭದ್ರವಾಗಿ ನೆಲೆಯೂರಿತ್ತೆಂಬುದನ್ನು ಸೂಚಿಸುತ್ತದೆ. ಈ ಕಾಲಕ್ಕಾಗಲೇ ಈ ಪ್ರದೇಶಗಳು ಪ್ರಮುಖ ಧಾರ್ಮಿಕ ಹಾಗೂ ವ್ಯಾಪಾರಿ ಕೇಂದ್ರಗಳಾಗಿದ್ದವು. ಇಲ್ಲಿ ಇದ್ದಿರಬಹುದಾದ ಬೌದ್ಧ ಅವಶೇಷಗಳು ಕಾಲಾಂತರದಲ್ಲಿ ನಾಶಹೊಂದಿರಬೇಕು. ಈ ಶಾಸನಗಳಲ್ಲಿ ಅಶೋಕನು ಮಸ್ಕಿ ಶಾಸನ ಉಲ್ಲೇಖದಂತೆ ತನ್ನ ೨೫೬ನೆಯ ದಿನ ಪ್ರವಾಸದ ಕಾಲದಲ್ಲಿ ಆತ ಹೇಳಿದಂತೆ ಬರೆಯಲಾಗಿದೆ. ಪ್ರಜೆಗಳು ಮೋಕ್ಷಕ್ಕೆ ಅನುಸರಿಸಬೇಕಾದ ವಿವರಗಳನ್ನು ಇದರಲ್ಲಿ ಹೇಳಲಾಗಿದೆ. ಆದರೆ ಈ ಪ್ರದೇಶದಲ್ಲಿ ಈ ಶಾಸನಗಳ ನಂತರದ ಬೆಳವಣಿಗೆಯಾಗಿ ಇದ್ದ ಬೌದ್ಧ ಧರ್ಮದ ಸ್ಪಷ್ಟ ಸ್ವರೂಪ ತಿಳಿದುಬಂದಿಲ್ಲ. ಯಾವುದೇ ಅವಶೇಷಗಳು ಕಂಡುಬಂದಿಲ್ಲ.

ಈ ರೀತಿಯಾಗಿ ಅಶೋಕನು ಧರ್ಮ ಮತ್ತು ತನ್ಮೂಲಕ ಮೋಕ್ಷ ಬರಿ ಸಿರಿವಂತರ ಸೊತ್ತಲ್ಲ, ಕಡುಬಡವನೂ ಅದನ್ನು ಸಾಧಿಸಬಹುದು ಎಂದು ಸಾರುತ್ತಾನೆ. ಶತಮಾನಗಳ ಕಾಲ ಬಲ್ಲಕುಂದೆ ನಾಡಿನ ಪ್ರದೇಶದೊಂದಿಗೆ ಭಾರತದಾದ್ಯಂತ ಪ್ರಬಲವಾಗಿ ಮೆರೆದಿದ್ದ ಬೌದ್ಧ ಧರ್ಮವು ಕ್ರಿ.ಶ.೯-೧೦ನೇ ಶತಮಾನಗಳಲ್ಲಿ ತನ್ನ ರಾಷ್ಟ್ರೀಯ ಧರ್ಮದ ಪ್ರಧಾನ್ಯವನ್ನು ಬಹುಮಟ್ಟಿಗೆ ಕಳೆದುಕೊಂಡಿತು. ಕೆಲವೆಡೆಗಳಲ್ಲಿ ಮಾತ್ರ ಕೇವಲ ಪ್ರಾದೇಶಿಕ ಧರ್ಮವಾಗಿ ಉಳಿಯಿತು. ಕರ್ನಾಟಕದಲ್ಲಿ ಆರಂಭ ಕಾಲದಿಂದಲೂ ನೆಲಗೊಳ್ಳಲು ಪ್ರಯತ್ನಿಸಿದ ಬೌದ್ಧ ಧರ್ಮವು ಸಮಕಾಲೀನ ಧರ್ಮಗಳೊಂದಿಗಿನ ತೀವ್ರ ಸ್ಪರ್ಧೆಯನ್ನು ಎದುರಿಸಲಾರದೆ ಕ್ರಿ.ಶ.೧೦-೧೨ನೇ ಶತಮಾನಗಳ ಹೊತ್ತಿಗೆ ಬಡವಾಗಿ

ಕ್ರಿ.ಶ.೧೬ನೇ ಶತಮಾನದ ವೇಳೆಗೆ ಬಲ್ಲಕುಂದೆ ನಾಡೂ ಸೇರಿದಂತೆ ಕರ್ನಾಟಕ ರಾಜ್ಯದ ಇತರ ಪ್ರದೇಶಗಳಲ್ಲೂ ಕಣ್ಮರೆಯಾಯಿತೆಂದು ಹೇಳಬಹುದು.

ಜೈನ ಧರ್ಮ

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕ ಜೈನ ಧರ್ಮದ ಇತಿಹಾಸವೇ ಆಗಿದೆ. ಜೈನಧರ್ಮವು ಕ್ರಿ.ಪೂ.೩೦೦ರ ಸುಮಾರಿಗೆ ಮೌರ್ಯ ಸಾಮ್ರಾಟ ಚಂದ್ರಗುಪ್ತ ಹಾಗೂ ಅವನ ಗುರು ಕೊನೆಯ ಶ್ರುತ ಕೇವಲಿಯಾಗಿದ್ದ, ಭದ್ರಬಾಹುಮುನಿಗಳ ಮೂಲಕ ಕರ್ನಾಟಕವನ್ನು ಪ್ರವೇಶಿಸಿತು. ಭದ್ರಬಾಹುಮುನಿಗಳು ಉತ್ತರ ಭಾರತದಲ್ಲಿ ದೀರ್ಘಕಾಲದವರೆಗೆ ಬರಗಾಲ ಬೀಳುವುದನ್ನರಿತು ಶಿಷ್ಯರ ಸಮೇತರಾಗಿ ದಕ್ಷಿಣಕ್ಕೆ ಬಂದು ಶ್ರವಣಬೆಳಗೊಳದ ಚಿಕ್ಕಬೆಟ್ಟ (ಚಂದ್ರಗಿರಿ)ದ ಮೇಲೆ ನೆಲೆನಿಂತು ಅಲ್ಲಿಯೇ ಮರಣವನ್ನಪ್ಪಿದರು. ಚಂದ್ರಗುಪ್ತಮೌರ್ಯನು ಕೊನೆಯವರೆಗೂ ಗುರುಗಳ ಸೇವೆಯನ್ನು ಮಾಡುತ್ತಾ ನೆಲೆಸಿದ್ದನು. ಇನ್ನೊಂದು ಗುಂಪು ಶ್ರವಣಬೆಳಗೊಳದಿಂದ ಮುಂದುವರೆದು ದಕ್ಷಿಣದ ಮಥುರೆ ಪ್ರದೇಶಕ್ಕೆ ಹೋಯಿತು. ಹೀಗಾಗಿ ಶ್ರವಣಬೆಳಗೊಳ ದಕ್ಷಿಣ ಭಾರತದಲ್ಲಿಯೇ ಅತೀ ಪ್ರಾಚೀನ ಹಾಗೂ ಪವಿತ್ರ ಜೈನ ಕ್ಷೇತ್ರವಾಗಿ ಪರಿಣಮಿಸಿತು. ವರಾಂಗ ಚರಿತ್ರೆಯ ಜಟಾಸಿಂಹ ನಂದಿ ಆಚಾರ್ಯರು ಇಳಿವಯಸ್ಸಿನಲ್ಲಿ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಮರಣ ಹೊಂದಿ ಕೊಪ್ಪಳದಲ್ಲಿ ಜೈನ ಧರ್ಮದ ಪವಿತ್ರತೆಯನ್ನು ಹೆಚ್ಚಿಸಿದರು. ಬಲ್ಲಕುಂದೆ ನಾಡಿನಲ್ಲಿ ಕ್ರಿ.ಶ.೯ನೇ ಶತಮಾನದ ಅಂತ್ಯದಿಂದ ಕ್ರಿ.ಶ.೧೭-೧೮ನೇ ಶತಮಾನದವರೆಗೆ ಜೈನಧರ್ಮದ ಕುರುಹುಗಳು ಕಂಡುಬರುತ್ತವೆ. ಇವುಗಳಲ್ಲಿ ಬಲ್ಲಕುಂದೆ ನಾಡಿನ ಪ್ರದೇಶವನ್ನು ಆಳ್ವಿಕೆ ಮಾಡಿದ ರಾಜವಂಶಗಳಾದ ಗಂಗರು,ರಾಷ್ಟ್ರಕೂಟರ ಕಾಲದಲ್ಲಿ ಜೈನಧರ್ಮ ಉತ್ತುಂಗಕ್ಕೇರಿತು. ಈ ವೇಳೆಗೆ ಬಲ್ಲಕುಂದೆ ನಾಡಿನಲ್ಲಿ ಅನೇಕ ಬಸದಿಗಳು ನಿರ್ಮಾಣವಾಗುವುದರೊಂದಿಗೆ ಗಂಗವಂಶದ ರಾಣಿಯರು ಮತ್ತು ಅವರ ಪರಿವಾರದವರು ಮುನಿಗಳು ಪವಿತ್ರ ಕೊಪ್ಪಳದಂತಹ ಕ್ಷೇತ್ರಕ್ಕೆ ಬಂದು ಮುಡಿಪಿದರು. ಈ ಮುಡಿಪಿದವರ ಹೆಸರಿನಲ್ಲಿ ಅವರ ಶಿಷ್ಯರು, ಮಕ್ಕಳು,ತಾಯಿ ಮೊದಲಾದವರು ನಿಸಿಧಿ ಕಟ್ಟಿಸಿದ ಶಾಸನೋಕ್ತ ಉಲ್ಲೇಖನಗಳನ್ನು ಮುಂದೆ ವಿವರಿಸಲಾಗಿದೆ. ಸಂಘ, ಗಣ, ಗಚ್ಛ, ಅನ್ವಯ, ಬಳಿಗಳೊಂದಿಗೆ ಪ್ರಾಚೀನ ಕರ್ನಾಟಕದಲ್ಲಿ ಹೆಚ್ಚು ಪ್ರಸಾರ, ಪ್ರಸಿದ್ಧಿಯನ್ನು ಪಡೆದಿದ್ದ ಜೈನ ಧರ್ಮದ ದಿಗಂಬರ ಪಂಥ ಬಲ್ಲಕುಂದೆ ನಾಡಿನಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಈ ಪಂಥ ಒಂದೇ ಆದರೂ ಜೈನಮುನಿಗಳನ್ನು ಗುರುತಿಸುವಾಗ ಅವರ ಸಂಘ, ಗಣ, ಗಚ್ಛ, ಅನ್ವಯ ಮತ್ತು ಬಳಿಗಳನ್ನು ಹೇಳುವ ಸಂಪ್ರದಾಯವು ಬಹುಕಾಲದಿಂದಲೂ ಹೇಳುವುದು ರೂಢಿಗತವಾಗಿದೆ.

ಬಸದಿಗಳು: ಬಲ್ಲಕುಂದೆ ನಾಡಿನಲ್ಲಿ ಜೈನಧರ್ಮವು ಅಭಿವೃದ್ಧಿಯಾದಂತೆ, ಆ ಧರ್ಮಕ್ಕೆ ಸಂಬಂಧಿಸಿದ ವಾಸ್ತುಶಿಲ್ಪಗಳೊಂದಿಗೆ ಶಾಸನಗಳು ಹಾಕಿಸಲ್ಪಟ್ಟವು. ಈ ನಾಡಿನ ಶಾಸನಗಳಲ್ಲಿ ಸಿಗುವ ಮಾಹಿತಿಗಳನ್ನು ನೋಡಿದರೆ ಜಿನಾಲಯ, ಬಸದಿ, ಚೈತ್ರಾಲಯ, ಕುಶಜಿನಾಲಯ ಮೊದಲಾದ

ಪದಗಳು ಜೈನತೀರ್ಥಂಕರರಿಗೋಸ್ಕರ ಇಲ್ಲವೆ ಜೈನ ಸನ್ಯಾಸಿಗಳಿಗೋಸ್ಕರ ಕಟ್ಟಿಸಲಾದ ಆಲಯಗಳೆಂದು ಖಚಿತವಾಗುತ್ತದೆ. ಈ ರೀತಿಯ ಆಲಯಗಳನ್ನು ನಿರ್ಮಿಸುವುದಕ್ಕೆ ಅನೇಕ ಕಾರಣಗಳಿದ್ದರೂ ಜಿನ ಭಕ್ತಿಯೇ ಮುಖ್ಯವಾದುದು. ರಾಷ್ಟ್ರದ ಜನಗಳ ಚಕ್ರವರ್ತಿಯ ಕ್ಷೇಮಾಭಿವೃದ್ಧಿಯು ಇದರಿಂದ ಉಂಟಾಗುತ್ತದೆಂಬ ನಂಬಿಕೆಯು ಅನೇಕ ಶಾಸನಗಳಲ್ಲಿ ವ್ಯಕ್ತಗೊಂಡಿದೆ. ಈ ಕಾರಣಗಳಿಂದ ಅನೇಕ ಚಕ್ರವರ್ತಿಗಳು, ರಾಣಿಯರು, ಮಹಾಮಂಡಳೇಶ್ವರ, ಮಹಾಸಾಮಂತ ಮೊದಲಾದವರುಗಳು ಬಲ್ಲಕುಂದೆ ನಾಡಿನಲ್ಲಿ ಜೈನ ಬಸದಿಗಳನ್ನು ನಿರ್ಮಾಣ ಮಾಡಿದರು. ಈ ರೀತಿ ಕಟ್ಟಿಸಲಾದ ಬಸದಿಗಳಿಗೆ ತೀರ್ಥಂಕರ ಹೆಸರುಗಳನ್ನಿಡುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ಕೆಲವು ಕಡೆ ಕಟ್ಟಿಸಿದ ಚಕ್ರವರ್ತಿಗಳ ಹೆಸರಿನಿಂದಲೂ ಪ್ರಖ್ಯಾತವಾಗಿರುವ ಬಸದಿಗಳು ಕಾಣಿಸಿಕೊಳ್ಳುತ್ತವೆ. ಬಲ್ಲಕುಂದೆ ನಾಡಿನಲ್ಲಿ ಬಸದಿಗಳನ್ನು ಕಟ್ಟಿಸಿರುವ ಉಲ್ಲೇಖವು ರಾಷ್ಟ್ರಕೂಟ ವಂಶದ ಅಮೋಘವರ್ಷ ನೃಪತುಂಗನ ಕಾಲದಲ್ಲಿಯೇ ಬಸದಿಗಳ ನಿರ್ಮಾಣ ಆರಂಭವಾಗಿತ್ತು. ಗಜಜೀವಿವಂಶದ ಶತ್ರುಘ್ನನ ಕಾಲದಲ್ಲಿ ಈ ಕಾಲಕ್ಕೆ ನೊಳಂಬರಲ್ಲಿ ಘಟೆಯಂಕಕಾರ ಚಿತ್ರವೆಡಂಗ ನೊಳಂಬಾದಿರಾಜನು ಆಳುತ್ತಿದ್ದ ಇವನ ನಿಯೋಗಿ ಕೌಶಿಕಗೋತ್ರದ ಮಾಚಿಣಾಯ್ಯನನ ಮಗನಾದ ಶ್ರೀಧರನು ಬಲ್ಲಕುಂದೆಯಲ್ಲಿ ಜೈನಬಸದಿಯನ್ನು ಕಟ್ಟಿಸಿದಂತೆಯೂ ಇದಕ್ಕೆ 5 ನಿವರ್ತನದಷ್ಟು ಕಪ್ಪುಭೂಮಿಯನ್ನು ದಾನನೀಡಿದಂತೆ ಉಲ್ಲೇಖವಿದೆ. ಈ ಶ್ರೀಧರನನ್ನು ವಿಪ್ರಕದಂಬನೆಂದು ಕರೆಯಲಾಗಿದೆ.[21] ಬಲ್ಲಕುಂದೆಯಲ್ಲಿ ಬಸದಿಯೊಂದು ನಿರ್ಮಾಣ ಮಾಡಿ ಅದಕ್ಕೆ ದಾನನೀಡಿದಂತೆ ಉಲ್ಲೇಖವಿದೆ. ಈ ಬಲ್ಲಕುಂದೆ ಈ ಕಾಲಕ್ಕೆ ತೀರ್ಥವಾಗಿತ್ತೆಂಬ ಅಂಶವೂ ಈ ಶಾಸನಗಳಿಂದ ತಿಳಿಯುತ್ತದೆ. ಇದೇ ಗ್ರಾಮದ ಇನ್ನೊಂದು ಶಾಸ್ತ್ರದಲ್ಲಿ ಸಿಂಧರ ಕಾಲದಲ್ಲಿ ಕುನ್ದ ಕುನ್ದ ವಂಶದ ನಂದಿ ಸಂಘದ ದೇಶಿಗಣದ ವೀರಣನ್ದಿಮುನೀಂದ್ರನು ಉಲ್ಲೇಖ ಬಂದಿದೆ. ಈಗಾಗಿ ಇಲ್ಲಿ ಎರಡಕ್ಕಿಂತ ಹೆಚ್ಚಿನ ಬಸದಿಗಳು ಇದ್ದಂತೆ ತಿಳಿದುಬರುತ್ತದೆ.

ಸಮಾಧಿಮರಣ

ಬಲ್ಲಕುಂದೆ ನಾಡಿನಲ್ಲಿ ಸಮಾಧಿಮರಣವು ಜೈನರು ಬಹುತೇಕವಾಗಿ ಹಾರೈಸುತ್ತಿದ್ದ ಆದರ್ಶ ಮರಣವಾಗಿತ್ತು. ಜೀವನವನ್ನು ಇನ್ನು ಮುಂದುವರೆಸಲಾಗದೆನ್ನುವ ಪ್ರಸಂಗಗಳಲ್ಲಿ ಆಮರಣ ಪರ್ಯಂತ ಉಪವಾಸವಿದ್ದು, ಸ್ವಯಂ ಮರಣಹೊಂದುವ ಸಂಪ್ರದಾಯ ಜೈನರಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದ ಪದ್ಧತಿಯಾಗಿದೆ. ಜೈನರು ತೆಗೆದುಕೊಳ್ಳುವ ಇಂತಹ ಮರಣವನ್ನು ಸಮಾಧಿ, ಸಲ್ಲೇಖನ, ಸನ್ಯಾಸನ, ಮೊದಲಾದ ಪದಗಳಿಂದ ಶಾಸನಗಳಲ್ಲಿ ಕರೆಯಲಾಗಿದೆ. ಸಮಾಧಿ ಮರಣ ವ್ರತವನ್ನು ಅಂಗೀಕರಿಸಿದವನು ಅನ್ನಪಾನಾದಿಗಳನ್ನು ತ್ಯಜಿಸಿ ಎಲ್ಲಾ ರೀತಿಯ ಸ್ನೇಹ, ವೈರ ಸಂಗಗಳನ್ನು ತ್ಯಜಿಸಿ ಕರ್ಮಗಳನ್ನು ಕುರಿತು ಯೋಚಿಸಿ ಪಶ್ಚಾತ್ತಾಪ ಪಡುತ್ತಾ ಪಂಚ ಪರಮೇಷ್ಠಿಗಳನ್ನು ಧ್ಯಾನಿಸುತ್ತಾ ತನಗೆ ಉತ್ತಮ ಗತಿ ದೊರೆಯಲೆಂದು ಹಾರೈಸುತ್ತಾ ಪ್ರಾಣತ್ಯಾಗ ಮಾಡಬೇಕು. ಜೈನರ

ನಂಬಿಕೆಯ ಪ್ರಕಾರ ಮುಂದಿನ ಭವವು ಕೊನೆಯ ಗಳಿಗೆಯಲ್ಲಿ ಯಾವ ಭಾವನೆ ಮನಸ್ಸಿನಲ್ಲಿ ಉಳಿದಿರುತ್ತದೆಯೋ ಅದನ್ನು ಅನುಸರಿಸುತ್ತದೆ. ಈ ವ್ರತ್ತದ ಕಷ್ಟಗಳನ್ನು ಸಂತೋಷದಿಂದ ಸಹಿಸಿಕೊಳ್ಳಬೇಕು. ಕೆಲವರು ತಮಗೆ ಆಯಸ್ಸು, ಆರೋಗ್ಯಾದಿಗಳಿದ್ದರೂ ಜೀವನವೆಂಬುದು ಮಳೆಬಿಲ್ಲಿನಂತೆ, ಮಿಂಚಿನಂತೆ, ಮಂಜಿನಂತೆ ಸುಂದರವಾದರೂ ಕ್ಷಣಿಕವಾದುದು ಎಂಬ ವೈರಾಗ್ಯದಿಂದ ಈ ವ್ರತವನ್ನು ಅಂಗೀಕರಿಸಿ ಮಡಿದಿದ್ದಾರೆ.

ಜೈನ ಶಿಲ್ಪಗಳು

ಬಲ್ಲಕುಂದೆ ನಾಡಿನಲ್ಲಿ ಬಸದಿ, ನಿಸಧಿ, ಶಿಲ್ಪಗಳೊಂದಿಗೆ ಜೈನ ತೀರ್ಥಂಕರರ ಮೂರ್ತಿಶಿಲ್ಪಗಳು ಅನೇಕ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ಅವುಗಳಲ್ಲಿ ಬಲ್ಲಕುಂದೆ ನಗರವೂ ಪ್ರಮುಖವಾಗಿದೆ. ಬಹಳಷ್ಟು ಕಡೆಯ ಜೈನಶಿಲ್ಪಗಳು ಹಾಳಾಗಿವೆ. ಬಲ್ಲಕುಂದೆಯಲ್ಲಿ ಈಗ ರಾಷ್ಟ್ರಕೂಟರ ಕಾಲದ ಬಸದಿ ಈಗ ಇಲ್ಲ. ಅದು ಬಿದ್ದು ಹೋಗಿದೆ. ಈಗ ಕೇವಲ ಅವಶೇಷಗಲು ಮಾತ್ರ ಉಳಿದವೆ. ಬಾಗಿಲವಾಡದ ಜಾಗ, ಜಿನಬಿಂಬಗಳು ಅಲ್ಲಲ್ಲಿ ಬಿದ್ದಿವೆ. ಅವುಗಳಲ್ಲಿ ಎರಡು ಆಸೀನ ಮೂರ್ತಿಗಳಿವೆ. ಜಿನಶಿಲ್ಪ ಲಕ್ಷಣಗಳ ಪ್ರಕಾರ ಇವು ಕ್ರಿ.ಶ. ಸುಮಾರು ೧೦-೧೧ನೆಯ ಶತಮಾನಕ್ಕೆ ಸೇರುವಂತಹವಾಗಿವೆ. ಇವನ್ನು ಬಿಟ್ಟರೆ ನಮ್ಮ ಅಧ್ಯಯನದ ಅವಧಿಗೆ ಸೇರಬಹುದಾದ ಜೈನವೇಶಷಗಳು ಕಂಡುಬರುವುದಿಲ್ಲ.

ಜೈನಧರ್ಮದ ಅವನತಿ

ಬಲ್ಲಕುಂದೆ ನಾಡಿನಲ್ಲಿ ಕ್ರಿ.ಶ. ೯-೧೦ ನೆಯ ಶತಮಾನದಲ್ಲಿ ರಾಷ್ಟ್ರಕೂಟರು, ಗಂಗರು ಜೈನಧರ್ಮಕ್ಕೆ ಹೆಚ್ಚಿನ ಮನ್ನಣೆ ನೀಡಿ ಈ ಧರ್ಮ ವ್ಯಾಪಕವಾಗಿ ಹರಡಲು ಕಾರಣರಾದರು. ಆದರೆ ಇದು ಬಹುಕಾಲ ಮುಂದುವರೆಯಲಿಲ್ಲ. ಇವರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣಿ ಚಾಲುಕ್ಯರು ಹಿಂದಿನಿಂದ ಬಂದ ಧರ್ಮ ಸಹಿಷ್ಣುತೆಯ ತತ್ವವನ್ನು ಪಾಲಿಸಿಕೊಂಡು ಬಂದರು. ಇವರ ಬಳಿಕ ಅಧಿಕಾರಕ್ಕೆ ಬಂದ ಕಳಚೂರಿಗಳು, ಸೇವುಣರು, ವಾರಂಗಲ್ಲಿನ ಕಾಕತೀಯರ ಕಾಲದಲ್ಲಿ ಜೈನಧರ್ಮದ ಹಿನ್ನಡೆಯಾಯಿತು. ಕ್ರಿ.ಶ. ೧೨ ನೆಯ ಶತಮಾನದಲ್ಲಿ ಕಳಚೂರಿಗಳು ಕೆಲವೇ ವರ್ಷ ಸ್ವತಂತ್ರವಾಗಿ ರಾಜ್ಯಭಾರ ಮಾಡಿದರು. ಇವರ ಅವಧಿಯಲ್ಲಿ ವೀರಶೈವ ಧರ್ಮದ ಅಭಿವೃದ್ಧಿಗೆ ಕಾರಣರಾದ ಅನೇಕ ಶರಣರಿಂದ ಜೈನಧರ್ಮ ಅಪಘಾತಕ್ಕೀಡಾಯಿತು. ಇದರಿಂದ ಬಲ್ಲಕುಂದೆ ನಾಡಿನಲ್ಲಿ ಹಲವು ಬಸದಿಗಳು ಈಶ್ವರ ದೇವಾಲಯಗಳಾಗಿ ಪರಿವರ್ತನೆಗೊಂಡವು. ಅಲ್ಲಿದ್ದ ಜೈನ ಮೂರ್ತಿಗಳು ಬಸದಿಯಿಂದ ಹೊರದೂಡಲ್ಪಟ್ಟವು. ಈ ಹೊತ್ತಿಗೆ ಬಲ್ಲಕುಂದೆ ನಾಡಿನಲ್ಲಿ ಜೈನಧರ್ಮಿಗಳ ಸಂಖ್ಯೆ ಇಳಿಮುಖವಾಗುವುದರೊಂದಿಗೆ ಜಿನಬಸದಿಗಳು ರಕ್ಷಣೆ ಇಲ್ಲದೆ ಕ್ರೂರಕೃತ್ಯಕ್ಕೆ ಅಣಿಯಾದವು.

ಆದುದರಿಂದ ಇಂದು ಬಲ್ಲಕುಂದೆ ನಾಡಿನ ಯಾವುದೇ ಸ್ಥಳದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಬಸದಿಗಳು ಕಂಡುಬರದೆ ಕೇವಲ ಭಗ್ನಗೊಂಡ ಜಿನಶಿಲ್ಪ ಮತ್ತು ಶಾಸನಗಳನ್ನು ಕಾಣಬಹುದಾಗಿದೆ.

ಶೈವ ಧರ್ಮ

ಶೈವ ಧರ್ಮವು ಭಾರತ ಖಂಡದ ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದಾಗಿದೆ. ಇದು ವೇದ ಕಾಲಕ್ಕಿಂತಲೂ ಹಿಂದಿನದು. ಸಿಂಧೂ ಸಂಸ್ಕೃತಿಯಲ್ಲಿ ಪಶುಪತಿ(ಶಿವ)ಯ ಮುದ್ರೆಗಳು ಇದ್ದದ್ದು ಕಂಡುಬಂದಿವೆ. ಪಶುಪತಿಯನ್ನು ಆರಾಧನೆ ಮಾಡುವುದು ಮಹಾಭಾರತದ ಕಾಲದಿಂದಲೇ ರೂಢಿಯಲ್ಲಿ ಬಂದಿದೆ. ಪಶುಪತಿ ಸಿದ್ಧಾಂತದಂತೆ ಶಿವನನ್ನು ಪೂಜಿಸುವ ಜನರು ಭಾರತದಲ್ಲಿದ್ದರೆಂದು ಚೀನಾದ ಪ್ರವಾಸಿ ಹ್ಯೂಯನ್ ತ್ಸಾಂಗ್ ಹೇಳಿದ್ದಾನೆ.

ಈ ಧರ್ಮವು ಕರ್ನಾಟಕದಲ್ಲಿ ಕ್ರಿಶಕದ ಆರಂಭದಲ್ಲಿ ಪ್ರಚಲಿತವಾಗಿದ್ದರೆ, ಬಲ್ಲಕುಂದೆ ನಾಡಿನಲ್ಲಿ ಕ್ರಿ.ಶ.೭ನೇ ಶತಮಾನದಲ್ಲಿ ಆರಂಭಕ್ಕೆ ಬಂದಿತು. ನಂತರ ಕ್ರಿ.ಶ.೯ನೇ ಶತಮಾನದಿಂದ ಪ್ರಾರಂಭವಾಗಿ ಕ್ರಿ.ಶ.೧೭ನೇ ಶತಮಾನದವರೆಗೆ ಒಟ್ಟು ೧೪೦ ಶಾಸನೋಕ್ತ ಶೈವ ದೇವಾಲಯಗಳು ಬಲ್ಲಕುಂದೆ ನಾಡಿನಲ್ಲಿ ಕಂಡು ಬಂದಿವೆ.

ಶೈವಧರ್ಮವು ಕಾಶ್ಮೀರಶೈವ, ಶುದ್ಧಶೈವ, ಕಾಳಾಮುಖಿಶೈವ, ವೀರಶೈವ ಮುಂತಾದ ಪ್ರಬೇಧಗಳನ್ನು ಹೊಂದಿದ್ದರು. ಮಧ್ಯಕಾಲೀನ ಕರ್ನಾಟಕದಲ್ಲಿ ಕಾಳಾಮುಖ ಶೈವವೇ ಅತಿ ಹೆಚ್ಚು ಪ್ರಚಲಿತದಲ್ಲಿತ್ತು. ಕಾಶ್ಮೀರದಿಂದ ವಲಸೆಬಂದ ಬ್ರಾಹ್ಮಣರು ಅಲ್ಲಲ್ಲಿ ನೆಲೆಸಿದ್ದರೂ ಅವರ ಪ್ರಭಾವ ಕಡಿಮೆ. ಪ್ರಮುಖ ಗ್ರಾಮಗಳೆಲ್ಲೆಲ್ಲಾ ಕಾಳಾಮುಖ ಶೈವರು ನೆಲಸಿ ದೇವಾಯಗಳ ನಿರ್ಮಾಣ, ಮಠಗಳ ನಿರ್ವಹಣೆ ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದರು. ತಾವು ನೆಲೆಸಿದ ದೇವಾಲಯಗಳ ಸ್ಥಾನಿಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.

ಬಲ್ಲಕುಂದೆ ನಾಡಿನಲ್ಲಿ ನೆಲೆಸಿದ್ದು ಕಾಳಾಮುಖ ಯತಿಗಳು ತಮ್ಮನ್ನು ಸಿಂಹತರ್ಷೆಯ ಸನ್ತಾನ, ಅಭಿನವ ಪಾಶುಪತ ಸನ್ತಾನ, ಅಗಸ್ತೇಶ್ವರ ಸನ್ತತಿಮಠ, ಕಶ್ಮೀರ ಸನ್ತಾನ ಮುಂತಾಗಿ ಕರೆದುಕೊಂಡಿದ್ದಾರೆ. ಇವಲ್ಲದೆ ಆನೆಯಮಠ[೨೩], ಮಂಚಮಠ[೨೪] ಎಕ್ಕೋಟಿ ಚಕ್ರವರ್ತಿ ಮಠ[೨೫]ಗಳೂ ಇದ್ದವು. ಕಾಳಾಮುಖ ಶೈವ ಪಂಥದ ಗುರುಗಳನ್ನು ಲಕುಲೀಶರ ಪಂಥದವರೆಂದೂ ಕರೆಯಲಾಗಿದೆ. ಕಾಳಾಮುಖರನ್ನು ಪಾಶುಪತರೆಂದೂ ಕರೆದಿದ್ದಾರೆ.

ಈ ಪಂಥದ ಮುನಿಗಳಿಗೆ ಜೀಯ[೨೬] ರಾಸಿ[೨೭], ಪಂಡಿತ[೨೮] ಎಂಬ ವಿಶೇಷಣಗಳು ಹೆಸರಿನ ಅಂತ್ಯದಲ್ಲಿ ಬಂದಿದ್ದವು. ಉತ್ತಮರಾಣಿ[೨೯], ದೇವದಾದಿ[೩೦], ಕರೆಕಂಠ ಜೀಯ[೩೧] ಮುಂತಾದ ಲಾಕುಳ ಮುನಿಗಳ ಹೆಸರಿನಲ್ಲಿ ಈ ವಿಶೇಷಣಗಳನ್ನು ಕಾಣಬಹುದು. ಈ ಮುನಿಗಳು ಮೊದಲೇ ಹೇಳಿದಂತೆ ತಾವು ನೆಲಸಿದ್ದ ಸ್ಥಳಗಳಲ್ಲಿ ಏಕಕೂಟ ಅಥವಾ ತ್ರಿಕೂಟ ದೇವಾಲಯಗಳನ್ನು ನಿರ್ಮಿಸಿ ಅವುಗಳ

ಬಳಿಯಲ್ಲಿ ದೇವಾಲಯದ ಹೆಸರಿನಮಠವೊಂದನ್ನು ಸ್ಥಾಪಿಸಿ ಆ ಮೂಲಕ ಸಾಮಾಜಿಕ ಸೇವೆ ಮಾಡುತ್ತಿದ್ದವರು. ಈ ಪಂಥದವರು ತಾವು ಮಾಡುತ್ತಿದ್ದ ಸಮಾಜ ಸೇವೆಯ ವಿವರಗಳು ಬಲ್ಲಕುಂದೆ ನಾಡಿನ ಶಾಸನಗಳಲ್ಲಿ ದೊರೆಯದಿದ್ದರೂ ಬೇರೆಡೆಯ ಶಾಸನಗಳಲ್ಲಿ ವಿವರಗಳನ್ನು ನೀಡಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ವಿದ್ಯಾದಾನ, ವಿದ್ಯೆ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ ಅನ್ನದಾನ, ಬೋದಕರಿಗೆ ಜೀವನ ನಿರ್ವಹಣೆ, ಅತಿಥಿ ಅಭ್ಯಾಗತರ ಸತ್ಕಾರ ಮತ್ತು ತ್ಲಾಷರ ದಾನವನ್ನು ಇವರು ಮಾಡುತ್ತಿದ್ದರು. ಹೀಗಾಗಿ ಸಮಾಜದ ಒಲವನ್ನು ಗಳಿಸಿಕೊಂಡಿದ್ದರು. ಇಂತಹ ಮುನಿಗಳು ಕೋಳೂರು ಮಾದಿಜೀಯ[೩೨] ಬಾಲಶಿವಾಚಾರ್ಯ[೩೩] ಇವನನ್ನು ಶಾಸನದಲ್ಲಿ 'ಲಕುಲೀಶ್ವರಾಗಮ ಕಾಳಾಮುಖ ದರ್ಶನಂಗಳನ್ತಾಳ್ದಿ ತಪೋಲಿಲೆಗೆ ಮೈವಾಂತಿರ್ಪ್ಪಂ ಬಾಲಶಿವಾಚಾರ್ಯ ಗಣಿತ ಧೈರ್ಯನ್' ಎಂದು ಹೊಗಳಿದೆ. ಭೀಮರಾಶಿಯ ಶಿಷ್ಯ ಚೇಲರಾಶಿ[೩೪], ತ್ರೈಲೋಕ ಪಂಡಿತ[೩೫] ಸತ್ಯರಾಶಿ ಭಟಾರ[೩೬] ಉತ್ತಮರಾಶಿ ಪಂಡಿತ[೩೭], ವಾಮದೇವ, ತ್ರಿಲೋಚನದೇವ, ಕುಮಾರದೇವ, ನಿರ್ವಾಣಿದೇವ[೩೮], ಜೇಷ್ಠರಾಶಿ ಭಳಾರ[೩೯], ಕರೆ ಕಂಠಜೀಯ[೪೦], ದೇವರಾಶಿಪಂಡಿತ[೪೧], ಇನ್ನು ಮುಂತಾಗಿ ಬಲ್ಲಕುಂದೆ ನಾಡಿನಲ್ಲಿ ಕಂಡುಬರುತ್ತಾರೆ. ತಾವು ವಾಸಿಸುತ್ತಿದ್ದ ಪ್ರದೇಶದಲ್ಲಿ ತ್ರಿಕೂಟಾಚಲ ದೇವಾಲಯಗಳನ್ನು ನಿರ್ಮಿಸುವುದರ ಮೂಲಕ ತ್ರಿಮೂರ್ತಿ ಪೂಜೆಗೆ (ಬ್ರಹ್ಮ, ವಿಷ್ಣು, ಶಿವ) ಒತ್ತುಕೊಟ್ಟಿರುವುದನ್ನು ತಿಳಿಯಬಹುದು.

ದೇವಸ್ಥಾನವೆಂಬುದು ಒಂದು ಧಾರ್ಮಿಕ ಸಂಸ್ಥೆಯಾಗಿದ್ದು, ಅದರ ಕೀರ್ತಿ ಅಪಕೀರ್ತಿಗಳು ಬಹುಮಟ್ಟಿಗೆ ಅದರ ಸ್ಥಾನಪತಿಯ ಮೇಲೆ ನಿಂತಿದ್ದವು. ಸಾಮಾನ್ಯವಾಗಿ ಅಖಂಡ ಬ್ರಹ್ಮಚಾರಿಗಳಾಗಿದ್ದ ಈ ಸ್ಥಾನಪತಿಗಳ ಶಿಷ್ಯರು,ಅವರ ನಂತರ ಸ್ಥಾನಿಕರಾಗುತ್ತಿದ್ದರು. ಬ್ರಹ್ಮಚಾರಿಗಳಿಗೆ ವಿದ್ಯಾದಾನ, ಸತ್ರವನ್ನು ನಡೆಸುವುದು, ಸಂಗೀತಗಾರರಿಗೆ ವಿದ್ಯಾರ್ಥಿಗಳಿಗೆ ಅಹಾರದಾನ ಇವು ಕಾಳಾಮುಖ ಗುರುಗಳ ಕರ್ತವ್ಯಗಳಾಗಿದ್ದವು. ದೇವಾಲಯ, ಮಠ, ವಿದ್ಯಾಕೇಂದ್ರಗಳಿಂದ ಕೂಡಿದ ಸ್ಥಾನದ ಜವಾಬ್ದಾರಿ ಹೊತ್ತಿದ್ದ ಗುರುಗಳಲ್ಲಿ ಗೊರವರು ನೈಷ್ಠಿಕರಾಗಿರದಿದ್ದರೆ, ಭೋಗಸಕ್ತನಾಗಿದ್ದರೆ ವಿದ್ಯಾರ್ಥಿಗಳು ಯಾವಾಗಲೂ ವ್ಯಾಸಂಗದಲ್ಲಿ ನಿರತರಾಗಿರದಿದ್ದರೆ ಅಂತಹವರನ್ನು ಇಲ್ಲಿ ಇರಿಸಕೂಡದೆಂಬ ನಿಬಂಧನೆಯಿದೆ. ಕಾಳಾಮುಖ ಗುರುಗಳೇ ಕ್ರಮೇಣ ತಮ್ಮ ಜವಾಬ್ದಾರಿಯನ್ನು ಪರಸ್ಪರ ಇತರ ಪಂಡಿತರೊಂಡನೆ ಹಂಚಿಕೊಳ್ಳುತ್ತಿದ್ದರು.

ಕಾಳಾಮುಖ ಗುರುಗಳು ಮತ್ತು ವಿದ್ವತ್ತು

ಬಲ್ಲಕುಂದೆ ನಾಡಿನ ಪ್ರಾಚೀನ ವಿದ್ಯಾಕೇಂದ್ರಗಳಲ್ಲಿ ಅಧಿಕ ಪಾಲು ಕಾಳಾಮುಖ ಗುರುಗಳ ವಶದಲ್ಲಿದ್ದುದು ಗಮನಾರ್ಹ ಅಂಶ. ಶೈವ ಧರ್ಮಕ್ಕೆ ಸೇರಿದ ಕಾಳಾಮುಖ ಗುರುಗಳು ಅನ್ನದಾನ ಮತ್ತು ವಿದ್ಯಾದಾನಕ್ಕೆ ಆದ್ಯತೆ ನೀಡಿದ್ದುದನ್ನು ಈ ನಾಡಿನ ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಕಾಳಾಮುಖ ಗುರುಗಳನ್ನು ಶಾಸನಗಳು ಸಾಮಾನ್ಯವಾಗಿ ತಪೋಧನರೆಂದೇ ಉಲ್ಲೇಖಿಸಿವೆ.ಇವರು ಸಕಲಕಲಾರಕ್ಷ ಪ್ರವೀಣರು, ಸಮಸ್ತ ಗುಣಳಾಂಕೃತ ಸರೀರರಾತ್ರೇಯ ಪವಿತ್ರರ್ಚ್ಚತುದಸ ಪ್ರಮಾಣಸಿದ್ಧಾನ್ತ

ಪ್ರಖ್ಯಾತತಾರ್ಕಿತಕ್ರವರ್ತಿಗಳೂ ಆಗಿರುತ್ತಿದ್ದರು.ಕಾಳಾಮುಖ ಗುರುಗಳನ್ನು ಸ್ವಸ್ತಿಯಮ ನಿಯಮ ನಿಯಮಸ್ವಾಧ್ಯಾಯಧ್ಯಾನ ಧಾರಣ ಮೌನಾನುಷ್ಠಾನ ಜಪಸಮಾಧಿಶೀಲ ಇತ್ಯಾದಿ ಗುಣಸಂಪನ್ನರಾದ ತಪೋಧನರೆಂದು ಶಾಸನಗಳು ವರ್ಣಿಸಿವೆ. ಸಿಂದಗೆರೆ ಶಾಸನದಲ್ಲಿ ಇನ್ನೂ ಮುಂದುವರಿದು ಮಹೇಶ್ವರಪದ್ಮಿನೀ ರಾಜಹಂಸರು ವ್ಯಾಕರಣ ತರ್ಕ ಸಿದ್ಧಾಂತ ಕಾವ್ಯನಾಟಕನಾಟಿಕಾ ವೇದಾಭಿದಾನಾಳಂಕಾರ ಪ್ರತಿಶ್ರಿತ ಮುಂತಾಗಿ ವರ್ಣಿಸಲಾಗಿದೆ.

ಕಾಳಾಮುಖಯತಿಗಳ ನೇತೃತ್ವದಲ್ಲಿ ರಚನೆಯಾದ ತ್ರೈಪುರುಷ ದೇವಾಲಯಗಳು ಒಂದೇ ಕಲ್ಲಿನಲ್ಲಿ ಶೈವ ವೈಷ್ಣವ ಮನಸ್ಸುಗಳನ್ನು ಬೆಸೆಯುವ ಮೂಲಕ ದೇವಾಲಯದ ಸಂಸ್ಕೃತಿಯನ್ನು ವ್ಯಾಪಕವಾಗಿ ಹಬ್ಬಿಸುವ ತಂತ್ರಗಾರಿಕೆ ಇಲ್ಲಿ ಕಂಡುಬರುತ್ತದೆ. ಬಲ್ಲಕುಂದೆ ನಾಡಿನ ಅನೇಕ ಶಾಸನಗಳಲ್ಲಿ ಶೈವ–ವೈಷ್ಣವ ದೇವತೆಗಳಿಗೆ ಒಟ್ಟೊಟ್ಟಿಗೆ ದಾನಗಳನ್ನು ನೀಡಿದ ಉದಾಹರಣೆಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಈ ನಾಡಿನ ಅನೇಕ ಗ್ರಾಮಗಳಲ್ಲಿನ ಶಾಸನಗಳು ಈ ಕಾಳಾಮುಖರ ಉಳಿದ ಇತಿಹಾಸ ತಿಳಿಯಲು ಸಹಾಯಕವಾಗಿವೆ.

ಈ ಮೇಲಿನ ಎಲ್ಲಾ ಉಲ್ಲೇಖಗಳಿಂದ ಕಾಳಾಮುಖರು ಬಲ್ಲಕುಂದೆ ಧಾರ್ಮಿಕ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ಧಾರ್ಮಿಕ ಚುವಟಿಕೆಗಳ ಜೊತೆಯಲ್ಲಿ ಸಾಮಾಜಿಕ ಚಟುವಟಿಕೆಗಳಿಗೂ ಪ್ರೋತ್ಸಾಹಿಸಿದರೆಂದು ಶಾಸನಗಳಿಂದ ತಿಳಿದುಬಂದಿದೆ. ಹಲವು ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿದ ಕಾಳಾಮುಖರು ಕ್ರಿ.ಶ.೧೫ನೇ ಶತಮಾನದ ಹೊತ್ತಿಗೆ ಇಳಿಮುಖವಾದರು. ಕ್ರಿ.ಶ.೧೪–೧೫ನೇ ಶತಮಾನದ ನಂತರ ಕಾಳಾಮುಖರ ದೇವಾಲಯ ಸಂಸ್ಕೃತಿಗೆ ವೀರಶೈವ ಗುರುಗಳೇ ಪೋಷಕರಾಗಿ ಆ ಕಾರ್ಯವನ್ನು ಮುಂದುವರಿಸಿದ್ದು ವಿಪರ್ಯಾಸವಾಗಿದೆ.

ಬಲ್ಲಕುಂದೆ ನಾಡಿನಲ್ಲಿ ಕಾಳಾಮುಖರಲ್ಲದೆ ಇನ್ನೊಂದು ಗುರುಪರಂಪರೆಯೂ ಇತ್ತು. ಈ ಪರಂಪರೆ ಪಾಂಚಾಳರಿಗೆ ಸೇರಿದ್ದು, ೧೦ನೆಯ ಶತಮಾನದ ಬೊಟ್ಟಿಗನ ಕಾಲದಲ್ಲಿ ಬ್ರಹ್ಮಚಾರಿಗದಾಧರನು ಕಾರ್ತಿಕೇಯ ಹಾಗೂ ಇತರ ದೇವತೆಗಳನ್ನು ಪ್ರತಿಷ್ಠಾಪಿಸಿದಂತೆ ಉಲ್ಲೇಖವಿದೆ. ಈತನು ಕಮ್ಮಾರ ಕುಲದವನಾಗಿದ್ದು ಶಾಂಡಿಲ್ಯ ಗೋತ್ರದವನು. ಈಗಿನ ಬಂಗಾಳದೇಶದ (ಗೌಡ) ವರೇಂದ್ರಿ ಪ್ರದೇಶದ ತಡಾಗ್ರಾಮದವನಾಗಿದ್ದು, ಈ ಪ್ರದೇಶಕ್ಕೆ ಬಂದು ಒಂದು ಪರಂಪರೆಯನ್ನು ಸ್ಥಾಪಿಸುತ್ತಾನೆ.[೬೨] ಇಲ್ಲಿಂದ ಪ್ರಾರಂಭವಾದ ಈ ಗುರುಪೀಠ ಸುಮಾರು ೧೩ನೆಯ ಶತಮಾನದ ಆರಂಭದವರೆಗೆ ಈ ಪ್ರದೇಶದ ಕುಡಿತಿನಿ, ಸೊಂಡೂರು ಬಳಿಯ ಕುಮಾರಸ್ವಾಮಿ ಬೆಟ್ಟದಲ್ಲಿ ನೆಲೆನಿಂತಿದ್ದರು.

ಈ ಗುರುಪರಂಪರೆ ಹೀಗಿದೆ.

ಲೋಹಾಸನಿ ಗಧಾಧರ[೬೩] ಕ್ರಿ.ಶ. ೯೬೬

ದಂಡಾಸನಿ ಗಧಾಧರ[೪೪] ಕ್ರಿ.ಶ. ೯೭೧.

ಲೋಹಾಸನಿ ಗಧಾಧರಯ್ಯ[೪೫] ಕ್ರಿ.ಶ. ೯೮೪ ರಿಂದ ೧೦೧೪.

ದಂಡಾಸನಿದೇವ ಕ್ರಿ.ಶ. ೧೦೪೯.

ದಂಡಾಸನಿ ವಿಶ್ವರೂಪಬ್ರಹ್ಮಚಾರಿ[೪೬] ಕ್ರಿ.ಶ. ೧೦೯೮

ದಂಡಾಸನಿ ಯಶೋಧರ ಬ್ರಹ್ಮಚಾರಿ[೪೭] ಕ್ರಿ.ಶ. ೧೧೧೯

ದಂಡಾಸನಿ ಮಾಧವ ಬ್ರಹ್ಮಚಾರಿ[೪೮] ಕ್ರಿ.ಶ. ೧೧೨೦.

ವಿಷ್ಣುಕು ಬ್ರಹ್ಮಚಾರಿ[೪೯] ಕ್ರಿ.ಶ. ೧೨೦೯

ದಂಡಾಸನಿ ಲೋಹಾಸನಿ ಉದಯಾಕರ ದೇವ ಬ್ರಹ್ಮಚಾರಿ[೫೦] ಕ್ರಿ.ಶ. ೧೨೧೮

ಇವರು ಆಳುತ್ತಿದ್ದ ಪ್ರದೇಶ ಕೊಳಗಲ್ಲಿನಿಂದ ಸೊಂಡೂರು ಕುಮಾರಸ್ವಾಮಿ ಬೆಟ್ಟದವರೆಗೆ ಇದ್ದು ಈ ಪ್ರದೇಶವನ್ನು 'ಕಾರ್ತೀಕೇಯ ತಪೋವನ'ವೆಂದು ಕರೆದಿರುತ್ತಾರೆ. ಈ ಪ್ರದೇಶ ರಾಜನ ಅಧೀನದಲ್ಲಿರಲಿಲ್ಲ. ಇವರ ಭಕ್ತರನ್ನು ಸ್ಥಾನದ ಐದುವರ್ಗವೆಂದು ಹೇಳಿದೆ.[೫೧] ಈ ಐದು ವರ್ಗವು ಸುಧಾ, ಶಿಲಾ, ಕಾಷ್ಠ, ಇಷ್ಟಿಕ, ಚಿತ್ರ, ಕಾಂಚನ, ಲೋಹಾದಿಗಳಲ್ಲಿ ಅಂದೆ ಸುಣ್ಣ, ಕಲ್ಲು, ಮರ, ಇಟ್ಟಿಗೆ, ಚಿತ್ರ, ಬಂಗಾರ ಮುಂತಾದ ಲೋಹಗಳ ಕೆಲಸ ಮಾಡುತ್ತಿದ್ದವರು.[೫೨]

ಈ ಗುರುಗಳನ್ನು '....ಪಂಚಮಹಾಶಬ್ದ ಬ್ರತಜಪ ನಿಯಮ ಹೋಮ ಸಂಯುಕ್ತ ಶ್ರೀ ಕಾರ್ತ್ತಿಕೇಯ ತಪೋವನಾಧಿಪತಿಗಳು' ಎಂದು ಶಾಸನಗಳು ಕರೆದಿವೆ.[೫೩] ಈ ಕಾರ್ತಿಕೇಯ ತಪೋವನ ಎಂದು ಗುರುತಿಸುವ ಸ್ಥಳಗಳಲ್ಲಿ ಎಲ್ಲಿ ಯಾವುದೇ ಪುಣ್ಯ ಕೆಲಸವಾಗಬೇಕಿದ್ದರೂ ಈ ಸ್ವಾಮಿಗಳ ಅನುಮತಿ ಅಥವಾ ಉಪಸ್ಥಿತಿ ಇರಬೇಕಿತ್ತು.

ಇನ್ನೊಂದು ಬಗೆಯ ಗುರುಪರಂಪರೆ ಈ ನಾಡಿನಲ್ಲಿ ಉಲ್ಲೇಖವಾಗಿದೆ. ಇದೊಂದು ಹೊಸ ಬಗೆಯ ಪಂಥ. ಸಿಂಧಿಗೆರೆ ಗ್ರಾಮದ ಶಾಸನವೊಂದರಲ್ಲಿ ಎಕ್ಕೋಟಿ ಚಕ್ರವರ್ತಿ ಮಠವೆಂದಿದ್ದು ಇದರ ಗುರು ನಿರ್ವಾಣಿದೇವ.[೫೪] ಈತನ ಗುರು ಅನೇಕ ವಿದ್ಯೆಗಳಲ್ಲಿ ಪಾರಂಗತನಾಗಿದ್ದು, ಶಿವದ್ರೋಹ, ಕುಳವಿಳಯ, ಕಾಳಾನನ, ಕಾಳಾಮುಖ ಸಮಯ ಸಮುದ್ಧರಣ, ಪರವಾದಿ ಮದನ ಮಹೇಶ್ವರನಾದ ಮುಳುಗುಂದದ ಸ್ವಯಂಭುದೇವ, ಈತನ ಶಿಷ್ಯ ಎಕ್ಕೋಟಿ ಚಕ್ರವರ್ತಿ ವಾಮದೇವ, ಈತನ ಶಿಷ್ಯ ತ್ರಿಲೋಚನದೇವ, ಈತನ ಶಿಷ್ಯ ಕುಮಾರದೇವ, ಈತನ ಶಿಷ್ಯ ನಿರ್ವಾಣಿದೇವ. ಈ ನಿರ್ವಾಣಿದೇವನನ್ನು ಮೂವತ್ತ ಮೂದೇವರಾಚಾರ್ಯ ಎಂದು ಕರೆಯಲಾಗಿದೆ.[೫೫] ಈ ನಿರ್ವಾಣಿದೇವ ಸ್ವಾಮಿಯಾಗುವ ಮೊದಲು ದಶಬ್ರಹ್ಮರಾಯ ಮತ್ತು ಪಟ್ಟಮಹಾದೇವಿ ನಾಗಲಾದೇವಿಯರ ಮಗನಾಗಿದ್ದನೆಂಬ

ವಿಷಯವನ್ನು ಕ್ರಿ.ಶ. ೧೧೧೩ರ ಕೊಟ್ಟೂರು ಶಾಸನ ತಿಳಿಸುತ್ತದೆ.[೫೬] ಕೇದಾರ ಮುನಿಗಳ ಬಳಿ ಮುನಿದೀಕ್ಷೆ ಪಡೆದನೆಂಬ ಸಂಗತಿಯನ್ನು ತಿಳಿಸುತ್ತದೆ.

ವೀರಶೈವ

ಈ ಧರ್ಮದ ಪ್ರಭಾವ ಈ ನಾಡಿನಲ್ಲಿ ಅಷ್ಟಾಗಿ ಕಾಣುವುದಿಲ್ಲ. ಆದರೂ ಬಲ್ಲಕುಂದೆ ನಾಡಿನ್ನಾಳಿದ ಬಲ್ಲಕುಂದೆ ಸಿಂಧರು ಈ ಹೊಸ ಪಂಥದ ಪ್ರಭಾವಕ್ಕೆ ಸಿಕ್ಕಿದ್ದರೆಂಬ ಸಂಗತಿಯನ್ನು ಕ್ರಿ.ಶ. ೧೧೬೫ರ ಶಾಸನ ತಿಳಿಸುತ್ತದೆ. ಅದೆಂದರೆ ಗಣಗಳ ಕಲ್ಪನೆ ಸತ್ತ ಶಿವಭಕ್ತ ಶಿವಗಣವಾಗುತ್ತಾನೆಂಬ ನಂಬಿಕೆಯಿದ್ದು, ಅದರಂತೆ ಈ ಒಂದನೆಯ ರಾಚಮಲ್ಲನು ಸತ್ತು ಕೈಲಾಸಕ್ಕೆ ಹೋದನಂತೆ. ಅನಂತರ ಅವನೇ ಉದ್ಭವ ರಾಚಮಲ್ಲೇಶ್ವರ ಲಿಂಗವಾಗಿ ಕಾಣಿಸಿಕೊಂಡ ಸಂಗತಿ ಬಂದಿದೆ.[೫೭] ಬಲ್ಲಕುಂದೆ ನಾಡಿನ ಒಂದೆರು ಶಾಸನಗಳಲ್ಲಿ ವಚನಗಳ, ಹರಿಹರನ ಕಾವ್ಯದ ಪ್ರಭಾವವನ್ನು ಕಾಣಬಹುದು.[೫೮]

ಇವಲ್ಲದೆ ಬಲ್ಲಕುಂದೆ ನಾಡಿನಲ್ಲಿ ಸೂರ್ಯ, ಗಣಪತಿ, ಸಪ್ತಮಾತೃಕೆಯರ ಶಿಲ್ಪಗಳು ದೊರೆತಿದ್ದು ಇವೆಲ್ಲಾ ಶಿವಪಂಚಾರ್ಯನದಲ್ಲಿ ಬರುವ ಶಿಲ್ಪಗಳಾಗಿವೆ. ಒಂದೆರಡು ಕಡೆ ಸೂರ್ಯನ ಬಿಂಬವು ಕಮಲದಳದ ರೀತಿಯಲ್ಲಿ ದೊರೆತಿದ್ದು, ೧೨ ರಾಶಿಗಳಿಂದ ಸುತ್ತುವರಿದಂತೆ ಬಿಡಿಸಲಾಗಿದೆ. ಇಂತಹ ಕೆಲವು ಶಿಲ್ಪಗಳ ಆಧಾರದ ಮೇಲೆ ಸೌರಮತವಿತ್ತೆಂದು ಹೇಳುವುದು ಕಷ್ಟ.

ಅಡಿಟಿಪ್ಪಣಿಗಳು:

೧. ಕ.ವಿ.ಶಾ I ಬಳ್ಳಾ ೪.

೨. ಕ.ವಿ.ಶಾ I ಬಳ್ಳಾ ೪೫

೩. ಅದೇ, I ಸಿರಗು, ೨೮, ೨೯.

೪. ಅದೇ, I ಸಿರಗು, ೨೯.

೫. ಅದೇ, I ಬಳ್ಳಾ ೧೮.

೬. ಅದೇ, III ಹಂಪೆ ೫೫.

೭. ಅದೇ, I ಬಳ್ಳಾ ೩೭, ಸಿರಗು ೮, ೫೫.

೮. ಅದೇ, I ಸಿರಗು ೮

೯. ಅದೇ, I ಸಿರಗು ೫೫.

೧೦. ಅದೇ, I ಬಳ್ಳಾ ೧೨.

೧೧. ಅದೇ, I ಸಿರಗು ೧೫.

೧೨. ಅದೇ, I ಸಿರಗು ೫೪.

೧೩. ಅದೇ, I ಬಳ್ಳಾ ೩

೧೪. ಅದೇ, I ಬಳ್ಳಾ ೧೮.

೧೫. ಅದೇ, I ಬಳ್ಳಾ ೧೨.

೧೬. ಅದೇ, I ಬಳ್ಳಾ ೧೭

೧೭. ಬೌದ್ಧಾಯನ ಮಟ ೮೪.

೧೮. ಅದೇ, ಮಟ–೮೭.

೧೯. ಕ.ವಿ.ಶಾ VII ಲಿಂಗಸೂರು

೨೦. ಕ.ವಿ.ಶಾ I, ಸಿರಗು ೪೯ ರಿಂದ ೫೨.

೨೧. ಕ.ವಿ.ಶಾ I, ಸಿರಗು ೨೭.

೨೨. ಕ.ವಿ.ಶಾ I, ಸಿರಗು ೩೫.

೨೩. ಅದೇ, I ಬಳ್ಳಾ ೩೪

೨೪. ಅದೇ, I ಬಳ್ಳಾ ೩೫.

೨೫. ಅದೇ, I ಬಳ್ಳಾ ೬೧.

೨೬. ಅದೇ, I ಬಳ್ಳಾ ೭.

೨೭. ಅದೇ, I ಬಳ್ಳಾ ೩೯.

೨೮. ಅದೇ, I ಬಳ್ಳಾ ೪೦.

೨೯. ಅದೇ, I ಬಳ್ಳಾ ೫೮.

೩೦. ಅದೇ, I ಬಳ್ಳಾ ೫೯.

೩೧. ಅದೇ, I ಬಳ್ಳಾ ೬೪.

೩೨. ಅದೇ, I ಬಳ್ಳಾ ೩.

೩೩. ಅದೇ, I ಬಳ್ಳಾ ೧೮.

೩೪. ಅದೇ, I ಬಳ್ಳಾ ೪೨.

೩೫. ಅದೇ, I ಬಳ್ಳಾ ೪೪.

೩೬. ಅದೇ, I ಬಳ್ಳಾ ೫೨.

೩೭. ಅದೇ, I ಬಳ್ಳಾ ೫೮.

೩೮. ಅದೇ, I ಬಳ್ಳಾ ೬೧.

೩೯. ಅದೇ, I ಬಳ್ಳಾ ೬೩.

೪೦. ಅದೇ, I ಬಳ್ಳಾ ೬೪

೪೧. ಅದೇ, I ಸಿರಗು ೪೧.

೪೨. ಅದೇ, I ಬಳ್ಳಾ ೫೪.

೪೩. ಅದೇ, I ಬಳ್ಳಾ ೫೪.

೪೪. ಅದೇ, I ಬಳ್ಳಾ ೨೧.

೪೫. ಅದೇ, I ಬಳ್ಳಾ ೩೨.

೪೬. ಅದೇ, I ಬಳ್ಳಾ ೨೦.

೪೭. ಅದೇ, I ಬಳ್ಳಾ ೩೬.

೪೮. ಅದೇ, I ಬಳ್ಳಾ ೨೩, ೩೩.

೪೯. ಅದೇ, I ಬಳ್ಳಾ ೨೪.

೫೦. ಅದೇ, I ಬಳ್ಳಾ ೧೯.

೫೧. ಅದೇ, I ಬಳ್ಳಾ ೨೦.

೫೨. ಅದೇ, I ಬಳ್ಳಾ ೨೯.

೫೩. ಅದೇ, I ಬಳ್ಳಾ ೩೬.

೫೪. ಅದೇ, I ಬಳ್ಳಾ ೬೧.

೫೫. ಅದೇ, I ಬಳ್ಳಾ ೬೨.

೫೬. ಅದೇ, I ಕೂಡ್ಲಿಗಿ ೨೮.

೫೭. ಅದೇ, I ಬಳ್ಳಾ ೧೯.

೫೮. ಅದೇ, I ಬಳ್ಳಾ ೮, ೧೪.

ಅಧ್ಯಾಯ ೬

ಬಲ್ಲಕುಂದೆ ನಾಡಿನ ಐತಿಹಾಸಿಕ ಸ್ಥಳಗಳ ಮಹತ್ವ ಮತ್ತು ಲಕ್ಷಣಗಳು

ಅಧ್ಯಾಯ ೬

ಬಲ್ಲಕುಂದೆ ನಾಡಿನ ಐತಿಹಾಸಿಕ ಸ್ಥಳಗಳ ಮಹತ್ವ ಮತ್ತು ಲಕ್ಷಣಗಳು

ಬಲ್ಲಕುಂದೆನಾಡು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಎಷ್ಟು ಮಹತ್ವವನ್ನು ಪಡೆದಿದೆಯೋ ಅಷ್ಟೇ ಮಹತ್ವವನ್ನು ಐತಿಹಾಸಿಕವಾಗಿಯೂ ಪಡೆದುಕೊಂಡಿದೆ. ಅಶೋಕನ ಕಾಲದಿಂದ ಆರಂಭಿಸಿ ಪ್ರಾಚೀನ ಎನ್ನಬಹುದಾದ ಅನೇಕ ಕುರುಹುಗಳು ಎಲ್ಲಿ ಲಭ್ಯವಾಗಿದೆ. ಅದಕ್ಕೆ ಪುಷ್ಟೀಕರಿಸುವಂತೆ ಅನೇಕ ಐತಿಹಾಸಿಕ ಸ್ಥಳಗಳು ಮತ್ತು ದೇವಾಲಯಗಳು ಈ ನಾಡಿನಲ್ಲಿ ದೊರಕುತ್ತವೆ. ಈ ಸ್ಥಳಗಳಿಗೆ ಮತ್ತು ದೇವಾಲಯಗಳಿಗೆ ಪೌರಾಣಿಕವಾದ ಮಹತ್ವಗಳಿದ್ದು, ಸ್ಥಳ ಮಹಾತ್ಮೆಯನ್ನು ಪಡೆದುಕೊಂಡಿವೆ. ಈಗಿನ ಬಳ್ಳಾರಿ ಜಿಲ್ಲೆ, ಕೊಪ್ಪಳ ಜಿಲ್ಲೆಯನ್ನೊಳಗೊಂಡಂತೆ ಬಲ್ಲಕುಂದೆನಾಡಿನಲ್ಲಿ ಕಂಪ್ಲಿ, ಹಂಪಿ, ಕುಡುತಿನಿ, ಕುರುಗೋಡು, ಮೊದಲಾದ ಪೌರಾಣಿಕ ಸ್ಥಳಗಳಿದ್ದು, ಇವು ಬಲ್ಲಕುಂದೆ ನಾಡಿನ ಇರುವಿಕೆಯನ್ನು ಸಮರ್ಥಿಸುತ್ತವೆ. ಈ ಸ್ಥಳಗಳು ಪೌರಾಣಿಕ ಮಹತ್ವವನ್ನು ಪಡೆದಿವೆ ಎಂದು ಸೂಚಿಸಲು ಇಲ್ಲಿ ಹಲವಾರು ದೇವಾಲಯಗಳೂ ಕೂಡಾ ಕಾಣಸಿಗುತ್ತವೆ. ಇಂತಹ ಐತಿಹಾಸಿಕ ಸ್ಥಳಗಳ ಮಹತ್ವವನ್ನು ಮತ್ತು ದೇವಾಲಯಗಳ ವಿಶೇಷತೆಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಉಡೇಗೊಳ

ಉಡೇಗೊಳ ಗ್ರಾಮವು ತೆಕ್ಕಲಕೋಟೆಯ ಸಮೀಪವಿದ್ದು, ನಿಟ್ಟೂರಿನ ಹಾಗೆಯೇ ಇಲ್ಲಿಯೂ ಎರಡು ಅಶೋಕನ ಶಿಲಾ, ಲಘು ಶಿಲಾಶಾಸನಗಳು ದೊರೆತಿವೆ. ಈ ಎರಡೂ ಶಾಸನಗಳನ್ನು ನಿಟ್ಟೂರಿನಲ್ಲಿ ಬರೆದಿರುವಂತೆ ಪ್ರತ್ಯೇಕ ಹುಟ್ಟು ಗುಂಡುಗಳ ಮೇಲೆ ಬರೆಯಲಾಗಿದೆ.[೧] ಇತ್ತೀಚೆಗೆ ಈ ಶಾಸನಗಳಿಗೆ ಇಲಾಖೆಯವರು ನೆರಳಿನ ರಕ್ಷಣೆಯನ್ನು ಒದಗಿಸಿದ್ದಾರೆ. ನಿಟ್ಟೂರಿನ ಶಿಲಾಶಾಸನದಲ್ಲಿ ನಿರೂಪಿಸಿರುವಂತೆ ಇವುಗಳಲ್ಲಿಯೂ ಅಶೋಕನ ಹೆಸರಿದ್ದು, ಕರ್ನಾಟಕದ ಪ್ರಾರಂಭಿಕ ಇತಿಹಾಸಕ್ಕೆ ಮಹತ್ತರ ಕೊಡುಗೆಯನ್ನು ಕೊಟ್ಟಿವೆ. ಅಶೋಕನ ಹೆಸರುಳ್ಳ ಶಾಸನಗಳು ಕರ್ನಾಟಕದಲ್ಲಿ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಹಾಗೂ ಇದೇ ಉಡಗೊಳದ ಸಮೀಪದ ನಿಟ್ಟೂರಿನಲ್ಲಿಯೂ ದೊರೆತಿವೆ. ಇತ್ತೀಚೆಗೆ ಸನ್ನತಿಯಲ್ಲಿ ಅಶೋಕನ ಶಿಲ್ಪ ಫಲಕವೊಂದು ದೊರೆತಿದ್ದು, ಅದರಲ್ಲಿ 'ಅಸೋಕೋ ರಾಜ' ಎಂಬ ಒಕ್ಕಣೆಯುಳ್ಳ ಕ್ರಿ.ಶ. ಎರಡನೇ ಶತಮಾನಕ್ಕೆ ಸೇರಬಲ್ಲ ಶಾಸನ ದೊರೆತಿದೆ. ಈ ಉದಾಹರಣೆಗಳನ್ನು ಗಮನಿಸಿದಾಗ ದೇವನಾಂಪ್ರಿಯ, ಪ್ರಿಯದರ್ಶಿ ರಾಜನು ಈ ಪ್ರದೇಶದಲ್ಲಿ ಅಶೋಕನೆಂದೇ ಪ್ರಸಿದ್ಧಿ ಪಡೆದಿದ್ದ. ಈ ಪ್ರದೇಶಗಳಾದ ಉಡೇಗೊಳ ಮತ್ತು ನಿಟ್ಟೂರು ಅಶೋಕನ ಕಾಲದ ಪ್ರಸಿದ್ಧ ಧಾರ್ಮಿಕ ಹಾಗೂ ವಾಣಿಜ್ಯ ಕೇಂದ್ರವಾಗಿತ್ತೆಂದು ಹೇಳಬಹುದಾಗಿದೆ.

ಒರುವಾಯಿ

೧. ರಾಮಲಿಂಗೇಶ್ವರ ದೇವಾಲಯ

ಒರುವಾಯಿ ಬಳ್ಳಾರಿ ತಾಲೂಕಿನ ಕುರುಗೋಡಿಗೆ ಸಮೀಪವಿದೆ. ಈ ಗ್ರಾಮದ ಪ್ರಾಚೀನ ಶಾಸನವೆಂದರೆ ಕ್ರಿ.ಶ. ೧೦೩೬ ರ ಚಾಲುಕ್ಯ ಅರಸ ಜಗದೇಕಮಲ್ಲನ ಕಾಲದ್ದಾಗಿದೆ.[೨] ಆ ಶಾಸನದಲ್ಲಿ ದೇವಾಲಯವನ್ನು ಕಲಿದೇವರ ದೇವಾಲಯವೆಂದು ಕರೆಯಲಾಗಿದೆ. ಕಲಿದೇವ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪವನ್ನು ಹೊಂದಿದೆ. ಅಧಿಷ್ಠಾನವು ಉಪಾನ, ತ್ರಿಪಟ್ಟ, ಕುಮುದ, ಪದ್ಮ, ಕಪೋತ ಬಾಗಿಲುಗಳನ್ನು ಹೊಂದಿದೆ. ಭಿತ್ತಿಯು ಸಾಧಾರಣವಾಗಿದ್ದು, ದೇವಾಲಯದ ಸಭಾಮಂಟಪದಲ್ಲಿ ಕಕ್ಷಾಸನಗಳನ್ನು ಬಿಡಿಸಿದ್ದು, ಒರಗಿಕೊಳ್ಳಲು ಬಾಗಿದ ಕಲ್ಲುಗಳನ್ನು ಜೋಡಿಸಲಾಗಿದೆ. ಇವುಗಳ ಹಿಂಭಾಗದಲ್ಲಿ ಆನೆಗಳನ್ನು ಬಿಡಿಸಲಾಗಿದೆ. ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ದೊಡ್ಡದಾದ ಲಿಂಗಪೀಠವಿದ್ದು, ಅದರ ಮೇಲೆ ಲಿಂಗದ ಕಲ್ಲಿದೆ. ಗರ್ಭಗೃಹದ ಬಾಗಿಲವಾಡವು ಬಳ್ಳಿಗಳಿಂದ, ಹೂಗಳನ್ನು ಹೊಂದಿದ ಚೌಕಾಕಾರದ ಮನೆಗಳಿಂದ, ಉಬ್ಬುಕಂಬಗಳಿಂದ, ಸಿಂಹಗಳಿಂದ ಮತ್ತು ಪುಷ್ಪದಳಗಳಿಂದ ಅಲಂಕೃತವಾಗಿದೆ. ಅಂತರಾಳದ ಬಾಗಿಲವಾಡವು ಸಹ ಕೆಲವು ಶಾಖೆಗಳಿಂದ ಕೂಡಿದ್ದು, ಬಣ್ಣ ಬಳಿದಿರುವುದರಿಂದ ಸ್ಪಷ್ಟವಾಗಿ ಕಾಣಬರುವುದಿಲ್ಲ. ನವರಂಗದ ಮಧ್ಯದ ಕಂಬಗಳು ಚೌಕಾಕಾರವಾಗಿದ್ದು, ಸಾಮಾನ್ಯ ಬೋದಿಗೆಗಳನ್ನು ಹೊಂದಿವೆ. ಒಳಗೆ ದೇವಕೋಷ್ಠಗಳಿದ್ದು, ಎರಡರಲ್ಲಿ ಕೇಶವ ಮತ್ತು ಗಣೇಶನ ಶಿಲ್ಪಗಳಿವೆ. ದೇವಾಲಯದ ಮುಖಮಂಟಪವು ಎರಡು ದೊಡ್ಡ ಕಂಬಗಳ ಆಧಾರದ ಮೇಲೆ ನಿಂತಿದ್ದು ಮುಂಭಾಗದಲ್ಲಿ ಎರಡು ಆನೆಗಳನ್ನು ನಿಲ್ಲಿಸಲಾಗಿದೆ. ದೇವಾಲಯವು ಶಿಥಿಲವಾಗಿದ್ದು, ಅನೇಕ ವಿವರಗಳು ನಾಶವಾಗಿವೆ.

೨. ಗಣಪತಿ ದೇವಾಲಯ

ಒರುವಾಯಿಯ ಪೂರ್ವಕ್ಕೆ ಗಣಪತಿ ದೇವಾಲಯವಿದ್ದು, ಕ್ರಿ.ಶ. ೧೧೯೫ ರಲ್ಲಿ ಈ ದೇವಾಲಯವನ್ನು ನಿರ್ಮಿಸಿದಂತೆ ಶಾಸನವೊಂದು ತಿಳಿಸುತ್ತದೆ.[೩] ಈ ದೇವಾಲಯವು ಗರ್ಭಗೃಹ ಮತ್ತು ಸಭಾಮಂಟಪವನ್ನು ಹೊಂದಿದ ಚಿಕ್ಕ ಗುಡಿಯಾಗಿದೆ. ಅಧಿಷ್ಠಾನದ ಭಾಗವು ಮಣ್ಣಿನಲ್ಲಿ ಮುಚ್ಚಿಹೋಗಿದ್ದು, ಮೇಲ್ಭಾಗದ ಕಂಠದ ಭಾಗ ಮಾತ್ರ ಕಾಣಬರುತ್ತದೆ. ದೇವಾಲಯದ ಗೋಡೆಗಳು ಸಾಧಾರಣವಾಗಿದ್ದು, ಗರ್ಭಗೃಹದ ಗೋಡೆಯು ಬಿದ್ದುಹೋಗಿದೆ. ಸಭಾಮಂಟಪಕ್ಕೆ ಗೋಡೆಗಳಿಲ್ಲದೇ ಬರಿಯ ಸ್ತಂಭಗಳ ಮೇಲೆ ನಿಂತಿದೆ. ಈ ಸಭಾ ಮಂಟಪವು ಚೌಕಾಕಾರವಾಗಿದೆ. ಗರ್ಭಗೃಹದ ಬಾಗಿಲವಾಡವು ಐದು ಶಾಖೆಗಳಿಂದ ಕೂಡಿದ್ದು, ಬಳ್ಳಿಗಳಿಂದ, ಹೂಗಳಿಂದ, ಉಬ್ಬು ಕಂಬಗಳಿಂದ, ಹೂವಿನ ದಳಗಳಿಂದ ಅಲಂಕೃತಗೊಂಡಿದೆ. ಗರ್ಭಗೃಹದ ಬಾಗಿಲುವಾಡದ ಕೆಳಭಾಗದಲ್ಲಿ ಎರಡೂ ಕಡೆ

ಆನೆಗಳನ್ನು ಬಿಡಿಸಿರುವುದು ಈ ದೇವಾಲಯದ ವಿಶೇಷ. ಮಧ್ಯದಲ್ಲಿ ಗಜಲಕ್ಷ್ಮಿಯನ್ನು ಬಿಡಿಸಲಾಗಿದೆ. ಲಲಾಟದ ಮೇಲ್ಭಾಗದಲ್ಲಿ ದೇವಾಲಯ ಶಿಖರದ ಮಾದರಿಯ ಐದು ಶಿಖರಗಳನ್ನು ಬಿಡಿಸಲಾಗಿದೆ. ಗರ್ಭಗೃಹದಲ್ಲಿ ಗಣೇಶ ವಿಗ್ರಹವು ಕುಳಿತ ಗಣಪತಿಯನ್ನು ಬಿಡಿಸಲಾಗಿದೆ. ಸಭಾಮಂಟಪವು ಮಧ್ಯದಲ್ಲಿ ನಾಲ್ಕು ಮುಖ್ಯ ಕಂಬಗಳನ್ನು ಹೊಂದಿದ್ದು, ಉಳಿದವು ಸುತ್ತು ಕಂಬಗಳಾಗಿವೆ. ಮುಖ್ಯವಾದ ನಾಲ್ಕು ಕಂಬಗಳು ೧೬-೮-೧೬-೪ ಹೀಗೆ ಮುಖಗಳನ್ನು ಹೊಂದಿ ಮೇಲ್ಗಡೆ ಚೌಕಾಕಾರದ ನಂತರ ಕುಂಬವನ್ನು ಬಿಡಿಸಲಾಗಿದೆ. ಕುಂಬದ ಮೇಲೆ ವೃತ್ತಾಕಾರದ ಮುಚ್ಚಳವಿದ್ದು, ಅದರ ಮೇಲೆ ಚೌಕಾಕಾರದ ಪಟ್ಟವಿದೆ. ಉಳಿದ ಕಂಬಗಳು ಅಷ್ಟಚೌಕ, ಕುಂಭಭಾಗವನ್ನು ಪಡೆದು ಮೇಲೆ ಸಾಧಾರಣ ಬೋದಿಗೆ ಇದೆ.

ಒರುವಾಯಿಯನ್ನು ಬಳ್ಳಾರಿ ೪೧ (ಕ.ವಿ.ಶಾ.ಸಂ. ಬಳ್ಳಾರಿ ೪೧) ರ ಶಾಸನವು (ಕ್ರಿ.ಶ. ೧೧೯೫) ಈ ಕೆಳಕಂಡಂತೆ ವರ್ಣಿಸಿದೆ.

"ತಿಳಿಗೊಬದಿಂ ಬೆಳೆಗೆಯ್ಯಂ ಗಿಳಿವಿಂಡಿಂ ಪೂತ ಪುಜ್ಜ ವನದಿಂ ವನದಿಂ ತೊಳಪ ಕಲಿದೇವ ನಿಳಯದ ಬೆಳಕದಿನೀ ಯೊರುವಾಯಿ ಸೊಗಯಿಸುತಿರ್ಕುಂ ॥ ಇಂತೊಪ್ಪುವೊರು ವಾಯೊಳು ಸಂತಂ ನಿತ್ಯಂ ಬಸಂತ ವಸದಳವೆಸೆಯಲು."

ಕಂಪಿಲಿ

ಕಂಪ್ಲಿ ಇತಿಹಾಸ:

ಬೇಡ ಕುಲದ ಕಂಪ್ಲಿರಾಯನು ಕುಮ್ಮಟದುರ್ಗ ಮತ್ತು ಹೊಸಮಲೆ ದುರ್ಗದವರಾಗಿದ್ದು, ಇವರ ಮನೆದೇವತೆ, ಆರಾಧ್ಯ ಅಥವಾ ಕುಲದೇವತೆ ಕಂಪಿಲಿಯ ಸೋಮೇಶ್ವರನಾಗಿರುವುದರಿಂದ ಕಂಪಿಲರಾಯ ಎಂಬ ಹೆಸರನ್ನು ಇಟ್ಟುಕೊಂಡಿರಬಹುದು. ಕಂಪಿಲರಾಯನ ಕಾಲಕ್ಕೆ ಕಂಪಿಲೆಯು ತನ್ನ ಸಾಂಸ್ಕೃತಿಕ ವೈಭವನ್ನು ಉಳಿಸಿಕೊಂಡಿತ್ತು. ಕಂಪಿಲರಾಯನ ಪೂರ್ವಜರು ಹೊಸಮಲೆ ದುರ್ಗದವರು. ಇದಕ್ಕೂ ಪೂರ್ವದಲ್ಲಿ ಹನೆಯದವರು. ಹೊಯ್ಸಳರ ದಾಳಿ ಹೊಸಮಲೆ ದುರ್ಗದ ಮೇಲೆ ಹೆಚ್ಚಾದಂತೆ ಇವರು ರಾಜಧಾನಿಯನ್ನು ಕುಮ್ಮಟದುರ್ಗಕ್ಕೆ ಬದಲಾಯಿಸಿದರು. ಇವರ ಕಾಲಕ್ಕೆ ಕಂಪಿಲೆ ಪ್ರಧಾನವಾಗಿದ್ದರೂ ರಕ್ಷಣೆ ದೃಷ್ಟಿಯಿಂದ ಕುಮ್ಮಟದುರ್ಗಕ್ಕೆ ಹೆಚ್ಚಿನ ಮಹತ್ವ ನೀಡಿದರು.

ಕಂಪಿಲಿ ಎಂದರೆ ಕಂಪ್+ಇಲ್=ನೀರಿನಿಂದ ಸುತ್ತುವರೆದ ಕೋಟೆ ಎಂದು ಹೆಸರು. ತುಂಗಭದ್ರಾ ನದೀ ತೀರದಲ್ಲಿರುವ ಊರು ಎಂದು ಅರ್ಥ. ನೊಳಂಬರ ರಾಜಧಾನಿ ಹೆಂಜೇರು ಆಗಿತ್ತು. ಆದರೆ ಚೋಳರ ದಾಳಿ ಹೆಚ್ಚಾದಂತೆ ನೊಳಂಬರು ತಮ್ಮ ರಾಜಧಾನಿಯನ್ನು ಉತ್ತರದ ಕಂಪಿಲಿಗೆ ಬದಲಾಯಿಸಿದರು.

೧) ಕಂಪ್ಲಿ ಕೈಫಿಯತ್ತಿನ ಪ್ರಕಾರ ತುಂಗಭದ್ರ ನದಿ ತೀರದ ಈ ಸ್ಥಳ ತ್ರೇತಾಯುಗದಲ್ಲಿ ಕೂರ್ಮಕ್ಷೇತ್ರವಾಗಿದ್ದು, ಇಲ್ಲಿ ಕಂಪಿಲನೆಂಬ ಮುನಿಯೋರ್ವನು ಆಶ್ರಮವನ್ನು ಕಟ್ಟಿಕೊಂಡು ತಪಗೈದನೆಂದು ಮುನಿಯ ಹೆಸರಿನಿಂದಾಗಿ ಈ ಸ್ಥಳ ಕಪಿಲ, ಕಂಪಿಲವೆಂದಾಗಿದೆ ಎಂದು ಒಂದು ನಂಬಿಕೆಯಾಗಿದೆ.

೨) ಸ್ಥಳೀಯ ಹೇಳಿಕೆ ಪ್ರಕಾರ ಸ್ಥಳದ ವೀರನೊಬ್ಬನು ಹುಲಿಯನ್ನು ಕೊಂದಿದ್ದರಿಂದ ಕೆಂಪು ಹುಲಿರಾಯನೆಂದೂ ಕರೆಯಲ್ಪಟ್ಟನು. ಕಾಲಕ್ರಮೇಣ ಇವನು ಕಂಪಿಲರಾಯನೆಂದು ಇವನು ಆಳ್ವಿಕೆ ನಡೆಸಿದ ಸ್ಥಳ ಕಂಪಿಲಿಯೆಂದು ಕರೆಯಲ್ಪಟ್ಟಿದೆ.

೩) ಪ್ರಸ್ತುತ ಕಂಪ್ಲಿ ಕೋಟೆಯ ಸುತ್ತಲೂ ತುಂಗಭದ್ರಾ ನದಿಗೆ ಸಂಪರ್ಕ ಹೊಂದಿರುವ ಕಂದಕವಿದ್ದು, ಅದರಲ್ಲಿ ಸತತ ನೀರು ಹರಿಯುತ್ತಿರುವುದನ್ನು ಗ್ರಹಿಸಬಹುದು. ಸ್ವರೂಪಸೂಚಕ ಹೆಸರು ಕಂಪಲಿ ಕಾಲಾನುಕ್ರಮದಲ್ಲಿ ಕಂಪಲಿ, ಕಂಪಿಲ, ಕಂಪ್ಲಿ ಎಂದಾಗಿದೆ.

ಕಂಪ್ಲಿ, ಹಂಪಿ, ಆನೆಗೊಂದಿಗಳನ್ನು ಒಳಗೊಂಡ ಈ ಪ್ರದೇಶವು ಮಹಾಕಾವ್ಯಗಳ ಕಾಲದಿಂದಲೂ ಪ್ರಸಿದ್ಧವಾಗಿದ್ದ ರಾಮಾಯಣದ ವಾನರರ ಕಿಷ್ಕಿಂಧಾ ರಾಜ್ಯ ಈ ಪ್ರದೇಶದಲ್ಲಿತ್ತೆಂದು ನಂಬಲಾಗಿದೆ. ಕಂಪ್ಲಿಯ ಸುತ್ತಲೂ ವಾಲಿ, ಕಾಷ್ಟ, ವೆಂಕಟಾಪುರ, ತಾರಾಪರ್ವತ, ವಾಲಿ, ಚಿಂಚಲಕೋಟೆ, ಅಂಜನಾದ್ರಿ, ವಾಲಿಬಂಡಾರ ಮುಂತಾದ ರಾಮಾಯಣದಲ್ಲಿ ಉಲ್ಲೇಖಿತ ಸ್ಥಳಗಳಿವೆ.

ಕಂಪ್ಲಿಯ ಮೊದಲ ಉಲ್ಲೇಖ ನಮಗೆ ಕ್ರಿ.ಶ. ೭೫೦ ರ ಒಂದು ವೀರಗಲ್ಲಿನಲ್ಲಿ ದೊರೆಯುತ್ತದೆ. ಈ ವೀರಗಲ್ಲು ಕೋಲಾರ ಜಿಲ್ಲೆ ಜಿಸ್ಸನಹಳ್ಳಿಯಲ್ಲಿ ದೊರೆತಿದ್ದು, ಇದರಲ್ಲಿ ಗಂಗರಾಜ ಶ್ರೀಪುರುಷನು ತನ್ನ ಮಗ ದುಗ್ಗಮಾರನಿಗೆ ಕುವಲಾಲ ನಾಡಿನ ಅಧಿಕಾರ ನೀಡಿದಾಗ ದುಗ್ಗಮಾರನು ತನ್ನ ಸೈನ್ಯದೊಂದಿಗೆ ಕಂಪಿಲೆಯ ಮೇಲೆ ಧಾಳಿ ಮಾಡಿದ ರಾಷ್ಟ್ರಕೂಟ ಸೈನ್ಯವನ್ನು ಎದುರಿಸುತ್ತಾನೆ. ಈ ಹೋರಾಟದಲ್ಲಿ ಕೋಮಲನ ಮಗನಾದ ಪಂಡಪ್ಪ ಎಂಬುವನು ಮಡಿಯುತ್ತಾನೆ. ಇವನ ನೆನಪಿಗೆ ದುಗ್ಗಮಾರನು ವೀರಗಲ್ಲನ್ನು ನೆಟ್ಟು ದಾನ ನೀಡುವನು. ಈ ಘಟನೆಯಿಂದ ಕ್ರಿ.ಶ. ೮ ನೆಯ ಶತಮಾನದಲ್ಲಿ ಕಂಪ್ಲಿಯು ಪ್ರಸಿದ್ಧಿಯಲ್ಲಿತ್ತು ಎಂಬ ವಿಷಯ ಮೇಲಿನ ವೀರಗಲ್ಲಿನಿಂದ ತಿಳಿಯುತ್ತದೆ.[೪]

ವಿಜಯನಗರದ ಸಂಶೋಧನಾ ವರದಿಯ ಪ್ರಕಾರ ೧೯೮೭-೮೮ ರ ಪುಟ ೧೯೫ ರಲ್ಲಿ ಕ್ರಿ.ಶ. ೧೦೨೨ ರ ಅವಧಿಯ (ಜಗದೇಕಮಲ್ಲ ಅರಸನ ಮತ್ತೊಂದು ಶಾಸನದಲ್ಲಿಯೂ ಕಂಪಿಲೆಯ ಉಲ್ಲೇಖವಿದೆ ಎಂದು ತಿಳಿದುಬರುತ್ತದೆ. ಕಂಪಿಲೆಯು ಸುಗಂಧಭರಿತ ಉದ್ಯಾನವನಗಳಿಂದ ಆವರಿಸಲ್ಪಟ್ಟಿತ್ತೆಂದು ಸುಂದರವಾದ ಪಟ್ಟಣವಾಗಿತ್ತೆಂದು ರಾಜರಾಜಚೋಳನು ದಾಳಿ ಮಾಡಿ ಅಲ್ಲಿದ್ದ ಚಾಲುಕ್ಯರ ಸುಂದರವಾದ ಅರಮನೆಯನ್ನು ನಾಶ ಮಾಡಿದನೆಂಬ ಉಲ್ಲೇಖವಿದೆ. ಈ ಕಾಲಕ್ಕೆ

ಕಂಪ್ಲಿಯು ಚಾಲುಕ್ಯ ದೊರೆಗಳ ರಾಜಧಾನಿಯಾಗಿ ಸಾಮಂತರ, ನೊಳಂಬರ ರಾಜಧಾನಿಯಾಗಿ ಮುಂದುವರೆದಂತೆ ತಿಳಿಯುತ್ತದೆ.[೫]

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅವರ ಸಾಮಂತರಾದ ನೊಳಂಬಪಲ್ಲವರು ಕಂಪಿಲಿಯನ್ನು ಆಡಳಿತ ಕೇಂದ್ರವನ್ನಾಗಿ ಇಟ್ಟುಕೊಂಡಿದ್ದರು. ಈ ಸಮಯದಲ್ಲಿ ಅವರು ತಮ್ಮ ಹಿಂದಿನ ರಾಜಧಾನಿ ಹೆಂಜೇರುವಿನಲ್ಲಿದ್ದ ತಮ್ಮ ಕುಲದೇವ ಸಿದ್ದೇಶ್ವರನ ಪ್ರತಿರೂಪವಾಗಿ ಸೋಮೇಶ್ವರ ದೇವನನ್ನು ಕಂಪ್ಲಿಯಲ್ಲಿ ಪ್ರತಿಷ್ಠಾಪಿಸಿದರು.

ಬಾಗಳಿಯ ಕಲ್ಲೇಶ್ವರ ದೇವಾಲಯದಲ್ಲಿರುವ ಈ ದೊಡ್ಡ ಶಾಸನದಲ್ಲಿ ಚಾಲುಕ್ಯ ದೊರೆ ಜಗದೇಕಮಲ್ಲ ಜಯಸಿಂಗ ದೇವನ ಸಾಮಂತನಾದ ಜಗದೇಕಮಲ್ಲ ನೊಳಂಬ ಉದಯಾದಿತ್ಯನು ಗಂಗವಾಡಿ ೯೬೦೦೦ ಕದಂಬಳಿಗೆ ೧೦೦೦, ಕೋಗಳಿ ೫೦೦, ಮಾಸವಾಡಿ ೧೪೦, ಬಲ್ಲಕುಂದೆ ೩೦೦, ಕುದಿಹರವಿ ೭೦, ಎಡದೊರೆ ೨೦೦೦ ವನ್ನು ಕಂಪಿಲಿಯಿಂದ ಆಳುತ್ತಿದ್ದನೆಂದು ಹೇಳಿದೆ.

ಕಂಪಿಲೆಯು ಕಲ್ಯಾಣ ಚಾಲುಕ್ಯ ಅರಸರ ಸಾಮಂತರಾದ ನೊಳಂಬರ ರಾಜಧಾನಿ ಯಾಗಿತ್ತೆಂದು ತಿಳಿದುಬರುತ್ತದೆ.[೬] ನೊಳಂಬಪಲ್ಲವ ಪೆರ್ಮಡಿ ದೇವನು ತನ್ನ ರಾಜಧಾನಿಯನ್ನಾಗಿ ಕಂಪಿಲಿಯನ್ನು ಆರಿಸಿಕೊಂಡಿದ್ದನು. ಕಲ್ಯಾಣ ಚಾಲಕ್ಯ ಅರಸ ಭುವನೈಕಮಲ್ಲನ ತಮ್ಮ ಈ ಮೇಲಿನ ಶಾಸನದ ಆಧಾರದಿಂದ ಕಲ್ಯಾಣ ಚಾಲುಕ್ಯರ ಸಾಮಂತ ನೊಳಂಬರ ರಾಜಧಾನಿಯಾಗಿ ಕಂಪಿಲಿಯು ಬಹಳ ಪ್ರಸಿದ್ಧದಲ್ಲಿತ್ತೆಂದು ಹೇಳಬಹುದು.

ಬಳ್ಳಾರಿ ಜಿಲ್ಲೆಯ ರಾರಾವಿಯಲ್ಲಿ ದೊರೆತ ಶಾಸನ ಕ್ರಿ.ಶ. ೧೧೨೧ ರ ಕಾಲದ ಶಾಸನದಲ್ಲಿ ಕಂಪಿಲೆಯು ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಕ್ರಿ.ಶ. ೧೨೧೭ ರ ಸಮಯಕ್ಕೆ ಕಂಪಿಲಿಯು ರಾಜಧಾನಿಯ ವೈಭವ ಕಳೆದುಕೊಂಡು ಕರುಗೋಡು ಸೀಮೆಯಲ್ಲಿ ವಿಲೀನವಾಗಿತ್ತೆಂದು ಹೊಯ್ಸಳ ದೊರೆ ವೀರಬಲ್ಲಾಳನ ಕಾಲದ ಒಂದು ಶಾಸನ ತಿಳಿಸುತ್ತದೆ. ಈ ಶಾಸನವು ಬಳ್ಳಾರಿ ಜಿಲ್ಲೆಯ ಒರುವಾಯಿಯಲ್ಲಿದೆ.

ಕಂಪಿಲೆಯ ಸೋಮೇಶ್ವರ ದೇವಾಲಯ

ಕಂಪ್ಲಿ ಪಟ್ಟಣದ ದಕ್ಷಿಣಕ್ಕೆ ಕೆರೆ ದಂಡೆಯಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪಗಳಿರುವ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ನಾಲ್ಕು ಚತುರಸ್ರಾಕಾರದ ಕಂಬಗಳಿದ್ದು, ನಡುವೆ ಸೋಮೇಶ್ವರ ಮೂರ್ತಿಶಿಲ್ಪವಿದೆ. ಗರ್ಭಗೃಹ ದ್ವಾರದ ಇಕ್ಕೆಲಗಳಲ್ಲಿ ಅಲಂಕಾರಿಕ ರಚನೆಗಳಿರುವ ಎರಡು ಚತುಸ್ರಾಕಾರದ ಕಂಬಗಳಿವೆ. ಮುಂದಿನ ಸಭಾಮಂಟಪದಲ್ಲಿ ಚತುರಸ್ರಾಕಾರದ ಕಂಬಗಳಿದ್ದು, ಅವುಗಳ ಮೇಲೆ ಸಿಮೆಂಟ್ ಲೇಪಿಸಿ

ನಯ ಮಾಡಲಾಗಿದೆ. ಈ ದೇವಾಲಯದ ಅಧಿಷ್ಠಾನ ನೊಳಂಬರ ಕಾಲದ್ದೆಂದು ಅಭಿಪ್ರಾಯವಿದೆ. ಈ ದೇವಾಲಯವು ೨ ಬಾರಿ ಜೀರ್ಣೋದ್ಧಾರಗೊಂಡಿದೆ.

ತ್ರೈಲೋಕ್ಯಮಲ್ಲಾರಿ ಎಂಬುವವನು ಈ ದೇವಾಲಯ ನಿರ್ಮಿಸಿದನೆಂದು ಕೈಫಿಯತ್ತು ಹೇಳುತ್ತದೆ. ಕಂಪ್ಲಿ ಕೈಫಿಯತ್ತು ಕಲ್ಯಾಣ ಪಟ್ಟಣದ ಸಿಂಧು ಬಲ್ಲಾಳದೇವ ಎಂಬುವವನು ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿಸುವುದು. ಅಂದರೆ ಈ ದೇವಾಲಯವನ್ನು ಕಲ್ಯಾಣ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲದೇವನ ಅಂದರೆ ಒಂದನೆಯ ಸೋಮೇಶ್ವರನ ಕಾಲದಲ್ಲಿ ಈ ದೇವಾಲಯ ನಿರ್ಮಾಣಗೊಂಡಿರಬೇಕು. ನೊಳಂಬರು, ಪಲ್ಲವರು, ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಕಂಪ್ಲಿಯಲ್ಲಿ ಆಳುತ್ತಿದ್ದರು. ದೇವಾಲಯದ ಎಡ ಮಗ್ಗುಲಲ್ಲಿ ಪಾರ್ವತಿ ಗುಡಿ ಇದೆ. ಗರ್ಭಗೃಹ ತೆರೆದ ಮಂಟಪದಿಂದ ಕೂಡಿದ್ದು, ಒಳಭಾಗದಲ್ಲಿ ಜಗತಿ ಎಲ್ಲಾ ರಚನೆಗಳು ವಿಜಯನಗರೋತ್ತರ ಕಾಲಕ್ಕೆ ಸೇರುತ್ತವೆ. ಮುಂಭಾಗದಲ್ಲಿ ಶಿಲಾಸ್ತಂಭ, ಪಕ್ಕದಲ್ಲಿ ನಿಂತಿರುವ ಕಲ್ಲಿನ ಮೇಲೆ ಶಾಸನವಿದ್ದು, ಸುಣ್ಣದಿಂದ ಮುಚ್ಚಿದೆ.

ಮೂರ್ತಿ

ಗರ್ಭಗೃಹ ಮತ್ತು ಅಂತರಾಳಗಳಲ್ಲಿ ಸೋಮೇಶ್ವರ ಎಂದು ಕರೆಯಲಾಗುವ ಮೂರ್ತಿಶಿಲ್ಪಗಳಿವೆ. ಗರ್ಭಗೃಹದಲ್ಲಿರುವ ಸೋಮೇಶ್ವರ ಶಿಲ್ಪ ವಿಜಯನಗರೋತ್ತರ ಕಾಲದ ರಚನೆ. ಕೀರ್ತಿಮುಖದ ಅಲಂಕರಣ ಎತ್ತರ ಸುಮಾರು ನಾಲ್ಕು ಅಡಿ ಅಂಗಾಂಗ ರಚನೆಯಲ್ಲಿ ಪ್ರಮಾಣಬದ್ಧತೆ ಇಲ್ಲ. ಮೂರ್ತಿ ಕುಬ್ಜವಾಗಿದ್ದು, ಜಠಾಮುಕುಟದಲ್ಲಿ ಸರ್ಪ, ಸೂರ್ಯ, ಚಂದ್ರ, ಗಂಗೆಯ ಸೂಕ್ಷ್ಮ ಶಿಲ್ಪಗಳಿವೆ. ನಾಲ್ಕು ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಖಡ್ಗ, ಡಮರು ಮತ್ತು ಬಟ್ಟಲುಗಳಿವೆ. ಖಡ್ಗದ ಹಿಡಿಯಲ್ಲಿ ಖಡ್ಗ ಅಳವಡಿಸಲು ರಂಧ್ರ ಕೊರೆಯಲಾಗಿದೆ. ಈಗ ಖಡ್ಗವಿಲ್ಲ. ಹಣೆಯಲ್ಲಿ ಕಣ್ಣನ್ನು ಬಿಡಿಸಿದೆ. ಶಿಲ್ಪದ ಹಣೆಗಣ್ಣು ಸೂರ್ಯ, ಚಂದ್ರ, ಗಂಗೆ ಮತ್ತು ನಂದಿಯನ್ನು ಬಿಡಿಸುವ ಮೂಲಕ ನೇರವಾಗಿ ಶಿವನನ್ನು ಚಿತ್ರಿಸುವ ಪ್ರಯತ್ನ ಮಾಡಿದ್ದಾನೆ. ಅಂತರಾಳದಲ್ಲಿ ಭಗ್ನಗೊಂಡ ಭೈರವನ ಪ್ರಾಚೀನ ಶಿಲ್ಪವಿದೆ. ಎರಡು ಕೈಗಳನ್ನು ಹೊಂದಿದೆ. ಬಲಗೈ ಭಗ್ನಗೊಂಡಿದೆ. ಮೊಣಕೈ ಜೋಡಿಸಲು ರಂಧ್ರ ಕೊರೆಯಲಾಗಿದೆ. ಎಡಗೈಯಲ್ಲಿ ಬಟ್ಟಲಿದೆ. ಜಟಾಮುಕುಟದಲ್ಲಿ ಸರ್ಪವನ್ನು, ಪಾದದ ಬಳಿ ಕುದುರೆಯನ್ನು ಬಿಡಿಸಲಾಗಿದೆ. ಇದು ೧೨-೧೩ನೆಯ ಶತಮಾನದ ರಚನೆ. ಇದರಲ್ಲಿ ಗರ್ಭಗೃಹದ ಶಿಲ್ಪದಲ್ಲಿರುವಂತೆ ಹಣೆಗಣ್ಣು, ಸೂರ್ಯಚಂದ್ರ, ಗಂಗೆ ಉಬ್ಬು ರಚನೆಗಳು ಕಂಡುಬರುವುದಿಲ್ಲ. ಕುದುರೆ ಲಾಂಛನವಿರುವ ಈ ದೇವರನ್ನು ಮೈಲಾರ ದೇವರು, ಮಲ್ಲಾರಿ ಶಿವ ಅಥವಾ ಮಾರ್ತಾಂಡ ಭೈರವ ಎಂದು ಗುರುತಿಸಬಹುದು. ಮೈಲಾರಲಿಂಗನ ಸಂಪ್ರದಾಯದಲ್ಲಿ ಕುದುರೆ ಲಾಂಛನವಿರುವ ಮೈಲಾರ ದೇವರನ್ನು ಮಾರ್ತಾಂಡ ಭೈರವ ಎಂದು ಕರೆಯಲಾಗಿದೆ. ಶ್ರೀಶೈಲದ ಮಲ್ಲಿಕಾರ್ಜುನ ದೇವರಿಗೂ ಕುದುರೆಯೇ ವಾಹನವಾಗಿರುವುದು ಗಮನಾರ್ಹ. ಇದರಿಂದ ಕಂಪ್ಲಿಯ ಸೋಮೇಶ್ವರ

ದೇವಾಲಯವನ್ನು ಮೈಲಾರ ದೇವರ ದೇವಾಲಯವೆಂದು ಸ್ಪಷ್ಟವಾಗಿ ಗುರುತಿಸಬಹುದು. ಈ ರೀತಿ ಕುದುರೆ ಲಾಂಛನವಿರುವ ಭೈರವನ ಶಿಲ್ಪ ಅಪರೂಪದ್ದು. ಸೋಮಶ್ವರನ ಶಿಲ್ಪಗಳು ಕೂಡಾ ನೊಳಂಬ ಕಾಲದವು. ಮೈಲಾರ ದೇವನ ಶಿಲ್ಪಗಳೆಂದು ಡಾ. ಸಿ.ಮಹಾದೇವ ಅವರು ಗುರುತಿಸಿದ್ದಾರೆ. ಗರ್ಭಗೃಹದಲ್ಲಿ ಲಿಂಗಗಳು ಕಲ್ಯಾಣ ಚಾಲುಕ್ಯರ ನೊಳಂಬ ಪಲ್ಲವ ಕಾಲದವು.

ದರೋಜಿ ಗ್ರಾಮದ ಕೈಫಿಯತ್ತಿನ ಪ್ರಕಾರ ಕಂಪ್ಲಿಯು ಆದಿದೈವನಾದ ಸೋಮೇಶ್ವರ ದೇವರನ್ನು ಜನಸಾಮಾನ್ಯರು ಕಂಪಿಲರಾಯನೆಂದೂ (ಉದಾ: ಕನಕಗಿರಿಯ ಆದಿದೈವ ಲಕ್ಷ್ಮೀನರಸಿಂಹನನ್ನು ಕನಕರಾಯನೆಂದು ಕರೆದಂತೆ) ಕರೆಯುತ್ತಾರೆ. ವಿಗ್ರಹದ ಕೈಯಲ್ಲಿ ಖಡ್ಗವಿದ್ದುದರಿಂದ ಖಂಡೆರಾಯನೆಂದು ಕರೆದರು. ನೊಳಂಬಪಲ್ಲವರ ಆಳ್ವಿಕೆ ಕೊನೆಗೊಂಡ ನಂತರ ಮುಮ್ಮಡಿ ಸಿಂಗೇಯನಾಯಕನ ಕಾಲದ ವರೆಗೂ ದೈವಕಂಪಿಲರಾಯನ ಪ್ರಭಾವವಿದ್ದಂತೆ ತೋರುತ್ತದೆ. ಈ ದೇವರ ಅನುಗ್ರಹದಿಂದ ಜನಿಸಿದ ತನ್ನ ಮಗನಿಗೆ ಮುಮ್ಮಡಿ ಸಿಂಗೇಯನಾಯಕನು ದೇವರ ಹೆಸರಾದ ಕಂಪಿಲಿರಾಯ, ಖಂಡೇರಾಯನೆಂದು ಹೆಸರಿಟ್ಟ ಬಗ್ಗೆ ದರೋಜಿ ಗ್ರಾಮದ ಕೈಫಿಯತ್ತು ಮತ್ತು ಪಂಚಾಳ ಗಂಗನ ಚನ್ನರಾಮನ ಸಾಂಗತ್ಯಗಳಲ್ಲಿ ಮಾಹಿತಿ ಇದೆ. ಈ ಹಿನ್ನೆಲೆಯಿಂದ ಅವನ ಆಡಳಿತಕ್ಕೆ ಒಳಪಟ್ಟಿದ್ದ ಕಂಪ್ಲಿಯು ಕಂಪ್ಲಿರಾಯನಿಂದಲೇ ಆ ಹೆಸರನ್ನು ಪಡೆದುಕೊಂಡಿದೆ ಎಂದು ತಿಳಿಸುತ್ತದೆ.

ಕಂಪ್ಲಿಯ ಬಗ್ಗೆ ಮೊಟ್ಟ ಮೊದಲ ದಾಖಲೆ ದೊರಕಿರುವುದು ಕೋಲಾರ ಜಿಲ್ಲೆಯ ಗಂಗ ಅರಸರ ಕಾಲದ ಬಿಸ್ಸನಹಳ್ಳಿಯ ವೀರಗಲ್ಲು ಶಾಸನದಲ್ಲಿ. ಗಂಗವಾಡಿಯ ಸೈನ್ಯವು ಕಂಪ್ಲಿ ಕಡೆಗೆ ಬಂದು ಯುದ್ಧದಲ್ಲಿ ತೊಡಗಿದ ಬಗ್ಗೆ ಉಲ್ಲೇಖಿಸಲಾಗಿದೆ. ಕಾಲ ಕ್ರಿ.ಶ. ೭೫೦ ಎಂದು ಖ್ಯಾತ ಶಾಸನತಜ್ಞರಾದ ಬಿ.ಎಲ್.ರೈಸರ ಅಭಿಪ್ರಾಯ. ಇದು ಕಂಪ್ಲಿಯ ಬಗ್ಗೆ ದೊರಕಿರುವ ಮೊಟ್ಟಮೊದಲ ಐತಿಹಾಸಿಕ ದಾಖಲೆಯಾಗಿದೆ ಎಂದು ರೈಸ್‌ರವರು ತಿಳಿಸಿದ್ದಾರೆ.

ದೇವರಕೊಂಡಾರೆಡ್ಡಿಯವರು ಈ ಕಂಪ್ಲಿಯನ್ನು ಇಂದಿನ ಕಂಪಿಲೆ ಎಂದು ಗುರುತಿಸುತ್ತಾರೆ.[೭] ಕಂಪ್ಲಿಯ ಬಗ್ಗೆ ನಂಜುಂಡ ಕವಿ ತನ್ನ ಕುಮಾರರಾಮ ಚರಿತೆಯಲ್ಲಿ ಪಂಪಾಕ್ಷೇತ್ರದ ಹಂಪಿ ವಿರೂಪಾಕ್ಷ ದೇವಾಲಯದ ದಕ್ಷಿಣಕ್ಕಿದ್ದ ದಟ್ಟವಾದ ಅರಣ್ಯಾ ಪ್ರದೇಶವನ್ನು ಹೊಸಮಲೆ ಎಂದು ಕರೆದಿದ್ದಾನೆ. ಈ ಅರಣ್ಯದ ನಡುವೆ ಹೊಸಮಲೆ ದುರ್ಗವಿದ್ದು, ಕುಮ್ಮಟದುರ್ಗದ ರಾಜ ಕಂಪಿಲನ ಮತ್ತೊಂದು ರಾಜಧಾನಿಯಾಗಿದ್ದಿತು. ಇದನ್ನು ಇಂದು ರಾಮಗಢವೆಂದು ಕರೆಯಲಾಗುತ್ತದೆ. ಇಲ್ಲಿನ ಶಾಸನವೊಂದು ಹೊಸಮಲೆಯ ರಾಮನಾಥ ಒಡೆಯನ ನೆನಪಿಗಾಗಿ ಹೊಸಮಲೆ ದುರ್ಗದಲ್ಲಿ ದೇವಾಲಯವೊಂದನ್ನು ನಿರ್ಮಿಸಲಾಯಿತೆಂದು ತಿಳಿಸುತ್ತದೆ.[೮]

ಕಲ್ಕಂಬ

ಬಳ್ಳಾರಿ ಜಿಲ್ಲೆಯ ಕಲ್ಕಂಬ ಗ್ರಾಮದ ಹೆಸರು ಆ ಊರಿನಲ್ಲಿರುವ ಕಲ್ಲೇಶ್ವರ ದೇವಾಲಯದ ಮುಂದಿರುವ ಒಂದು ಪ್ರಾಚೀನವಾದ ಕಲ್ಲಿನ ಕಂಬದಿಂದ ಬಂದಿದೆ. ಈ ಗ್ರಾಮದ ಹೆಸರು ಅಲ್ಲಿ

ದೊರೆತಿರುವ ಶಾಸನದ ಪ್ರಕಾರ ಚಿಹನಪಟ್ಟಿ ಅಥವಾ ಚಿಹನಹಟ್ಟಿ ಎಂದಿತ್ತು. ಕಲ್ಕಂಬದಲ್ಲಿ ಕ್ರಿ.ಶ. ೧೦೨೮, ೧೦೩೦, ೧೦೪೯ ನೊಳಂಬರ ಕಾಲದ ಶಾಸನಗಳು ದೊರೆತಿದ್ದು, ಇವು ಕ್ರಮವಾಗಿ ಜಗದೇಕಮಲ್ಲ ನೊಳಂಬ, ತ್ರೈಲೋಕ್ಯಮಲ್ಲ ನೊಳಂಬ ರಾಜರನ್ನು ಉಲ್ಲೇಖಿಸುತ್ತವೆ.[೯]

ಕಲ್ಲೇಶ್ವರ ದೇವಾಲಯ

ಊರಿನಲ್ಲಿ ಉಳಿದಿರುವ ದೇವಾಲಯಗಳೆಲ್ಲವೂ ಬಹುತೇಕ ಜೀರ್ಣೋದ್ಧಾರವಾಗಿದ್ದು, ಗುರುತು ಸಿಗದ ರೀತಿಯಲ್ಲಿ ಮಾರ್ಪಾಟು ಹೊಂದಿದೆ. ಹೀಗಾಗಿ ಇರುವ ದೇವಾಲಯಗಳಲ್ಲಿ ಕಲ್ಲೇಶ್ವರ ದೇವಾಲಯವೇ ಪ್ರಾಚೀನವಾದುದಾಗಿದೆ. ಇಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಕಂಬಗಳು ಉಳಿದಿದ್ದು, ದೇವಾಲಯದ ಒಳಮೂಲ ರಚನೆ ಹಾಗೆಯೇ ಉಳಿದಿದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ, ಮಂಟಪವನ್ನು ಹೊಂದಿದೆ. ನವರಂಗದಲ್ಲಿರುವ ಕಂಬಗಳು ಹಾವಿನಾಳು ವೀರಾಪುರದ ದೇವಾಲಯದಲ್ಲಿನ ಕಂಬಗಳನ್ನು ಹೋಲುತ್ತಿದ್ದು, ಚೌಕಾಕಾರದ ಕಿಂಡಿ ೧೬-೮-೧೬ ಮೂಲೆಗಳು ಹಾಗೂ ಚೌಕಾಕಾರ, ಕುಂಬಾಕಾರ, ವೃತ್ತಕಾರದ ಮುಚ್ಚಳವಿದ್ದು, ಅದರ ಮೇಲೆ ಬೋದಿಗೆಗಳಿವೆ. ಫಲಕದ ಭಾಗ ಬಂದಿರುವುದಿಲ್ಲ. ಹೆಚ್ಚಿನ ಅಲಂಕಾರಗಳು ಕಾಣಬರುವುದಿಲ್ಲ.

ಕುಡುತಿನಿ

ಕುಡುತಿನಿ ಗ್ರಾಮವು ಬಲ್ಲಕುಂದೆ ನಾಡಿನ ಮುಖ್ಯ ಸ್ಥಳವಾಗಿತ್ತು. ಈ ಸ್ಥಳದ ಬಗ್ಗೆ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಬಳ್ಳಾರಿ ಜಿಲ್ಲೆ, ಇದರಲ್ಲಿ 'ಸಂಡೂರು ಪರಿಸರದ ಕಾರ್ತಿಕೇಯ ತಪೋವನ' ಎಂಬ ಪುಸ್ತಕದಲ್ಲಿ ಹಾಗೂ ಕುರುಗೋಡು ಸಿಂಧರು ಪಿ.ಎಚ್.ಡಿ. ಮಹಾ ಪ್ರಬಂಧದಲ್ಲಿ ಕುಡುತಿನಿಯ ದೇವಾಲಯದ ಬಗ್ಗೆ ಸ್ವಲ್ಪ ಮಾಹಿತಿ ನೀಡಲಾಗಿದೆ.

ಕೆಲವು ಶಾಸನಗಳಲ್ಲಿ ಶ್ರೀಸ್ವಾಮಿಕಾರ್ತಿಕೇಯದೇವರ ಮೊದಲಬಾಡ, ಕೊಟ್ಟತೊಣೆ ಶ್ರೀಸ್ವಾಮಿ ದೇವರ ಪಟ್ಟಣ, ಕಾರ್ತಿಕೇಯ ಪುರದ ಕೊಟ್ಟತೊಣೆ ಮೊದಲಾಗಿ ಕರೆಯಲಾಗಿದೆ.[೧೦]

ಕುಡುತಿನಿಯನ್ನು ಶಾಸನಗಳಲ್ಲಿ ಕೊಟ್ಟತೊಣೆಯ ಸ್ಥಾನದಯ್ಯು ವರ್ಗದ ಸಬಾಲವೃದ್ಧರ ಸನ್ನಿಧಾನದಲ್ಲಿ ಇಲ್ಲಿನ ದೇವರಿಗೆ ದಾನ ನೀಡಿದಂತೆ ಹೇಳಲಾಗಿದೆ. ಹೀಗಾಗಿ ಇದರ ಪ್ರಾಚೀನ ಗ್ರಾಮನಾಮ ಉಲ್ಲೇಖ ಕೊಟ್ಟತೊಣೆ ಎಂದಿತ್ತು.[೧೧]

ಕುಡುತಿನಿಯ ಶಾಸನಗಳಲ್ಲಿ ಉಲ್ಲೇಖವಾದ ಶತಕೋಟಿತೀರ್ಥವು ಕುಮಾರಸ್ವಾಮಿ ದೇವಾಲಯದ ಅಂತರಾಳದಲ್ಲಿರುವ ತೀರ್ಥವೇ ಆಗಿದೆ. ಈ ತೀರ್ಥವನ್ನು ಸೇವಿಸಿದವರು ರೋಗಗಳಿಂದ, ಪಾಪಗಳಿಂದ ಮುಕ್ತರಾಗುವರೆಂಬ ನಂಬಿಕೆ ಇದ್ದಂತೆ, ಶಾಸನಗಳಿಂದ ತಿಳಿದುಬರುತ್ತದೆ.[೧೨]

ಕಾರ್ತಿಕೇಯ ತಪೋವನವು ಶಾಸನೋಕ್ತ ಕೊಟ್ಟಿತೊಣೆಯಿಂದ (ಈಗಿನ ಕುಡುತಿನಿ) ಆರಂಭಿಸಿ ಸೊಂಡೂರು ಬಳಿಯ ಸ್ವಾಮಿಮಲೆಯನ್ನು ಒಳಗೊಂಡಂತೆ ವ್ಯಾಪಿಸಿತ್ತು. ಹೀಗಾಗಿ ಈ ಕೊಟ್ಟಿತೊಣೆ ಗ್ರಾಮವು ಈ ಪ್ರದೇಶದ ಪ್ರವೇಶದ್ವಾರದಂತಿರಬಹುದು. ಕೊಟ್ಟಿತೊಣೆ ಎಂಬ ಶಬ್ದವು ಎರಡು ಪದಗಳ ಸೇರುವಿಕೆಯಿಂದಾಗಿದ್ದು, ಇದನ್ನು ಬಿಡಿಸಿದಲ್ಲಿ ಕೊಟ್ಟಿ+ತೊಣೆ ಎಂದಾಗುತ್ತದೆ. ಈ ಶಬ್ದಗಳ ಅರ್ಥ ಸ್ಪಷ್ಟನೆಯಿಲ್ಲ. ಕುಡುತಿನಿಯ ಪ್ರಾಚೀನ ಉಲ್ಲೇಖವಾದ ಖೊಟ್ಟಿತೊಣೆ ಎಂಬ ಶಬ್ದವು ೧೦ ನೆಯ ಶತಮಾನದಷ್ಟು ಹಿಂದಿನದಾದರೂ ಅದಕ್ಕೂ ಹಿಂದೆ ಇದ್ದಿರಬಹುದಾದ ಊರಿನ ಸ್ವರೂಪ ಗ್ರಾಮೋಚ್ಚಾರಣೆ ಇವು ಯಾವುವೂ ಲಭ್ಯವಿಲ್ಲ. ಆದರೂ ಈ ಗ್ರಾಮದ ಪ್ರಾಚೀನತೆಯನ್ನು ಅರಿಯಲು ಶಾಸನಗಳಷ್ಟೇ ಪ್ರಮುಖವಾಗಿ ಇದರ ಸುತ್ತಮುತ್ತಲೂ ದೊರೆಯಬಹುದಾದ ಪ್ರಾಗೈತಿಹಾಸಿಕ ಕುರುಹುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಕುಡುತಿನಿಯಲ್ಲಿ ಶಿಲಾಯುಗ, ಹಾಗೂ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಬೂದಿದಿಬ್ಬಗಳು ದೊರೆತಿದ್ದು, ಹಸುಗಳ ಸಗಣಿಯನ್ನು ಸುಟ್ಟಿದ್ದರಿಂದ ನಿರ್ಮಾಣವಾದುವೆಂದು ತಿಳಿದುಬಂದಿದೆ. ಈ ಬೂದಿ ದಿಬ್ಬಗಳಲ್ಲಿ ಮನುಷ್ಯನ, ಪ್ರಾಣಿಗಳ ಮೂಳೆಗಳು, ಮಡಿಕೆಗಳು, ತಾಮ್ರ ಕಬ್ಬಿಣದ ಉಪಕರಣಗಳು ದೊರೆತಿವೆ.[೧೩]

ಬೂದಿ ದಿಬ್ಬಗಳು

ಮೆಕೆಂಜಿಯವರು ಈ ಪ್ರದೇಶದಲ್ಲಿ ಬೂದಿದಿಬ್ಬಗಳ ಬಗ್ಗೆ ಅಧ್ಯಯನ ಮಾಡಿ ಸ್ಥಳೀಯ ಕಥೆಗಳನ್ನು ಸಂಗ್ರಹಿಸಿದರು. ದೊಡ್ಡ ದೊಡ್ಡ ರಾಕ್ಷಸರನ್ನು ಮತ್ತು ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿಯ ವಾಲಿ, ಹಿಡಂಬಾಸುರ, ಮುಂತಾದ ಪ್ರಮುಖ ವ್ಯಕ್ತಿಗಳನ್ನು ಸುಟ್ಟಿದ್ದರಿಂದ ಬೂದಿದಿಬ್ಬಗಳು ಉಂಟಾದವೆಂಬ ನಂಬಿಕೆಗಳಿವೆ.

ನ್ಯೂಬೋಲ್ಟ್ ಎಂಬುವವರು ಕ್ರಿ.ಶ. ೧೮೮೩ ರಲ್ಲಿ ಕಪ್‌ಗಲ್‌ನಲ್ಲಿ ಉತ್ಖನನ ನಡೆಸಿ ಈ ಬೂದಿದಿಬ್ಬವು ಮಾನವನ ಔದ್ಯೋಗಿಕ ಕೇಂದ್ರವಾಗಿರದೇ ಪ್ರಾಯಶಃ ಶವಸಂಸ್ಕಾರ ವಿಧಿಗೆ ಸಂಬಂಧಿಸಿರಬೇಕೆಂದು ನಿರ್ಣಯಕ್ಕೆ ಬಂದರು.

ಯಾಜ್ದಾನಿಯವರು ಬೂದಿ ದಿಬ್ಬಗಳನ್ನು ಪರಿಶೀಲಿಸಿ ಚಿನ್ನ ಹಾಗೂ ಕಬ್ಬಿಣ ಮುಂತಾದ ಲೋಹಗಳನ್ನು ತಯಾರಿಸುವ ಸಂದರ್ಭದಲ್ಲಿ ಅದಿರನ್ನು ಕರಗಿಸುವ ಕಾರಣದಿಂದ ಈ ಬಗೆಯ ಕಿಟ್ಟಗಳು ಆಗಿರಬಹುದೆಂದು ಹೇಳುತ್ತಾರೆ. ಬೂದಿ ದಿಬ್ಬಗಳ ಸಮೀಪದ ಬಂಡೆಗಳ ಮೇಲೆ ವೃಷಭ, ಆನೆ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಕೊರೆಯಲಾಗಿದೆ.

ಕುಡುತಿನಿಯ ಸಮೀಪದ ಬೂದಿ ಗುಡ್ಡದಲ್ಲಿನ ಬೂದಿಯಲ್ಲಿನ ಕಬ್ಬಿಣದ ಕಿಟ್ಟ ಮುಂತಾದ ಅವಶೇಷಗಳು ದೊರೆತಿರುವುದರಿಂದಲೂ ಅದರಿನಿಂದ ಕಬ್ಬಿಣವನ್ನು ಬೇರ್ಪಡಿಸುವುದು ಶಸ್ತ್ರಾಸ್ತ್ರಗಳನ್ನು

ತಯಾರಿಸುವ ಒಂದು ಕಾರ್ಯಗಾರ ಇಲ್ಲಿತ್ತೆಂದು ವಿದ್ವಾಂಸರು ಊಹಿಸಿದ್ದಾರೆ. ಕುಡುತಿನಿಯಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು ದೊರೆತಿದ್ದರೂ ಇದರ ಇತಿಹಾಸ ಆರಂಭವಾದುದು ರಾಷ್ಟ್ರಕೂಟರ ಅಂತ್ಯ ಕಾಲದಿಂದ ಈ ಮಧ್ಯದ ಅವಧಿಯಲ್ಲಿ ಅವಶೇಷಗಳಾಗಲಿ, ಶಾಸನಗಳಾಗಲಿ ದೊರೆತಿಲ್ಲ. ಕುಡುತಿನಿ ಗ್ರಾಮವು ಇತಿಹಾಸ ಕಾಲದಿಂದ ಅದರಲ್ಲೂ ಮುಖ್ಯವಾಗಿ ರಾಷ್ಟ್ರಕೂಟರ ಅಂತ್ಯಕಾಲದಿಂದ ಚಾಲುಕ್ಯ, ಹೊಯ್ಸಳ, ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ಪಟ್ಟಣವಾಗಿತ್ತು. ಇದು ಯಾವುದೇ ನಾಡಿನ ರಾಜಧಾನಿಯಾಗಿರದಿದ್ದರೂ, ಕಾರ್ತಿಕೇಯ ತಪೋವನದ ಪ್ರಮುಖ ಪಟ್ಟಣವಾಗಿತ್ತು.

ಪಂಪಾತೀರ್ಥವು ಕುಡುತಿನಿಯಷ್ಟೇ ಪ್ರಾಚೀನವಾದುದಾದರೂ ಹರಿಹರ ರಾಘವಾಂಕರ ಮುಂತಾದ ಕವಿಗಳ ಕಾವ್ಯಗಳಲ್ಲಿ ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು, ಉಲ್ಲೇಖಗಳು ದೊರಕಿವೆ. ಹಂಪೆಯಂತೆಯೇ ಕಾರ್ತಿಕೇಯ ತಪೋವನವೂ ಸಹ ಪ್ರಾಚೀನ ಕ್ಷೇತ್ರವಾಗಿದ್ದರೂ ಇದು ಕವಿ, ಸಾಹಿತ್ಯ ಮುಂತಾದ ವ್ಯಕ್ತಿಗಳ ಒಡನಾಟ ದೊರೆಯದೆ ದೂರದಲ್ಲಿದ್ದಿತು. ಹಿಂದೆಯೇ ಉಲ್ಲೇಖಿಸಿದಂತೆ ಕ್ರಿ.ಶ. ೧೦ನೆಯ ಶತಮಾನದ ಅಂತ್ಯದಿಂದ ೧೩ ನೆಯ ಶತಮಾನದ ವರೆಗೆ ಇಲ್ಲಿ ಶಾಸನಗಳು ದೊರಕಿವೆ. ದೊರಕಿರುವ ಶಾಸನಗಳೆಲ್ಲವೂ ಕಾರ್ತಿಕೇಯ ತಪೋವನದ ದೇವರಿಗೆ ಮತ್ತು ಇಲ್ಲಿನ ತಪೋವನ ಅಧಿಪತಿಗಳಿಗೆ ನೀಡಿರುವ ದಾನಗಳ ಬಗ್ಗೆ ತಿಳಿಸುತ್ತದೆ.

ಕುಡುತಿನಿ ಶಾಸನವೊಂದರಲ್ಲಿ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ, ಬ್ರತ, ಜಪ ನಿಯಮ, ಹೋಮ..... ಸಂಯುಕ್ತರುಂ ಶ್ರೀ ಸ್ವಾಮಿಕಾರ್ತಿಕೇಯದೇವ ತಪೋವನಾದಿಗಳಪ್ಪ. ಶ್ರೀಮದ್ದಂಡಾಸಿನಿ, ಲೋಹಾಸನಿ, ಉದಯಕರ ದೇವ ಬಹ್ಮಚಾರಿ ಅರಸರು ಮುಖ್ಯವಾಗಿ ಕೊಟ್ಟಿತೊಣೆಯ ಸ್ಥಾನದಯ್ಯು ವರ್ಗಗಳಂ ಪಂಚಮಠದ ಸ್ಥಾನದ ತಪೋಧನರುಂ. ಅಸಂಖ್ಯಾತ ಗಣಗಳುಂ ಮಹಾಸಭೆಯಾಗಿ ಬ್ರಹ್ಮಚಾರಿ ಸ್ಥಾನದಯ್ಯುವರ್ಗಗಳುಂ ಕೈಯಲ್ಲಿ ಗಾಣದ ಐವತ್ತೊಕ್ಕಲಗಳೆಲ್ಲ ಶ್ರೀ ತೆಲ್ಲಿಗೇಶ್ವರ ದೇವರನ್ನು ಶುಭದಿನ ಮಹೂರ್ತದಲು ಪ್ರತಿಷ್ಠೆ ಮಾಡಿ ದೇವರ ರಂಗಭೋಗ ಖಂಡ ಸ್ಫುಟಿತ ಜೀರ್ಣೋದ್ಧಾರ ನಂದಾದೀವಿಗೆಗೆ ದಾನ ನೀಡಿದಂತೆ ಹೇಳಿದೆ.[೧೪]

ಶ್ರೀ ಮಹಾ ಪ್ರಧಾನ ದಣ್ಣನಾಯಕನಾಗಿದ್ದ ಶ್ರೀಮದಯ್ಯ ಎಂಬುವವನು ಸೋಮೇಶ್ವರ ಭಟ್ಟೋಪಾಧ್ಯಾಯರು ಮತ್ತು ಅವರ ಮೈಯ್ದುನ ದಂಡನಾಯಕ ಮಹಾವಿಷ್ಣುವರನು ಶ್ರೀ ಸ್ವಾಮಿಕಾರ್ತಿಕೇಯದೇವ ತಪೋವನಾದಿಗಳಾದ ದಣ್ಡಾಸನೀ ವಿಶ್ವರೂಪ ಬ್ರಹ್ಮಚಾರಿಗಳಿಗೆ ಮತ್ತು ಶ್ರೀ ಸ್ವಾಮಿಕಾರ್ತಿಕೇಯ ಪಾದ ಪದ್ಮೋಪಜೀವಿಗಳಾದ ಶ್ರೀ ಕೊಟ್ಟಿತೊಣೆಯ ಸ್ಥಾನದಯ್ಯುವರ್ಗದವರ ಸನ್ನಿಧಿಯಲ್ಲಿ ದಾನ ಕೊಡಲಾಯಿತು.[೧೫]

ಶ್ರೀ ಸ್ವಾಮಿಕಾರ್ತಿಕೇಯದೇವ ತಪೋವನಾಧಿಪತಿಗಳಪ್ಪ ಶ್ರೀಮದ್ದಣ್ಣಾಡಸನೀ ವಿಶ್ವರೂಪ ಬ್ರಹ್ಮಚಾರಿಗಳು ಸ್ಥಾನದಯ್ಯುದ್ವರ್ಗ ಮತ್ತು ಸಜಾವಿ ಚಕ್ರಪಾಣಿಗಳ ಸಮ್ಮುಖದಲ್ಲಿ ಶ್ರೀಸ್ವಾಮಿದೇವರ ಪಟ್ಟಣದ ಕೊಟ್ಟಿತೊಣೆಯ ಮಳಿಗೆಯ ಭಗವತಿ ದೇವಿಯರಿಗೆ ಮುನ್ನ ಪರಮೇಶ್ವರ ದತ್ತಿಯಾಗಿ ಕೊಳದ ಹೊಲವನ್ನು ನೀಡಿದಂತೆ ಹೇಳಿದೆ.[೧೬]

ಈ ಮೇಲಿನ ಶಾಸನಗಳನ್ನು ಗಮನಿಸಿದಾಗ ತಿಳಿದುಬರುವ ಅಂಶಗಳಲ್ಲಿ ಈ ಪ್ರದೇಶದಲ್ಲಿ ತಪೋವನಾಧಿಪತಿಗಳ ಜೊತೆಯಲ್ಲಿ ಉಲ್ಲೇಖಗೊಂಡಿರುವ ಸ್ಥಾನದ್ಯೆದುವರ್ಗದವರು ವಿಶ್ವಕರ್ಮ ಪರಂಪರೆಯ ಪಾಂಚಾಳವರ್ಗದ ಕಮ್ಮಾರ, ಬಡಗಿ, ಅಕ್ಕಸಾಲಿ, ಕಂಚುಗಾರ, ಶಿಲ್ಪಿಗಳಾಗಿದ್ದರು. ಗ್ರಾಮಕ್ಕೆ ಕಬ್ಬಿಣ ಅದಿರನ್ನು ಹೊಂದಿದ ಪರ್ವತ ಪ್ರದೇಶಕ್ಕೆ ಪಾಂಚಾಳ ಕುಲದ ಜನಾಂಗದವರು ಮುಖಂಡರಾಗಿದ್ದರು. ಇವರಿಗೆ ರಾಜರ ಆಶ್ರಯ, ಜನರ ಮನ್ನಣೆ ದೊರೆತಿದ್ದಿರಬೇಕು ಎಂದು ಡಾ. ಅ.ಸುಂದರ ರವರು ಈ ಅಭಿಪ್ರಾಯಪಡುತ್ತಾರೆ.

ಕುಡುತಿನಿಯ ಅಪೂರ್ಣ ಶಾಸನವೊಂದರಲ್ಲಿ ಅಲ್ಲಿನ ಕಟ್ಟಿಗೆಕಾರರು, ಲೋಹ, ಕಬ್ಬಿಣ, ಬಡಗಿ, ಕಲ್ಲು ಮತ್ತು ಇಟ್ಟಿಗೆಯ ಕೆಲಸ ಮಾಡುವವರಾಗಿದ್ದರೆಂಬ ಉಲ್ಲೇಖ ಬರುವುದರಿಂದ ಈ ಆಯ್ದು ರೀತಿಯ ವಸ್ತುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದವರೇ ಈ ಸ್ಥಾನದ ಆಯ್ಯು ವರ್ಗದವರೆಂದು ನಾವು ಶಾಸನ ಆಧಾರದಿಂದ ಭಾವಿಸಬಹುದು.

ತಪೋವನಾಧಿಪತಿಗಳು

ಸ್ಥಾನಾಚಾರ್ಯರು ಶೈವ ಸಂಪ್ರದಾಯದ ಪಾಶುಪತ ಕಾಳಾಮುಖ ಪಂಥಕ್ಕೆ ಸೇರಿದ ದೇವಸ್ಥಾನ ಹಾಗೂ ಮಠಗಳ ಆಚಾರ್ಯರೇ ಸ್ಥಾನಾಚಾರ್ಯರು ಅಥವಾ ಸ್ಥಾನಪತಿಗಳು. ಕುಡುತಿನಿಯ ಶಾಸನಗಳು ಅಲ್ಲಿಯ ಸ್ಥಾನಾಚಾರ್ಯರನ್ನು ತಪೋವನಾಧಿಪತಿಗಳೆಂದು ಕರೆದಿವೆ. ಬೇರೆಡೆಯ ಶಾಸನಗಳಲ್ಲಿ ದೇವಾಲಯ ಮತ್ತು ಅದಕ್ಕೆ ಹೊಂದಿಕೊಂಡಿರುತ್ತಿದ್ದ ಮಠದ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದವರನ್ನು ಸ್ಥಾನಪತಿಗಳೆಂದು ಕರೆಯಲಾಗಿದೆ. ಇವರು ಸಾಮಾನ್ಯವಾಗಿ ಲಾಕುಳಶೈವ ಸಂಪ್ರದಾಯಕ್ಕೆ ಸೇರಿದವರಾಗಿರುತ್ತಿದ್ದರು. ಶಾಸನಗಳಲ್ಲಿ ಇವರನ್ನು ನೈಷ್ಠಿಕ ತಪೋಧನರೆಂದು ಕರೆಯಲಾಗಿದೆ. ಆದರೆ ಕುಡುತಿನಿ ಅಥವಾ ಕಾರ್ತಿಕೇಯ ತಪೋವನದ ಸ್ಥಾನಪತಿಗಳು ಅವರಿಗಿಂತ ಸಂಪ್ರದಾಯದಲ್ಲಿ ಭಿನ್ನವೆಂಬಂತೆ ನಾವು ಊಹಿಸಬಹುದಾಗಿದೆ.

ರಾಷ್ಟ್ರಕೂಟ ಮೂರನೇ ಕೃಷ್ಣನ ಕುಡುತಿನಿಯ ಶಾಸನವು ಸ್ವಾಮಿಕಾರ್ತಿಕೇಯ ತಪೋವನಾಧಿಪತಿಯಾಗಿದ್ದ ಲೋಕಯ್ಯ ಗಾವುಂಡನನ್ನು ಹೆಸರಿಸುತ್ತದೆ. ಇವನು ದೇಕಮ್ಮನ ದೇಗುಲಕ್ಕೆ ಗಾಣವನ್ನು ದಾನವಾಗಿ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಲೋಕಯ್ಯಗಾವುಂಡನ ನಂತರ ಗದಾಧರಯ್ಯನು ಈ ಸ್ಥಾನದ ಅಧಿಕಾರಕ್ಕೆ ಬಂದಿರಬೇಕು.

ಕುಡುತಿನಿಯ ಕಾರ್ತಿಕೇಯ ತಪೋವನಾಧಿಕಾರಿಗಳ ಆರಂಭದ ಶಾಸನಗಳಲ್ಲಿ ಗದಾಧರಯ್ಯ ಎಂಬುವನು ಕರ್ನಾಟಕಕ್ಕೆ ವಂಗ ದೇಶದಿಂದ ಬಂದವನೆಂದು ಉಲ್ಲೇಖವಿದೆ. ಶಾಂಡಿಲ್ಯ ಗೋತ್ರಕ್ಕೆ ಸೇರಿದ ಅವನು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಗದಾಧರಯ್ಯನು ಬಂಗಾಳದ ವರೇಂದ್ರಿ ಪ್ರದೇಶದ ತಾಡಾ ಗ್ರಾಮದಿಂದ ಬಂದವನಾಗಿದ್ದಾನೆ.[೧೭] ಶಾಸನಗಳು ಗದಾಧರನನ್ನು ದ್ವಿಜ, ವಿಪ್ರ ಎಂದು ಸ್ಪಷ್ಟವಾಗಿ ಕರೆದಿವೆ. ಅವನು ಗೌಡ ಚೂಡಾಮಣಿ ದಂಡಾಸನಿ ಬ್ರಹ್ಮಚಾರಿ ಎನಿಸಿದ್ದನು. ಗದಾಧರ ಬ್ರಹ್ಮಚಾರಿಯನ್ನು ಕಾರ್ತಿಕೇಯ ತಪೋವನ ಅಧಿಕಾರಿ ಎಂದು ಕರೆದಿವೆ.[೧೮]

ಈ ಅಂಶದಿಂದ ನಾವು ತಿಳಿಯಬಹುದೇನೆಂದರೆ ಬಂಗಾಳದಿಂದ ಗದಾಧರಯ್ಯನು ಬರುವುದಕ್ಕೆ ಮೊದಲು ಈ ಸ್ಥಳಕ್ಕೆ ಸ್ಥಳೀಯರೇ ಸ್ಥಾನಪತಿಗಳಾಗಿದ್ದರು. ಮುಂದೆ ಬಂಗಾಳದಿಂದ ಬರುವ ಪರಂಪರೆಯವರು ಈ ಸ್ಥಳವನ್ನು ತುಂಬುತ್ತಾರೆ. ಗಧಾದರನ ನಂತರ ವಿರಡಿಗಳು ಎಂಬುವರು ವ್ಯಕ್ತಿಯ ಕಾರ್ತಿಕೇಯ ತಪೋವನಾಧಿಪತಿಯಾಗಿದ್ದನೆಂದು ಕ್ರಿ.ಶ. ೯೯೭ ರ ಕುಡುತಿನಿಯ ಶಾಸನ ಹೇಳುತ್ತದೆ.[೧೯] ತಪೋವನಾಧಿಪತಿ ಯಾರು ಎಂದು ತಿಳಿಯುವುದಿಲ್ಲ. ಇದು ಈ ಸ್ಥಾನಪತಿಯ ಹೆಸರೋ ಅಥವಾ ವಿಶೇಷಣವೇ ತಿಳಿಯದು. ಆದರೆ ಬಹುವಚನದ ಸಂಬೋಧನೆಯಿಂದ ಈತ ಪ್ರಮುಖ ವ್ಯಕ್ತಿಯಾಗಿದ್ದ ಎಂಬುದಂತೂ ನಿಜ. ವಿಶ್ವರೂಪ ಬ್ರಹ್ಮಚಾರಿಗಳ ಉತ್ತರಾಧಿಕಾರಿಗಳಾಗಿ ಬಂದ ದಂಡಾಸನಿ, ಯಶೋಧರ, ಬ್ರಹ್ಮಚಾರಿಯರ ಉಲ್ಲೇಖ ಕ್ರಿ.ಶ. ೧೧೯೯ ರ ಕುಡುತಿನಿ ಶಾಸನದಲ್ಲಿದೆ.[೨೦]

ಕ್ರಿ.ಶ. ೧೨೦೭ ರಲ್ಲಿ ವಿಷ್ಣುಕರ ಬ್ರಹ್ಮಚಾರಿಗಳು ಕ್ರಿ.ಶ. ೧೨೧೮ ರಲ್ಲಿ ದಂಡಾಸನ, ಲೋಹಾಸನ, ಉದಯಾಕರದೇವ ಬ್ರಹ್ಮಚಾರಿ ಅರಸರ ಉಲ್ಲೇಖವಿದೆ.[೨೧] ಕುಡುತಿನಿ ಪ್ರದೇಶವು ಕಾರ್ತಿಕೇಯ ತಪೋವನಾಧಿಪತಿಗಳ ಒಡೆತನಕ್ಕೆ ಸೇರಿದ್ದು, ಇಲ್ಲಿ ಯಾವುದೇ ಕಾರ್ಯ ನಡೆಯಬೇಕಿದ್ದರೂ ಇವರ ಅಸ್ತಿತ್ವವಿರಬೇಕಾಗಿತ್ತು. ಹೀಗಾಗಿ ಕಾರ್ತಿಕೇಯ ದೇವಾಲಯಕ್ಕೆ ಅಲ್ಲದೆ ಇಡೀ ಕಾರ್ತಿಕೇಯ ತಪೋವನಕ್ಕೆ ಇವರು ಅಧಿಕಾರಿಗಳಾಗಿದ್ದರು. ಲೋಹಾಸನ, ದಂಡಾಸನ ಎಂದು ಕರೆದಿರುವುದು ಇವರ ಅಧಿಕಾರಸೂಚಕವಿದ್ದಿರಬೇಕು. ಇವರನ್ನು ಹೋಮ ಸಂಯುಕ್ತರೆಂದು ಕರೆದಿರಬಹುದು. ಇವರ ಅಧಿಕಾರದಲ್ಲಿ ಸ್ಥಳೀಯ ಆಡಳಿತಗಾರರು ತಲೆ ಹಾಕುತ್ತಿರಲಿಲ್ಲವೆಂದು ತಿಳಿಯಬಹುದಾಗಿದೆ.

ಬಳ್ಳಾರಿ ತಾಲೂಕಿನ ಕುಡುತಿನಿ ಪ್ರದೇಶ ಮತ್ತು ಸಂಡೂರಿನ ಸ್ವಾಮಿಮಲೆಯಲ್ಲಿ ದೊರೆತಿರುವ ಅನೇಕ ಶಾಸನಗಳಲ್ಲಿ ಈ ಕಾರ್ತಿಕೇಯ ತಪೋವನದ ಉಲ್ಲೇಖಗಳು ಬಂದಿವೆ. ಈ ಶಾಸನಗಳೆಲ್ಲವೂ ಕ್ರಿ.ಶ. ೧೦ ನೆಯ ಶತಮಾನದಿಂದ ಈಚಿನವು. ೧೦ ನೆಯ ಶತಮಾನಕ್ಕೂ ಹಿಂದೆ ಈ ಪ್ರದೇಶಕ್ಕೆ ಇದ್ದಿರಬಹುದಾದ ಹೆಸರಿನ ಉಲ್ಲೇಖ ನಮಗೆ ದೊರೆಯುವುದಿಲ್ಲ. ವಡ್ಡಾರಾದನೆಯಲ್ಲಿನ ಕಥೆಯೊಂದರಲ್ಲಿ ಕೋಗಳಿಯಿಂದ ನವಿಲನ್ನೇರಿ ಬಂದ ಮುನಿಗಳು ಲೋಹಾದ್ರಿ ಎಂಬಲ್ಲಿ ಬಿದ್ದರೆಂದು ಉಲ್ಲೇಖಿಸಿದೆ. ಈ ಲೋಹಾದ್ರಿಯು ಕೋಗಳಿಯ ಪೂರ್ವಕ್ಕೆ ಇತ್ತೆಂದು ಹೇಳಿದೆ. ಈ ಲೋಹಾದ್ರಿಯೇ

ಈ ಕಾರ್ತಿಕೇಯ ನೆಲೆನಿಂತಿರುವ ಪ್ರದೇಶವಿದ್ದಿರಬೇಕು. ಇಲ್ಲಿನ ಕೆಲವು ಸ್ಥಾನಪತಿಗಳಿಗೆ ಲೋಹಾಸನ ಎಂಬ ವಿಶೇಷಣವಿರುವುದು ಇದಕ್ಕೆ ಹೆಚ್ಚಿನ ಆಧಾರವನ್ನು ಒದಗಿಸುತ್ತದೆ. ಇದನ್ನು ಅಂಗೀಕರಿಸಿದಲ್ಲಿ ಸೊಂಡೂರು ಬಳಿಯ ಕುಮಾರಸ್ವಾಮಿ ದೇವಾಲಯದ ಪ್ರದೇಶವೇ ಈ ಲೋಹಾದ್ರಿಯಾಗಿರಬೇಕು. ಕಾರ್ತಿಕೇಯ ತಪೋವನವನ್ನು ಉಲ್ಲೇಖಿಸುವ ಉಪಲಬ್ದವಿರುವ ಶಾಸನಗಳೆಲ್ಲವೂ ಈ ಬೆಟ್ಟದ ಉತ್ತರಕ್ಕೆ ದೊರೆತಿದ್ದು, ದಕ್ಷಿಣಕ್ಕೆ ದೊರೆತಿರುವುದಿಲ್ಲ. ಹೀಗಾಗಿ ಈ ಕಾರ್ತಿಕೇಯ ತಪೋವನವು ಉತ್ತರದಲ್ಲಿ ಈಗಿನ ಕುಡುತಿನಿಯಿಂದ ದಕ್ಷಿಣದಲ್ಲಿ ಸೊಂಡೂರು ಬೆಟ್ಟದ ವರೆಗೆ ಹಬ್ಬಿತ್ತೆಂದು ತಿಳಿಯಬಹುದಾಗಿದೆ. ಈ ಕಾರ್ತಿಕೇಯ ತಪೋವನವು ಕಾರ್ತಿಕೇಯ ಪ್ರತಿಷ್ಠೆಯೊಂದಿಗೆ ಆರಂಭವಾಗಿರಬೇಕು. ಈ ಪ್ರತಿಷ್ಠೆಯು ಕ್ರಿ.ಶ. ೧೦ ನೆಯ ಶತಮಾನದ ಅಂತ್ಯದಲ್ಲಿ ನಡೆದಿರಬೇಕು. ಇದಕ್ಕೂ ಮೊದಲೇ ಈ ಸ್ವಾಮಿಮಲೆಯಲ್ಲಿ ಹಳೆಯ ದೇವಾಲಯವಿದ್ದು, ಅದನ್ನು ಈಗ ಪಾರ್ವತಿ ದೇವಾಲಯವೆಂದು ಗುರುತಿಸುತ್ತಾರೆ. ಈ ದೇವಾಲಯದ ಕಾಲ ಸುಮಾರು ಕ್ರಿ.ಶ. ೮ ನೆಯ ಶತಮಾನವೆಂದು ಹೇಳಬಹುದು.

ಕುರುಗೋಡು

ಕುರುಗೊಡು ಗ್ರಾಮವು ಬಳ್ಳಾರಿಯಿಂದ ಉತ್ತರಕ್ಕಿದೆ. ಬಲ್ಲಕುಂದೆ ತನ್ನ ರಾಜಧಾನಿಯ ವೈಭವವನ್ನು ಕಳೆದುಕೊಂಡ ಮೇಲೆ ಆ ನಾಡಿನ ರಾಜಧಾನಿಯಾಗಿ ಕುರುಗೋಡು ಇತ್ತು. ಕುರುಗೋಡನ್ನು ಸಿಂಧರ ಶಾಖೆಯು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರಿಂದ ಸಹಜವಾಗಿ ಇದಕ್ಕೆ ಪ್ರಾಮುಖ್ಯತೆ ಬಂತು. ನಾಡು ಬಲ್ಲಕುಂದೆ ಆದರೂ ರಾಜಧಾನಿಯಾಗಿ ಕುರುಗೋಡು ೧೩೦೦ ರವರೆಗೂ ಇತ್ತು.

ಕುರುಗೋಡು ಎಂದರೆ ಕುರು + ಕೋಡು ಎಂದರೆ ಎತ್ತರವಾದ ಶಿಖರವುಳ್ಳ ಬೆಟ್ಟ ಎಂದರ್ಥ. ಈ ಕುರುಗೋಡನ್ನು ಮತ್ತು ಕುರುಗೋಡಿನ ಕೋಟೆಯನ್ನು ಶಾಸನಗಳು ಬಹುವಿಶೇಷವಾಗಿ ಹೊಗಳಿವೆ. ಕುರುಗೋಡಿನ ಬೆಟ್ಟವನ್ನು ಗೆಲ್ಲುವುದು ಕಷ್ಟವೆಂಬಂತೆ ಶಾಸನಗಳು ತಿಳಿಸುತ್ತವೆ. ಬಳ್ಳಾರಿ ತಾಲೂಕಿನ ೧೯ ನೆಯ ಶಾಸನವು ಕುರುಗೋಡನ್ನು ವರ್ಣಿಸುತ್ತಾ ಹೀಗೆ ಹೇಳಿದೆ.[೨೨]

"ರಾಜದ್ರಾಜನಗರ ರಮಣೀ ರಮಣೀಯ ಮಣಿದರ್ಪಣಾಯ ಮಾನಮೆನಿಸೆ ಭರ್ಗಾದ್ರಿಯಂತಾರ್ಗ ವರಿದುರ್ಗ್ಗಾಮಮಾದ ಕುರುಗೋಡು ಗಿರಿದುರ್ಗದ ವೊಜವೊಳಲ ವಿಳಾಸಮೆಂತೆಂದೆಡೆ ॥ಕಂ॥ ನಾರದನತೊಜದೆ ಸರದಿಂ ತಾರಾಪಥದಂತೆ ರಾಜಹಂಸಾನ್ವಿತದಿಂ ಕ್ಷೀರಾಬ್ಧಿಶಯನ ನುರದವೊಲಾರಮೆ ಯಿನ್ತುಜಿಗಿ ಪೊಜವೊಳಲು ಸಾ(ಸೊ)ಗಯಿಸುಗುಂ ಮತ್ತಮಾ ಪುರಾಂತರದ್ಭಾಗ ಮೆಂತೆಂದೆಡೆ ।ವೃ। ಭರದಿಂದೌರ್ವ್ವಾನಲಂ ತಂನೊಳಗಣ ಜಲಮಂಪ್ಪೀರ್ವೆ ನೆಂಪಿನಾಥಂ ಪರಿದೊಂದಾ ಶಂಕೆಯಿಂದೀಪುರದೊಳೆ ನವರತ್ನಂಗಳಂ ಬೈತನೆಂಬಂತಿರಲಿರ್ಕ್ಕುಂ

ಕ್ಷತ್ರರತ್ನಂ ಚತುರಯುವತಿ ರತ್ನಂ ಸ(...ರ)ತ್ನಂ ವರರತ್ನಂ ।ವೀರರತ್ನಂ। ಸುಜನಪುರುಷ ರತ್ನಂ । ಗಜಾಶ್ವಾದಿ ರತ್ನಂ."

ಕ್ರಿ.ಶ. ೧೧೭೩ರ ಶಾಸನವು[೨೩] "ಅಂತುನಾಡ ನಡುವೆ ॥ಕಂ॥ ಕೆಲಬಲದ ಜಲದ ದುರ್ಗ್ಗಂಗಳನಲೆವುದು ನೆರೆಯ ಹೊರೆಯ ತರುಗಿರಿದುರ್ಗ್ಗಂಗಳ ನಿಳಿಸಿ ತನ್ನ ಮೆಱೆವುದು ಕುಲಗಿರಿ ಕುರುಗೋಡ ದುರ್ಗವಾರ್ಗ್ಗುಂ ದುರ್ಗ್ಗಂ ॥ವೃ॥ ಚೋಳನನಾಳವಾಡುವುದು ಗೂರ್ಜರನಂ ಸಲೆತರ್ಜ್ಜಿಕುಂ ಕರಂ ಲಾಳನನಾಳಿ ಮಾಡುವುದು ಪಾಂಡ್ಯನನಣ್ಡಲೆಗುಂ ತೆಲುಂಗ ಭೂಪಾಳನನೆದೀಳಿ ಕ್ಕೆಯನೆ ಮಾಡುವುದೀ ಕುರುಗೋಡ ಕೋಟೆ ತಾಂ ಕಾಳಗವೆಂದಡೇಳು ಮಡಿ ಪೆರ್ಚ್ಚುವುದಚ್ಚರಿ ಯಾರೋ ಕಾದುವರ್ ॥ ಕೋಟೆಯ ಪೊಜಿವೊಳಲೆಂತೆಂದಡೆ ತಿಳಿದ ತಾಳ, ಕದಳೀ, ವಕುಳಾವಳಿ ಪಾಟಳಾಳೀ ಪಿಪ್ಪ ಳದಳ ಮಾತುಳಂಗ, ಘನಸಾರಕ, ಕರ್ಣ್ಣಕಾರ, ಶಾಲ್ಮಲಿ, ಲವಳೀಳ, ಲವಂಗ ಸಹಕಾರ ಕಂಕಿಂಶುಕ ನಾಳೀಕೇರ, ಸಂಕುಲ, ಸಕಳರ್ತ್ತು ನಂದನದಿನೊಪ್ಪುಗುಮೀ ಕುರುಗೋಡ ಸುತ್ತಲುಂ। ಮುತ್ತಾವ ಪಟ್ಟಣದೊಳ್ ।ಕಂ। ಧನದನನಿಳ ಪರ್ದನಿ ಕರ್ವ್ವನಧಿಪನಂ ನಗುವರಲ್ಲಿ ರತ್ನ ವಿವೇಕರ್ಮ್ಮಧನುವಂ ಪೋಲ್ವರ್ಜನ ಪುರ್ಜ್ಜನನುತವಿದು ಪೋಲ್ಪುವಲ್ತೆ ಭೋಗಾವತಿಯಂ ॥ ಭಕ್ತಿಯ ಮನೆ (ಭಕ್ತಿಯ ನೆಲೆ ಭಕ್ತಿಯಾವತಿ(ತೆ) ಭಕ್ತಿಯೇಳ್ಗೆ ಭಕ್ತಿಯ ರಾಜ್ಯಂ ಭಕ್ತಿ ಭಂಡಾರಂ ಶಿವ ಭಕ್ತಿಯ ಸಿರಿ ಬಂದು ನೆಲಸಿತೀ ಕುರುಗೋಡೊಳ್." ಎಂದು ವರ್ಣಿಸುತ್ತದೆ.

ಕ್ರಿ.ಶ. ೧೦೭೬ ರ ಶಾಸನವು[೨೪] ಈ ಕರುಗೋಡು ದುರ್ಗವನ್ನು "ಎತ್ತ ನೋರ್ಪ್ಪಡಂ ॥ ಅಲ್ಲಿ ಪಟ್ಟಣಂ ಕುರುಗೋಡದುರ್ಗಮೆಂತೆನೆ ವೃ ॥ ಚೋಳನನಾಳು ಮಾಡುವುದು ಗೂರ್ಜ್ಜರರಂ ಸಲೆ ತರ್ದ್ದಿಕುಂ ಕರಂ ಲಾಳನನಾಳಿ ಮಾಡುವುದು ಪಾಂಡ್ಯನನಂಡಲೆಗುಂ ತೆಲುಂಗ ಭೂಪಾಲನ ನೇಳಿದಿಕ್ಕೆಯನೆ ಮಾಡುವುದೀ ಕುರುಗೋಡ ಕೋಟೆ ಕಾಳಗವೆಂದಡೇಳು ಮಡಿ ಪೆರ್ಚುವುದಚ್ಚರಿ ಯಾರೊ ಕಾದುವರ್ ॥" ಎಂದು ವರ್ಣಿಸಿದೆ.

ಕ್ರಿ.ಶ. ೧೧೭೭ ರ ಶಾಸನವು[೨೫] ಕುರುಗೋಡು ಪಟ್ಟಣ ಮತ್ತು ಕುರುಗೋಡು ದುರ್ಗವನ್ನು "ನಗಾನೀಕದ ಬಳಸಿನಿಂದ ಕುರುಗೋಡೆಸಗು ॥ ಮತ್ತಮೆನ್ತಿರ್ದ್ದುದೆಂದೆಡೆ ಕುಲಗಿರಿಗಳ್ಗೆ ಮೇರು ಗಿರಿಯಿರ್ಪ್ಪವೊಲಿರ್ದುದು ತಾಂ ನದೀನದಾವಳಿಗೆ ಪಯ:ಪಯೋದಿ ನೆಗಳ್ದಿರ್ಪ ವೊಲಿರ್ದ್ದುದು ತಾರಕಾಸಮಾಕುಳಕೆ ಹಿಮಾಂಶು ಬಿಂಬ ಮೆಸದಿರ್ಪವೊಲಿರ್ದ್ದುದಾ ವಸುನ್ದರಾಲಲನೆಗೆ ವಕ್ತ್ರ ಪಂಕರುಹ ಮಿರ್ಪ್ಪವೊಲಿರ್ದುದುನೋರ್ಪ್ಪಡಾ ಪುರ ॥ ಆ ಪುರದ ನಳನಳಿಸುತ್ತ ಮಿರ್ಪ್ಪ ಲತೆಯಿಂ ಪರಿಪಕ್ವಫಳ ಪ್ರಚಾರದಿಂ ಬಳಬಳ ಬಳ್ಳುವಾಂಬ್ರವನದಿನ್ನತಿ ನಿರ್ಮ್ಮಳ ಪದ್ಮಷಂಡದಿಂ ತಿಳಕ ತಮಾಳ ತಾಳವಕುಳದ್ರುಮ, ಲೋಧ್ರ, ಲವಂಗ ರುಹಾವಳಿಗಳಿ ನೀಕ್ಷಿಪರ್ಗ್ಗತಿ ಮನೋಹರವಲ್ತೆ ಬಹಿಃ ಪುರಂ ಕರಂ । ಅಲ್ಲಲ್ಲಿಗೆ ತಿಳಿಗೊಳನುಂ ಮಲ್ಲಿಗೆಯಂ ಮಾಧವೀಲತಾಮಣ್ಡಪಮುಂ ಪಲ್ಲವಿತ ಚೂತ ವನಮುಂ ಸಲ್ಲಲಿತಂ ನೋಡಲೆತ್ತಲುಂ ವೊಱವೊಳಲೊಳ್ । ಅಂಚೆಗಳಿಂಚರಮುಂ ಸುತ್ತು ಚೆಲ್ವೆನಿಸಿರ್ದ

ಗಂಧಶಾಲಿಗಳೇಂ ಮತ್ತಂ ಚಕ್ರವಾಕಹಂಸೀ ಸಂಚರದಿಂದೆಸೆವ ಬಹುತಟಾಕದಿನೆಸೆಗುಂ ॥ ಉರವಣಿಯಿಂದೆ ಬಂದ ಮಗಧಾಂಧ್ರ ಕಳಿಂಗ, ಚಾಳುಕ್ಯ, ಪಾಂಡ್ಯ, ಗೂರ್ಜ್ಜರರೆನಿಪಗ್ಗದಣ್ನಲೆಗಳೆನ್ನೊಳೆ ಭಂಗಮನಾಂತು ಪೋದರಾರ್ದೊರೆಯೆನೆಗೆಂಬ ಹಂಕೃತಿಯಿನುನ್ನತಿವೆತ್ತುದೆನೆಲ್ಗೆ ಪೆರ್ಚ್ಚಿ ಯಂಬರಮನದಾದಗಳ್ಳಿಚಿ ಗುಮೇವೊಗಳ್ವೆಕುಱುಗೋಡಕೋಟೆಯಂ । ಧನದಿಂಧನದನಿನಗ್ಗಳಮೆನಿಸುವ ಪರದರಿನಮೂಲ್ಯ ರತ್ನಂ ಗಳಿನತ್ಯನುಪಮ ವಿಚಿತ್ರ ವಸ್ತ್ರಾದ್ಯನೇಕದಿಂದೊಪ್ಪುಗು ವಣಿಗ್ವಾಟಂಗಳ್ ವಿವಿದೋತ್ತುಂಗಲುತ್ತುಧಾದವಳ ಸಂಕಾಶಾಚ್ಚ್ಯಸುಚ್ಛಾಯೆಯಿಂ ಭುವನಾಳಂ ಕೃತಮಪ್ಪ ಭವನಾನೀಕಂಗಳಿಂ ತರ್ಕ್ಕ ಶಾಸ್ತ್ರ ವಿವಾದಂಗಳಿನುದ್ಭವೇದರವದಿಂದಂ ಹೋಮಧೂಮಂಗಳಿಂದವ ನೀಶೋಭಿತವಾಗಿ ಕಣ್ಗೊಳಿಸುಗುಂ ವಿಪ್ರೇಂದ್ರ ವಾಟಂಗಳು ॥ ಸ್ಮರರಾಜಧಾನಿಯೋ ಸುರವನಿತಾ ಜನ್ಮ ಭೂಮಿಯೋ ಚೆಲ್ವಿಂಗಾಂಗರಮೋ ಪೆಳಂಬಿನೆಗಂ ಕರಮೆಸೆಗುಂ ಸೂಳೆಗೇರಿಗಳು ತತ್ಪುರದೊಳ್ ॥ ಎಂದು ವರ್ಣಿಸಿದೆ.

ಈ ಎಲ್ಲಾ ವರ್ಣನೆಗಳಿಂದ ತಿಳಿಯುವುದೇನೆಂದರೆ, ಕುರುಗೋಡು ದುರ್ಗವು ಶತ್ರುಗಳಿಗೆ ಬಹುದುರ್ಗಮವಾಗಿತ್ತು ಎಂದು ನಿರೂಪಿಸುತ್ತದೆ. ಹಾಗೂ ಸಸ್ಯ ಸಮೃದ್ಧಿಯಿಂದ ಕೂಡಿದ್ದು, ವಿಶಾಲವಾಗಿದ್ದು, ವ್ಯಾಪಾರಿ ಪಟ್ಟಣವಾಗಿತ್ತೆಂಬುದನ್ನು ಅವು ಸೂಚಿಸುತ್ತವೆ. ಕುರುಗೋಡಿನಲ್ಲಿ ದುರ್ಗವಲ್ಲದೆ, ಶಾಸನಗಳಲ್ಲದೆ, ಪ್ರಾಕ್ಚಾರಿತ್ರಿಕ ಕಾಲದ ಬಣ್ಣದ ಚಿತ್ರಗಳು ದೊರೆತಿವೆ. ಹೀಗಾಗಿ ಕುರುಗೋಡು ಅನಾದಿಕಾಲದಿಂದಲೂ ಜನವಸತಿಯ ಸ್ಥಳವಾಗಿತ್ತೆಂಬುದನ್ನು ಇದು ಸೂಚಿಸುತ್ತದೆ. ಕರುಗೋಡಿನಲ್ಲಿ ಕುರುಗೋಡನ್ನು ಆಳಿದ ಸಿಂಧರ ಕಾಲದ ಅನೇಕ ದೇವಾಲಯಗಳಲ್ಲದೆ ಅದಕ್ಕಿಂತಲೂ ಪ್ರಾಚೀನವಾದ ಬಾದಾಮಿ ಚಾಲುಕ್ಯರ ಅಳತೆಯ ಕೋಲು ಸಹ ಮತ್ತು ಬಳಕೆಯಲ್ಲಿದ್ದ ನಾಣ್ಯದ ಉಲ್ಲೇಖ ಕೂಡ ಬಂದಿರುವುದು ಈ ಪ್ರದೇಶದಲ್ಲಿ ಕುರುಗೋಡಿಗೆ ಇದ್ದಂತಹ ಹೆಚ್ಚಿನ ಸ್ಥಾನಮಾನವನ್ನು ಗಮನಿಸಬಹುದಾಗಿದೆ. ಗ್ರಾಮದಲ್ಲಿ ದುರ್ಗೇಶ್ವರ, ಕಲ್ಲೇಶ್ವರ, ಸಂಗಮೇಶ್ವರ, ಉಜಾಳೇಶ್ವರ, ಈಶ್ವರ, ಬಸವೇಶ್ವರ, ಸಿದ್ದೇಶ್ವರ, ಮಲ್ಲಿಕಾರ್ಜುನ, ರಾಚಮಲ್ಲೇಶ್ವರ ಇನ್ನು ಮುಂತಾದ ದೇವಾಲಯಗಳು ದೊರೆತಿವೆ. ಈ ಮೇಲೆ ಹೆಸರಿಸಿರುವ ದೇವಾಲಯಗಳೆಲ್ಲವೂ ಕೂಡ ೧೨ ನೆಯ ಶತಮಾನದವಾಗಿದ್ದು, ಎಲ್ಲವೂ ಕೂಡ ಸಮಾನ ಲಕ್ಷಣಗಳನ್ನು ಪಡೆದಿವೆ. ಕೆಲವು ದೇವಾಲಯಗಳು ಶಿಥಿಲಾವಸ್ಥೆಯಲ್ಲಿದ್ದರೆ ಕೆಲವು ಪೂರ್ಣ ಪ್ರಮಾಣದಲ್ಲಿವೆ.

೧. ಈಶ್ವರ ದೇವಾಲಯ

ಊರಿನಿಂದ ಪಶ್ಚಿಮಕ್ಕೆ ಸುಮಾರು ೩ ಕಿ.ಮೀ. ದೂರದಲ್ಲಿ ಈ ದೇವಾಲಯವಿದ್ದು ಉತ್ತರಕ್ಕೆ ಮುಖ ಮಾಡಿದೆ. ಚಪ್ಪಡಿ ಕಲ್ಲುಗಳಲ್ಲಿ ನಿರ್ಮಿತವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದೆ. ಅಧಿಷ್ಠಾನದ ಸ್ವಲ್ಪ ಭಾಗವು ಮಣ್ಣಿನಲ್ಲಿ ಮುಚ್ಚಿದ್ದು ಕಪೋತ ಭಾಗವು ಮಾತ್ರ ಹೊರಕ್ಕೆ ಕಾಣುತ್ತಿದೆ. ಭಿತ್ತಿಯ ಭಾಗವು ಚಪ್ಪಡಿಗಳನ್ನು

ಅಡ್ಡಡ್ಡವಾಗಿ ಜೋಡಿಸಿರುವ ರಚನೆಗಳನ್ನು ಹೊಂದಿದ್ದು ಯಾವುದೇ ಅಲಂಕಾರವಿಲ್ಲದೇ ಮೇಲಿನ ಪ್ರಸ್ತರ ಭಾಗವು ಸಹ ಹಾವಿನಾಳು, ವೀರಾಪುರ, ಮುಂತಾದ ಕಡೆಗಳಲ್ಲಿ ಕಾಣುವಂತೆ ಮುಂಚಾಚುಗಳಿಂದ ರಚಿತವಾಗಿದೆ. ಪ್ರಸ್ತರದ ಮೇಲೆ ಕುಮುದ ಭಾಗವು ಬಂದಿದೆ. ಶಿಖರದ ಮೇಲೆ ಕಂಠ ಬಂದಿದ್ದು, ಕಂಠದ ಮೇಲೆ ವೇದಿಯ ಮೇಲೆ ಸ್ತೂಪಿ ಬಂದಿದೆ. ಶಿಖರದ ಭಾಗವು ಈ ಪ್ರದೇಶದ ಬೇರೆಡೆಯ ಕಲ್ಲಿನ ದೇವಾಲಯಗಳಂತೆ ಹಂತಹಂತದ ರಚನೆಯನ್ನು ಹೊಂದಿದೆ.

ದೇವಾಲಯದ ಒಳಗಿನ ಗರ್ಭಗೃಹವು ಚೌಕಾಕಾರವಾಗಿದ್ದು, ಬಾಗಿಲವಾಡವು ಸುಮಾರು ೭ ಶಾಖೆಗಳನ್ನು ಹೊಂದಿದೆ. ಮೇಲೆ ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ಅಂತರಾಳವೂ ಕೂಡ ಸಾಧಾರಣವಾಗಿದೆ. ಸಭಾಮಂಟಪವು ಸ್ವಲ್ಪಮಟ್ಟಿಗೆ ಮೇಲೆ ತೆರೆದಿದ್ದು, ಉಳಿದ ಭಾಗಗಳು ಕಕ್ಷಾಸನದಿಂದ ಕೂಡಿವೆ. ಒಳಗಡೆ ನಾಲ್ಕು ದೇವಕೋಷ್ಠಗಳಿದ್ದು ಅವುಗಳಲ್ಲಿ ಯಾವುದೇ ವಿಗ್ರಹವಿಲ್ಲ. ಇನ್ನುಳಿದ ಭಾಗಗಳಲ್ಲಿ ಯಾವುದೇ ಹೇಳಿಕೊಳ್ಳುವಂತಹ ಭಾಗಗಳಿಲ್ಲ.

೨. ಕಲ್ಲೇಶ್ವರ ದೇವಾಲಯ

ಈ ದೇವಾಲಯವನ್ನು ಕಳಚೂರಿ ವಂಶದ ರಾಯಮುರಾರಿ ಸೋವಿದೇವನ ಮಹಾಮಂಡಳೇಶ್ವರನಾದ ಸಿಂಧರಾಚಮಲ್ಲನ ಕಾಲದಲ್ಲಿ ಕಲ್ಲಿಸೆಟ್ಟಿಯೆಂಬುವನು ಕಟ್ಟಿಸಿದಂತೆ ಶಾಸನವೊಂದು ತಿಳಿಸುತ್ತದೆ. ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದೆ. ಅಧಿಷ್ಠಾನವು ಉಪಾನ, ಪದ್ಮ, ತೆಳುವಾದ ಕುಮುದ ಮತ್ತು ಪದ್ಮಭಾಗವನ್ನು ಒಳಗೊಂಡ ಕಪೋತವನ್ನು ಹೊಂದಿದೆ. ಇದೇ ಭಾಗಗಳು ಅಂತರಾಳದ ವರೆಗೂ ಮುಂದುವರೆದಿವೆ. ಭಿತ್ತಿಯು ಅಲಂಕಾರ ರಹಿತವಾಗಿದ್ದು, ಮೇಲೆ ತಿಳಿಸಿದ ಈಶ್ವರ ದೇವಾಲಯದಂತೆ ಇದರ ಶಿಖರಭಾಗವಿದ್ದು, ಶಿಖರದ ಮೇಲಿನ ಭಾಗವು ಹಿಂದೆ ಹೇಳಿದ ಈಶ್ವರ ದೇವಾಲಯದಂತೆಯೇ ಇದೆ. ಶಿಖರದ ಮೇಲೆ ಕಲ್ಲಿನ ಸ್ತೂಪಿ ಇದೆ. ಸಭಾಮಂಟಪದ ಅಧಿಷ್ಠಾನವು ಇದೇ ಭಾಗಗಳನ್ನು ಒಳಗೊಂಡಿದ್ದರೂ ಮೇಲೆ ಜಗತಿಯಂತಹ ಭಾಗವನ್ನು ಹೊಂದಿದ್ದು ಆ ಭಾಗದ ಮೇಲೆ ಕಕ್ಷಾಸನ ಬಂದಿದೆ. ಕಕ್ಷಾಸನದ ಹೊರಭಾಗದಲ್ಲಿ ಆನೆಗಳ ಶಿಲ್ಪಗಳಿವೆ. ಕಕ್ಷಾಸನದ ಕೆಳಭಾಗದಲ್ಲಿನ ಜಗತಿಯಲ್ಲಿ ಆನೆ ಮತ್ತು ಪುಷ್ಪಗಳ ಅಲಂಕಾರ ಬಂದಿದೆ. ದೇವಾಲಯದ ಒಳಗಡೆ ಗರ್ಭಗೃಹದ ಬಾಗಿಲವಾಡವು ೪-೫ ಶಾಖೆಗಳನ್ನು ಹೊಂದಿದ್ದು ಶೈವ ದ್ವಾರಪಾಲಕರನ್ನು ಬಿಡಿಸಲಾಗಿದೆ. ಮೇಲ್ಗಡೆ ಲಲಾಟದಲ್ಲಿ ಗಜಲಕ್ಷ್ಮೀ ಇದೆ. ಅಂತರಾಳದ ಬಾಗಿಲವಾಡವು ಸಹ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವನ್ನು ಹೊಂದಿದ್ದು ಸಾಮಾನ್ಯವಾಗಿದೆ. ನವರಂಗದ ನಾಲ್ಕು ಕಂಬಗಳು ಚೌಕ, ೧೬-೮-೧೬ ಮುಖಗಳನ್ನು ಹೊಂದಿದ್ದು, ಮೇಲೆ ಕೊಡವನ್ನು ಹೊಂದಿದೆ. ಅದರ ಮೇಲೆ ಮುಚ್ಚಳ ಬಂದಿದ್ದು, ಮೇಲೆ ಬೋದಿಗೆ ಇದೆ. ಒಳಗಡೆ ಗಜಲಕ್ಷ್ಮಿಯ ಪಟ್ಟಿಕೆ ಇದ್ದು, ಪಟ್ಟಿಕೆ ಇದ್ದರೆ ಇನ್ನೊಂದು ಗೂಡಿನಲ್ಲಿ ಸೂರ್ಯನ ಶಿಲ್ಪವಿದೆ.

೩. ಮಲ್ಲಿಕಾರ್ಜುನ ದೇವಾಲಯ

ಊರಿನ ವಾಯುವ್ಯಕ್ಕೆ ಸಂಗಮೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ಶಿವದೇವಾಲಯವನ್ನು ಕಲ್ಲಿನಿಂದ ಕಟ್ಟಲಾಗಿದೆ. ಯಾವುದೇ ಶಾಸನಗಳು ಈ ದೇವಾಲಯದ ಬಳಿ ದೊರೆಯದಿದ್ದರೂ ಇದರ ರಚನೆಯಿಂದ ಇದನ್ನು ಕುರುಗೋಡು ಸಿಂಧರ ಕಾಲಕ್ಕೆ ಹಾಕಬಹುದಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಕಲ್ಲೇಶ್ವರ ದೇವಾಲಯದ ಅಧಿಷ್ಠಾನದಂತೆಯೇ ಇದ್ದು ಭಿತ್ತಿಯಲ್ಲಿ ಯಾವುದೇ ಅಲಂಕಾರ ಕಾಣುವುದಿಲ್ಲ. ಮೇಲಿನ ಪ್ರಸ್ತರ ಭಾಗದಲ್ಲಿನ ಕಪೋತದ ಕೆಳತುದಿಯಲ್ಲಿ ಸಣ್ಣಸಣ್ಣ ಮೊಗ್ಗುಗಳ ಅಲಂಕಾರಿಕ ಸಾಲಿದೆ. ಸಭಾಮಂಟಪವು ಈ ಮೊದಲು ಗೋಡೆಗಳನ್ನು ಹೊಂದಿದ್ದು, ಈಗ ಗೋಡೆಗಳಲ್ಲಿದ್ದ ಕಕ್ಷಾಸನವೂ ಕೂಡ ಹಾಳಾಗಿದೆ. ನವರಂಗದಲ್ಲಿನ ಕಂಬಗಳು ಕಲ್ಲೇಶ್ವರ ದೇವಾಲಯದ ಕಂಬಗಳಂತೆ ಇವೆ. ಹಿಂದಿನ ದೇವಾಲಯಗಳಿಗೂ ಇದಕ್ಕೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ.

೪. ರಾಮೇಶ್ವರ ದೇವಾಲಯ

ಕುರುಗೋಡಿನ ಪಶ್ಚಿಮಕ್ಕೆ ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವನ್ನು ಚಪ್ಪಡಿ ಕಲ್ಲುಗಳಿಂದ ನಿರ್ಮಿಸಿರುತ್ತಾರೆ. ಇಲ್ಲಿನ ಕ್ರಿ.ಶ. ೧೧೭೭ ರ ಶಾಸನದಲ್ಲಿ[೨೬] ಕಳಚೂರಿ ರಾಜ ಸಂಕಮದೇವನ ಕಾಲದಲ್ಲಿ ಸಿಂಧರ ವಂಶದ ರಾಜ ರಾಚಮಲ್ಲನು ಆಳುತ್ತಿದ್ದಾಗ ಈ ದೇವಾಲಯವನ್ನು ಕಟ್ಟಿಸಿದಂತೆ ಹೇಳಲಾಗಿದೆ. ಮೂಲತಃ ಈ ದೇವಾಲಯವು ತ್ರಿಕೂಟಾಚಲವಾಗಿದ್ದು, ಈಗ ಉತ್ತರದ ಕಡೆಯ ಒಂದು ಭಾಗವು ಬಿದ್ದುಹೋಗಿದೆ. ಇಲ್ಲಿನ ಶಾಸನದ ಪ್ರಕಾರ ಗವರೇಶ್ವರ ಮಲ್ಲಿಕಾರ್ಜುನ ಮತ್ತು ಮುದ್ದೇಶ್ವರ ಲಿಂಗಗಳು ಇಲ್ಲಿದ್ದವು. ದೇವಾಲಯದ ಅಧಿಷ್ಠಾನವು ಇತರೆಡೆ ಕಾಣಬರುವ ಅಧಿಷ್ಠಾನಗಳಂತಿದ್ದರೂ ಭಿತ್ತಿಯಲ್ಲಿ ಬಂದಿರುವ ಕೋಷ್ಠಗಳನ್ನನುಸರಿಸಿ ಸ್ವಲ್ಪ ವ್ಯತ್ಯಾಸವನ್ನು ಮಾಡಲಾಗಿದೆ. ದೇವಾಲಯದ ಭಿತ್ತಿಯಲ್ಲಿ ಕೋಷ್ಠಗಳು ಅಲಂಕೃತ ಕೋಷ್ಠಗಳುಳ್ಳ ಶಿಖರಗಳು ಬಂದಿದ್ದು, ಅವುಗಳ ಮಧ್ಯೆ ಉಬ್ಬುಕಂಬಗಳು ಬಂದಿವೆ. ಉಬ್ಬು ಕಂಬಗಳು ಶಲಾಕ, ಮಾಲ, ಕುಂಬ, ಮುಚ್ಚಳ, ಫಲಕ, ಬೋದಿಗೆಗಳಿಂದ ಅಲಂಕೃತಗೊಂಡಿವೆ. ಈ ಉಬ್ಬುಕಂಬಗಳು ಮತ್ತು ದೇವಕೋಷ್ಠಗಳು ದೇವಾಲಯದ ಭಿತ್ತಿಗೆ ಅಲಂಕಾರವನ್ನು ತಂದುಕೊಟ್ಟಿವೆ. ಮೇಲೆ ಶಿಖರಭಾಗವು ೭ ಹಂತಗಳಲ್ಲಿ ಕೆಳಭಾಗದ ಕುಮುದ ರೀತಿಯ ಕಲ್ಲುಗಳನ್ನು ಹಂತ ಹಂತವಾಗಿ ಪಡೆದಿದ್ದು, ಅದರ ಮೇಲೆ ವೇದಿ, ವೇದಿಯ ಮೇಲೆ ಸ್ತೂಪಿ ಬಂದಿದೆ. ಸ್ತೂಪಿಯ ಮೇಲೆ ಇದ್ದ ಕಲ್ಲಿನ ಕಳಶ ಕಾಣುತ್ತಿಲ್ಲ. ದೇವಾಲಯದ ಒಳಗಿನ ಕೋಷ್ಠಗಳು ಕೂಡಾ ಅಲಂಕಾರವಾಗಿದ್ದು, ಅಧಿಷ್ಠಾನ ಕಂಬಗಳು ಮೇಲ್ಛಾವಣಿ

ದೇವಾಲಯ ಶಿಖರ ಮಾದರಿಯನ್ನು ಹೊಂದಿದೆ. ಎರಡು ಗರ್ಭಗೃಹಗಳಲ್ಲಿ ಲಿಂಗಗಳಿದ್ದು, ಇನ್ನೊಂದು ಗರ್ಭಗುಡಿಯು ಹಾಳಾಗಿದೆ.

೫. ಸಂಗಮೇಶ್ವರ ದೇವಾಲಯ

ಸಂಗಮೇಶ್ವರ ದೇವಾಲಯವು ಊರಿನ ಪಶ್ಚಿಮಕ್ಕೆ ಸುಮಾರು ೧ ಕಿ.ಮೀ. ದೂರದಲ್ಲಿದೆ. ಪೂರ್ವಾಭಿಮುಖವಿರುವ ಈ ಶಿವ ದೇವಾಲಯವನ್ನು ಚಪ್ಪಡಿ ಕಲ್ಲುಗಳಿಂದ ನಿರ್ಮಿಸಲಾಗಿದೆ. ಸುಮಾರು ಕ್ರಿ.ಶ. ೧೩ ನೆಯ ಶತಮಾನಕ್ಕೆ ಸೇರಬಹುದಾದ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಬೃಹತ್ ಸಭಾಮಂಟಪವನ್ನು ಹೊಂದಿದೆ. ಈ ದೇವಾಲಯ ನೋಡಲು ಭವ್ಯವಾಗಿದ್ದು, ಸ್ವಲ್ಪ ಶಿಥಿಲವಾಗಿದೆ. ದೇವಾಲಯದ ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಗರ್ಭಗೃಹದ ಅಧಿಷ್ಠಾನವು ಉಪಾನ, ಪದ್ಮ ಮತ್ತು ತೆಳುವಾದ ಕುಮುದ ಮತ್ತು ಕಪೋತವನ್ನು ಹೊಂದಿದೆ. ಗೋಡೆಗಳಲ್ಲಿ ಯಾವುದೇ ಅಲಂಕಾರವಿಲ್ಲ. ಹೊರಗಿನ ಅಧಿಷ್ಠಾನದಲ್ಲಿ ಕುಮುದ, ಕಪೋತ ಮತ್ತು ಪಟ್ಟಿಕೆಯನ್ನು ಹಾಕಲಾಗಿದೆ. ಈ ಭಾಗದ ಮೇಲೆ ಕಕ್ಷಾಸನ ಬಂದಿದ್ದು, ಮಧ್ಯೆ ಮಧ್ಯೆ ಕಂಬಗಳನ್ನು ನಿಲ್ಲಿಸಲಾಗಿದೆ. ಮೇಲಿನ ಶಿಖರವು ಈ ಪ್ರದೇಶದ ಉಳಿದ ದೇವಾಲಯಗಳಂತೆ ಏಳು ಹಂತಗಳಲ್ಲಿ ಮೇಲಕ್ಕೆ ಹೋಗಿದ್ದು, ಅದರ ಮೇಲೆ ವೇದಿ, ಶಿಖರ ಸ್ತೂಪಿ ಬಂದಿದೆ. ಗರ್ಭಗೃಹದಲ್ಲಿ ಚೌಕಾಕಾರದ ಪೀಠವಿರುವ ಶಿವಲಿಂಗವಿದ್ದು, ಗರ್ಭಗೃಹದ ಬಾಗಿಲು ಅಗಲವಾಗಿದ್ದು, ಏಳು ಶಾಖೆಗಳನ್ನು ಹೊಂದಿದೆ. ದ್ವಾರಪಾಲಕರನ್ನು ಹೊಂದಿರುವ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಅಂತರಾಳದ ಬಾಗಿಲು ಸಹ ಅಗಲವಾಗಿದ್ದು ಐದು ಶಾಖೆಗಳನ್ನು ಹೊಂದಿರುವ ಇದರಲ್ಲಿ ಪುಷ್ಪ, ಬಳ್ಳಿ, ಉಬ್ಬುಕಂಬ, ಸಿಂಹ ಮತ್ತು ಆನೆಗಳ ಸಾಲಿನ ಅಲಂಕಾರವಿದೆ. ಶೈವ ದ್ವಾರಪಾಲಕರನ್ನು ಹೊಂದಿರುವ ಇದರ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಲಲಾಟದ ಮೇಲ್ಭಾಗದಲ್ಲಿ ದ್ರಾವಿಡ ಮತ್ತು ನಾಗರ ರೀತಿಯ ಶಿಖರ ಮಾದರಿಯ ಅಲಂಕಾರಗಳನ್ನು ಮಾಡಲಾಗಿದೆ. ಮಹಾಮಂಟಪವು ಗೋಡೆಯ ಕಂಬಗಳು ಸೇರಿದಂತೆ ೭೪ ಕಂಬಗಳನ್ನು ಹೊಂದಿರುವ ವಿಶಾಲವಾದ ಮಂಟಪ. ಮಧ್ಯದ ನಾಲ್ಕು ಕಂಬಗಳು ಅಲಂಕಾರಿಕವಾಗಿದ್ದು, ಪೀಠದ ಮೇಲೆ ನಿಂತಿವೆ. ಚೌಕಾಕಾರದ ಪಿಂಡಿ, ಅದರ ಮೇಲೆ ಎಂಟು ಮುಖದ ಪಟ್ಟಿಕೆಗಳು, ನಾಲ್ಕು ಮುಖದ ಪಟ್ಟಿಕೆ ನಂತರ ಕುಂಬ, ಮುಚ್ಚಳ, ಫಲಕ ಮತ್ತು ಬೋದಿಗೆ ಇದೆ. ಫಲಕವು ಒರುವಾಯಿ ಮುಂತಾದ ಕಡೆಗಳಲ್ಲಿ ಕಾಣಬರುವ ಫಲಕಗಳಿಗಿಂತ ಚಿಕ್ಕದಾಗಿದೆ. ಉಳಿದ ಕಂಬಗಳು ವೃತ್ತಾಕಾರ ಶಲಾಕೆಯನ್ನು ಹೊಂದಿ ಕೆಲವು ಇದ್ದರೆ, ಕೆಲವು ಅಷ್ಟ ಮುಖಗಳನ್ನು ಹೊಂದಿವೆ. ಸುತ್ತಲೂ ಕಕ್ಷಾಸನವಿದ್ದು, ಕಕ್ಷಾಸನ ಬಿದ್ದುಹೋಗಿದ್ದು, ಮುಂದುಗಡೆ ಮಾತ್ರ ಉಳಿದಿದೆ. ಮುಖಮಂಟಪವೂ ಕೂಡ ನವರಂಗದ ಭಾಗದಂತೆಯೇ ಇದ್ದು, ಎರಡು ಕಂಬಗಳ ಮೇಲೆ ಮುಂಚಾಚಿದೆ. ಮುಖಮಂಟಪದ ಮುಂದೆ ಎರಡು ಆನೆಗಳನ್ನು ಕಡೆದು ನಿಲ್ಲಿಸಲಾಗಿದೆ.

೬. ಸಿದ್ದೇಶ್ವರ ದೇವಾಲಯ

ಸಿದ್ದೇಶ್ವರ ದೇವಾಲಯವು ಮೂಲತಃ ಜೈನ ದೇವಾಲಯವಾಗಿದ್ದು, ಕಲ್ಲಿನಲ್ಲಿ ರಚಿತವಾಗಿದ್ದು ದಕ್ಷಿಣಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದೆ. ಅಧಿಷ್ಠಾನವು ಉಪಾನ, ಪದ್ಮ, ತೆಳುವಾದ ಕುಮುದ ಮತ್ತು ಕಪೋತವನ್ನು ಹೊಂದಿದೆ. ಗೋಡೆಗಳ ಭಿತ್ತಿಯು ಯಾವುದೇ ಅಲಂಕಾರವಿಲ್ಲದೆ ಸಮತಟ್ಟಾಗಿದೆ. ಮೇಲೆ ಶಿಖರವಿಲ್ಲ. ದೇವಾಲಯದ ಪ್ರವೇಶದಲ್ಲಿನ ಬಾಗಿಲುವಾಡದ ಲಲಾಟದಲ್ಲಿ ಮೂಲತಃ ಜಿನನ ಬಿಂಬವಿದ್ದು, ಈಗ ಅದನ್ನು ಶಿವಲಿಂಗವಾಗಿ ಮಾರ್ಪಡಿಸಲಾಗಿದೆ. ಸಭಾಮಂಟಪದ ನಾಲ್ಕು ಕಂಬಗಳು ಇದೇ ಊರಿನ ಕಲ್ಲೇಶ್ವರ ದೇವಾಲಯದ ಕಂಬಗಳನ್ನು ಹೋಲುತ್ತವೆ. ಇಲ್ಲಿದ್ದಂತಹ ತೀರ್ಥಂಕರ ಪೀಠದ ಮೇಲೆ ಲಿಂಗದ ರುದ್ರಭಾಗವನ್ನಿಟ್ಟು ಶಿವಲಿಂಗವಾಗಿ ಮಾರ್ಪಡಿಸಿದ್ದಾರೆ.

೭. ಉಜಾಳೇಶ್ವರ ದೇವಾಲಯ

ಉಜಾಳೇಶ್ವರ ದೇವಾಲಯವು ಕುರುಗೋಡಿನ ಉತ್ತರಕ್ಕಿರುವ ಬೆಟ್ಟದ ಬದಿಯಲ್ಲಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವನ್ನು ಶಿಲೆಯಿಂದ ನಿರ್ಮಿಸಲಾಗಿದೆ. ಈ ದೇವಾಲಯದ ಬಳಿ ದೊರಕಿರುವ ಶಾಸನದಿಂದ ಕ್ರಿ.ಶ. ೧೧೮೧ ಆಧಾರದಿಂದ ಈ ದೇವಾಲಯವು ಒಂದನೇ ರಾಚಮಲ್ಲನ ನಂತರ ನಿರ್ಮಿತವಾಗಿದ್ದು ರಾಚಮಲ್ಲನೇ ಉದ್ಭವಲಿಂಗದ ರೂಪದಲ್ಲಿ ರಾಚಮಲ್ಲೇಶ್ವರ ಎಂಬ ಹೆಸರಿನಲ್ಲಿ ಬಂದು ನೆಲೆಸಿದಂತೆ ಹೇಳಲಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಹಿಂದಿನ ದೇವಾಲಯಗಳಂತೆಯೇ ಈ ದೇವಾಲಯವು ಅಧಿಷ್ಠಾನವನ್ನು ಹೊಂದಿದ್ದು, ಮೇಲಿನ ಶಿಖರ ಭಾಗವು ಕೂಡ ಕುರುಗೋಡಿನ ಇತರ ದೇವಾಲಯಗಳ ಶಿಖರವನ್ನೇ ಹೋಲುತ್ತದೆ. ಗರ್ಭಗೃಹದ ಬಾಗಿಲವಾಡವು ಬಳ್ಳಿಗಳಿಂದ, ಹೂ ಶಾಖೆಗಳಿಂದ ಅಲಂಕೃತಗೊಂಡಿದ್ದು, ಬಾಗಿಲುವಾಡದ ಎರಡೂ ಕಡೆ ಶೈವ ದ್ವಾರಪಾಲಕರಿದ್ದಾರೆ. ಒಳಗಡೆ ಚೌಕಾಕಾರದ ಪೀಠವನ್ನು ಉಳ್ಳ ದೊಡ್ಡ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡವು ಮೂರು ಶಾಖೆಗಳನ್ನು ಹೊಂದಿದ್ದು, ಹೂವು, ಅರೆಗಂಬ ಹಾಗೂ ಹೂವಿನ ದಳಗಳೇ ಮುಂತಾದ ಅಲಂಕಾರಗಳಿಂದ ಕೂಡಿದೆ. ಎರಡೂ ಕಡೆಯ ಚಾವರಣಿ ಧಾರೆಯರ ಬಳಿ ಬಹುಶಃ ಸಿಂಧರಸಿಯರ ಅಥವಾ ದೇವಾಲಯವನ್ನು ಕಟ್ಟಿಸಿರಬಹುದಾದ ಸ್ತ್ರೀಯರ ಹೆಸರುಗಳಿವೆ. ಅಂತರಾಳದ ಇಕ್ಕೆಲಗಳಲ್ಲಿ ಆಳವಾಗಿ ರಚಿಸಿರುವ ದೇವಕೋಷ್ಠಗಳಿವೆ. ಇದರ ಕಂಬಗಳೂ ಕೂಡ ಇತರ ದೇವಾಲಯಗಳ ಕಂಬವನ್ನೇ ಹೋಲುತ್ತದೆ. ಕುರುಗೋಡು ಕೆಲವೇ ವರ್ಷ ರಾಜಧಾನಿಯಾಗಿದ್ದರೂ, ಅಲ್ಲಿರುವ ದೇವಾಲಯ, ಕೋಟೆ ಮುಂತಾದ ಅವಶೇಷಗಳಿಂದ ಬಲ್ಲಕುಂದೆ ನಾಡಿನ ರಾಜಧಾನಿಯಾಗಿ ಭವ್ಯವಾಗಿ ಇತಿಹಾಸದಲ್ಲಿ ಮೆರೆಯಿತೆಂದು ಹೇಳಬಹುದಾಗಿದೆ.

ಕೊಂಚಗೆರೆ

ಕಲ್ಲೇಶ್ವರ ದೇವಾಲಯ

ಕಲ್ಲೇಶ್ವರ ದೇವಾಲಯವು ಕೊಂಚಗೆರೆ ಗ್ರಾಮದ ಉತ್ತರಕ್ಕಿದೆ. ಕ್ರಿ.ಶ. ೧೧೨೦ ರ ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಈ ದೇವಾಲಯದಲ್ಲಿರುವ ಒಂದು ಶಾಸನದ ಪ್ರಕಾರ[೨೭] ಸಿಂಧಕುಲದ ಸೋವಿದೇವನು ಬಲ್ಲಕುಂದೆ ೩೦೦ ಕ್ಕೆ ಸೇರಿದ ಕೌಂಚಗೆರೆಯ ಕಲಿದೇವರಿಗೆ ದತ್ತಿಬಿಟ್ಟ ವಿವರವಿದೆ.

ಸಿಂಧಕುಲದ ರಾಚಮಲ್ಲನು ಬಲ್ಲಕುಂದೆ ೩೦೦ ರನ್ನು ಆಳುತ್ತಿದ್ದಾಗ ಅವನ ಪತ್ನಿ ಮಾಕಲಾದೇವಿಯು ಆನೆವರಿಯ ರಾಮತೀರ್ಥದ ಭೈರವೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖಗಳಿವೆ. ಈ ದೇವಾಲಯದಲ್ಲಿರುವ ಶಾಸನದಿಂದ ಗ್ರಾಮದಲ್ಲಿರುವ ಬಾವಿಯನ್ನೇ ರಾಮತೀರ್ಥವೆಂದು ಗುರುತಿಸಬಹುದು. ಈ ದೇವಾಲಯವು ಮುಖ್ಯವಾಗಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಿವಲಿಂಗ ಮತ್ತು ನಂದಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಚಿಕ್ಕದಾದ ಶಿಖರವಿದೆ. ಸಭಾಮಂಟಪದಲ್ಲಿರುವ ದೇವಕೋಷ್ಟಗಳಲ್ಲಿ ಬಲಬದಿಯಲ್ಲಿ ಗಣೇಶ, ಎಡಬದಿಯಲ್ಲಿ ವೀರಭದ್ರ ಮತ್ತು ಸೂರ್ಯಶಿಲ್ಪಗಳಿವೆ. ಸಭಾಮಂಟಪದಲ್ಲಿ ನಂದಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ದ್ವಾರಬಾಗಿಲಲ್ಲಿ ಅಥವಾ ಬಾಗಿಲುವಾಡದಲ್ಲಿ ಅರೆಗಂಬಗಳು, ಗಜಲಕ್ಷ್ಮೀ, ದ್ವಾರಪಾಲಕರು, ಹೂಬಳ್ಳಿಗಳ ಅಲಂಕರಣೆಯಿದೆ. ಸಭಾಮಂಟಪದ ಕಂಬಗಳು ಚಚ್ಚೌಕ, ಬಹುಮುಖ ಹಾಗೂ ಫಲಕಗಳು ಮತ್ತು ಬೋದಿಗೆಗಳಿಂದ ಕೂಡಿದೆ.

ಕಲ್ಲೇಶ್ವರ ದೇವಾಲಯದ ಬಲಬದಿಯಲ್ಲಿ ಎರಡು ಚಿಕ್ಕ ಗುಡಿಗಳಿವೆ. ಒಂದು ವಿಷ್ಣುವಿನ ಶಿಲ್ಪವಿರುವ ವೈಷ್ಣವ ದೇವಾಲಯ. ಇದರ ಪಕ್ಕದಲ್ಲಿರುವ ಗುಡಿಯಲ್ಲಿ ನರಸಿಂಹನು ಹಿರಣ್ಯ ಕಶಿಪುವಿನ ದೇಹವನ್ನು ಬಗೆಯುತ್ತಿರುವ ಇನ್ನೊಂದು ಶಿಲ್ಪವಿದೆ. ಈ ದೇವಾಲಯದ ಹಿಂಭಾಗದಲ್ಲಿ ಒಂದು ಶಾಸನವಿದೆ. ದೇವಾಲಯದ ಅಧಿಷ್ಠಾನವು ನೆಲದಲ್ಲಿ ಹೂತುಹೋಗಿದೆ. ಕೊಂಚಗೆರೆಯಲ್ಲಿ ಕೆಲವು ವೀರಗಲ್ಲುಗಳು ಊರಿನ ಅಲ್ಲಲ್ಲಿ, ಮಧ್ಯಭಾಗದಲ್ಲಿ ಕಂಡುಬರುತ್ತವೆ. ವೀರಗಲ್ಲುಗಳು ಸ್ವಲ್ಪ ಹಾಳಾಗಿರುವ ಸ್ಥಿತಿಯಲ್ಲಿವೆ.

ಕಲ್ಲೇಶ್ವರ ದೇವಾಲಯದ ಮೂಲೆಯೊಂದರಲ್ಲಿ ಸೂರ್ಯಫಲಕವಿದ್ದು, ಅದರಲ್ಲಿ ೧೨ ರಾಶಿಗಳನ್ನು ಸುತ್ತಲೂ ಚೌಕಾಕಾರದ ಪೀಠದ ಮೇಲೆ ಬಿಡಿಸಲಾಗಿದೆ. ಮಧ್ಯೆ ಕಮಲದಳ ಸುತ್ತುಗಳಿಂದ ಅಲಂಕೃತಗೊಂಡು ಸೂರ್ಯನ ಬಿಂಬವಿದೆ. ಇದೊಂದು ಈ ಪ್ರದೇಶದಲ್ಲಿ ಅಪರೂಪವಾದ ಶಿಲ್ಪವಾಗಿದ್ದು, ಸೂರ್ಯೋಪಾಸನೆಯ ಬಗ್ಗೆ ಬೆಳಕು ಚೆಲ್ಲುವಂತಹುದಾಗಿದೆ. ಪೀಠವು

ಚೌಕಾಕಾರವಾಗಿದ್ದು, ರಾಶಿಗಳನ್ನು ಸೂಚಿಸಲು ರಾಶಿಗಳ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಕಲ್ಲಿನ ಬಲಭಾಗದಲ್ಲಿ ಜಲವಾರಿಯನ್ನು ಬಿಡಿಸಲಾಗಿದೆ. ಸುಮಾರು ಇದು ಒಂದೂವರೆ ಅಡಿ ಎತ್ತರದಲ್ಲಿದೆ. ದೇವಾಲಯದ ಸಮೀಪದಲ್ಲಿ ಸಣ್ಣ ದೇವಾಲಯವಿದ್ದು, ಅಲ್ಲಿ ಅನಂತಶಯನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಶೇಷಶಾಯಿಯಾಗಿ ಎಡಗೈಯನ್ನು ತಲೆಗೆ ಊರೆಗೊಟ್ಟು ಮಲಗಿರುವ ಅನಂತಶಯನನ ಕೈಗಳಲ್ಲಿ ಶಂಖ ಮತ್ತು ಗದೆಗಳಿದ್ದು, ಹೊಕ್ಕಳಿನಿಂದ ತಾವರೆ ಬಂದಿರುವಂತೆ ಬಿಡಿಸಿದೆ. ಕಾಲ ಬಳಿ ಲಕ್ಷ್ಮಿ ಕುಳಿತಿದ್ದಾಳೆ. ಸುಮಾರು ೧೧-೧೨ ನೆಯ ಶತಮಾನಕ್ಕೆ ಸೇರಬಹುದಾದ ಶಿಲ್ಪ ಇದಾಗಿದೆ.

ಕೊಳಗಲ್ಲು

ಕ್ರಿ.ಶ. ೯೬೭ ರ ಸಂಸ್ಕೃತ ಶಾಸನದಲ್ಲಿ ಈ ಗ್ರಾಮವನ್ನು ಶ್ರೀ ಕೊಲಗೊಲ ಗ್ರಾಮವೆಂದು ಕರೆಯಲಾಗಿದೆ.[೨೮] ಕ್ರಿ.ಶ. ೯೬೪ ರ ಶಾಸನದಲ್ಲಿ ಈ ಗ್ರಾಮವನ್ನು ಸೂಜಿಗಲ್ಲು ಎಂದು ಕರೆಯಲಾಗಿದೆ. ಮುಂದೆ ಕ್ರಿ.ಶ. ೧೦೯೧ ಮತ್ತು ೧೦೯೨ ರ ಶಾಸನದಲ್ಲಿ[೨೯] ಕೊಳಗಲ್ಲು ಎಂದು ಕರೆಯಲಾಗಿದೆ. ಬಹುಶಃ ಸೂಚಿಗಲ್ಲೇ ಕೊಳಗಲ್ಲು ಆಗಿರುವ ಸಾಧ್ಯತೆಯಿದೆ. ಈ ಗ್ರಾಮದಲ್ಲಿ ದೊರೆತಿರುವ ೩ ಶಾಸನಗಳ ಪ್ರಕಾರ ಈ ಗ್ರಾಮದಲ್ಲಿ ಕೆಲವು ದೇವಾಲಯಗಳನ್ನು ಕಟ್ಟಿಸಿದಂತೆಯೂ ಆ ದೇವಾಲಯಗಳಿಗೆ ದಾನ ಕೊಟ್ಟ ಉಲ್ಲೇಖಗಳನ್ನು ಮಾಡಲಾಗಿದೆ. ಗ್ರಾಮದಲ್ಲಿ ದೊರೆತಿರುವ ಮೂರು ಶಾಸನಗಳು ಯಾವುದೇ ದೇವಾಲಯದ ಬಳಿ ದೊರೆತಿಲ್ಲ. ಬೇರೆ ಬೇರೆ ಕಡೆ ದೊರೆತಿವೆ. ಕೊಳಗಲ್ಲಿನಲ್ಲಿ ಮುಖ್ಯವಾಗಿ ಈ ಕಾಲಕ್ಕೆ ಸೇರಬಹುದಾದ ೧) ಕೇಶವ ದೇವಾಲಯ, ೨) ನೀಲಕಂಠೇಶ್ವರ ದೇವಾಲಯಗಳಿವೆ.

೧) ಕೇಶವ ದೇವಾಲಯ

ಈ ದೇವಾಲಯವು ಸುಮಾರು ೯ ನೆಯ ಶತಮಾನಕ್ಕೆ ಸೇರಿದ್ದು, ಇದರ ಶೈಲಿಯಿಂದ ರಾಷ್ಟ್ರಕೂಟರ ಕಾಲಕ್ಕೆ ಇದನ್ನು ಸೇರಿಸಬಹುದಾಗಿದೆ. ದೇವಾಲಯವು ಲಕ್ಷ್ಮೀ ನರಸಿಂಹ ದೇವಾಲಯಕ್ಕೆ ಸೇರಿಕೊಂಡಂತಿದ್ದು, ಗರ್ಭಗೃಹ, ಅಂತರಾಳವನ್ನು ಹೊಂದಿದೆ. ಇದು ಶಿಥಿಲವಾಗಿದ್ದು, ನವರಂಗದ ಭಾಗ ಈಗ ಕಾಣುತ್ತಿಲ್ಲ. ಗರ್ಭಗೃಹದ ಬಾಗಿಲುವಾಡವು ಸುಂದರವಾಗಿದ್ದು, ಎರಡೂ ಕಡೆ ಜಾಲಂಧ್ರಗಳಿವೆ. ಬಹುಶಃ ರಾಷ್ಟ್ರಕೂಟ ಕೊಟ್ಟಿಗನ ಕಾಲದಲ್ಲಿ ಈ ದೇವಾಲಯವು ಸ್ಥಾಪನೆಯಾಗಿರಬೇಕು.

೨. ನೀಲಕಂಠೇಶ್ವರ ದೇವಾಲಯ

ಈ ದೇವಾಲಯವು ಗರ್ಭಗೃಹ, ಅಂತರಾಳಮಂಟಪ ಮತ್ತು ಮುಖ ಮಂಟಪವನ್ನು ಹೊಂದಿದೆ. ಮುಖಮಂಟಪದಲ್ಲಿರುವ ಕಂಬಗಳು ೪, ೮, ೧೬ ಮುಖಗಳ ಪಟ್ಟಿಕೆಯ ರೀತಿಯ ರಚನೆಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಜಗತಿ, ತ್ರಿಪಟ್ಟಕುಮುದ ಹಾಗೂ

ಪದ್ಮಭಾಗಗಳನ್ನು ಹೊಂದಿದೆ. ನವರಂಗದಲ್ಲಿ ವಿಷ್ಣು, ಮಹಿಷಮರ್ದಿನಿಯ ಶಿಲ್ಪಗಳಿದ್ದು, ಇವನ್ನು ದೇವಾಲಯದ ದೇವಕೋಷ್ಠಗಳಲ್ಲಿ ಇರಿಸಿರುತ್ತಾರೆ. ಈ ಶಿಲ್ಪಗಳಿಗೆ ಕರಿಯ ಕಲ್ಲನ್ನು ಬಳಸಿದ್ದಾರೆ. ಈ ಗ್ರಾಮದಲ್ಲಿರುವ ಮೂರ್ತಿಗಳಲ್ಲಿ ಮುಖ್ಯವಾಗಿ ಕೇಶವಮೂರ್ತಿ, ಗರುಡವಾಹನ ವಿಷ್ಣು ಮುಂತಾದವು ಪ್ರಮುಖವಾಗಿವೆ.

ಕೋಳೂರು

ಬಳ್ಳಾರಿಯಿಂದ ಕೋಳೂರು ೧೨ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೧೪೭ ರ ಶಾಸನದಲ್ಲಿರುವಂತೆ ಕೋಳೂರು "ಸುರಕುಜದಂತಿತ್ತಿರಹುದು ತಾಂ ಬಲ್ಲಕುಂದೆ ನಾಡದಟಿೊಳು ವಿಸ್ತರದಿಂ ಪಣ್ತೊಳುಗೊಂಬೆನೆ ವರಸಸ್ಯ ಸಮೃದ್ಧ ಫಳದಿ ಕೋಳೂರೆಸೆಗುಂ ॥ ಆ ಪುರದ ಕೋಟೆಯಂ ಸದ್ಗೋಪುರಮಂ ಪೊಱಗೆ ಬಳಸಿದಾರಮೆಯಂ ಕೇದಿಗೆಯಿಂ, ಮೊಲ್ಲೆಯಿನದಿರ್ಮುತ್ತೆ ಸುರಗಿಯಾ ಪಾದರಿಯಿಂ ಮೆಲ್ಲನೆ ತೀಡುವ ಗಾಳಿಯೊಳೆಲ್ಲೆಡೆಯುಂ ಕುಸುಮರಜದೆ ರಂಜಿಸುತಿರ್ಕುಂ ಬಾಳೆ ಸುನಿಂಬೆ ಮಾಧುಫಲಮೀಳೆ ಬೆಡಂಗೆನಿಸಿರ್ದ್ದ ಮಾವು ಕಂಚೀಳೆ ಕವುಂಗು ತೆಂಗು ಪಲಸುರ್ಬ್ಬಿದ ಕರ್ಬ್ಬಿನ ತೋಂಟಮಂಗ ಜಂಗಾಳಯಮಪ್ಪ ತಾವರೆಗೊಳಂ ಕೆರೆ ಬಾವಿಗಳಿಂ ಬಹಿರ್ವ್ವನಂ ಲೀಳೆಯನ್ನುಂಟು ಮಾಡುವುದು ನೋಳ್ಪರ ಚಿತ್ತದೊಳಾವ ಕಾಲಮುಂ ॥ ಬೆಳದೊಱಗಿದ ಕಳಮೆಯ ಮಡಿಗಳ ಪೊಱಗುಂ ಸುತ್ತಿ ನಿಲ್ತ ಬೆಳಗೆಯ್ಯಿಂದಂ ಫಳತರುವನದಿಂ ಸಿರಿಗಿದು ನಿಳಯಮೆನಲು ಚೆಲ್ವವಡೆಗುಮಾ ಪೊಲನೆಲ್ಲಂ ಬೆಳೆದು ಫಲಭರದಿನೆಱಗಿರ್ದ್ದಳೆ ಜೋಳದ ಕೆಯ್ಗಳಂ ಮನೋಹರಿ ಕಾನ್ತಕುಳ ಮೆಳಸುವ ಗಿಳಿ ಧವಳೌಕ್ಷಣೆಯರು ಜೆಳೆದೊಪ್ಪುವ ಬಹುಧಾನ್ಯವಳಿಯಿದಂ ಶಾಳಿಮಡಿಗಳಿಂದೊಳ್ಪನದಿಂ ಬಳಸಿದ ದೇವಾಲಯದಿಂದೆಳೆಯೊಳು ಕಡು ಚೆಲ್ವೊವಡೆದು ಕೋಳೂರೆಸೆಗಂ"[೨೦] ಹೀಗೆ ಕೋಳೂರನ್ನು ಶಾಸನದಲ್ಲಿ ನಾನಾ ರೀತಿಯಲ್ಲಿ ವರ್ಣಿಸಲಾಗಿದೆ.

ಕ್ರಿ.ಶ. ೧೧೪೭ರ ಕೋಳೂರಿನ ಶಾಸನದಲ್ಲಿ ರೇವಗಾವುಂಡನೆಂಬುವನು ಚಾಲುಕ್ಯ ರಾಜ ಜಗದೇಕಮಲ್ಲನ ಕಾಲದಲ್ಲಿ ಸಿಂಧರಾಜ ರಾಚಮಲ್ಲನ ಕಾಲದಲ್ಲಿ ಸೋಮೇಶ್ವರ, ಕಾಳೇಶ್ವರ, ಮಲ್ಲಿಕಾರ್ಜುನ, ಆದಿತ್ಯ ಗೃಹಗಳನ್ನು ಮಾಡಿಸಿದಂತೆಯೂ ಬಿಟ್ಟಿಸೆಟ್ಟಿ ಜೊತೆ ಸೇರಿ ವಿಷ್ಣುಗೃಹ, ವಿಘ್ನೇಶ್ವರ ಗೃಹ, ಅದರಲ್ಲಿಯೇ ಭೈರವ ಭವನ, ಮೇಳೇಶ್ವರ ದೇವಾಲಯ, ಊರಿನಿಂದ ಹೊರಗಡೆ ಬಾವಿಯಲ್ಲಿ ಶಿವಗೃಹ ಮುಂತಾದವನ್ನು ಕಟ್ಟಿಸಿದಂತೆ ಉಲ್ಲೇಖ ಬರುತ್ತದೆ. ಈಗ ಊರಿನಲ್ಲಿ ಈ ಕಾಲದ ಗಂಗಾಧರೇಶ್ವರ, ಸೂರ್ಯನಾರಾಯಣ ಮತ್ತು ರಾಮಲಿಂಗೇಶ್ವರ ದೇವಾಲಯಗಳು ಮಾತ್ರ ಉಳಿದಿವೆ. ಉಳಿದವುಗಳು ಹಾಳಾಗಿವೆ. ಬಹುಶಃ ಈ ದೇವಾಲಯಗಳು ತ್ರಿಕೂಟ ಮತ್ತು ಪಂಚಕೂಟಗಳನ್ನು ಹೊಂದಿರುವುದರಿಂದ ಇವು ಪ್ರತ್ಯೇಕ ದೇವಾಲಯಗಳಾಗಿರದೆ ಒಂದೊಂದು ಗರ್ಭಗೃಹದ ಲೆಕ್ಕದಲ್ಲಿ ಒಂದು ಪ್ರತ್ಯೇಕ ದೇವಾಲಯ ಎಂಬಂತೆ ಬರೆಸಲಾಗಿದೆ. ಈಗಿನ ತ್ರಿಕೂಟ ದೇವಾಲಯ, ಪಂಚಕೂಟ

ದೇವಾಲಯ, ರಾಮಲಿಂಗೇಶ್ವರ ದೇವಾಲಯ ನೋಡಿದರೆ ಲೆಕ್ಕದಲ್ಲಿ ಇವರು ಸ್ಥಾಪಿಸಿದ ದೇವತಾಗೃಹಗಳು ಸರಿಹೊಂದುತ್ತವೆ.

೧. ಸೂರ್ಯನಾರಾಯಣ ದೇವಾಲಯ

ಈ ದೇವಾಲಯವು ಪಂಚಕೂಟ ದೇವಾಲಯವಾಗಿದ್ದು, ಪೂರ್ವ ಮತ್ತು ಪಶ್ಚಿಮ ಉತ್ತರಾಭಿಮುಖವಾಗಿ ಒಂದೊಂದು ಗರ್ಭಗೃಹವು ದಕ್ಷಿಣಾಭಿಮುಖವಾಗಿ ಎರಡು ಗರ್ಭಗೃಹಗಳನ್ನು ಹೊಂದಿದೆ.

ದೇವಾಲಯದ ಪ್ರವೇಶ ದ್ವಾರವು ಉತ್ತರ ದಿಕ್ಕಿಗಿದೆ. ಪ್ರತಿಯೊಂದು ಮೂಲಗುಡಿ, ಗರ್ಭಗೃಹ, ಅಂತರಾಳಗಳನ್ನು ಪಡೆದಿವೆ. ಎಲ್ಲಾ ಅಂತರಾಳಗಳು ಒಂದು ಸಭಾಮಂಟಪಕ್ಕೆ ಸೇರುತ್ತವೆ. ಅಲ್ಲಿಂದ ಹೊರಗೆ ಇನ್ನೊಂದು ಸಭಾಮಂಟಪವಿದೆ. ಈಗ ಇರುವ ಪಂಚಕೂಟ ದೇವಾಲಯದ ಮೇಲಿನ ನಾಲ್ಕು ಶಿಖರಗಳು ಬಿದ್ದಿದ್ದು ಒಂದು ದೇವಾಲಯದ ಶಿಖರ ಮಾತ್ರ ಉಳಿದುಕೊಂಡಿದೆ. ದೇವಾಲಯಗಳು ಉಪಾನ, ತ್ರಿಪಟ್ಟ, ಕುಮುದ, ಕಪೋತ ಭಾಗವನ್ನು ಹೊಂದಿದೆ. ಗೋಡೆಗಳು ಯಾವುದೇ ಅಲಂಕಾರವಿಲ್ಲದೆ ಸಪಾಟಾಗಿದೆ. ಮೇಲಿನ ಶಿಖರಗಳು ಕುರುಗೋಡಿನ ದೇವಾಲಯದ ರಚನೆಗಳನ್ನು ಹೋಲುತ್ತವೆ. ದೇವಾಲಯದಲ್ಲಿನ ಕಂಬಗಳು ಮುಕ್ಕಾಲು ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸಿರುವ ಕಂಬಗಳಲ್ಲಿ ಚೌಕಾಕಾರದ ಪಿಂಡಿ, ಅಷ್ಟಮುಖದ ಕುಂಬ ಹೊಂದಿದ್ದು, ಮೇಲೆ ವೃತ್ತಕಾರದ ಮುಚ್ಚಳದಂತಹ ಭಾಗವನ್ನು ಪಡೆದಿದ್ದು, ಅದರ ಮೇಲೆ ಅಗಲವಾದ ಚೌಕಾಕಾರದ ಫಲಕ ಬಂದಿರುತ್ತದೆ. ಫಲಕದ ಮೇಲೆ ನಾಲ್ಕು ಮುಖದ ಬೋದಿಗೆ ಬಂದಿರುತ್ತದೆ. ಇನ್ನೊಂದು ಬಗೆಯ ಕಂಬಗಳಲ್ಲಿ ಚೌಕಾಕಾರದ ಪಿಂಡಿ, ೧೬ ಮೂಲೆಯ ಮುಖಗಳು, ಮೇಲೆ ಮತ್ತೆ ಚೌಕಾಕಾರದ ಪಿಂಡಿ ಅದರ ಮೇಲೆ ವೃತ್ತಕಾರದ ಮುಚ್ಚಳ, ಚೌಕಾಕಾರದ ಫಲಕ, ಸಾಮಾನ್ಯ ಬೋದಿಗೆ ಬಂದಿರುತ್ತದೆ. ನವರಂಗದ ಮುಚ್ಚಿಗೆಯು ನಕ್ಷತ್ರಾಕಾರದ ರೀತಿಯಲ್ಲಿ ಜೋಡಿಸಿದ ಕಲ್ಲುಗಳಿಂದ ಕೂಡಿದ್ದು, ಮಧ್ಯೆ ಇಳಿಬಿದ್ದಿರುವ ಮೊಗ್ಗನ್ನು ಬಿಡಿಸಲಾಗಿದೆ. ಕಲ್ಲುಗಳ ಒಳ ಅಂಚನ್ನು ಚೌಕಾಕಾರದ ಮನೆಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಶೂಲ, ಡಮರು, ಗದೆಯನ್ನು ಹಿಡಿದಿದ್ದು, ಅಭಯ ಹಸ್ತದಲ್ಲಿರುವ ಬಾಗಿ ನಿಂತ ದ್ವಾರಪಾಲಕ ಶಿಲ್ಪಗಳನ್ನು ಬಿಡಿಸಲಾಗಿದೆ.

೨. ಗಂಗಾಧರೇಶ್ವರ ದೇವಾಲಯ

ಗಂಗಾಧರೇಶ್ವರ ದೇವಾಲಯವು ಊರಿನ ಪಶ್ಚಿಮಕ್ಕಿದ್ದು, ತ್ರಿಕೂಟಾಚಲ ದೇವಾಲಯವಾಗಿದೆ. ಮೂರು ಗರ್ಭಗೃಹಗಳಿಗೆ ಹೊಂದಿಕೊಂಡು ತೆರೆದ ಅಂತರಾಳ ಮತ್ತು ಮೂರು ಗರ್ಭಗೃಹಗಳಿಗೆ ಒಂದೇ ಸಭಾಮಂಟಪವಿದೆ. ದೇವಾಲಯದ ಗರ್ಭಗೃಹದ ಮೇಲೆ ಶಿಖರವಿಲ್ಲ. ದೇವಾಲಯದ ಅಧಿಷ್ಠಾನವು ಉಪಾನ, ಜಗತಿ ತ್ರಿಪಟ್ಟ ಕುಮುದ ಮತ್ತು ಕಪೋತವನ್ನು ಹೊಂದಿದ್ದು, ದೇವಾಲಯದ

ಭಿತ್ತಿ ಕಂಬಗಳು ಯಾವುದೇ ಅಲಂಕಾರವಾಗಲಿ, ಉಬ್ಬುಕಂಬಗಳಾಗಲೀ ಇಲ್ಲದೆ ಸಮತಟ್ಟಾಗಿದೆ. ಈ ದೇವಾಲಯದ ಒಳಗಿನ ಕಂಬಗಳು ಚೌಕ, ಅಷ್ಟಮೂಲೆ ಚೌಕ, ವೃತ್ತಾಕಾರವಾಗಿದ್ದು ಮೇಲೆ ಫಲಕದ ಮೇಲೆ ಬೋದಿಗೆಗಳು ಸಾಮಾನ್ಯವಾದುವಾಗಿವೆ. ಹೊರಗೋಡೆ ಸಂಪೂರ್ಣವಾಗಿ ಜೀರ್ಣೋದ್ಧಾರ ವಾಗಿದ್ದು ಹಿಂದೆ ಹೇಳಿದಂತೆ ಯಾವುದೇ ಅಲಂಕಾರವಿಲ್ಲದೇ ಸದಾ ಅಲಂಕಾರವನ್ನು ಹೊಂದಿದೆ.

೩. ರಾಮಲಿಂಗೇಶ್ವರ ದೇವಾಲಯ

ಈ ದೇವಾಲಯವು ಗ್ರಾಮದ ನೈರುತ್ಯಕ್ಕಿದ್ದು, ತ್ರಿಕೂಟಾಚಲ ದೇವಾಲಯವಾಗಿದೆ. ಮೂರು ಗರ್ಭಗೃಹಗಳು ಪ್ರತಿ ಗರ್ಭಗೃಹದ ಮುಂದೆ ಅಂತರಾಳ ಮತ್ತು ಮೂರು ಗರ್ಭಗೃಹಳನ್ನೊಳಗೊಂಡ ಸಭಾಮಂಟಪವಿದೆ. ದೇವಾಲಯದ ಹೊರಭಾಗ ಪೂರ್ಣವಾಗಿ ಜೀರ್ಣೋದ್ಧಾರವಾಗಿದ್ದು, ಬಿಡಿ ಕಲ್ಲುಗಳಿಂದ ಅಲಂಕಾರರಹಿತವಾಗಿ ನಿರ್ಮಾಣವಾಗಿದೆ. ಗರ್ಭಗೃಹದ ಬಾಗಿಲುವಾಡಗಳು ಹೂ ಬಳ್ಳಿಗಳಿಂದ, ಪದ್ಮದಳಗಳಿಂದ ಅಲಂಕಾರಗೊಂಡಿವೆ. ಈ ಎರಡೂ ಗರ್ಭಗೃಹಗಳಲ್ಲಿ ಶಿವಲಿಂಗವಿದ್ದು, ಒಂದರಲ್ಲಿ ಇತ್ತೀಚೆಗೆ ಅನ್ನಪೂರ್ಣೇಶ್ವರಿ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ನವರಂಗದ ಕಂಬಗಳು ಗಂಗಾಧರೇಶ್ವರ ದೇವಾಲಯದ ರೀತಿಯಲ್ಲಿದ್ದರೂ ಫಲಕದ ಭಾಗ ಚಿಕ್ಕದಾಗಿದೆ. ದೇವಾಲಯದ ಒಳಭಾಗದಲ್ಲಿ ಸಪ್ತಮಾತೃಕ ಶಿಲ್ಪ ಪಟ್ಟಿಕೆ ಇದೆ. ಇದರ ವಿಶೇಷವೆಂದರೆ ಕೌಮಾರಿ ಮಹೇಶ್ವರಿ ಶಿಲ್ಪಗಳು ಪಟ್ಟಿಕೆಯ ಎಡಭಾಗದಿಂದ ಪಟ್ಟಿಕೆಯ ಎಡಭಾಗದಲ್ಲಿ ಕೌಮಾರಿ ಇದ್ದರೆ, ಬಲತುದಿಯಲ್ಲಿ ಚಾಮುಂಡ ಶಿಲ್ಪವಿದೆ. ಎಲ್ಲಾ ವಿಗ್ರಹಗಳ ತಳಭಾಗದಲ್ಲಿ ಚಿಕ್ಕದಾಗಿ ವಾಹನಗಳನ್ನು ಬಿಡಿಸಲಾಗಿದೆ.

ತೆಕ್ಕಲಕೋಟೆ

ಮಲ್ಲಯ್ಯನಗುಡ್ಡ

ತೆಕ್ಕಲಕೋಟೆಯಿಂದ ಸುಮಾರು ೩ ಕಿ.ಮೀ. ದೂರದಲ್ಲಿ ಪೂರ್ವಕ್ಕೆ ಈ ಗ್ರಾಮವಿದೆ. ಮಧ್ಯಕಾಲೀನ ಶಾಸನಗಳಲ್ಲಿ ಈ ಗ್ರಾಮವನ್ನು ಹರಿವಿನ ಗ್ರಾಮವೆಂದು ಕರೆದಿದ್ದು, ಈಗ ಗ್ರಾಮ ನಾಶವಾಗಿದೆ. ನೆಲಮಟ್ಟದಿಂದ ಸುಮಾರು ೫೦ ಅಡಿ ಎತ್ತರದ ಗುಡ್ಡದ ಮೇಲೆ ವಿಶಾಲವಾದ ಪ್ರಕಾರ ಹೊಂದಿದ್ದು, ಪ್ರಕಾರದ ಒಳಗೆ ಮೂರು ಮುಖ್ಯ ದೇವಾಲಯಗಳಿವೆ. ಈ ದೇವಾಲಯಗಳ ಬಳಿ ದೊರೆತಿರುವ ಶಾಸನಗಳ ಪೈಕಿ ಒಂದು ಶಾಸನವು ಕ್ರಿ.ಶ. ೧೦೧೮ ಕ್ಕೆ ಸೇರಿದ್ದು,[೩೧] ನೊಳಂಬರ ಆಡಳಿತಕ್ಕೆ ಈ ಪ್ರದೇಶ ಸೇರಿತ್ತೆಂಬ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಇಲ್ಲಿ ನಿರ್ಮಿತವಾದ ಮೈಲಾರದೇವರ ದೇವಾಲಯಕ್ಕೆ ಬಲ್ಲಕುಂದೆ ಬಳಿಯ ಸಿರಿಯನೂರನ್ನು ದಾನಕೊಟ್ಟಂತೆ ತಿಳಿಸುತ್ತದೆ. ಶಾಸನೋಕ್ತ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಮತ್ತು ನವರಂಗವನ್ನು ಹೊಂದಿದೆ. ಈ ಗರ್ಭಗೃಹದಲ್ಲಿ ಈಗ ಇರುವ ವಿಗ್ರಹಗಳು ವಿಜಯನಗರದ ಕಾಲದ್ದವಾಗಿವೆ. ನವರಂಗದ ಕಂಬಗಳು ಬಲ್ಲಕುಂದೆಯ ಅಗಸಿಗೆ ಹಾಕಿರುವ ಕಂಬಗಳಂತಿದ್ದು, ಸಾದಾ

ಬೋದಿಗೆಯನ್ನು ಹೊಂದಿವೆ. ನವರಂಗ ವಿಶಾಲವಾಗಿದ್ದು, ನವರಂಗದ ಪೂರ್ವಕ್ಕೆ ಬಾಗಿಲನ್ನು ಹೊಂದಿದೆ. ದೇವಾಲಯದ ಹೊರಭಾಗವು ಕಾಲಾಂತರದಲ್ಲಿ ನಾಶವಾಗಿದ್ದು, ಅದರ ಮೂಲರೂಪ ತಿಳಿಯುವುದಿಲ್ಲ. ಇದರ ಎದುರಿಗೆ ಒಂದು ಮಲಗಿದ ಬಸವನ ವಿಗ್ರಹವಿದ್ದು, ಇದು ನೊಳಂಬರ ಕಾಲದ ಶಿಲ್ಪವನ್ನು ಹೋಲುತ್ತದೆ. ಸುಮಾರು ನಾಲ್ಕುವರೆ ಅಡಿ ಎತ್ತರವಾಗಿದ್ದು, ಅಲಲ್ಲಿ ಕೆಲವು ಭಾಗಗಳು ನಾಶವಾಗುವಂತೆ ಕಂಡುಬರುತ್ತವೆ. ಇದೇ ದೇವಾಲಯದ ಎದುರಿಗೆ ಪಶ್ಚಿಮಾಭಿಮುಖವಾಗಿ ಇರುವ ದೇವಾಲಯವು ವಿಜಯನಗರ ಕಾಲದ ರಚನೆಯಾಗಿದೆ. ಗರ್ಭಗೃಹ, ಆಯತಾಕಾರದ ನವರಂಗ ಮತ್ತು ಹೊರಗಡೆ ತೆರೆದ ಸಭಾಂಗಣವನ್ನು ಹೊಂದಿದೆ. ಸಭಾಂಗಣದಲ್ಲಿ ಕಂಬಗಳು ವಿಜಯನಗರ ಕಾಲದಲ್ಲಿನ ಕಂಬಗಳ ರೀತಿಯಲ್ಲಿ ಎತ್ತರವಾಗಿದ್ದು, ಕಂಬಗಳ ಚೌಕ ಭಾಗಗಳಲ್ಲಿ ಅನೇಕ ರೀತಿಯ ಉಬ್ಬುಶಿಲ್ಪ ಕೆತ್ತನೆಗಳನ್ನು ಬಿಡಿಸಲಾಗಿದೆ. ಮೇಲೆ ಪುಷ್ಪ ಬೋದಿಗೆಯನ್ನು ಹೊಂದಿದೆ. ಈ ದೇವಾಲಯದ ನವರಂಗ ಮಂಟಪದಲ್ಲಿ ಎಡಭಾಗದ ಗೋಡೆಗೆ ಮೈಲಾರ ದೇವರ ಮುರಿದ ಶಿಲ್ಪವನ್ನು ಗೋಡೆಗೆ ಸೇರಿಸಿ ಕಟ್ಟಲಾಗಿದೆ. ಬಹುಶಃ ನೊಳಂಬರ ಕಾಲದ ಮೂಲಮೈಲಾರ ದೇವರು ಇದೇ ಆಗಿದ್ದಿರಬೇಕು. ಗುಂಗರು ಕೂದಲಿನ ನಗೆಮೊಗದ ಡಮರು ಮತ್ತು ಶೂಲಗಳನ್ನು ಹಿಡಿದಿರುವ ಈ ಶಿಥಿಲ ಬಿಂಬ ಸುಮಾರು ೨ ಅಡಿ ಎತ್ತರವಾಗಿದೆ. ಈ ದೇವಾಲಯಗಳ ಬಲಬದಿಗೆ ಇನ್ನೊಂದು ದೇವಾಲಯವಿದ್ದು, ಇದೂ ಕೂಡ ನೊಳಂಬರ ಕಾಲದ ರಚನೆಯೇ ಆಗಿದ್ದಿರಬೇಕು. ಗರ್ಭಗೃಹ ಮತ್ತು ಅಂತರಾಳದ ಭಾಗವನ್ನು ಮಾತ್ರ ಹೊಂದಿದ್ದು, ನೆಲಮಟ್ಟದಿಂದ ಸುಮಾರು ೨ ಅಡಿ ಆಳದಲ್ಲಿ ಇದರ ಅಧಿಷ್ಠಾನವಿರಬೇಕು. ದೇವಾಲಯದ ಮೇಲ್ಭಾಗವು ಕೆಳಮುಖವಾಗಿ ಬಾಗಿದ ಹಂತಗಳ ಕಲ್ಲನ್ನು ಕ್ರಮಕ್ರಮವಾಗಿ ಮೇಲ್ಗಡೆಯ ವರೆಗೂ ಜೋಡಿಸಿ, ಶಿಖರವನ್ನು ರಚಿಸಲಾಗಿದೆ.

ದೇವಾಲಯದ ಹೊರಭಾಗದಲ್ಲಿ ಗೋಡೆಗೆ ಒರಗಿಸಿದಂತೆ ಮೈಲಾರನ ಕಥೆಗೆ ಸಂಬಂಧಿಸಿದ ಬಿಡಿ ಶಿಲ್ಪಗಳಿದ್ದು, ಅವುಗಳನ್ನು ವೀರಗಲ್ಲುಗಳ ಮಾದರಿಯಲ್ಲಿ ಕಡೆದು ನಿಲ್ಲಿಸಲಾಗಿದೆ. ದೇವಾಲಯದ ಪ್ರಕಾರಕ್ಕೆ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಪ್ರವೇಶದ್ವಾರಗಳಿದ್ದು, ದಕ್ಷಿಣ ದ್ವಾರದ ಹೊರಗಡೆ ವಿಶಾಲವಾದ ನೀರಿನ ದೋಣಿ ಇದೆ.

ನಿಟ್ಟೂರು

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆಯಿಂದ ಸುಮಾರು ೬ ಕಿ.ಮೀ. ದೂರಕ್ಕೆ ವಾಯುವ್ಯ ದಿಕ್ಕಿನಲ್ಲಿದೆ. ನಿಟ್ಟೂರು ಗ್ರಾಮದಿಂದ ಸಮೀಪದಲ್ಲಿರುವ ಗುಡ್ಡದ ತಪ್ಪಲಿನಲ್ಲಿ ಅಶೋಕನ ಎರಡು ಶಿಲಾಶಾಸನಗಳಿವೆ. ಈ ಎರಡು ಶಿಲಾಶಾಸನಗಳು ಅಶೋಕನ ಲಘು ಶಿಲಾಶಾಸನ ಮಾಲಿಕೆಯ ಗುಂಪಿಗೆ ಸೇರಿದ್ದು,[೨] ಕರ್ನಾಟಕದಲ್ಲಿ ದೊರೆತಿರುವ ಲಘು ಶಿಲಾಶಾಸನಗಳ ಗುಂಪಿಗೆ ಇವುಗಳು ಸೇರ್ಪಡೆಯಾಗಿವೆ. ಈ ಶಾಸನಗಳ ಆಧಾರದಿಂದ ಬಲ್ಲಕುಂದೆ ನಾಡಿನ ಇತಿಹಾಸವು ಕ್ರಿ.ಪೂ. ೩ ನೇ ಶತಮಾನಕ್ಕೆ ಹಿಂದೆ ಹೋಗುತ್ತದೆ. ನಿಟ್ಟೂರಿನಲ್ಲಿರುವ ಅಶೋಕನ ಶಾಸನಗಳನ್ನು ಎರಡು ಪ್ರತ್ಯೇಕ

ಬಂಡೆಗಳ ಮೇಲೆ ಬರೆಯಲಾಗಿದೆ. ಈ ಶಾಸನಗಳ ಮಹತ್ವವೆಂದರೆ ಅಶೋಕನ ಹೆಸರು ಉಲ್ಲೇಖವಾಗಿರುವುದು. ಹೀಗಾಗಿ ಕರ್ನಾಟಕದಲ್ಲಿ ಅಶೋಕನ ಹೆಸರನ್ನು ಹೇಳುವ ಮಸ್ಕಿ ಶಾಸನವನ್ನು ಬಿಟ್ಟರೆ ನಿಟ್ಟೂರು ಶಾಸನಗಳಲ್ಲಿ ಅಶೋಕನನ್ನು ಹೆಸರಿಸುತ್ತವೆ. ಅಶೋಕನ ಎರಡು ಶಾಸನಗಳು ಅಲ್ಪಸ್ವಲ್ಪ ಹಾಳಾಗಿದ್ದು, ಉಳಿದಂತೆ ಅಶೋಕನ ಲಘು ಶಿಲಾಶಾಸನಗಳ ಪಾಠವನ್ನು ಇವುಗಳಲ್ಲಿ ಬರೆಯಲಾಗಿದೆ. ಹೀಗಾಗಿ ಅಶೋಕನನ್ನು ಹೆಸರಿಸಿರುವ ಕೆಲವೇ ಶಾಸನಗಳಲ್ಲಿ ಇವು ಒಂದಾಗಿದ್ದು, ಅಶೋಕನಿಗೆ ಈ ಪ್ರದೇಶಗಳಿಗೆ ಅವಿನಾಭಾವ ಸಂಬಂಧವಿದ್ದುದನ್ನು ತಿಳಿಯಬಹುದಾಗಿದೆ.

ಬಲ್ಲಕುಂದೆ

ಬಲ್ಲಕುಂದೆಯು ತೆಕ್ಕಲಕೋಟೆಯಿಂದ ೧೨ ಕಿ.ಮೀ. ದೂರದಲ್ಲಿದೆ. ಕ್ರಿಶ. ೧೦ ನೆಯ ಶತಮಾನದಿಂದ ೧೨ ನೆಯ ಶತಮಾನದ ಅಂತ್ಯದ ವರೆಗೆ ಅದೇ ಹೆಸರಿನ ನಾಡಿನ ರಾಜಧಾನಿಯಾಗಿತ್ತು. ಶಾಸನಗಳಲ್ಲಿ ಈ ನಾಡನ್ನು ಸಸ್ಯ ಸಂಪತ್ತಿನಿಂದ ಕೂಡಿದೆ. ಭತ್ತದ ಗದ್ದೆಗಳಿಂದ ಅನೇಕ ಪ್ರಸಿದ್ಧ ಪಟ್ಟಣಗಳಿಂದ ಕೂಡಿತ್ತೆಂದು ವರ್ಣಿಸಲಾಗಿದೆ.

"ಜಲಧಿಬ್ಯಾವೇಷ್ಟಿತೋರ್ವ್ವಿಮಹಿಳೆಗೆ ವಿಳಸಲ್ಲೋಳ ಬಾಳಸ್ಥಳಸ್ಥಳೀ ಕುಂತಳ ದೇಶನ್ತಾನೆ ನಿಪ್ಪಂತಿರಲೆಸೆವಲಸತ್ಕುಂತಳ ಕ್ಷೋಣಿಗುದ್ಯತ್ತಿಳಕಂ ತಾಂ ಬಲ್ಲಕುಂದಾ ವಿಷಯ ಮದಿಕ ಲಕ್ಷ್ಮೀ ಸಮಾಸೇವಿತಂ ಭೂಲಲನಾ ಲೀಲಾ ವಿಳಾಸಸ್ಪುರಿತ ಕಬರಿಕಾಕುಂದದಂತೊಪ್ಪಿ ತೋರ್ಕ್ಕುಂ॥ ಅದೆಂತೆಂದಡೆ ॥ ಊರೊರ್ದ್ದಪ್ಪದೆ ಪೂತ ಭೂತಲತೆಯಿಂ ಮತ್ತಾಳಿಯಿಂ ಶಾಲಿಯಿಂದ ಊರೊರ್ದ್ದಪ್ಪದೆಗಂಗರಿಂ ಕುಡಿಯರಿಂ ಶ್ರೀಮಂತರಿಂ ಕಾಂತರಿಂದೂ ರೂರ್ದ್ದಪ್ಪದೆ ದೇವತಾ ನಿಳಯದಿಂ ಸದ್ಭಕ್ತರಿಂ ಚೆಲುವು ವೆತ್ತೋರೊರ್ದ್ದಪ್ಪದೆ ಬಲ್ಲಕುಂದೆ ನಡುನಾಳ್ಸಂತಂ ಬಸಂತಕರುಂ ಅಂತುನಾಡ ನಡುವೆ ॥ಕಂ॥" ಎಂದು ಶಾಸನವು ವರ್ಣಿಸುತ್ತದೆ.[೩೩]

"ಶ್ರೀ ಜಂಬೂದ್ವೀಪಲಕ್ಷ್ಮೀವದನ ತಿಳಕಮಿರ್ಪ್ಪಂತೆ ಚೆಲ್ವಾಗಿ ಲಕ್ಷ್ಮೀ ಭಾಜಂ ಶ್ರೀತುಂಗಭದ್ರಾಹ್ವಯ ಸುರನದಿ ಯಿನ್ತೆಂಕ್ಕಲೊಪ್ಪುತ್ತಮಿರ್ಕ್ಕುಂ ರಾಜೀವೋತ್ಕೀರ್ಣ್ನ ಷಂಡ ಪ್ರತತಿಗಳಿನಶೋಕಾಮ್ರ ಪುನ್ನಾಗ ತಾಲೋರ್ವ್ವಿಜಾನೀಕಂಗಳಿಂ ಕಿಕ್ಕಿಜಿಗಿಜಿದು ಜಗತ್ಸೇವ್ಯ ಮತ್ಯನ್ತ ಬಬ್ಬತಿಳಿಗೊಳದಿಂದ ಮಡಲ್ತು ತಳಿತಾರಮೆಯಿಂ ನೆಜಿ ಪೂತುಕಾಯ್ತುಪಣ್ತೆಳೆಗೆ ವಿಳಾಸಮಪ್ಪವನದಿಂ ಪಥಿಕರ್ಗ್ಗೆ ತೃಷಾಶ್ರಮಕ್ಷುಧಾರವಳಿಯ ನಂದಾಗಲೀಯವನಾವಾರ್ಗ್ಗವೆನಲ್ಕಡು ರಂಮ್ಯವಾಗಿ ಕಣ್ಗೊಳಿಸುವ ಬಲ್ಲಕುನ್ದೆ ವೆಸರಿಂದೆಸೆವಾ ವಿಷಯಾಂತರಾಳದೊಳು" ಎಂದು ವರ್ಣಿಸಲಾಗಿದೆ.

ಆ ಸಮುದ್ರದ ಸುತ್ತಿಂ ಗೊಳಗಾದ ಜಂಬೂದ್ವೀಪ ಭೂಪಾಳ ಚಂಚಕ್ಕಿರೀಟಾಯ ಮಾನವಾದ ಮೇರುಗಿರಿಯ ತೆಂಕಣ ಭಾರತವರು..... ಅನೇಕ ಜನ ಪದಾತಿಶಯ ಮೆನಿಸಿ ಬಲ್ಲಕುಂದೆ ಎಂಬ ನಾಡುಂಟದಱ.....[೩೪]

ಭಾರತ ಮಹೀಮಹಿಳಾ ಮಹನೀಯ ಭಾಳದೊಳು ಕುಂತಳದಂತೆ ಶೋಭಿಸುವ ಕುಂತಳ ಭೂತಳಭಾಮೆ ಗೋವಗಂ ಕಾಂತಮುಖಾಂತ ದೊಳ್ಪಿಡಿದ ಕಂಣಡಿನಯನ್ನಮ ಚೆನ್ನಾನಾಗಿ ವೋರನ್ತಿರೆ ಬಲ್ಲಕುಂದೆ ನಾಡು ನಾಳ್ಕರ ಮೊಪ್ಪುಗುಮೆತ್ತ ನೊಳ್ಪೊಡಂ ವ ॥ ಎಂದು ವರ್ಣಿಸಿದೆ.

ಈಗಿನ ಬಲ್ಲಕುಂದೆಯು ಒಂದು ಕುಗ್ರಾಮವಾಗಿದ್ದು, ಹಗರಿ ನದಿಯ ಪಶ್ಚಿಮ ದಂಡೆಯಲ್ಲಿದೆ. ಈ ಊರಿನ ಪ್ರವೇಶದ್ವಾರವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾಗಿದ್ದು, ಅಲ್ಪಸ್ವಲ್ಪ ಮಾರ್ಪಾಟನೊಂದಿಗೆ ಇಂದಿಗೂ ಸುಸ್ಥಿತಿಯಲ್ಲಿದೆ. ವೃತ್ತಾಕಾರದ ಕಂಬಗಳನ್ನು ಎತ್ತರವಾದ ಜಗಲಿಗಳ ಮೇಲೆ ನಿಲ್ಲಿಸಿ ಅದರ ಮೇಲೆ ಮಂಟಪವನ್ನು ರಚಿಸಲಾಗಿದೆ. ಕಂಬಗಳ ತಳಭಾಗವು ಚೌಕಾಕಾರವಾಗಿದ್ದು, ಮೇಲೆ ವೃತ್ತಾಕಾರವಾಗಿ ಸಾಗುತ್ತಾ ಹೋಗಿ ಕುಂಬಭಾಗದ ಮೇಲೆ ಸಾಮಾನ್ಯ ಬೋದಿಗೆಯನ್ನು ಇರಿಸಲಾಗಿದೆ. ಯಾವುದೇ ಅಲಂಕರಣಗಳು ಈ ಕಂಬದಲ್ಲಿಲ್ಲ. ಜಗತಿಯ ಪ್ರವೇಶದ್ವಾರದ ಬಲಗಡೆಯ ಕಂಬವೊಂದರಲ್ಲಿ ಶಾಸನವಿದೆ. ಊರಿನ ಒಳಗೆ ಪ್ರವೇಶಿಸುತ್ತಿದ್ದಂತೆ ಬಲಭಾಗಕ್ಕೆ ಒಂದು ಹಳೆಯ ಬಾವಿ ಇದ್ದು, ಅದರ ದಂಡೆಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳಿವೆ. ಊರಿನ ಹಿಂಬದಿಯಲ್ಲಿ ಜೈನ ಬಸದಿಯ ಅವಶೇಷಗಳಿದ್ದು, ಒಡೆದು ಭಗ್ನವಾದ ಜಿನಬಿಂಬಗಳು, ಬಾಗಿಲುವಾಡ ಮುಂತಾದವುಗಳನ್ನು ನೋಡಬಹುದಾಗಿದೆ.

ಸಿರುಗುಪ್ಪ ಶಾಸನದಲ್ಲಿ ಕ್ರಿ.ಶ. ೯೫೭ ರಲ್ಲಿ ಗಜಜೀವಿ ವಂಶದ ಶತ್ರುಘ್ನ ಎಂಬುವವನು ಕರಿವೂರಿನಲ್ಲಿ ಜೈನ ಬಸದಿಯೊಂದನ್ನು ನಿರ್ಮಿಸಿದಂತೆ ಹೇಳಿದೆ. ಬಹುಶಃ ಬಲ್ಲಕುಂದೆಯ ಜೈನರ ಅವಶೇಷಗಳಿರುವ ಸ್ಥಳವೇ ಈ ಕರಿವೂರು ಆಗಿದ್ದಿರಬೇಕು.[೩೫]

ಸಿರುಗುಪ್ಪ ೩೫ ಶಾಸನದ ಪ್ರಕಾರ ಈ ಗ್ರಾಮದಲ್ಲಿ ಕುಂದ, ಕುಂದಾನ್ವಯದ ನಂದಿ ಸಂಘದ ದೇಶಿಗಣಕ್ಕೆ ಸೇರಿದ ವೀರಣನ್ದಿಮುನಿ ಈ ಕಾಲಕ್ಕೆ ಇದ್ದಂತೆ ಶಾಸನವೊಂದು ತಿಳಿಸುತ್ತದೆ.

ಊರಿನ ಹೊರಭಾಗದಲ್ಲಿ ಸಹಜ ಗುಹೆಯೊಂದಿದ್ದು, ಬನ್ನಿ ಮಹಾಕಾಳಮ್ಮ ದೇವಾಲಯವಿದೆ. ಸಮೀಪದಲ್ಲಿ ನೀರಿನ ಸಹಜ ದೊಣೆಯೊಂದಿದೆ. ಬನ್ನಿಮಾಂಕಾಳಮ್ಮನ ದೇವಾಲಯಕ್ಕೂ ಗ್ರಾಮದ ಅಗಸೆಗೂ ಮತ್ತೊಂದು ದೇವಾಲಯವಿದ್ದು ಇದು ಈಶ್ವರನಿಗೆ ಮುಡಿಪಾಗಿದೆ. ಈ ಜೈನ ಬಸದಿಯನ್ನು ನೊಳಂಬ ರಾಜನ ನಿಯೋಗಿಯಾದ ಕೌಶಿಕ ಗೋತ್ರದ ಮಾಚಣಾರ್ಯನ ಮಗನಾದ ಶ್ರೀಧರಾರ್ಯನು ಬಲ್ಲಕುಂದೆ ತೀರ್ಥದಲ್ಲಿ ಶಿಲಾಮಯ ದೇವಾಲಯವನ್ನು ಕಲ್ಪಿಸಿದಂತೆ ಉಲೇಖ ಬರುವುದರಿಂದ ಈ ದೇವ ಮಂದಿರವೊಂದನ್ನು ಕ್ರಿ.ಶ. ೧೦೦೮ ರಲ್ಲಿ ನಿರ್ಮಿಸಿರಬೇಕು.[೩೬]

ಊರಿನ ಹಿಂಬದಿಯಲ್ಲಿ ಬೆಟ್ಟವೊಂದಿದ್ದು, ಆ ಬೆಟ್ಟದ ದೆಸೆಯಿಂದ ಈ ಗ್ರಾಮಕ್ಕೆ ಬಲ್ಲಕುಂದೆ ಎಂದು ಹೆಸರಾಗಿದೆ. ಬಲ್ಲಕುಂದೆ ಎಂದರೆ ಬಹುಶಃ ಕರಡಿಗಳು ವಾಸವಾಗಿದ್ದ ಬೆಟ್ಟ ಎಂದರ್ಥ. ಬೆಟ್ಟದಲ್ಲಿ ಯಾವುದೇ ವಾಸದ ಕುರುವುಗಳು ಕಂಡುಬರುವುದಿಲ್ಲ. ಹಗರಿ ನದಿಯ ದಡದಲ್ಲಿ ಈ

ಗ್ರಾಮವಿರುವುದರಿಂದ ಆರ್ಥಿಕವಾಗಿ ಆ ಕಾಲಕ್ಕೆ ಸದೃಢವಾದಂತಹ ಗ್ರಾಮವಾಗಿದ್ದಿತು. ಮುಂದೆ ಬಲ್ಲಕುಂದೆಯ ಹೆಸರಿನಲ್ಲಿ ನಾಡು ಉಳಿದರೂ ನಾಡಿನ ಕೇಂದ್ರ ಮುಂದೆ ಕುರುಗೋಡಿಗೆ ಸ್ಥಳಾಂತರವಾಗುತ್ತದೆ. ಇಲ್ಲಿಂದಮುಂದೆ ಇದು ರಾಜಕೀಯವಾಗಿ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆ.

ಬಳ್ಳಾರಿ

ಬಳ್ಳಾರಿಯ ಉಲ್ಲೇಖವು ನೊಳಂಬ ಮಂಗಪರಸನ ಶಾಸನದಲ್ಲಿ ಉಲ್ಲೇಖವಾಗಿದ್ದು, ಬಳ್ಳಾರಿ ೩೦ ನಾಡಿನ ಪೊಲೆಯರಿಗೆ ಕೆಲವು ದಾನಗಳನ್ನು ಬಿಟ್ಟಂತೆ ಶಾಸನಗಳು ತಿಳಿಸುತ್ತವೆ.[೩೭] ಹೀಗಾಗಿ ಬಳ್ಳಾರಿಯು ಕ್ರಿ.ಶ. ೯-೧೦ ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಇದು ಬಳ್ಳಾರಿ ೩೦ ರ ಆಡಳಿತ ಪ್ರದೇಶವೂ ಆಗಿತ್ತು. ಬಳ್ಳಾರಿಯು ಕುರುಗೋಡು ಸಿಂಧರ ಕಾಲದಲ್ಲಿ ಒಂದು ಕೋಟೆ ಪಟ್ಟಣವಾಗಿ ಪ್ರಸಿದ್ಧಿಯನ್ನು ಪಡೆದಿತ್ತು. ಬಳ್ಳಾರಿ ಕೋಟೆಯು ಈ ಕಾಲದಲ್ಲಿ ರಚಿತವಾಗಿದ್ದು, ಮುಂದೆ ಕಾಲದಿಂದ ಕಾಲಕ್ಕೆ ಅದು ಜೀರ್ಣೋದ್ಧಾರವಾಗಿ ಬ್ರಿಟೀಷರ ಕಾಲದವರೆಗೂ ಮುಂದುವರೆದಿತ್ತು. ಸಿಂಧರ ಆಡಳಿತದ ಕುರುಹಾಗಿ ಬೆಟ್ಟದ ಮೇಲೆ ಕೋಟೆಯ ಒಳಗೆ ಒಂದೆರಡು ದೇವಾಲಯಗಳು ಉಳಿದಿವೆ. ಬಳ್ಳಾರಿಯ ಬೀವರಸನ ಉಲ್ಲೇಖ ಕ್ರಿ.ಶ. ೧೧೩೧ ರ ಶಾಸನದಲ್ಲಿ ಉಲ್ಲೇಖವಾಗಿದೆ.[೩೮] ಇನ್ನೊಂದು ಶಾಸನದಲ್ಲಿ ಬಳ್ಳಾರಿಯ ರಾಚಮಲ್ಲ ದೇವನ (ಕ್ರಿ.ಶ. ೧೧೪೧ ರ) ಉಲ್ಲೇಖ ಬಂದಿದ್ದು, ಈತನು ಸಿಂಧ ವಂಶದ ಒಂದನೆಯ ರಾಚಮಲ್ಲನಾಗಿದ್ದಿರಬೇಕು.[೩೯]

ಬಳ್ಳಾರಿಯು ಕುರುಗೋಡು ಸಿಂಧರ ವಶದಲ್ಲಿತ್ತು ಹಾಗೂ ಅವರು ಇಲ್ಲಿಂದಲೂ ಆಳುತ್ತಿದ್ದಿರಬೇಕು.

ಕೋಟೆಯಲ್ಲಿನ ಕೋಟೆ ಮಲ್ಲೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದ್ದು, ಕಾಲದಿಂದ ಕಾಲಕ್ಕೆ ಜೀರ್ಣೋದ್ಧಾರವಾಗಿದ್ದು, ಮೂಲ ಆಕಾರವನ್ನು ಕಳೆದುಕೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದು, ಸಭಾ ಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗಗಳಿಂದ ಪ್ರವೇಶ ದ್ವಾರಗಳಿವೆ. ದೇವಾಲಯದಲ್ಲಿ ಒಂದು ಕಾಲಕ್ಕೆ ಕಕ್ಷಾಸನಗಳಿದ್ದು, ದಕ್ಷಿಣ ಭಾಗದಲ್ಲಿ ಮಾತ್ರ ಉಳಿದುಬಂದಿವೆ. ಉಳಿದಂತೆ ಪ್ರಾಚೀನ ಕುರುಹುಗಳು ನಾಶವಾಗಿವೆ. ಗ್ರಾಮದಲ್ಲಿರುವ ಬಳ್ಳಾರಿ ದುರ್ಗಮ್ಮನ ದೇವಾಲಯವು ಪ್ರಾಚೀನ ಕಾಲದ ಈ ಪ್ರದೇಶದ ಶಕ್ತಿ ಕೇಂದ್ರವಾಗಿದ್ದು, ಈ ದೇವಿಯ ಹೆಸರಿನಿಂದ ಈ ಗ್ರಾಮಕ್ಕೆ ಬಳ್ಳಾರಿ ಎಂಬ ಹೆಸರು ಬಂದಿರಬೇಕು. ಬಳ್ಳಾರಿ ಎಂದರೆ ಬಳಾರಿ = ಸ್ತ್ರೀದೇವತೆ.

ವಿಪ್ರ (ದೇವಘಾತ)

ವಿಪ್ರ ಗ್ರಾಮ ಗಂಗಾವತಿಯ ದಕ್ಷಿಣಕ್ಕೆ ತುಂಗಭದ್ರಾ ನದಿ ದಡದಲ್ಲಿದ್ದ ಒಂದು ಪಾಳುಗ್ರಾಮ. ಬಲ್ಲಕುಂದೆ ನಾಡಿನ ನೊಳಂಬರ ಒಂದು ನೆಲೆವೀಡು ಆಗಿತ್ತು. ಬಹುಶಃ ಕಂಪ್ಲಿಗೆ ಬಂದ ನೊಳಂಬರಿಗೆ

ಅನಿವಾರ್ಯ ಕಾರಣಗಳಿಂದ ತಮ್ಮ ರಾಜಧಾನಿಯನ್ನು ತಾತ್ಕಾಲಿಕವಾಗಿ ಬದಲಿಸಬೇಕಾದಂತ ಸನ್ನಿವೇಶ ಒದಗಿದಾಗ ವಿಪ್ರವನ್ನು ತಾತ್ಕಾಲಿಕ ನೆಲೆವೀಡನ್ನಾಗಿ ತೆಗೆದುಕೊಂಡಿರಬೇಕು. ಒಂದೆರಡು ಶಾಸನಗಳು ವಿಪ್ರವನ್ನು ನೆಲವೀಡನ್ನಾಗಿ ಮಾಡಿಕೊಂಡಿದ್ದರ ಬಗ್ಗೆ ಉಲ್ಲೇಖಿಸುತ್ತವೆ. ವಿಪ್ರದ ಪ್ರದೇಶದಲ್ಲಿ ತುಂಗಭದ್ರಾ ನದಿಯ ಈಶಾನ್ಯಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಹರಿಯುತ್ತಿರುವುದರಿಂದ ಈ ಸ್ಥಳವು ಒಂದು ಧಾರ್ಮಿಕ ಕೇಂದ್ರವಾಗಿಯೂ ಬೆಳೆದಿದೆ. ವಿಪ್ರದ ಭಾಗವನ್ನು ದೇವಘಾತ ಮತ್ತು ವಿಪ್ರ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ದೇವಘಾತದಲ್ಲಿರುವ ಅಮೃತಲಿಂಗೇಶ್ವರ ದೇವಾಲಯದ ಶಾಸನವು ಈ ಸ್ಥಳವು ಕಿಷ್ಕಿಂಧೆಯ ಪೂರ್ವಕ್ಕಿದ್ದು ೩೩ ದೇವತೆಗಳು ನೆಲೆಸಿದ್ದ ಸ್ಥಳವೆಂದು ಹೇಳಿದೆ.[೪೦] ಹೀಗಾಗಿ ಈ ಅಂಶದಿಂದ ಈ ಸ್ಥಳದ ಮಹತ್ವವನ್ನು ಅರಿಯಬಹುದಾಗಿದೆ.

ದೇವಘಾತದಲ್ಲಿರುವ ಅಮೃತಲಿಂಗೇಶ್ವರ ದೇವಾಲಯವು ಶಿಥಿಲವಾಗಿದ್ದು, ಈಗ ಗರ್ಭಗೃಹ, ಅಂತರಾಳ, ನವರಂಗ, ಮಂಟಪದ ಅರ್ಧ ಭಾಗ ಉಳಿದಿದೆ. ಅಧಿಷ್ಠಾನವು ಸರಳವಾಗಿದ್ದು, ಉಬ್ಬುಕಂಬಗಳನ್ನೊಳಗೊಂಡ ಭಿತ್ತಿ ಅಲಂಕಾರರಹಿತ ಪ್ರಸ್ತರ ಮತ್ತು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಿದ ಶಿಖರವಿದೆ. ದೇವಾಲಯದ ಕಂಬಗಳು ಕಲ್ಯಾಣ ಚಾಲುಕ್ಯರ ಕಂಬಗಳನ್ನು ಹೋಲುತ್ತಿದ್ದು, ಶಾಸನಗಳ ಕಾಲಕ್ಕೆ ನಿರ್ಮಾಣವಾಗಿರಬಹುದಾದ ದೇವಾಲಯವಾಗಿದೆ. ಹೀಗಾಗಿ (ಕ್ರಿ.ಶ. ೧೦ನೆಯ ಶತಮಾನ) ಅದರ ಸುತ್ತಮುತ್ತ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಲು ಅನುಕೂಲ ಆಗುವಂತೆ ಮಂಟಪಗಳನ್ನು ನಿರ್ಮಿಸಲಾಗಿದೆ. ದೇವಿ: ದೇವಾಲಯ ದ್ಯಾಮಪ್ಪನ ಗುಡಿಯು ದೇವಘಾತದಿಂದ ವಿಪ್ರಕ್ಕೆ ಹೋಗುವ ಹಾದಿಯಲ್ಲಿ ಈ ದೇವಿ ದೇವಾಲಯವಿದ್ದು ಶಿಥಿಲಾವಸ್ಥೆಯಲ್ಲಿದೆ. ದೇವಾಲಯವು ಗರ್ಭಗೃಹ, ಅಂತರಾಳ, ಮಂಟಪ ಮತ್ತು ತೆರೆದ ನವರಂಗವಿದೆ. ದೇವಾಲಯದ ಮೇಲೆ ಶಿಖರವಿಲ್ಲ. ಸರಳ ಅಧಿಷ್ಠಾನ, ಉಬ್ಬು ಕಂಬಗಳುಳ್ಳ ಭಿತ್ತಿಯು ಪ್ರಸ್ತರ ಭಾಗವನ್ನು ಮಾತ್ರ ಹೊಂದಿದೆ. ನವರಂಗದ ಕಂಬಗಳು ಅಮೃತಲಿಂಗೇಶ್ವರ ದೇವಾಲಯದ ಕಂಬಗಳಂತಿದ್ದು, ಈ ದೇವಾಲಯದ ಕಾಲವನ್ನು ಅಮೃತೇಶ್ವರ ದೇವಾಲಯದ ನಿರ್ಮಾಣ ಕಾಲಕ್ಕೆ ಸೇರಿಸಬಹುದಾಗಿದೆ. ಯಾವ ದೇವಿಯ ಶಿಲ್ಪವಿತ್ತೆಂಬ ಸ್ಪಷ್ಟನೆಯಿಲ್ಲ.

ಈಶ್ವರ ದೇವಾಲಯ

ವಿಪ್ರದಲ್ಲಿ ನೊಳಂಬರ ಆಳ್ವಿಕೆಯ ಕುರುಹು ಆಗಿ ಈಶ್ವರ ದೇವಾಲಯವನ್ನು ಹೆಸರಿಸಬಹುದಾಗಿದೆ. ದೇವಾಲಯದ ಹಿಂಭಾಗ ಮತ್ತು ಪಕ್ಕದ ಭಾಗಗಳು ಶಿಥಿಲಗೊಂಡು ಬಿದ್ದಿವೆ. ದೇವಾಲಯದ ಮುಂಭಾಗ ಮತ್ತು ಬಲಭಾಗಗಳು ಸ್ವಲ್ಪವಾಗಿ ಶಿಥಿಲಗೊಂಡಿವೆ. ಗರ್ಭಗೃಹ, ಅಂತರಾಳ ಮತ್ತು ಮಂಟಪವನ್ನು ಒಳಗೊಂಡಿರುವ ಭಾಗದ ಸುತ್ತು ಗೋಡೆಗಳು ಬಿದ್ದಿದ್ದು ತೆರೆದ ಮಂಟಪದಂತೆ ಭಾಸವಾಗುತ್ತದೆ. ನವರಂಗ ಮಂಟಪದ ಕಂಬಗಳು ಅಮೃತಲಿಂಗೇಶ್ವರ ದೇವಾಲಯದ ಕಂಬಗಳಿಗಿಂತ ಸ್ವಲ್ಪ ಪ್ರಾಚೀನ ಲಕ್ಷಣಗಳನ್ನು ಹೊಂದಿದ್ದು, ಈ ದೇವಾಲಯ ಈ ಆಧಾರದ ಮೇಲೆ ಹಾಗೂ ಹಳೆ

ನೆಲ್ಲುಡಿ ಶಾಸನದಲ್ಲಿ ವಿಪ್ರನಾರಾಯಣ ನೆಲೆವೀಡುವಿನ ಉಲ್ಲೇಖವಿರುವುದರಿಂದ ೧೧ ನೆಯ ಶತಮಾನದ ಪೂರ್ವಾರ್ಧಕ್ಕೆ ಹಾಕಬಹುದಾಗಿದೆ.[೪೧]

ವಿಪ್ರದ ಈ ಈಶ್ವರ ದೇವಾಲಯವು ತುಂಗಭದ್ರಾ ನದಿಯ ಉತ್ತರ ತೀರದ ಬಳುಕಿನಲ್ಲಿದ್ದು, ಧಾರ್ಮಿಕವಾಗಿ ಪವಿತ್ರವಾದ ಕ್ಷೇತ್ರವಾಗಿದೆ. ಹೀಗಾಗಿ ವಿಪ್ರವು ರಾಜಧಾನಿಯಾಗಿ ಇಂದು ಇರದಿದ್ದರೂ, ಧಾರ್ಮಿಕ ಕ್ಷೇತ್ರವಾಗಿ ಉಳಿದುಕೊಂಡಿದೆ.

ಸಂಡೂರು

ಕುಮಾರಸ್ವಾಮಿ ಬೆಟ್ಟ

ಸಂಡೂರು ಬಳಿಯ ಕುಮಾರಸ್ವಾಮಿ ದೇವಾಲಯ ಸಂಕೀರ್ಣದಲ್ಲಿ ಪಾರ್ವತಿ ದೇವಾಲಯ, ಕುಮಾರಸ್ವಾಮಿ ದೇವಾಲಯ ಹಾಗೂ ಬಿಡಿ ಶಿಲ್ಪಗಳಿವೆ.

ಪಾರ್ವತಿ ದೇವಾಲಯ

ಪಾರ್ವತಿ ದೇವಾಲಯವು ಗರ್ಭಗೃಹ ಮತ್ತು ವಿಶಾಲವಾದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದ ಒಳಗಡೆ ಬಾದಾಮಿ ಚಲುಕ್ಯರ ರೀತಿಯ ೬ ಕಂಬಗಳಿದ್ದು, ಬಾಗಿದ ಬೋದಿಗೆಗಳನ್ನು ಹೊಂದಿದೆ. ದೇವಾಲಯದ ಹೊರಭಾಗದ ಮುಂಭಾಗವು ಗೂಡು ರೀತಿಯ ಅಥವಾ ನಾಸಿ ರೀತಿಯ ಶಿಖರವನ್ನು ಹೊಂದಿದ್ದು, ಶಿಖರದ ಮೇಲ್ಭಾಗದಲ್ಲಿನ ಭಾಗವು ಶಿಖರ ಮತ್ತು ಸುಖಾಸನದ ರೀತಿಯ ರಚನೆಯನ್ನು ಹೊಂದಿದೆ. ಆ ಸುಖಾಸನದ ಮುಂಭಾಗವನ್ನು ದೇವಾಲಯದ ಮುಂಬದಿಯ ರಚನೆಯನ್ನಾಗಿ ಬಿಡಿಸಲಾಗಿದೆ. ಈ ಸುಖಾಸನದ ಮೇಲಭಾಗವು ಮಹಾನಾಸದಿಂದ ಕೂಡಿದ್ದು, ನಾಸದ ಒಳಗಡೆ ಸಣ್ಣ ಮಂಟಪವನ್ನು ಬಿಡಿಸಲಾಗಿದೆ. ನಾಸದ ಕೆಳಭಾಗದಲ್ಲಿ ಉಬ್ಬುಕಂಬಗಳು ಜೋಡಿಯಾಗಿ ಬಂದಿದ್ದು, ಅವುಗಳ ಮೇಲೆ ಕಪೋತ ಬಂದಿದ್ದು, ಕಪೋತದ ಮೇಲೆ ಕುಳಿತವರನ್ನು ಬಿಡಿಸಲಾಗಿದೆ. ಈ ಭಾಗದಲ್ಲಿ ಮಹಿಷಮರ್ಧಿನಿ ಶಿಲ್ಪವನ್ನು ಬಿಡಿಸಲಾಗಿದೆ. ಈ ಹಂತದ ಕೆಳಭಾಗದಲ್ಲಿ ಹುಸಿಕಂಬಗಳು ಬಂದಿದ್ದು, ಆ ಭಾಗದಿಂದ ಕೆಳಕ್ಕೆ ಸಿಂಹಗಳು ಬಂದಿವೆ. ಈ ಪ್ರತಿಯ ಕೆಳಭಾಗದಲ್ಲಿ ದೀರ್ಘಕಪೋತ ರಚನೆ ಬಂದಿದ್ದು, ೬ ಕ್ಷುದ್ರ ನಾಸಿಗಳನ್ನು ಬಿಡಿಸಲಾಗಿದೆ. ಈ ನಾಸಿನಗಳ ಒಳಭಾಗದಲ್ಲಿ ಮನುಷ್ಯನ ತಲೆಯಾಕಾರವನ್ನು ಬಿಡಿಸಲಾಗಿದೆ. ನಾಶಿಯ ಕೆಳಭಾಗದ ಭಿತ್ತಿಯಲ್ಲಿ ಕೋಷ್ಠಗಳಿದ್ದು ಬಾಗಿಲಿನ ಇಕ್ಕೆಲದ ಕಂಬಗಳಲ್ಲಿ ಬಾದಾಮಿ ಚಾಲುಕ್ಯರ ಕಾಲದ ಅಲಂಕಾರಿಕ ಹೂವಿನ ಬಳ್ಳಿಗಳನ್ನು ಕಾಣಬಹುದು. ಬಾಗಿಲ ಇಕ್ಕೆಲಗಳಲ್ಲಿರುವ ಶೈವ ದ್ವಾರಪಾಲಕರು ನೈಜ ಸ್ಥಿತಿಯಲ್ಲಿ ನಿಂತಂತೆ ಬಿಡಿಸಲಾಗಿದೆ. ದ್ವಾರಪಾಲಕರ ಅಕ್ಕಪಕ್ಕದಲ್ಲಿ ಶಿವನ ಅವತಾರದ ಬಿಂಬಗಳಿವೆ. ಇವು. ಸಂಡೂರಿನ ಕುಮಾರಸ್ವಾಮಿ ದೇವಾಲಯವು ಕುಮುದ, ಬಹುಪಟ್ಟಿ ಧಾರವೃತ್ತ ಕುಮುದ ಪ್ರತಿ ಜಗತಿಯನ್ನು ಹೊಂದಿದೆ.

ಪಾರ್ವತಿ ದೇವಾಲಯದ ಭಿತ್ತಿಯಲ್ಲಿ ೮ ಉಬ್ಬುಕಂಬಗಳಿದ್ದು, ಮಧ್ಯೆ ಇರುವ ಎರಡು ಕಂಬಗಳ ನಡುವೆ ದೇವಾಲಯದ ಮೂರು ದಿಕ್ಕುಗಳಲ್ಲಿಯೂ ದೇವಕೋಷ್ಠಗಳಿವೆ. ಮೂರು ದೇವಕೋಷ್ಠಗಳಲ್ಲಿಯೂ ಶಿವನ ಬೇರೆ ಬೇರೆ ರೀತಿಯ ಶಿಲ್ಪಗಳನ್ನು ನಿಲ್ಲಿಸಲಾಗಿದೆ. ದೇವಕೋಷ್ಠಗಳ ಮೇಲ್ಭಾಗವನ್ನು ಹೂಬಳ್ಳಿಗಳಿಂದ ಅಲಂಕರಿಸಲಾಗಿದೆ. ಉಬ್ಬುಕಂಬಗಳ ಮೇಲೆ ದೇವಾಲಯದ ಒಳಭಾಗದಲ್ಲಿರುವಂತಹ ಬೋದಿಗೆಗಳನ್ನು ಬಿಡಿಸಿದ್ದು, ಅದರ ಮೇಲೆ ಪ್ರಸ್ತರ ಭಾಗವು ಬಂದಿದ್ದು, ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಕಾಣುವಂತೆ ಉತ್ತರ, ವಾಜನ, ವಲ್ಲಭಿ ಭಾಗದಲ್ಲಿ ಹಂಸ ಇದೆ. ಅದರ ಮೇಲೆ ಕಪೋತ ಬಂದಿದೆ. ಇಡೀ ದೇವಾಲಯವು ಐದು ಹಂತಗಳನ್ನು ಹೊಂದಿದ್ದು, ಮೇಲಕ್ಕೆ ಹೋದಂತೆ ತಲಗಳು ಚಿಕ್ಕದಾಗುತ್ತಾ ಬಂದಿವೆ. ಮೇಲೆ ಶಿಖರವು ವೃತ್ತಾಕಾರವಾಗಿದೆ. ದೇವಾಲಯದ ಪೂರ್ವ ಮುಖದಲ್ಲಿ ನಾಸಿ ಭಾಗ ಮುಂಚಾಚಿಕೊಂಡು ಬಂದಿದೆ. ಈ ಬಗ್ಗೆ ವಿವರಗಳನ್ನು ಹಿಂದೆಯೇ ಹೇಳಲಾಗಿದೆ. ದೇವಾಲಯದ ಪ್ರತಿಬಂಧ ಅಧಿಷ್ಠಾನವನ್ನು ಹೊಂದಿದು, ದೇವಾಲಯದ ಮುಖ್ಯ ಬಾಗಿಲ ಬಲಬದಿಗೆ ಸಿದ್ಧಮಾತ್ರಕ ಲಿಪಿಯ ಶಾಸನವಿದೆ. ಈ ಅಧಿಕಾರಿಗಳಿಂದ ಈ ದೇವಾಲಯ ರಚನೆಯಲ್ಲಿ ಉತ್ತರ ಭಾರತದವರ ಕೈವಾಡವಿರಬಹುದೆಂದು ಊಹಿಸಬಹುದಾಗಿದೆ. ದೇವಾಲಯದಲ್ಲಿ ಕನ್ನಡ ಶಾಸನಗಳಿದ್ದು, ಜೇನಾಲಯನ್[೨] ಎಂಬುವವನು ಈ ದೇವಾಲಯವನ್ನು ರಚಿಸಿರುವ ಸಾಧ್ಯತೆಗಳಿವೆ.

ಕುಮಾರಸ್ವಾಮಿ ದೇವಾಲಯ

ಕುಮಾರಸ್ವಾಮಿ ದೇವಾಲಯವು ರಾಷ್ಟ್ರಕೂಟರ ಅಂತ್ಯಕಾಲದ ದೇವಾಲಯವಾಗಿದ್ದು, ಈ ದೇವಾಲಯದ ರಚನೆಯಲ್ಲಿ ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಪ್ರಭಾವವನ್ನು ಕಾಣಬಹುದಾಗಿದೆ.

ದೇವಾಲಯವು ಕಲ್ಯಾಣ ಚಾಲುಕ್ಯರ ರೀತಿಯ ಆರಂಭ ಕಾಲದ ರೀತಿಯ ಆದಿಷ್ಠಾನವನ್ನು ಹೊಂದಿದ್ದು, ಮೇಲಿನ ಬಿತ್ತಿಯಲ್ಲಿ ಬ್ರಹ್ಮಕಾಂತ ಮಾದರಿಯ ಉಬ್ಬು ಕಂಬಗಳನ್ನು ಬಿಡಿಸಲಾಗಿದೆ. ದೇವಾಲಯದ ರಚನೆಯಲ್ಲಿ ಭದ್ರ, ಕರ್ಣಗಳನ್ನು ಹೊಂದಿದ್ದು ಅಧಿಷ್ಠಾನದಲ್ಲಿಯೂ ಈ ಭಾಗಗಳನ್ನು ತರಲಾಗಿದೆ. ಕರ್ಣಕೂಟಗಳಿರುವ ಭಾಗದಲ್ಲಿ ಜೋಡು ಕಂಬಗಳನ್ನು ತಂದಿದ್ದು, ಅವುಗಳ ಬೋದಿಗೆಯ ಮೇಲೆ ತ್ರಿಕೋಣ ಮಾದರಿಯ ಶಿಖರಗಳನ್ನು ಬಿಡಿಸಲಾಗದೆ. ಮೇಲೆ ಪ್ರಸ್ತರ ಭಾಗದಲ್ಲಿ ಉತ್ತರ, ವಾಜನ ಮತ್ತು ಕಪೋತ ರೀತಿಯ ರಚನೆ ಬಂದಿದೆ. ದೇವಾಲಯದ ಮೇಲೆ ಶಿಖರವಿದ್ದು, ಬ್ರಹಚಂದ ಶಿಖರವನ್ನು (ಬಿಡಿಸಲಾಗಿದೆ) ರಚಿಸಲಾಗಿದೆ.

ಗರ್ಭಗೃಹ: ಗರ್ಭಗೃಹದಲ್ಲಿ ನಾಲ್ಕೂವರೆ ಅಡಿ ಎತ್ತರವಾದ ಕುಮಾರಸ್ವಾಮಿಯ ಶಿಲ್ಪವು ಸಮ ಭಂಗಿಯಲ್ಲಿದೆ. ಶಿಲ್ಪವು ಒಂದು ಕೈಯಲ್ಲಿ ದಂಡಾಯುಧ, ಇನ್ನೊಂದು ಕೈಯಲ್ಲಿ ಅಭಯ, ಕೈಯಮೇಲೆ ಕ್ರೌಂಚ ಪಕ್ಷಿ ಸುತ್ತಲೂ ಪ್ರಭಾವಳಿ ಮತ್ತು ಕಿರೀಟ ಮುಕುಟದ ಅಲಂಕಾರವನ್ನು ಹೊಂದಿದೆ.

ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಕುಮುದ ಮತ್ತು ಚೌಕಗಳುಳ್ಳ ಪಟ್ಟಿಕಾ ಭಾಗಗಳು ಎದ್ದುಕಾಣುತ್ತವೆ. ದೇವಾಲಯದ ಗೋಡೆಯಲ್ಲಿ ಎತ್ತರವಾಗಿರುವ ಅರ್ಧ ಕಂಬಗಳು ಹಾಗೂ ದೇವಕೋಷ್ಠಗಳಿವೆ. ದೇವಾಲಯದ ಭಿತ್ತಿ ದಪ್ಪವಾಗಿದ್ದು, ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿ ಇನ್ನೂ ಎರಡು ದೇವಾಲಯಗಳಿದ್ದು, ಅವುಗಳಲ್ಲಿ ಒಂದೆರಡು ಈಶ್ವರ ದೇವಾಲಯ, ಪಾತಾಳೇಶ್ವರ, ನಾಗನಾಥೇಶ್ವರ ಮೊದಲಾದ ದೇವಾಲಯಗಳಿವೆ. ಇವೆಲ್ಲವೂ ಚಿಕ್ಕ ದೇವಾಲಯಗಳಾಗಿದ್ದು, ಬಹುಶಃ ೧೧ ನೆಯ ಶತಮಾನಕ್ಕೆ ಸೇರಿದವುಗಳಾಗಿವೆ. ಪಾರ್ವತಿ ದೇವಾಲಯದ ರಚನೆಗೆ ಮರಳುಗಲ್ಲನ್ನು ಬಳಸಿದ್ದು ಕುಮಾರಸ್ವಾಮಿ ದೇವಾಲಯಕ್ಕೆ ನಸುಕೆಂಪು ಬಣ್ಣದ ಬಳಪದ ಕಲ್ಲು ಬಳಸಲಾಗಿದೆ. ದೇವಾಲಯದ ಶಿಲ್ಪಗಳಲ್ಲಿ ಕಾರ್ತಿಕೇಯ ಸ್ವಾಮಿ ಮೂರ್ತಿಯು ೧೦-೧೧ ನೆಯ ಶತಮಾನಕ್ಕೆ ಸೇರಿದ್ದು, ಬಲಗೈಯಲ್ಲಿ ದಂಡವನ್ನು ಹಿಡಿದಿದ್ದು, ಸುಮಾರು ೫ ಅಡಿ ಎತ್ತರದ ಮೂರ್ತಿ ಇದಾಗಿದೆ.

ಪಾರ್ವತಿ ದೇವಾಲಯದ ಮೂಲ ವಿಗ್ರಹವೂ ಸಹ ೧೦-೧೧ ನೆಯ ಶತಮಾನಕ್ಕೆ ಸೇರಿದೆ. ಈ ವಿಗ್ರಹಗಳಲ್ಲದೇ ಕುಮಾರಸ್ವಾಮಿ ದೇವಾಲಯದೊಳಗಿರುವ ಮಹಿಷಮರ್ದಿನಿ ವಿಗ್ರಹವೂ ಸಹ ೧೦-೧೧ ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಪಾರ್ವತಮ್ಮ ದೇವಾಲಯದಲ್ಲಿ, ಕೇಶವ, ಸೂರ್ಯ, ಯಮಧರ್ಮ ಶಿಲ್ಪಗಳಿವೆ. ಈ ದೇವಾಲಯಗಳ ಬಗ್ಗೆ ಸ್ಥಾನಿಕರ ಕೆಲವು ಶಾಸನಗಳು ಆ ಸ್ಥಾನಿಕರ ಹೆಸರನ್ನು ಉಲ್ಲೇಖಿಸಿದ್ದು, ಬಂಗಾಳದಿಂದ ಬಂದಿದ್ದ ಲೋಹಾಸನಿ ಗದಾಧರ ಎಂಬುವವನು ಕುಮಾರಸ್ವಾಮಿಯ ಪ್ರತಿಷ್ಠಾಪನೆ ಮಾಡಿರಬಹುದು. ಈ ಕಾರಣದಿಂದ ಈ ದೇವಾಲಯವು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲದಲ್ಲಿ ರಚಿತವಾಗಿರಬಹುದೆಂದು ನಾವು ಊಹಿಸಬಹುದಾಗಿದೆ.

ಹರಿಶಂಕರ ದೇವಾಲಯ

ಹರಿಶಂಕರ ದೇವಾಲಯವು ಚಿಕ್ಕದಾದ ರಚನೆಯಾಗಿದ್ದು, ಇದರಲ್ಲಿ ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಇದರ ಪಕ್ಕದಲ್ಲಿ ಸದಾ ನೀರು ಹರಿಯುತ್ತಿದ್ದು, ಪವಿತ್ರವಾದ ಸ್ಥಳವಾಗಿದೆ. ಬಹುಶಃ ಇದರ ಕಾಲವನ್ನು ದೇವಾಲಯದ ರಚನೆಯನ್ನು ಅನುಸರಿಸಿ ಹೇಳುವುದಾದಲ್ಲಿ ಕ್ರಿ.ಶ. ೯ ಮತ್ತು ೧೦ ನೆಯ ಶತಮಾನಕ್ಕೆ ಸೇರಿಸಬಹುದಾಗಿದೆ. ಕುಮಾರಸ್ವಾಮಿ ದೇವಾಲಯದ ಬಗ್ಗೆ ಹೇಳುವುದಾದಲ್ಲಿ ಕೊಳಗಲ್ಲು ಶಾಸನ ಮತ್ತು ಕುಡುತಿನಿಯ ಶಾಸನಗಳು ಸಂಡೂರಿನ ಕುಮಾರಸ್ವಾಮಿ ದೇವಾಲಯ, ಬೆಟ್ಟಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತವೆ. ವಡ್ಡಾರಾಧನೆಯ ಸನತ್‌ಕುಮಾರಸ್ವಾಮಿ ಕಥೆಯಲ್ಲಿ ಉಕ್ತವಾಗಿರುವ ಲೋಹಾದ್ರಿ ಇದೇ ಆಗಿರುತ್ತದೆ. ಈವೊಂದು ಪ್ರದೇಶವನ್ನು ಶಾಸನಗಳಲ್ಲಿ

ಕಾರ್ತಿಕೇಯ ತಪೋವನವೆಂದು ಕರೆದಿದ್ದು, ಈ ಪ್ರದೇಶದ ಆಳ್ವಿಕೆಗೆ ಕಾರ್ತಿಕೇಯನೇ ಒಡೆಯನಾಗಿದ್ದ, ಈ ಬಗ್ಗೆ ದೇವತೆಯ ಹೆಸರಿನಲ್ಲಿ ಆಳುತ್ತಿದ್ದ ಪ್ರದೇಶಗಳೆಂದರೆ, ಸಮೀಪದ ಹಂಪಿ ಹಾಗೂ ಆವನಿ ಈ ಪ್ರದೇಶದಲ್ಲಿ ದೇವರ ಹೆಸರಿನಲ್ಲಿ ಆ ಸ್ಥಾನದಲ್ಲಿ ಸ್ಥಾನಿಕರೇ ಆಳ್ವಿಕೆ ನಡೆಸುತ್ತಿದ್ದರು. ವೀರಬಲ್ಲಾಳನ ಕಾಲದಲ್ಲಿಯೂ ಈ ದೇವಾಲಯಕ್ಕೆ ದಾನ ದತ್ತಿಯನ್ನು ಬಿಡಲಾಗಿದೆ. ಹರಿಹರ ದೇವಾಲಯವೂ ಸಹ ನೀರಿನ ಝರಿಯ ಪಕ್ಕದಲ್ಲಿ ಇದ್ದುದರಿಂದ ಅದೂ ಕೂಡ ಪವಿತ್ರವಾದ ಸ್ಥಾನವಾಗಿತ್ತು. ಕುಮಾರಸ್ವಾಮಿ ದೇವಾಲಯದ ಮುಂದಿನ ಕೊಳವೂ ಸಹ ಒಂದು ಕಾಲದಲ್ಲಿ ಬುಗ್ಗೆಗಳಿಂದ ಕೂಡಿದ್ದು, ಆ ಬುಗ್ಗೆಗಳಿದ್ದ ಸೂಚಕವಾಗಿ ಆ ಕಾಲಕ್ಕಾಗಲೇ ಸಣ್ಣ ಸಣ್ಣ ತೊಟ್ಟಿಗಳಂತಹ ಬಾವಿಗಳನ್ನು ರಚಿಸಿರುವುದನ್ನು ಈ ಕೊಳದಲ್ಲಿ ಕಾಣುತ್ತೇವೆ.

ಸಿರುಗುಪ್ಪ

ಸಿರುಗುಪ್ಪ ಗ್ರಾಮವು ಬಳ್ಳಾರಿ ತಾಲೂಕಿನ ಒಂದು ತಾಲೂಕ ಕೇಂದ್ರವಾಗಿದ್ದು, ಇಲ್ಲಿ ಅನೇಕ ದೇವಾಲಯಗಳಿದ್ದು ಈ ಅಧ್ಯಯನ ಕಾಲಕ್ಕೆ ಸೇರುವ ಶಂಭುಲಿಂಗ ದೇವಾಲಯವು ತುಂಗಭದ್ರಾ ನದಿಯ ಸಮೀಪವಿದೆ. ದೇವಾಲಯವು ಈಗ ಸಾಕಷ್ಟು ಜೀರ್ಣೋದ್ಧಾರಗೊಂಡಿದ್ದು, ಮೂಲ ರಚನೆ ಹೇಗೆ ಇತ್ತೆಂದು ಹೇಳುವುದು ಕಷ್ಟ. ದೇವಾಲಯವನ್ನು ಪರಿಶೀಲಿಸಿದಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದ್ದ ದೇವಾಲಯವಾಗಿದ್ದು, ಈಗ ಒಂದು ಗರ್ಭಗೃಹವನ್ನು ಮಾತ್ರ ಹೊಂದಿದೆ. ಮೂಲ ಗರ್ಭಗೃಹದಲ್ಲಿರುವ ದೇವರನ್ನು ಶಂಭುಲಿಂಗ ದೇವರೆಂದು ಕರೆದಿದ್ದು, ಎಡಬದಿಯ ಗರ್ಭಗೃಹದಲ್ಲಿ ಕಾಶಿ ವಿಶ್ವನಾಥ, ಬಲಬದಿ ಗರ್ಭಗೃಹದಲ್ಲಿ ಮಲ್ಲಿಕಾರ್ಜುನ ಹೆಸರಿನ ಲಿಂಗಗಳಿವೆ. ಮೂರು ಗರ್ಭಗಳನ್ನು ಸೇರಿದಂತೆ ವಿಶಾಲವಾದ ಒಂದು ಸಭಾಂಗಣವಿದೆ. ಆದಕ್ಕೆ ಸೇರಿದಂತೆ ತೆರೆದ ಮಂಟಪವನ್ನು ಹೊಂದಿದೆ. ದೇವಾಲಯದ ಕಂಬಗಳು ಚಚ್ಚೌಕ, ಅಷ್ಟಮೂಲೆ, ವೃತ್ತಾಕಾರವನ್ನು ಪಡೆದು ಹಂತ ಹಂತವಾಗಿ ಮೇಲಕ್ಕೆ ಹೋಗಿ ಅಧಿಷ್ಠಾನ, ಏನೂ ಕಾಣುವುದಿಲ್ಲ. ಹೀಗಾಗಿ ದೇವಾಲಯದ ಭಾಗಗಳ ವಿವರಗಳೂ ಕೂಡ ತಿಳಿಯುವುದಿಲ್ಲ. ದೇವಾಲಯದ ಆವರಣದಲ್ಲಿ ಗಣಪತಿ, ನಂದಿ, ಕುಮಾರನ ಉಬ್ಬುಶಿಲ್ಪಗಳಿವೆ. ಶಾಸನದ ಪ್ರಕಾರ ಚಾಲುಕ್ಯ ತ್ರಿಭುವನಮಲ್ಲನ ರಾಣಿಯರಲ್ಲೊಬ್ಬರಾದ ಪಿರಿಯಕೇತಲಾದೇವಿಯ ಸಿರುಗುಪ್ಪದ ಶಾಸನದಲ್ಲಿ ದೇವಾಲಯ ಕಟ್ಟಿದುದರ ಬಗ್ಗೆ ಯಾವುದೇ ಉಲ್ಲೇಖ ಇಲ್ಲ.[೪೪] ಹಾಗೆಯೇ ದಾನಕೊಟ್ಟ ಉಲ್ಲೇಖ ಮಾತ್ರ ಇದ್ದು, ಆ ಕಾಲಕ್ಕೆ ದೇವಾಲಯವಿದ್ದಿರಬೇಕು. ಶಾಸನದ ಮೇಲಿರುವ ರೇಖಾಚಿತ್ರಗಳು ಈ ಪ್ರದೇಶದಲ್ಲಿ (ರಾಯಚೂರು ಜಿಲ್ಲೆ ಗಬ್ಬೂರು) ಮುಂತಾದ ಕಡೆ ದೊರೆಯುವ ಶಾಸನಗಳಲ್ಲಿನ ರೇಖಾಚಿತ್ರಗಳಿವೆ. ಲಿಂಗ, ಹಸು, ಕರುಗಳನ್ನು ಬಿಡಿಸಲಾಗಿದೆ. ದೇವಾಲಯದ ಸುತ್ತಲೂ ಸುತ್ತು ಮಂಟಪವಿದ್ದು, ಇದನ್ನು ಸುಮಾರು ೧೫ನೆಯ ಶತಮಾನ ದಿಂದೀಚೆಗೆ ನಿರ್ಮಿಸಿರುವ ಸಾಧ್ಯತೆಗಳಿವೆ. ಈ ಅವಶೇಷವನ್ನು ಬಿಟ್ಟರೆ ಈ ಕಾಲಕ್ಕೆ ಸೇರಬಹುದಾದಂತಹ ಯಾವುದೇ ಅವಶೇಷ ಉಳಿದುಬಂದಿಲ್ಲ.

ಸಿರಿಗೆರೆ

ಸಿರಿಗೆರೆಯು ಕುರುಗೋಡಿನ ಉತ್ತರಕ್ಕಿದ್ದು, ಸಿರುಗುಪ್ಪ ತಾಲೂಕಿಗೆ ಸೇರಿದೆ. ಈ ಗ್ರಾಮದಲ್ಲಿ ಈ ಕಾಲಕ್ಕೆ ಸೇರಬಹುದಾದ ಐದು ದೇವಾಲಯಗಳಿದ್ದು, ಇವುಗಳಲ್ಲಿ ಒಂದು ಜೈನ ಬಸದಿ. ಇನ್ನೊಂದು ವೈಷ್ಣವ ದೇವಾಲಯವಾಗಿದ್ದು, ಎರಡು ದೇವಾಲಯಗಳನ್ನು ವೀರಭದ್ರ ದೇವಾಲಯಗಳಾಗಿ ಪರಿವರ್ತಿಸಲಾಗಿದೆ. ಇಲ್ಲಿನ ಎಲ್ಲ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದವಾಗಿದ್ದು, ಕಲ್ಲೇಶ್ವರ ದೇವಾಲಯವು ತ್ರಿಕೂಟಾಚಲವಾಗಿದೆ. ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು, ಮುಖ್ಯವಾದ ಗರ್ಭಗೃಹಕ್ಕೆ ಮಾತ್ರ ಅಂತರಾಳವಿದೆ. ಉಳಿದೆರಡಕ್ಕೆ ಇಲ್ಲ. ದೇವಾಲಯದ ಕಂಬಗಳಿಗೆ ಸ್ಥಳೀಯವಾಗಿ ದೊರೆಯುವ ಚಪ್ಪಡಿ ಕಲ್ಲಿನ ಕಂಬಗಳನ್ನು ಬಳಸಲಾಗಿದೆ. ಉಳಿದ ವಿರೂಪಾಕ್ಷ ದೇವಾಲಯ, ನಾಗನಾಥೇಶ್ವರ ದೇವಾಲಯಗಳಿಗೂ ಚಪ್ಪಡಿ ಕಲ್ಲುಗಳನ್ನೇ ದೇವಾಲಯ ರಚನೆಗೆ ಬಳಸಲಾಗಿದೆ. ನಾಗನಾಥೇಶ್ವರ ದೇವಾಲಯದಲ್ಲಿ ಸುಮಾರು ೬ ಅಡಿ ಎತ್ತರದ ದ್ವಾರಪಾಲಕ ಶಿಲ್ಪಗಳನ್ನು ಬಿಡಿಸಲಾಗಿದೆ. ವೀರಭದ್ರ ದೇವಾಲಯವೊಂದರಲ್ಲಿ ಜೈನ ತೀರ್ಥಂಕರ ಬಿಂಬಗಳನ್ನು ಗೋಡೆಗಳಲ್ಲಿ ಕೆತ್ತಲಾಗಿದೆ. ಕುಸುರಿ ಕೆತ್ತನೆಗಳಿಂದ ಈ ದೇವಾಲಯವು ಕೂಡಿದೆ. ವಿಷ್ಣು ದೇವಾಲಯದಲ್ಲಿಯೂ ಕೂಡ ಪೀಠದ ಮೇಲೆ ವೀರಭದ್ರನನ್ನು ನಿಲ್ಲಿಸಲಾಗಿದೆ. ಹೀಗೆ ಜೈನ, ವೈಷ್ಣವ, ಶೈವ ಮತಗಳ ಸಂಗಮ ಪ್ರದೇಶವಾಗಿ ಈ ಸಿರಿಗೆರೆ ಗ್ರಾಮವು ಹಿಂದೊಮ್ಮೆ ಮೆರೆದಿತ್ತು.

ಹಂಪೆ

ಹಂಪೆ–ಪಂಪಾತೀರ್ಥ

ಬಲ್ಲಕುಂದೆ ನಾಡಿನ ಪ್ರಾಚೀನ ಧಾರ್ಮಿಕ ಕ್ಷೇತ್ರಗಳಲ್ಲಿ ಪಂಪಾತೀರ್ಥ ಪ್ರಮುಖವಾದುದು. ತುಂಗಭದ್ರೆಯ ಬಲದಂಡೆಯಲ್ಲಿರುವ ಈ ಸ್ಥಳವು ಬಹು ಹಿಂದಿನಿಂದಲೂ ಪ್ರಸಿದ್ಧ ತೀರ್ಥಕ್ಷೇತ್ರವಾಗಿ ಉಳಿದುಬಂದಿದೆ. ಹಂಪೆಗೂ ಮತ್ತು ರಾಮಾಯಣ ಮತ್ತು ಮಹಾಭಾರತಗಳಿಗೂ ಅವಿನಾಭಾವ ಸಂಬಂಧವಿದೆ. ಹಂಪೆಯ ಪರಿಸರವೂ ರಾಮಾಯಣ ಕಾಲದಲ್ಲಿ ಕಿಷ್ಕಿಂಧೆ ಕೇಂದ್ರ ಸ್ಥಳವಾಗಿತ್ತೆಂಬ ನಂಬಿಕೆ ಇದೆ. ಇದನ್ನು ಪುಷ್ಟೀಕರಿಸುವಂತೆ ರಾಮಾಯಣಕ್ಕೆ ಸಂಬಂಧಿಸಿದ ಐತಿಹ್ಯಗಳನ್ನುಳ್ಳ ಪ್ರದೇಶಗಳು ಹಂಪೆ ಪರಿಸರದಲ್ಲಿವೆ.

ವಾಲಿದಿಬ್ಬ, ಸೀತೆಯ ಸೆರಗು, ಹನುಮಂತನ ಬೆಟ್ಟ ಮುಂತಾದ ಪ್ರದೇಶಗಳು ಇಲ್ಲಿವೆ. ಗಂಗಾವತಿ ತಾಲೂಕಿನ ವಿಪ್ರ ಗ್ರಾಮದ ದೇವಘಾತದ ಶಾಸನದಲ್ಲಿ ಕಿಷ್ಕಿಂಧೆಯ ಉಲ್ಲೇಖ ಮತ್ತು ಸ್ಥಳದ ನಿರ್ದಿಷ್ಟತೆಯ ಉಲ್ಲೇಖವಿದೆ. ಇದರಂತೆ ಕಿಷ್ಕಿಂಧೆಯು ವಿಪ್ರದ ಪಶ್ಚಿಮಕ್ಕಿತ್ತೆಂಬ ಸೂಚನೆ ಇರುವುದರಿಂದ ಹಿಂದಿನಿಂದಲೂ ಪಾರಂಪರಿಕವಾಗಿ ಬಂದಿದ್ದ ನಂಬಿಕೆಯನ್ನು ಇದು ಪುಷ್ಟೀಕರಿಸುತ್ತದೆ.

ಪ್ರಾಗೈತಿಹಾಸಿಕ ಕಾಲದ ಕುರುಹುಗಳಾಗಿ ಇಲ್ಲಿ ಬಣ್ಣದಲ್ಲಿ ಬರೆದ ಚಿತ್ರಗಳು ದೊರೆತಿವೆ. ತುಂಗಭದ್ರಾ ನದಿಯ ಎಡದಂಡೆಯಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದ ಸುತ್ತಮುತ್ತಲಲ್ಲಿ ಹಿರೇಬೆಣಕಲ್ ಬೆಟ್ಟಗಳಲ್ಲಿ ಈ ಪ್ರಾಗೈತಿಹಾಸಿಕ ಕುರುಹುಗಳು ಕಂಡುಬಂದಿವೆ. ಇಲ್ಲಿ ಮಾನವ ಅನಾದಿಕಾಲದಿಂದಲೂ ವಾಸವಾಗಿದ್ದ ಎಂಬುದನ್ನು ಈ ಕುರುಹುಗಳು ಸೂಚಿಸುತ್ತವೆ.

ಪಂಪಾತೀರ್ಥದ ಬಳಿಯಲ್ಲಿ (ಈಗಿನ ಕೋದಂಡರಾಮಸ್ವಾಮಿಯ ದೇವಾಲಯದ ಬಲಭಾಗದ ಬೆಟ್ಟದ ಇಳಿಜಾರಿನಲ್ಲಿ) ಪ್ರಾಗೈತಿಹಾಸಿಕ ಕಾಲದಿಂದಲೂ ನಡೆದುಬಂದಿರುವ ವಾಡಿಕೆಯೊಂದು ಉಳಿದುಬಂದಿದೆ. ಅದೆಂದರೆ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ ತಮಗೆ ಇಷ್ಟಾರ್ಥ ಸಿದ್ಧಿಸಲು ಪ್ರಾಗೈತಿಹಾಸಿಕ ಕಾಲದ ರಚನೆಗಳ ಮಾದರಿಯಲ್ಲಿ ೩ ಕಲ್ಲುಗಳ ಮೇಲೆ ಮುಚ್ಚಳ ಆಕಾರದ ಕಲ್ಲನ್ನು ಇಟ್ಟು, ಸಮೀಪದ ಗಿಡವೊಂದಕ್ಕೆ ಬಟ್ಟೆಯಲ್ಲಿ ಸುತ್ತಿದ ಕಲ್ಲನ್ನು ಕಟ್ಟಿ ನೇತು ಹಾಕುವಂತಹ ಪದ್ಧತಿ ಇದೆ. ಇದು ಕರ್ನಾಟಕದ ಅನೇಕ ಪ್ರಾಗೈತಿಹಾಸಿಕ ನೆಲೆಗಳ ಬಳಿ ನಡೆದುಬಂದಿರುವ ಪದ್ಧತಿಯಾಗಿದ್ದು, ಹಂಪೆಯಲ್ಲೂ ಸಹ ಇದನ್ನು ಕಾಣಬಹುದಾಗಿದೆ. ಹೀಗಾಗಿ ಈ ಆಧಾರದಿಂದಲೂ ಹಂಪೆಯನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಇದ್ದ ಸ್ಥಳವೆಂದು ಗುರುತಿಸಲು ಸಾಧ್ಯವಾಗಿದೆ. ಮತ್ತು ಈ ಪ್ರದೇಶದಲ್ಲಿ ನಿರಂತರ ಜನಚಟುವಟಿಕೆ ಇದ್ದುದನ್ನು ತಿಳಿಯಬಹುದಾಗಿದೆ. ಈ ಎಲ್ಲಾ ಕ್ರಿಯೆಗಳು ಹಂಪೆಯ ಪ್ರಾಗೈತಿಹಾಸಿಕ ಕುರುಹುಗಳನ್ನು ನೆನಪಿಸುತ್ತವೆ.

ಹಂಪೆಯ ಪರಿಸರದಲ್ಲಿ ಕಲ್ಲಿನಲ್ಲಿ ಕೊರೆದ ಮತ್ತು ಬಣ್ಣದಲ್ಲಿ ಬರೆದ ಹಸುಗಳ ಮತ್ತು ಗೂಳಿಗಳ ಚಿತ್ರಗಳಿರುವುದನ್ನು ಈಗಿನ ಕನ್ನಡ ವಿಶ್ವವಿದ್ಯಾಲಯದ ಆವರಣದ ಕಲ್ಲುಗುಂಡುಗಳಲ್ಲಿ ಕಾಣಬಹುದಾಗಿದೆ. ಹೀಗಾಗಿ ಪ್ರಾಗೈತಿಹಾಸಿಕ ಕಾಲದ ಪಶುಪಾಲನಾ ಕೇಂದ್ರವಾಗಿದ್ದುದನ್ನು ಇದು ಪುಷ್ಟೀಕರಿಸುತ್ತದೆ. ಐತಿಹಾಸಿಕ ಕಾಲಕ್ಕೆ ಬಂದಾಗ ಕ್ರಿ.ಶ. ೬೮೧ ರ ಶಾಸನದಲ್ಲಿ (JBBRAS XII P 337) ಪಂಪಾತೀರ್ಥದ ಉಲ್ಲೇಖ ಬರುತ್ತದೆ.[೯೫] ಅದಾದ ನಂತರ ಪುರದ ಶಾಸನದಲ್ಲಿ (ಕುಷ್ಟಗಿ ತಾಲೂಕು) ಈ ಪಂಪಾತೀರ್ಥದ ಉಲ್ಲೇಖ ಬರುತ್ತದೆ. ಕ್ರಿ.ಶ. ೧೦೧೮ ರ ನೊಳಂಬರ ಶಾಸನದಲ್ಲಿ ನೊಳಂಬ ಉದಯಾದಿತ್ಯನು ಪಂಪಾತೀರ್ಥಕ್ಕೆ ಬಂದಿದ್ದಂತೆ ಉಲ್ಲೇಖವಿದೆ.[೯೬] ೧೧೫೩ ರ ಶಾಸನವೊಂದರಲ್ಲಿ ಪಂಪೆಯ ತೀರ್ಥದ ಉಲ್ಲೇಖ ಬಂದಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಹಂಪೆಯ ಬಗ್ಗೆ ಕ್ರಿ.ಶ. ೧೧೯೪ ರ ಕುರುಗೋಡು ಸಿಂಧರ ಕಾಲಕ್ಕೆ ಸೇರಬಹುದಾದ ಶಾಸನದಲ್ಲಿ[೯೭] ಅನೇಕ ವಿವರಗಳು ದೊರೆತಿದ್ದು ಇಲ್ಲಿ ತೀರ್ಥಕ್ಕಿಂತ ಹಂಪೆಯ ವಿರೂಪಾಕ್ಷ ಮತ್ತು ಹಂಪಾದೇವಿಯರು ಮುಖ್ಯವಾಗಿದ್ದು, ಈ ದೇವರುಗಳಿಗೆ ಮೈದುನಚೌಡಯ್ಯ ಎಂಬುವವನು ಅನೇಕ ದಾನಗಳನ್ನು ಕೊಟ್ಟದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಈ ಪ್ರದೇಶವನ್ನು ವಿರೂಪಾಕ್ಷ ಸೀಮೆ ಎಂದು ಕರೆದಿದ್ದು ಮಾತಂಗ ಪರ್ವತದ ಬಳಿಯ ಬಯಲಿನಲ್ಲಿ ಸೈನ್ಯವೊಂದು ವಿರೂಪಾಕ್ಷ ಸೀಮೆಯ ರಕ್ಷಣಾರ್ಥವಾಗಿ

ಬೀಡುಬಿಟ್ಟಿದ್ದಂತೆ ಉಲ್ಲೇಖಿಸುತ್ತದೆ. ವಿರೂಪಾಕ್ಷ ಸೀಮೆಯು ದೇವರ ಹೆಸರಿನಲ್ಲಿದ್ದ ಒಂದು ಪ್ರದೇಶವಾಗಿದ್ದು, ಇಲ್ಲಿ ಯಾವುದೇ ರಾಜನ ಆಳ್ವಿಕೆಗೆ ಇದು ಒಳಪಟ್ಟಂತೆ ತಿಳಿಯುವುದಿಲ್ಲ. ಹೀಗಾಗಿ ದೇವರ ಹೆಸರಿನಲ್ಲಿ ಇದ್ದ ಸರ್ವ ಸ್ವತಂತ್ರ ಸೀಮೆಯಾಗಿತ್ತೆಂದು ನಾವು ಹೇಳಬಹುದಾಗಿದೆ. ಇಲ್ಲಿ ಈ ಸೀಮೆಯ ಕರವಸೂಲಿ ಮುಂತಾದ ಆದಾಯ ಮೂಲಗಳು ನೇರವಾಗಿ ದೇವರಿಗೆ ಸೇರುವಂತಹದ್ದಾಗಿದ್ದವು. ಇಲ್ಲಿ ರಾಜನ ಕರ್ತವ್ಯ ಆ ಕ್ಷೇತ್ರವನ್ನು ರಕ್ಷಿಸುವುದಷ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಮುಂದೆ ಬಂದ ಶರಣ ಕವಿ ಹರಿಹರನು ಈ ಸೀಮೆಯನ್ನು ಮತ್ತು ಆ ಸೀಮೆಯ ಗಡಿಗಳನ್ನು ಗುರುತಿಸಿದ್ದಾನೆ. ಪೂರ್ವಕ್ಕೆ ಕಿನ್ನರೇಶ್ವರ, ಪಶ್ಚಿಮಕ್ಕೆ ಸೋಮನಾಥ, ದಕ್ಷಿಣಕ್ಕೆ ಜಂಬುನಾಥ ಲಿಂಗ, ಉತ್ತರಕ್ಕೆ ವಾಣಿಭದ್ರೇಶ್ವರ ದೇವಾಲಯಗಳ ಹೆಸರನ್ನು ಈ ನಾಲ್ಕು ದೇವಾಲಯಗಳ ಮಧ್ಯೆ ಇರುವ ಸೀಮೆಯನ್ನೇ ವಿರೂಪಾಕ್ಷ ಸೀಮೆ ಎಂಬಂತೆ ಗುರುತಿಸಿದ್ದಾನೆ. ಹೀಗಾಗಿ ಇದೊಂದು ವಿಸ್ತಾರವಾದಂತಹ ಸೀಮೆಯಾಗಿತ್ತು. ಕುರುಗೋಡು ಸಿಂಧರ ಆಳ್ವಿಕೆಯ ಪ್ರದೇಶದೊಳಗಡೆ ಈ ಪ್ರದೇಶ ಸೇರಿತ್ತು.

ಜನರ ನಂಬಿಕೆಯಂತೆ ಹಾಗೂ ಹರಿಹರನ ಗಿರಿಜಾ ಕಲ್ಯಾಣದ ಕಾವ್ಯದ ಪ್ರಕಾರ ಹಂಪೆಯ ಹೇಮಕೂಟವೇ ಶಿವನ ವಾಸಸ್ಥಾನವಾಗಿದ್ದು, ಅಲ್ಲಿಂದಲೇ ಅವನು ಮನ್ಮಥನನ್ನು ಸಂಹರಿಸಿದಂತೆ ರಚಿಸಿದ್ದಾನೆ. ಹೀಗಾಗಿ ಬಹು ಹಿಂದಿನಿಂದಲೂ ಇಲ್ಲಿ ಸ್ಥಳೀಯ ಜನರಲ್ಲಿ ಈ ನಂಬಿಕೆ ಇದ್ದಿರಬೇಕು. ಈ ಹೇಮಕೂಟದಲ್ಲಿನ ರಚನೆಗಳು ಹೇಮಕೂಟದ ಪ್ರಾಚೀನತೆಯನ್ನು ನಿರೂಪಿಸುತ್ತಿದ್ದು, ಬಾದಾಮಿ ಚಾಲುಕ್ಯರ ಕಾಲದ ದೇವಾಲಯ ರಚನೆ ಎಂದು ಹೇಮಕೂಟದ ಇಳಿಜಾರಿನಲ್ಲಿದೆ. ಇದಲ್ಲದೆ ಈಗಿನ ಮನ್ಮಥ ಕುಂಡದ ಪಶ್ಚಿಮಕ್ಕೆ ನೊಳಂಬರ ಕಾಲದ ಅನೇಕ ರಚನೆಗಳೂ ಇವೆ. ಇವುಗಳಲ್ಲಿ ಮಹಿಷಮರ್ದಿನಿ ಮತ್ತು ಗುಲುಗಂಜಿ ಮಾದವ ದೇವಾಲಯಗಳು. ಇನ್ನು ಒಂದೆರಡು ಸಣ್ಣಮಟ್ಟ ದೇವಾಲಯಗಳು ನೊಳಂಬರ ರೀತಿಯ ದೇವಾಲಯ ವಾಸ್ತುರಚನೆಗಳನ್ನು ಹೊಂದಿವೆ. ಮಹಿಷ ಮರ್ದಿನಿ ದೇವಾಲಯವು ಪೂರ್ಣ ಪ್ರಮಾಣದಲ್ಲಿದ್ದು, ಇಂದಿಗೂ ಪೂಜೆಗೊಳ್ಳುತ್ತಿದೆ. ಗರ್ಭಗೃಹ ಮತ್ತು ಸಭಾಮಂಟಪವನ್ನು ಹೊಂದಿದ್ದು ದ್ವಾರದ ಲಲಾಟದಲ್ಲಿ ಮಹಿಷಮರ್ದಿನಿ ಬಿಂಬವನ್ನು ಹೊಂದಿದ್ದು, ಸಭಾಮಂಟದಲ್ಲಿ ಮಹಿಷ ಮರ್ದಿನಿಯ ವಾಹನವಾದ ಸಿಂಹವನ್ನು ಬಿಡಿಸಲಾಗಿದೆ. ಕಪೋತಬಂಧ, ಅಧಿಷ್ಠಾನ, ಉಬ್ಬುಕಂಬಗಳಿಂದ ಅಲಂಕೃತವಾದ ಭಿತ್ತಿ ಮೇಲೆ ಏಕಕೂಟ ಶಿಖರವನ್ನು ಹೊಂದಿದೆ. ಇಂದಿಗೂ ಪೂಜೆಗೊಳ್ಳುತ್ತಿರುವ ಈ ದೇವಾಲಯದ ಮಂಟಪದಲ್ಲಿ ಕುರುಗೋಡು ಸಿಂಧರ ಶಾಸನವಿರುವುದು. ಈ ದೇವಾಲಯಗಳಲ್ಲದೆ ಹೊಯ್ಸಳರ ಕಾಲದ ರಚನೆಗಳು ಇಲ್ಲಿದ್ದು, ಅವು ಹಂಪಾದೇವಿ ಭುವನೇಶ್ವರಿ ದೇವಿಯ ದೇವಾಲಯಗಳಾಗಿವೆ. ಈ ದೇವಾಲಯಗಳಲ್ಲಿ ಬಳಪದ ಕಲ್ಲಿನ ತಿರುಗಣಿ ಕಂಬಗಳು ಬಿಡಿ ಬಿಡಿಯಾಗಿ ಬಿಡಿಸಿರುವ ರಾಮ-ರಾವಣರ ಯುದ್ಧದ ದೃಶ್ಯ ಮತ್ತು ಬಾಗಿಲುವಾಡ ಹೊಯ್ಸಳರ ಶಿಲ್ಪ ಶೈಲಿಯ ಚಾತುರ್ಯವನ್ನು ನಮಗೆ ನೆನಪಿಸುತ್ತದೆ. ಹೊಯ್ಸಳ

ಮೂರನೇ ಬಲ್ಲಾಳನು ವಿರೂಪಾಕ್ಷ ದೇವಾಲಯಕ್ಕೆ ದಾನ ದತ್ತಿಗಳನ್ನು ಕೊಟ್ಟ ಉಲ್ಲೇಖವನ್ನು ಶಾಸನವೊಂದು ತಿಳಿಸುತ್ತದೆ. ಹೀಗಾಗಿ ವಿಜಯನಗರ ಆರಂಭಕಾಲಕ್ಕಾಗಲೇ ಹಂಪಿಯು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆದಿತ್ತೆಂದು ಹೇಳಬಹುದಾಗಿದೆ.

ಹಳೇ ನೆಲ್ಲುಡಿ

ಹಳೇ ನೆಲ್ಲುಡಿಯು ಬಳ್ಳಾರಿ ತಾಲೂಕಿನಲ್ಲಿರುವ ಗ್ರಾಮ. ಕಂಪ್ಲಿ-ಕುರುಗೋಡು ಮಾರ್ಗದಲ್ಲಿ ಕಂಪ್ಲಿಯಿಂದ ಸುಮಾರು ೧೦ ಕಿ.ಮೀ. ಅಂತರದಲ್ಲಿದೆ. ಇಲ್ಲಿಂದ ಬಳ್ಳಾರಿಗೆ ಇರುವ ದೂರ ಸುಮಾರು ೪೦ ಕಿ.ಮೀ.

ಊರಿನ ಚಾರಿತ್ರಿಕ ಮೂಲ

ಪ್ರೊ. ಲಕ್ಷ್ಮಣ ತೆಲಗಾವಿಯವರ ಅಭಿಪ್ರಾಯದಂತೆ ಹಳೇನೆಲ್ಲುಡಿಯು ನೆರುಣ್ಡಗಲ್ಲು ಎಂಬುದಾಗಿ ಆದಿಪ್ರತ್ಯಯ ನೆರುಂಡ ಎಂಬುದು ಇಂದಿನ ಸ್ಥಳನಾಮ ನೆಲ್ಲುಡಿಯ ಮೂಲರೂಪ ಆಗಿದೆ. ನೆರುಣ್ಡಿಯು ನೆಲುಂಡವಾಗಿ ನೆಲ್ಲುಡಿಯಾಗಿರುವುದು ನೆರುಣ್ಡ ಎಂಬುದಕ್ಕೆ ನೆಟ್ಟಗಿನ ಆಕೃತಿ, ನೇರವಾದ ರೂಪ ಎಂಬ ಅರ್ಥವಿದ್ದು, ನೆಟ್ಟಗಿನ ಕಲ್ಲು ಎಂದರ್ಥೈಸಬಹುದಾಗಿದೆ. ಗ್ರಾಮದಲ್ಲಿ ಪ್ರಾಗೈತಿಹಾಸಿಕ ಕಾಲದ ನಿಲುವುಗಲ್ಲು ಪತ್ತೆಯಾಗಿದ್ದು, ಪ್ರಾಕ್ಚಾರಿತ್ರಿಕ ಕಾಲದಿಂದಲೇ ಈ ಪರಿಸರವು ಜನವಸತಿಯ ತಾಣವಾಗಿತ್ತೆಂದು ಲಕ್ಷ್ಮಣ ತೆಲಗಾವಿಯವರು ಅಭಿಪ್ರಾಯಪಡುತ್ತಾರೆ.[೮]

ಇಲ್ಲಿ ದೊರೆತಿರುವ ನಿಲುವುಗಲ್ಲು ಕರಿಯ ಕಲ್ಲಿನದು. ಮೇಲ್ಮುಖ ನಯವಾಗಿ ಉಜ್ಜಲಾಗಿದೆ. ಈ ಕಲ್ಲು ಆರಾಧನೆಗೆ ಸಂಬಂಧಿಸಿದುದಾಗಿದೆ. ಕಲ್ಲಿನ ಎತ್ತರ ೧.೪೨ ಮೀಟರ್ ಮೊಂಡಾದ ಶಿರೋಭಾಗವು ೩೬ ಸೆಂ.ಮೀ. ಸರಾಸರಿ ಅಗಲ, ೧ ಮೀಟರ್ ಅಗಲವಿದೆ. ಇದರ ದಪ್ಪ ತಳ ೪೨ ಸೆಂ.ಮೀ., ಶಿರೋಭಾಗದಲ್ಲಿ ೨೧ ಸೆಂ.ಮೀ., ವ್ಯಾಸದ ತುದಿ ೧೫ ಸೆಂ.ಮೀ. ಮಾನವ ನಿರ್ಮಿತ ಕುಳಿ (Cup Mark)ನ ಗುರುತುಗಳಿವೆ.

ಬುಡದಿಂದ ತುದಿಯವರೆಗೂ ವಿವಿಧ ವ್ಯಾಸವುಳ್ಳ ಸುಮಾರು ೨೦ ಕುಳಿಗಳನ್ನು ಮಾಡಿಸಲಾಗಿದೆ. ಈ ನಿಲುವುಗಲ್ಲು ನವಶಿಲಾಯುಗದ ಎಲ್ಲಾ ಪ್ರಮುಖ ಲಕ್ಷಣಗಳನ್ನು ಹೊಂದಿದೆ. ಇಂದು ಈ ಗ್ರಾಮದ ಕುರುಬ ಜನಾಂಗದವರು ಇಂದಿಗೂ ಈ ಶಿಲೆಯನ್ನು ಪೂಜಿಸುತ್ತಾ ಬಂದಿರುವುದು ಹಳೇ ನೆಲ್ಲುಡಿಯ ಉತ್ತರಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿ ನಾರಿಹಳ್ಳದ ಪೂರ್ವ ದಂಡೆಯ ಮೇಲೆ ಶಾಂತಿನಗರ ಸುಬ್ಬರಾವ್ ಕ್ಯಾಂಪ್ ಪರಿಸರದಲ್ಲಿ ಈ ಬೂದಿದಿಬ್ಬವಿದೆ. ದೀರ್ಘಕಾಲದಲ್ಲಿ ಅಗೆತಕ್ಕೆ ತುತ್ತಾಗಿದ್ದರೂ, ಸವೆದಿದ್ದರೂ ಸುಮಾರು ೧ ಮೀಟರ್ ದಪ್ಪ, ೯x೬ ಮೀಟರ್‌ನಷ್ಟು ವಿಸ್ತಾರವಾಗಿದ್ದು, ಈ ಬೂದಿದಿಬ್ಬವು ಇಂದಿಗೂ ಉಳಿದುಬಂದಿದೆ. ಬೂದಿಯು ಉಂಡೆ ರೂಪದಲ್ಲಿ ರಾಶಿರಾಶಿಯಾಗಿ ದೊರೆಯುತ್ತದೆ.

ಹಳೇನೆಲ್ಲುಡಿಯಲ್ಲಿ ದೊರೆತಿರುವ ಕ್ರಿ.ಶ. ೧೧ ನೆಯ ಶತಮಾನದ ಶಾಸನದಲ್ಲಿ ಉಲ್ಲೇಖವಾಗಿರುವಂತೆ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನ ವಿಪ್ರನಾರಾಯಣದ ಧರೆಯನ್ನಾಳಿದ 'ಪಲ್ಲವ ಪೆರ್ಮಾನಡಿ ದೇವರು ಗುರುದೇವರ ಸಿದ್ದೇಶ್ವರ ದೇವರಿಗೆ ನೆರುಣ್ಣಗಲ್ಲ ಪೊಲದೊಳಗೆ ಧಾರಾಪೂರ್ವಕ ಬಿಟ್ಟಕೆಯಿ ಮತ್ತರು ಅಯಿವತ್ತು' ಎಂದು ತಿಳಿಯುತ್ತದೆ.

ಹಾವಿನ ಹಾಳು

ಊರಿನ ಮಧ್ಯದಲ್ಲಿ ಶಿವನ ದೇವಾಲಯವಿದ್ದು, ಅಧಿಷ್ಠಾನದಿಂದ ಶಿಖರದ ವರೆಗೆ ಶಿಲಾಮಯ ದೇಗುಲವಾಗಿದೆ. ಅಧಿಷ್ಠಾನದ ಕೆಳಭಾಗವು ಮಣ್ಣಲ್ಲಿ ಹೂತುಹೋಗಿದ್ದು, ತ್ರಿಪಟ್ಟಕುಮುದ, ಕಂಠ, ಕ್ಷುದ್ರನಾಸಿಗಳಿಂದ ಅಲಂಕಾರಗೊಂಡ ಕಪೋತವನ್ನು ಒಳಗೊಂಡಿದೆ. ಭಿತ್ತಿ ಭಾಗವು ಯಾವುದೇ ಅಲಂಕಾರಗಳಿಲ್ಲದೆ ಸಮತಟ್ಟಾಗಿದ್ದು, ಚಪ್ಪಡಿಗಳಿಂದ ನಿರ್ಮಿತವಾಗಿದೆ. ಪ್ರಸ್ತರದ ಭಾಗವು ಈ ಪ್ರದೇಶದ ಎಲ್ಲಾ ದೇವಾಲಯಗಳಂತೆ ಮುಂಚಾಚಿದ ಕಲ್ಲುಗಳಿಂದ ಕೂಡಿದ್ದು ಯಾವುದೇ ಅಲಂಕಾರಗಳಿರುವುದಿಲ್ಲ. ಶಿಖರದ ಭಾಗವು ಹಂತ ಹಂತಗಳಿಂದ ಕಲ್ಲುಗಳಿಂದ ಜೋಡಣೆಗೊಂಡಿದ್ದು, ಮೇಲಕ್ಕೆ ಹೋದಂತೆಲ್ಲಾ ಇದು ಕಿರಿದಾಗುತ್ತದೆ.

ಈ ಹಂತಗಳ ಮೇಲೆ ಕಂಠದ ಭಾಗ ಬಂದು ಅದರ ಮೇಲೆ ವೇದಿಯನ್ನು ನಿರ್ಮಿಸಿ ವೇದಿಯ ಮೇಲೆ ಚತುರ್ಮುಖ ಶಿಖರವನ್ನು ನಿರ್ಮಿಸಲಾಗಿದೆ. ಶಿಖರದ ಮೇಲೆ ಸ್ತೂಪಿ ಇದೆ. ದೇವಾಲಯದ ಮುಂಭಾಗದ ಮೇಲ್ಭಾಗವು ಕಲ್ಲಿನ ಸ್ತೂಪಿಯಿಂದ ಕೂಡಿದೆ. ದೇವಾಲಯದಲ್ಲಿ ರಥದ ಮೇಲೆ ನಿಂತ ಸುಮಾರು ಕ್ರಿ.ಶ. ೧೦ ನೆಯ ಶತಮಾನಕ್ಕೆ ಸೇರಬಹುದಾದ ಶಿಲ್ಪವಿದೆ. ಹಾಗೆಯೇ ಗಣಪತಿ ಶಿಲ್ಪವೂ ಕೂಡ ಇಲ್ಲಿದೆ. ಇದೇ ದೇವಾಲಯದಲ್ಲಿ ಇನ್ನೊಂದು ಸೂರ್ಯಪೀಠವಿದ್ದು, ಬಹುಶಃ ಬೇರೆ ಬೇರೆ ವಿಗ್ರಹಗಳು ಇಲ್ಲಿದ್ದಿರಬೇಕು. ಹೀಗಾಗಿ ದೇವಾಲಯವಿದ್ದ ಜಾಗದಲ್ಲಿ ಅಥವಾ ದೇವಾಲಯದ ಆಸುಪಾಸಿನಲ್ಲಿ ಇದಕ್ಕಿಂತಲೂ ಪ್ರಾಚೀನವಾಗಿದ್ದಿರಬೇಕು.

ಹಾವಿನಹಾಳು ವೀರಾಪುರ

೧. ಕಲ್ಲೇಶ್ವರ ದೇವಾಲಯ

ಹಾವಿನಾಳು ವೀರಾಪುರವನ್ನು ಹಾವಿನಾಳ ವೀರಾಪುರವೆಂದು ಕರೆಯುವರು. ಈ ವೀರಾಪುರವು ಬಳ್ಳಾರಿ ತಾಲೂಕಿನ ಕುರುಗೋಡಿಗೆ ಸಮೀಪದಲ್ಲಿದೆ. ಈ ದೇವಾಲಯವು ಊರಿನ ಪೂರ್ವಕ್ಕಿದ್ದು, ದೇವಾಲಯವು ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದ್ದು, ಅಂತರಾಳದ ಭಾಗವಿಲ್ಲ. ದೇವಾಲಯದ ಅಧಿಷ್ಠಾನದ ವೃತ್ತ, ಕುಮುದ, ಪದ್ಮಭಾಗಗಳು ಮಾತ್ರ ಹೊರಗೆ ಕಾಣುತ್ತಿದ್ದು, ಉಳಿದ ಭಾಗಗಳು ಮಣ್ಣಲ್ಲಿ ಹೂತುಹೋಗಿವೆ. ಗರ್ಭಗೃಹವು ಅಧಿಷ್ಠಾನ ಭಿತ್ತಿ ಶಿಖರಗಳನ್ನು ಹೊಂದಿದ್ದು, ಭಿತ್ತಿಯ ಭಾಗದಲ್ಲಿ ಯಾವುದೇ ಅಲಂಕಾರಗಳಿಲ್ಲ.

ಪ್ರಸ್ತರ ಭಾಗದಲ್ಲಿಯೂ ಸಹ ಕಲ್ಲುಗಳನ್ನು ಹಂತ ಹಂತವಾಗಿ ಮುಂಚಾಚಿರುವಂತೆ ಜೋಡಿಸಿದ್ದು, ಮೇಲುಗಡೆ ಅದೋಪದ್ಮದಂತಹ ಕಪೋತವನ್ನು ಹಾಕಲಾಗಿದೆ. ಶಿಖರದ ಮೇಲ್ಭಾಗವು ಹಂತ ಹಂತವಾಗಿ ಅರೆಬಿಡಿಸಿದ ಗೂಡುಗಳಿಂದ ಕೂಡಿದ ಕಪೋತಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸಿದಂತೆ ರಚಿಸಲಾಗಿದೆ. ಶಿಖರದ ನಾಲ್ಕು ಮುಖಗಳಲ್ಲಿ ಶಿವನ ಬೇರೆ ಬೇರೆ ಬಿಂಬಗಳಿದ್ದು, ಸುಂದರವಾದಂತಹ ನಾಸಿಗಳ ಅಲಂಕಾರವಿದೆ. ಲೋಹದ ಕಳಶವನ್ನು ಇಡಲಾಗಿದೆ. ದೇವಾಲಯದ ನವರಂಗ ಭಾಗದ ಅಧಿಷ್ಠಾನವು ಜಗತಿಯ ರೂಪದಲ್ಲಿದ್ದು, ತಳಗಡೆ ಜಗತಿಯ ಮಧ್ಯಭಾಗ ಚೌಕಾಕಾರದ ಮನೆಗಳನ್ನು ಪುಷ್ಪಗಳನ್ನು ಬಿಡಿಸಲಾಗಿದೆ. ಇನ್ನೊಂದು ಕಡೆ ಸಾಲಾಗಿರುವ ಆನೆಗಳನ್ನು ಬಿಡಿಸಲಾಗಿದೆ. ಒಂದು ಕಡೆ ಕಕ್ಷಾಸನವಿದ್ದು, ಕಕ್ಷಾಸನದ ಹಿಂಬದಿಯನ್ನು ಆನೆಗಳ ಉಬ್ಬುಶಿಲ್ಪದಿಂದ ಅಲಂಕರಿಸಲಾಗಿದೆ. ನವರಂಗ, ಮುಖಮಂಟಪದ ಪ್ರವೇಶದಲ್ಲಿ ಎರಡು ಆನೆಗಳಿದ್ದು, ದೇವಾಲಯದ ಎರಡು ಕಂಬಗಳ ಮೇಲೆ, ದೇವಾಲಯದ ಮುಂದೆ ಚಾಚಿದಂತೆ ಬಿಡಿಸಲಾಗಿದೆ. ದೇವಾಲಯದ ಒಳಗೆ ಗರ್ಭಗೃಹದ ಬಾಗಿಲವಾಡವು ಅನೇಕ ಶಾಖೆಗಳಿಂದ ಅಲಂಕಾರಗೊಂಡಿದ್ದು, ಪ್ರಧಾನವಾಗಿ ಸ್ತಂಭಶಾಖೆ, ವಲ್ಲಿಶಾಖೆಗಳು ಕಾಣಬರುತ್ತವೆ. ಕೆಳಗಡೆ ಇಬ್ಬರು ದ್ವಾರಪಾಲಕಿಯರನ್ನು ಬಿಡಿಸಲಾಗಿದೆ. ದ್ವಾರದ ಮೇಲುಗಡೆ ಇಳಿಜಾರಾದ ಕಲ್ಲನ್ನು ಇಳಿಸಿದ್ದು, ಅದರ ಮೇಲೆ ದೇವಾಲಯದ ಗೋಪುರದ ಮೂರು ಮಾದರಿಗಳನ್ನು ಇರಿಸಲಾಗಿದೆ. ಬಾಗಿಲುವಾಡದ ಎರಡೂ ಬದಿಯ ಕಂಬಗಳು, ಚೌಕ, ಅಷ್ಟಚೌಕ, ಅಷ್ಟರೀತಿಯಲ್ಲಿ ಅಲಂಕಾರಗೊಂಡಿದ್ದು, ಮೇಲೆ ಸಾದಾ ಬೋದಿಗೆಯನ್ನು ಹೊಂದಿದೆ. ಮಧ್ಯದ ನವರಂಗದ ಕಂಬಗಳು ಸುಮಾರು ಮುಕ್ಕಾಲು ಅಡಿ ಎತ್ತರದ ಶಿಲಾಫಲಕಗಳ ಮೇಲೆ ಇರಿಸಿದ್ದು, ಚೌಕ ೧೬, ಚೌಕ ಕುಂಭ, ವೃತ್ತಾಕಾರದ ಮುಚ್ಚಳ, ಮೇಲ ನಿಮ್ನ ಫಲಕ, ಅದರ ಮೇಲೆ ಬೋದಿಗೆಯನ್ನು ಇರಿಸಲಾಗಿದೆ. ಮೇಲುಗಡೆಯ ತೊಲೆಗಳಲ್ಲಿ ಬಳ್ಳಿಗಳ ಅಲಂಕಾರವನ್ನು ಬಿಡಿಸಲಾಗಿದೆ. ಉಳಿದ ಕಂಬಗಳು ಒಳಗಡೆ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಪಕ್ಕದ ದೇವಕೋಷ್ಠಗಳಲ್ಲಿ ಗಣಪತಿ ಮತ್ತು ಪಾರ್ವತಿಯ ಶಿಲ್ಪಗಳಿವೆ. ಶಾಸನದಲ್ಲಿ ಕ್ರಿ.ಶ. ೧೦೪೫ (ಬಳ್ಳಾರಿ ೪೫) ಇದನ್ನು ದೊಣ್ಣವಟ್ಟಿ ಎಂದು ಕರೆಯಲಾಗಿದೆ.[೪೯]

ಅಡಿಟಿಪ್ಪಣಿಗಳು

೧. ಕವಿಶಾ I, ಸಿರಗು ೪೯-೫೨

೨. ಕವಿಶಾ I, ಬಳ್ಳಾ ೪೩.

೩. ಕವಿಶಾ I, ಬಳ್ಳಾ ೪೧.

೪. ಕಂಪ್ಲಿ; ಸಂ. ರಾ.ಹ.ರುದ್ರಪ್ಪ, ಭಂಗಿದೊಡ್ಡ ಮಂಜುನಾಥ

೫. ಎ.ಕ. IX ದೇವನಹಳ್ಳಿ, ೭೫.

೬. ಕವಿಶಾ I, ಹರಪ ೯೭

೭. ತಲಕಾಡಿನ ಗಂಗರ ದೇವಾಲಯಗಳು – ದೇವರಕೊಂಡಾರೆಡ್ಡಿ.

೮. ಕವಿಶಾ I, ಸಂಡೂರು ೧೪.

೯. ಕವಿಶಾ I, ಬಳ್ಳಾ ೪೮, ೫೦.

೧೦. ಕವಿಶಾ I, ಬಳ್ಳಾ ೨೦, ೨೨

೧೧. ಅದೇ

೧೨. ಅದೇ, ೨೩

೧೩. ಸಂಡೂರು ಪರಿಸರದ ಕಾರ್ತಿಕೇಯ ತಪೋವನ – ವಾಸುದೇವ ಬಡಿಗೇರ

೧೪. ಕವಿಶಾ I, ಬಳ್ಳಾ ೩೫.

೧೫. ಅದೇ, ೨೨

೧೬. ಅದೇ, ೬

೧೭. ಅದೇ, ೩೯.

೧೮. ಅದೇ, ೩೨.

೧೯. ಅದೇ, ೨೬

೨೦. ಅದೇ, ೩೬

೨೧. ಅದೇ, ೩೫.

೨೨. ಅದೇ, ೧೯.

೨೩. ಅದೇ, ೧೮.

೨೪. ಕವಿಶಾ I, ಬಳ್ಳಾ ೭.

೨೫. ಕವಿಶಾ I, ಬಳ್ಳಾ ೮.

೨೬. ಅದೇ, ೮.

೨೭. ಕವಿಶಾ I, ಸಿರಗು ೪೧.

೨೮. ಕವಿಶಾ I, ಬಳ್ಳಾ ೫೪.

೨೯. ಕವಿಶಾ I, ಬಳ್ಳಾ ೫೩.

೩೦. ಕವಿಶಾ I, ಬಳ್ಳಾ ೩.

೩೧. ಕವಿಶಾ I, ಸಿರಗು ೫೯.

೩೨. ಕವಿಶಾ I, ಸಿರಗು ೫೧–೫೨

೩೩. ಅದೇ, ೨೮.

೩೪. ಕವಿಶಾ I, ಸಿರಗು ೪೧.

೩೫. ಕವಿಶಾ I, ಸಿರಗು ೩೪.

೩೬. ಅದೇ ೨೭.

೩೭. ಅದೇ, ಬಳ್ಳಾ ೪.

೩೮. ಅದೇ, ೫೯.

೩೯. ಅದೇ, ೬೧

೪೦. ಕವಿಶಾ II, ಗಂಗಾವತಿ ತಾಲ್ಲೂಕಿನ ವಿಪ್ರ

೪೧. ಕವಿಶಾ II, ಬಳ್ಳಾ ೫೧.

೪೨. ಕವಿಶಾ I, ಸಂಡೂ ೪, ೬

೪೩. ಕವಿಶಾ I, ಬಳ್ಳಾ ೫೪.

೪೪. ಅದೇ, ಸಿರಗು ೧.

೪೫. JBBRAS. XII, P. 337.

೪೬. ಕವಿಶಾ I, ಹರಪ ೯೪.

೪೭. ಕವಿಶಾ III, ೫೫, ಹಂಪೆ ೧೧೯.

೪೮. ಇತಿಹಾಸ ದರ್ಶನ, ಸಂ.೨

೪೯. ಕವಿಶಾ I, ಬಳ್ಳಾ ೪೫.

ಅಧ್ಯಾಯ ೭

ಸಮಾರೋಪ

ಅಧ್ಯಾಯ ೮

ಸಮಾರೋಪ

ಬಲ್ಲಕುಂದೆ ನಾಡಿನ ಇತಿಹಾಸ ಆದಿಮಾನವನಿಂದ ಪ್ರಾರಂಭವಾಗುತ್ತದೆ. ಕುರುಗೋಡು, ಕುಡುತಿನಿ, ಕೋಳೂರು, ತೆಕ್ಕಲಕೋಟೆ ಮೊದಲಾದ ಸ್ಥಳಗಳಲ್ಲಿ ಹಳೆಯ ಶಿಲಾಯುಗದ ಜನರು ವಾಸಿಸುತ್ತಿದ್ದ ಕುರುಹುಗಳು ಸಿಕ್ಕಿವೆ. ಅಲ್ಲಿಂದ ಇತಿಹಾಸ ಪ್ರಾರಂಭವಾಗಿ ವಿವಿಧ ಘಟ್ಟಗಳಲ್ಲಿ ಹಾದು ಬಂದಿದೆ. ಬಲ್ಲಕುಂದೆ ನಾಡಿನ ಬಗ್ಗೆ ಇದುವರೆಗೂ ಸಮಗ್ರ ಅಧ್ಯಯನವಾಗಿರಲಿಲ್ಲ. ಭಾಗವಾಗಿದ್ದ ಬಲ್ಲಕುಂದೆಯ ಕುರುಗೋಡು, ಹಂಪಿ, ತೆಕ್ಕಲಕೋಟೆ, ಸಂಗನಕಲ್ಲು ಮೊದಲಾದ ಸ್ಥಳಗಳನ್ನು ಬಿಡಿಬಿಡಿಯಾಗಿ ಅಧ್ಯಯನ ನಡೆದಿರುತ್ತದೆ. ಸಮಗ್ರವಾಗಿ ಬಲ್ಲಕುಂದೆ ನಾಡಿನ ಈ ನಿಬಂಧವನ್ನು ಅಧ್ಯಯನ ಮಾಡಲಾಗಿದೆ.

ಬಲ್ಲಕುಂದೆ ನಾಡನ್ನು ಆಳಿದ ವಿವಿಧ ವಂಶದವರು ಈ ನಾಡಿಗೆ ತಮ್ಮದೇ ಆದ ಕೊಡುಗೆಗಳನ್ನು ಕೊಟ್ಟಿದ್ದಾರೆ. ಮೌರ್ಯ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಳಚೂರಿ, ದೇವಗಿರಿ ಯಾದವರು, ಹೊಯ್ಸಳರು ಹಾಗೂ ಕುಮ್ಮಟ ದುರ್ಗದ ಅರಸರ ಶಾಸನಗಳು ಈ ನಾಡಿನಲ್ಲಿ ದೊರೆತಿವೆ. ಈ ಶಾಸನಗಳು ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಬಲ್ಲಕುಂದೆ ನಾಡು ತುಂಗಭದ್ರಾ ಮತ್ತು ಹಗರಿನದಿಗಳ ಮಧ್ಯೆ ಇರುವ ಪ್ರದೇಶವಾದ್ದರಿಂದ ಆ ನದಿಗಳ ಮತ್ತು ಅವುಗಳ ಉಪನದಿಗಳ ದಂಡೆಯಲ್ಲಿನ ಗ್ರಾಮಗಳು ಬಹುತೇಕ ಫಲವತ್ತಾಗಿದ್ದು ಈ ನಾಡು ಸಮೃದ್ಧವಾಗಿರಲು ಕಾರಣವಾಗಿತ್ತು. ಈ ಸಮೃದ್ಧಿಯೇ ಅನೇಕ ವೇಳೆ ಈ ನಾಡನ್ನು ತಾವು ಪಡೆಯಬೇಕೆಂಬ ಮೇಲಾಟಕ್ಕೂ ಕಾರಣವಾಗಿತ್ತು. ನೊಳಂಬರು ದಕ್ಷಿಣದಿಂದ ಉತ್ತರದ ಕಡೆಗೆ ಬಂದಾಗ ಸಹಜವಾಗಿ ಇಲ್ಲಿನ ಫಲವತ್ತತೆ ಹಾಗೂ ಸಮೃದ್ಧಿ ಅವರ ಮನಸೂರೆಗೊಂಡಿತು. ಹೀಗಾಗಿ ಈ ನಾಡನ್ನು ಅವರು ತಮ್ಮ ವಶಕ್ಕೆ ಹೇಗೆ ಪಡೆದರೆಬುದನ್ನು ಈ ನಿಬಂಧದಲ್ಲಿ ಹೇಳಲಾಗಿದೆ. ಹಾಗೆಯೇ ಯಾದವ ವಂಶದ ಮುಮ್ಮಡಿ ಮನೆತನದ ಸಿಂಗೇಯ ನಾಯಕ ಅವನ ಮಗ ಕಂಪಿಲರಾಯ, ಕುಮಾರರಾಮನು ಆರಂಭದಲ್ಲಿ ದೇವಗಿರಿ ಯಾದವರೊಂದಿಗೆ ಹೋರಾಡಿದರೆ ನಂತರ ಹೊಯ್ಸಳರೊಂದಿಗೆ ಯುದ್ಧ ಮಾಡಿದ್ದಾರೆ. ಇವರ ಸಮರ್ಥ ಸೈನ್ಯಪಡೆ ದೆಹಲಿ ಸುಲ್ತಾನರ ಸೈನ್ಯದೊಂದಿಗೆ ಅನೇಕ ಯುದ್ಧಗಳನ್ನು ಮಾಡಿ ಜಯಿಸಿ ಕೊನೆಗೆ ಯುದ್ದಲ್ಲಿ ಕಂಪಿಲರಾಯ, ಕುಮಾರರಾಮ ಮರಣವನ್ನು ಹೊಂದಿದ್ದರು. ಇವರೂ ಸಹ ಪೂರ್ವದಿಕ್ಕಿನ ಹನೆಯದಿಂದ ಬಂದವರು. ತಮ್ಮ ರಾಜ್ಯ ನಿರ್ಮಾಣಕ್ಕೆ ಆರಿಸಿದ್ದು ಬಲ್ಲಕುಂದೆ ನಾಡಿನ ಹೊಸಮಲೆದುರ್ಗವನ್ನು. ಕಂಪಿಲರಾಯ, ಕುಮಾರರಾಮನ ಸಾಹಸದ ಕಥೆ, ಛಲ, ನೈತಿಕತೆಗಳು ಮುಂದೆ ಬಂದ ವಿಜಯನಗರ ಅರಸರ ಮೇಲೆ ಸಾಕಷ್ಟು ಪ್ರಭಾವ ಬೀರಿವೆ ಎಂಬುದನ್ನುಈ

ನಿಬಂಧದಲ್ಲಿ ತಿಳಿಸಲಾಗಿದೆ. ದುರ್ವಿನೀತನು ಕೋಗಳಿಯಲ್ಲಿ ಬಸದಿ ಕಟ್ಟಿಸಿದ್ದಾನೆ. ಈ ಕೋಗಳಿಯ ಪ್ರಭಾವ ಕುಮಾರ ಸ್ವಾಮಿ ಬೆಟ್ಟದ ಮೇಲೆಯೂ ಇತ್ತು. ಇಮ್ಮಡಿ ಕೃಷ್ಣನು ಸಂಡೂರಿನ ಕುಮಾರಸ್ವಾಮಿ ದೇವಾಲಯಕ್ಕೆ 'ಪ್ರೀತ ತಟಾಕ' ಎಂಬ ಗ್ರಾಮವನ್ನು ಬಿಡುತ್ತಾನೆ. ಮಹಾಮಂಡಳೇಶ್ವರರಲ್ಲಿ ನೊಳಂಬಪಲ್ಲವರು ಪ್ರಮುಖರು. ಶೈವಧರ್ಮ ಅನುಯಾಯಿಗಳು ಈ ನಾಡಿನಲ್ಲಿ ಅನೇಕ ಶಿವಾಲಯ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ಬಲ್ಲಕುಂದೆ ಮೂನ್ನೂರು ವಿಭಾಗವನ್ನು ಕುರುಗೋಡಿನ ಸಿಂಧರು ಆಳುತ್ತಿದ್ದರು. ಇವರ ಕಾಲಕ್ಕೆ ಬಲ್ಲಕುಂದೆ ಗ್ರಾಮ ಕನ್ನಡ ಪ್ರಭಾವವನ್ನು ಕಳೆದುಕೊಂಡು ಕೇವಲ ಪ್ರದೇಶವಾಚಿಯಾಗಿ ಮಾತ್ರ ಉಳಿದಿತ್ತು. ರಾಜಧಾನಿ ಕುರುಗೋಡು ಆಯಿತು. ಸಿಂಧರಲ್ಲಿ ಒಂದನೇ ರಾಚಮಲ್ಲ, ಇಮ್ಮಡಿ ರಾಚಮಲ್ಲ ಪ್ರಸಿದ್ಧ ವ್ಯಕ್ತಿಗಳು. ಹಲವು ದೇವಾಲಯಗಳ ನಿರ್ಮಾಣಕ್ಕೆ ಸಿಂಧರು ಕಾರಣೀಕರ್ತರು. ಪಂಪಾ ಕ್ಷೇತ್ರದ ರಕ್ಷಣೆಗೆ ಮಹಾ ಸಾಮಂತನನ್ನು ನೇಮಿಸಿದ್ದುದು ಶಾಸನದಿಂದ ತಿಳಿದು ಬರುತ್ತದೆ.

ಬಲ್ಲುಕುಂದೆ ನಾಡಿನ್ನೇ ಆಳಿರುವ ಅರಸರ ಕೈಕೆಳಗಿದ್ದ ಅನೇಕ ಸಾಮಂತರ, ಮಹಾಪ್ರಧಾನರ, ದಂಡನಾಯಕರ, ಪೆರ್ಗಡೆ, ಗೌಡ ಮೊದಲಾದವರ ಪರಿಚಯವನ್ನು ಈ ನಿಬಂಧದಲ್ಲಿ ಮಾಡಿಕೊಡಲಾಗಿದೆ. ಇದರೊಂದಿಗೆ ಇವರು ಬಲ್ಲಕುಂದೆ ನಾಡಿನಲ್ಲಿ ಮಾಡಿದ ರಚನಾತ್ಮಕ ಕಾರ್ಯಗಳ ಪರಿಚಯವನ್ನು ಮಾಡಿಕೊಡಲಾಗಿದೆ.

ಬಲ್ಲಕುಂದೆ ನಾಡು ಮೊದಲೇ ಹೇಳಿದಂತೆ ಫಲವತ್ತಾದ ನದಿಬಯಲಿನಿಂದ ಕೂಡಿರುವುದರ ಜೊತೆಗೆ ಬೆಟ್ಟ-ಗುಡ್ಡಗಳಿಂದಲೂ ಕೂಡಿದೆ. ಈ ನದೀಬಯಲು ಹಾಗೂ ಬೆಟ್ಟಗುಡ್ಡಗಳು ಇಲ್ಲಿನ ವಾಸ್ತು ರಚನೆಯ ಮೇಲೆ ಬೀರಿರುವ ಪ್ರಭಾವೆಂತಹದು ಎಂಬುದನ್ನು ವಾಸ್ತುರಚನೆಗಳಾದ ದೇವಾಲಯ ಹಾಗೂ ಕೋಟೆ ಕೊತ್ತಲಗಳ ರಚನಾ ವೈವಿಧ್ಯವನ್ನು ವಿವರಿಸಲಾಗಿದೆ. ಹೀಗೆ ವಿವರಿಸುವಾಗ ಹಿಂದೆ ಪ್ರಕಟವಾಗಿರುವ ವಿಷಯದ ಜೊತೆಗೆ ಬಲ್ಲಕುಂದೆ ನಾಡಿನಾದ್ಯಂತ ಪ್ರವಾಸ ಮಾಡಿ ಸಂಗ್ರಹಿಸಿದ ವಿಷಯವನ್ನು ಇಲ್ಲಿ ನೀಡಲಾಗಿದೆ. ಅನೇಕ ದೇವಾಲಯಗಳ ಬಗ್ಗೆ ಮೊದಲಿಗೆ ಇಲ್ಲಿ ಬರೆಯಲಾಗಿದೆ. ಇದಕ್ಕೆ ಪೂರಕವಾಗಿ ಆಯ್ದ ದೇವಾಲಯಗಳ ಛಾಯಾಚಿತ್ರಗಳನ್ನು ನೀಡಲಾಗಿದೆ.

ಮೈಲಾರ ದೇವರಿಗೆ ಸಂಬಂಧಿಸಿದಂತೆ ಹೆಸರು ಮತ್ತು ಪೂಜೆ ಆರಂಭವಾಗಿದ್ದು, ಈ ಬಲ್ಲಕುಂದೆ ನಾಡಿನಿಂದಲೇ ಎಂಬುದನ್ನು ಶಾಸನಗಳ ಆಧಾರದ ಮೇಲೆ ನಿರೂಪಿಸಿ ತೆಕ್ಕಲಕೋಟೆ ಬಳಿಯ ಮಲ್ಲಯ್ಯನ ಗುಡ್ಡವೇ ಈ ದೇವರ ಆರಂಭದ ಪೂಜಾಸ್ಥಳವೆಂದೂ ಈ ಮೈಲಾರನ ಶಿಲ್ಪವೇ ಭೈರವನ ಶಿಲ್ಪವೆಂದು ನಿರೂಪಿಸಲಾಗಿದೆ.

ಧಾರ್ಮಿಕವಾಗಿಯೂ ಈ ಬಲ್ಲಕುಂದೆನಾಡು ತನ್ನ ವೈಶಿಷ್ಟ್ಯತೆಯನ್ನು ತೋರಿಸಿದ್ದು, ಕ್ರಿಪೂ. ೩ನೆಯ ಶತಮಾನದಷ್ಟು ಪ್ರಾಚೀನ ಬೌದ್ಧ ಶಾಸನಗಳನ್ನು ಹೊಂದಿದ್ದು ಆ ಧರ್ಮ ಆಕಾಲಕ್ಕೆ

ಪ್ರಾಬಲ್ಯದಲ್ಲಿತ್ತೆಂಬ ವಿಷಯವನ್ನು ಸೂಚಿಸುತ್ತದೆ. ಇದಲ್ಲದೆ ಕ್ರಿ.ಶ. ೧೨೦೦ರ ಹೊತ್ತಿದ್ದು ಬಲ್ಲಕುಂದೆ ನಾಡಿನ ಕುರುಗೋಡಿನ ಅರಸರಾಗಿದ್ದ ಸಿಂಧರ ಮೇಲೆ ಬಸವನ ಧರ್ಮ ಪ್ರಭಾವ ಬೀರಿದ್ದ ವಿವರಗಳನ್ನು ಈ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಜೈನಧರ್ಮವು ಬೌದ್ಧ ಧರ್ಮದಷ್ಟು ಪ್ರಾಚೀನ ಉಲ್ಲೇಖವನ್ನು ಹೊಂದಿದ್ದರೂ ೧೦ನೆಯ ಶತಮಾನದಷ್ಟು ಪ್ರಾಚೀನ ಅವಶೇಷಗಳನ್ನು ಹೊಂದಿದೆ. ಬಲ್ಲಕುಂದೆಯಲ್ಲಿಯೇ ಪ್ರಾಚೀನ ಜೈನಾವಶೇಷಗಳು ದೊರೆತಿವೆ. ಇದರ ನಂತರ ಕೆಲವೆಡೆ ಸಿಕ್ಕಿದರೂ ಜೈನಧರ್ಮದ ಹರಹು ಈ ನಾಡಿನಲ್ಲಿ ಕಡಿಮೆ. ಅಪರೂಪಕ್ಕೆ ಸೂರ್ಯ ಪೀಠವೊಂದು ಈ ಜಿಲ್ಲೆಯಲ್ಲಿ ದೊರೆತಿರುವುದು ಸೂರ್ಯೋಪಾಸನೆಗೆ ಸಾಕ್ಷಿಯಾಗಿದೆ.

ಅನುಬಂಧ

ಹಂಪೆಯ ವರ್ಣನೆ

ಬಲ್ಲಕುಂದೆಯು ಪ್ರಮುಖ ನಾಡಾಗಿದ್ದು ಇದರ ಪ್ರಮುಖ ಪಟ್ಟಣಗಳಲ್ಲಿ ಬಲ್ಲಕುಂದೆ, ಕುರುಗೋಡು, ಕಂಪ್ಲಿ, ಸ್ವಾಮಿಮಲೆ ಹಾಗೂ ಹಂಪಿ ಕೆಲವು. ಇವುಗಳಲ್ಲಿ ಮೊದಲು ಮೂರು ರಾಜಕೀಯವಾಗಿ ಪ್ರಮುಖವಾಗಿದ್ದರೆ ಕೊನೆಯ ಎರಡು ಪಟ್ಟಣಗಳು ಧಾರ್ಮಿಕವಾಗಿ ಪ್ರಮುಖವಾದವುಗಳು. ಸ್ವಾಮಿಮಲೆ (ಸಂಡೂರು) ಕುಮಾರಸ್ವಾಮಿಯ ನೆಲೆಯ ತಾಣವಾದರೆ, ಹಂಪಿಯು ವಿರೂಪಾಕ್ಷನ ನೆಲೆಯ ತಾಣ. ಇದಕ್ಕಿಂತ ಮುಖ್ಯವಾಗಿ ಇದು ತುಂಗಭದ್ರಾ ನದಿಯ ದಡದಲ್ಲಿದ್ದು ಪಂಪಾದೇವಿಯ ಉಪಸನಾ ಕೇಂದ್ರವೂ ಆಗಿದೆ. ೧೩೩೬ರವರೆಗೆ ಧಾರ್ಮಿಕ ಕ್ಷೇತ್ರವಾಗಿದ್ದು ಇದು ನಂತರ ದಕ್ಷಿಣ ಭಾರತದ ಪ್ರಮುಖ ರಾಜಕೀಯ ಕೇಂದ್ರ ಪಟ್ಟಣವಾಗಿ ಬೆಳೆಯಿತು. ಇದಕ್ಕಿಂತ ಮೊದಲು ಇದು ಇದ್ದ ರೀತಿ ಜನರಿಗೆ ಈ ಪಟ್ಟಣದ ಬಗ್ಗೆ ಇದ್ದ ಕಲ್ಪನೆಗಳು ಭಕ್ತಿಭಾವಗಲ ಬಗ್ಗೆ ಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ತಮ್ಮದೇ ಆದ ದಾಟಿಯಲ್ಲಿ ವರ್ಣಿಸಿವೆ. ಶಾಸನಗಳಲ್ಲಿ ಬಂದಿರುವ ವರ್ಣನೆಗಳನ್ನು ಆಯಾ ಸ್ಥಳಗಳ ಉಲ್ಲೇಖ ಮಾಡುವಾಗ ನೀಡಲಾಗಿದೆ. ಇಲ್ಲಿ ಸಾಹಿತ್ಯದಲ್ಲಿ ಬಂದಿರುವ ವರ್ಣನೆಗಳನ್ನು ಮಾತ್ರ ನೀಡಲಾಗಿದೆ. ಇದು ಅಂದಿನ ಕಾಲದಲ್ಲಿ ಈ ಸ್ಥಳದ ಬಗ್ಗೆ ಜನರಿಗಿದ್ದ ಆಚಾರ, ನಂಬಿಕೆಗಳನ್ನು ಕವಿ ತನ್ನ ಕಾವ್ಯದಲ್ಲಿ ವರ್ಣಿಸಿದ್ದಾನೆ. ಹೀಗೆ ಆಯ್ಕೆ ಮಾಡಿಕೊಳ್ಳುವಾಗ ಹರಿಹರನ ಕಾವ್ಯಗಳನ್ನು ತೆಗೆದುಕೊಂಡಿಲ್ಲ. ಕಾರಣ ಅವನ ಕಾವ್ಯಗಳು ಪೂರ್ಣವಾಗಿ ಹಂಪೆಗೆ ಸಂಬಂಧಿಸಿವೆ. ಕವಿಯ ಉಸಿರು ಹಂಪೆ ಮತ್ತು ಹಂಪೆಯ ವಿರೂಪಾಕ್ಷನೇ ಆಗಿದ್ದ. ಹೀಗಾಗಿ ಇವನ ಕಾವ್ಯಗಳನ್ನು ಇಲ್ಲಿ ಉದ್ಧರಿಸಲು ಹೋಗಿಲ್ಲ. ಆದರೆ ಸಮಯ ಬಂದಾಗ ಹಂಪೆಯನ್ನು ವರ್ಣಿಸಿರುವ ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸೋಮನಾಥನ ಉದ್ಭವ ಕಾವ್ಯ ಮುಂತಾರ ಕಾವ್ಯಗಳಲ್ಲಿ, ಉಲ್ಲೇಖಿತ ಪದ್ಯಗಳಲ್ಲಿ ನೀಡಲಾಗಿದೆ.

ಸಾಹಿತ್ಯ ಕೃತಿಗಳಲ್ಲಿ ಹಂಪೆಯ ಬಳಿಯ ತುಂಗಭದ್ರಾ ನದಿ, ಪಂಪಾಕ್ಷೇತ್ರ, ಹೇಮಕೂಟ, ವಿರೂಪಾಕ್ಷ ಮತ್ತು ಪಂಪಾಂಬಿಕೆಯರನ್ನು ಈ ಕೆಳಗಿನಂತೆ ವರ್ಣಿಸಿದೆ.

ತುಂಗಭದ್ರಾ ನದಿ

ಬಿಡದೊಮ್ಮೆ ಕಂಡಜೀವದ ಭವವ್ರಜದ ಬೆಂ
ಬಡಿಗೆ ಪಾತಕದ ತೋಮೆಯ ಕತ್ತಿ ದುಷ್ಕರ್ಮ
ದೆಡೆಗೊರಳ ಕತ್ತರಿ ಸಮಸ್ತ ರೋಗಂಗಳೆಡೆಗೊಡ್ಡಿದಲಗ ಜ್ಞಾನದ
ನಡುದಲೆಯ ಗರಗಸಂ ಮಲೆವ ಮಾಯೆಯ ಬಸುಜಿ
ಸೊಡೆ ಹೊಯ್ಯ ಶೂಲವಿನ್ನುಳಿದ ದುರಿತವನುರುಹಿ
ಸುಡುವ ಕಿಚ್ಚೆಂದೆನಿಪ ತುಂಗಭದ್ರಾ ನದಿಯನವನೀಶನೋಡೆಂದನು. ೫:೬೪

ಧರಣಿಪತಿಗುರು ವಸಿಷ್ಠಂಗೆ ಕೈಗೊಟ್ಟು ಬರೆ / ಸುರುಚಿರ
ಮಹಾತುಂಗಭದ್ರೆಯೊಳಗುಳ್ಳ ಭಾ / ಸುರತೀರ್ಥಮಂತೋಲದ
ಜೋಳು ಸ್ನಾನ ತರ್ಪಣ ಪಿಂಡಪಿತೃ ಕೃತ್ಯಮಂ ॥ ಪಿರಿದು
ಸಂತೋಷದಿಂಮಾಡುತಿರಲಾ ಪುರವ / ವಿರಚಿಸಿ ಮಹಾಸುಡಿಯ
ತೋರಣವನೆತ್ತಿ ವಿಪ್ರರು ವಿರೂಪಾಕ್ಷ ಪ್ರಸಾದಂ ಕೊಟ್ಟು ಹರಸಿ
ದರು ಮಂಗಳರವದೊಳು । ೫:೭೪ ಹರಿಶ್ಚಂದ್ರ ಕಾವ್ಯ

ಪಂಪಾಕ್ಷೇತ್ರ

ನೆರೆದ ವೇದಂಗಳುಗ್ಗಡವುಪನಿಷತ್ತುಗಳ
ಗರವಟಿಗೆಯಣಿಮಾದಿಗಳ ಬೊಬ್ಬೆಧರ್ಮದ
ಬ್ಬರ ಘನಜ್ಞಾನ ಪ್ರಭಾದೀಪ್ತಿಗಳು ಹರಿಬ್ರಹ್ಮಾದಿಸುರರ ಕಾಹು ।
ಪುರುಷಾರ್ಥ ನಾಲ್ಕಱೊಳು ಸಲುಗೆ ಪುಣ್ಯರ ಪುಂಜ
ಸಿರಿಸರಸ್ವತಿಯರೆಡೆಯಾಟ ವೆಸೆದಿರೆ ಜಗ
ದ್ಗುರು ವಿರೂಪಾಕ್ಷ ನಿಲ್ಲಿಯೆ ಸುಖದೊಳಿಪ್ಪ ಪಂಪಾಕ್ಷೇತ್ರವಿದೆಯೆಂದನು ॥

೫:೬೧ ಹರಿಶ್ಚಂದ್ರ ಕಾವ್ಯ

ಬೆಟ್ಟಗಳ್ ಹಾಗೂ ಹೇಮಕೂಟ

ಪುದಿದ ಭಕ್ತಿ ಜ್ಞಾನವೈರಾಗ್ಯ ಮುಕ್ತಮಾಂ / ಗದ ಮಕುಟದಗ್ರದೊಳು
ಹೊಳೆವಮಣಿಗಣದಂತೆ / ತುದಿಕೋಱುತದೆ ನಿಂದು ನಿಲುಕಿ ನಿಟ್ಟಿಸಿ
ನೋಡು ನೋಡು ಕಟ್ಟದಿರೊಳಿಪ್ಪ / ಅದು ಹೇಮಕೂಟ ಮತ್ತದುಮ
ತಂಗಾದ್ರಿ ಹೋ / ಗದು ಮಾಲ್ಯವಂತವಿಂತವಱ ಮಹಿಮೆಗಳನಾ
ಮದನ ಹರನೇ ಬಲ್ಲನೆಂದು ತೋರಿದನು ಭೂನಾಥಂಗೆ ಮುನಿನಾಥನು

೫:೬೨ ಹರಿಶ್ಚಂದ್ರ ಕಾವ್ಯ

ಹಂಪಾಕ್ಷೇತ್ರ

ಅವನೀಕಾಂತಾಮಣಿಯ ಕುಂತಳಮೆಂದೆನಿಸಿ ಮನಗೊಳಿವ
ತತ್ಕುಂತಳದೇಶ ಮಧ್ಯದೊಳ್ ಮಂಗಳ ಮಂದಿರ ಪುಣ್ಯದ
ಪುಂಜಂ ಧರ್ಮದ ಹರ್ಮ್ಯಂ ಮುಕ್ತಿಯ ಮೂಲಂ ಭಕ್ತಿಯ
ಚೈತ್ರಂ ಜ್ಞಾನದ ನಿಧಾನಂ ಮಹಿಮೆಗಳ ಮಹಾರ್ಣವಂ
ಸಮಸ್ತ ಸಿದ್ಧಿಗಳ ಸೀಮೆಯೆನಿಸಿ ನೆಗೞ್ತೆವೆತ್ತಖಿಳ
ಕ್ಷೇತ್ರ ಶಿಖಾಮಣಿಯಪ್ಪ ಪಂಪಾಕ್ಷೇತ್ರಂ ವಿರಾಜಿಸುತ್ತಿರ್ದುದು ॥ (III–೩೪)

ಅಂತಮಲ್ಲದೆಯುಂ–

ಅಂಪಯ್ಯಲ್ಯಾರದಂ ಚತ್ವರಮಪದದ ಸೂತ್ರ ಶಿವಜ್ಞಾನ ನೇತ್ರಂ ।
ಸಂಪದ್ಧರ್ಮಾರ್ಥಕಾಯಾಂ ಬುರಹವನಜ ಮಿತ್ರಂ ಧರಿತ್ರೀಸುವಕ್ತ್ರಂ ।
ಲಂಪಂ ಬೆತ್ತೈದೆ ಕಗ್ಗೊಪ್ಪದುರು ಭವೆಲತೋದ್ಯಲ್ಲವಿಕ್ರಂ ವಿಚಿತ್ರಂ ।
ಪಂಪಾಕ್ಷೇತ್ರಂ ವಿರಾಜ ಚ್ಚುತಿತತಿಮಕುಟ ಸೂತ್ರಪಾತ್ರಂ ಪವಿತ್ರಂ ॥ (III–೩೫)

ಇಂತತಿಮಹಿಮೆಗಳನೊಳಕೊಂಡು ಮನಂಗೊಳಿಪ ಸಮಸ್ತ
ಕ್ಷೇತ್ರ ಶಿಖಾಮಣಿಯಪ್ಪ ಪಂಪಾಕ್ಷೇತ್ರಮಂ ಪೊಕ್ಕುದ್ಭಟ
ಕ್ಷಿತೀಂದ್ರ ಚಂದ್ರಮನು . . . .

ಫಣಿಪೋತಂಗಳನೆತ್ತಿ ಸಾವಗಿಪರಾಜನ್ನೀಲ ಕಂಡಂಗಳಿಂ
ಪೊಣರ್ತೀಣಿನಿಕುರುಂಬದೊಳ್ಯೆರಿಪ ಶಾರ್ದೂಲಂಗಳಿಂ ಮತ್ತಮಾ ।
ರಣ ದೊಳ್ಕೆಡಿಪ ಸಿಂಹದಿಂ ಗಿಳಿಗಳಿಂ ಕೂಡಿರ್ಪ ಸಾಲ್ವಂಗಳು ।
ಬ್ಬಣದಿಂದಂ ಘನಶಾಂತಿಯಂ ತಳದು ಪಂಪಾಕ್ಷೇತ್ರಮಾರಾಜಿಕುಂ ॥ III

ಹೇಮಕೂಟರ ಆಧಿಕ್ಯ

ಹರಿಶ್ಚಂದ್ರನು ರಾಜ್ಯವನ್ನು ದಾನಮಾಡಿದಾಗ ಎರಡು ಪ್ರದೇಶಗಳು ಮುಕ್ತವೆಂದು ಘೋಷಿಸುತ್ತಾನೆ. ಅವುಗಳಲ್ಲಿ ಕಾಶಿ ಮತ್ತು ಹೇಮಕೂಟ ಎರಡು–

ಮೇಲಿನ್ನು ನಾನಾಳ್ವದೇಶದೊಳುಬೇಡದಂ
ತೋಲೈಸದಂತೆ ಕೃಷಿವ್ಯವಸಾಯ ಮಾಡ / ದಾಲಯಂಗಟ್ಟಿ
ರದೆಯವಧಿಯೊಳು ಹೊನ್ನನಿರ್ಣಯಿಸುವುದು ಬೇಗವೆನಲು ॥
ಭೂಲೋಲನದಕೊಡಂ ಬಡಲುಸ್ತಪ್ತದ್ವೀಪ / ಜಾಲ ವೆಲ್ಲೆನ್ನ
ವವಜಿಂದ ಹೊಜಗಾವುದೆಂದಾಲಿಸಲು ಹೇಮಕೂಟಂ
ವಾರಣಾಸಿಗಳು ಹೊಜಗು ಮುನಿಕೇಳೆಂದ ॥ ೮:೫೮

ಪ್ರಳಯಕ್ಕೆ ಹೊಜಗು ಕಲಿಕಾಲ ಹೊಗದಂತಕನ / ಸುಳಿವವ
ಜೊಳಿಲ್ಲಕಾಮನಡಾವರಂ ಕೊಳ್ಳ / ದುಳಿದ ಮಾಯೆಯ ಮಾತು
ಬೇಡ ಪಾಪಂಗಳಾಟಂ ನಾಟ ವನ್ಯಾಯದ ॥
ಕಳೆಗೆತಕ್ಕವು ಮಾರಿಮೃತ್ಯುಗಿತ್ತುಗಳ ಬಲೆಗೊಳಗಾ
ದಧಿಕ ಮಣ್ಯದ ಬೀಡು ಮಂಗಳದ ನಿಳಯ ಮುಕ್ತಿಯ
ಮೂಲವೆನಿಸುವುವು ಕಾಶಿಹಂಪೆಗಳು ಮುನಿಕೇಳೆಂದ ॥ ೮:೫೯

ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯ / ರವನಿಯೊಳ

ಗಲ್ಲಿ ನಿನ್ನಾಜ್ಞೆಗಳು ಸಲ್ಲ ಬಱಿಯ ವಿಚಾರಹೊಲ್ಲ

ಹಂಪೆಗೆ ಹೋಹದೆಡೆಯಲ್ಲ ಕಾಶಿಪುರವನೆಸಾರ್ದು . . . ೮:೬೦ ಹರಿಶ್ಚಂದ್ರ ಕಾವ್ಯ

ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ

ತ್ರೇತಾಯುಗದಲ್ಲಿ ವಾರಣಾಸಿ ಮೂಲಸ್ಥಾನ

ದ್ವಾಪರಯುಗದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ

ಕಲಿಯುಗದಲ್ಲಿ ಪರ್ವತ ಮೂಲಸ್ಥಾನ

ಇಂತೀ ನಾಲ್ಕು ಮೂಲಸ್ಥಾನ

ನಾನು ಆಸ್ಥಾನದ ಮೆಟ್ಟಿದೆ ಜಂಗಮವೇ ಲಿಂಗವೆಂದು ನಂಬಿದೆ

ಕೂಡಲಸಂಗಮದೇವ ಬ.ಷಟ್‌ಸ್ಥಲದ

ವಚನಗಳು

ಹಂಪೆಯ ನಿರ್ಮಾಣ

ಶಾಂತಲೆಯು ಹುಲಿಗೆಯೊಳ್ ಚೆನ್ನಸೋಮದೇವರ

ನಿಲಯಮಂ. ಹಂಪೆಯೊಳ್ ವಿರೂಪಾಕ್ಷಾಲಯಮನು

ದ್ಧರಿಸಿದಳ್ ೧೭೪

ರಾಜಾವಳೀಕಥಾಸಾರ

ಹಂಪಯ್ಯ

ಶ್ರೀರಂಗಪಟ್ಟಣದ ಹೋಳಿನ ಹಿರಿಯ ಹಂಪಯ್ಯನವಂ . . . .

. . . . EC VIII ತೀರ್ಥ ೫೬

ಗುರುರಾಜ ಚಾರಿತ್ರ ಸಂ. ೧೬ ಪ. ೩೮

ಮರುಳಸಿದ್ಧನು ಅನೇಕಕ್ಷೇತ್ರಗಳನ್ನು ಸಂದರ್ಶಿಸುತ್ತಾ

ಹಂಪೆಗೆ ಬಂದಿದ್ದು. ಗುರುರಾಜ ಚಾರಿತ್ರ

ವಿರೂಪಾಕ್ಷ

ಶ್ರೀನಿಹಾರಾಚಳಾಧೀಶ್ವರದುಹಿತೃಮುಖಾಂಭೋಜಸೂರ್ಯಂ ಮಹಾಸು

ಜ್ಞಾನಾನಂದಸ್ವರೂಪಂನಿಗಮತತಿನುತಂ ಚಂಕ್ರಲೇಖಾವತಂಸಂ ।

ಭಾನುಗ್ಲೌವಹ್ನಿನೇತ್ರಂ ತ್ರಿಪುಟವಿರಹಿತಂ ನಿರ್ವಿಕಲ್ಪಂ ಶಿವಂಸ ।

ನ್ಮಾನಂ ಚೆತ್ತೋವುಗೆನ್ನಂ ಪರಮಗುರು ವಿರೂಪಾಕ್ಷಲಿಂಗಂ ಪಿತಾಂಗಂ ॥

ಶೃಂಗಾರಸಾರಮೆಂದೀ । ಮಂಗಳಕೃತಿನಾಮಮಾಕೃತಿಗೆ ವಲ್ಲಭನು ।

ತ್ತುಂಗವಿರೂಪಾಕ್ಷಂ ಸುಧೆ । ಯಂಗೆಲಲೀಕೃತಿಯನು ಸುರಿದಂ ಸೋಮನೃಪಂ ॥

ಪಂಪಾನಗರೀಶ್ವರನೀ । ಪೆಂಪಮರ್ದಿನಿ ಜಗಜ್ಜ ಕಾಣ್ಮನೀಸತ್ಕ್ರ
ತಿಯನ ॥ ಲಂಪಿಂದಂವಿರಚಿಸಿದಾ । ತಂ ಪರಮಜ್ಞಾನಿ ಸೋಮಸೇನ ॥ ಉದ್ಭಟ ಕಾವ್ಯ
(ಸೋಮರಾಜ ವಿರಚಿತ)

ಪಂಪಾಂಬಿಕೆ

ವಾಣಿಯಱಿವಿನ ಬೆಳಗು ಮುಕುತಿವನಿತೆಯಮುಡಿಯ ।
ಮಾಣಿಕಂ ಸರ್ವಮಂತ್ರಾದಿ ಪಂಚಾಕ್ಷರಿಯ । ಪ್ರಾಣ ಮಂಗಳದಮನೆ
ದೇವಲೋಕದ ಜನ್ಮಭೂಮಿ ತಾವರೆಗಣ್ಣನ ॥ ರಾಣಿಯಸೆ ವೋಲೆ
ವಾದ್ಯಂ ಸರ್ವ್ವಸಿದ್ಧಿಗಳ ತಾಣಂ ವಿರೂಪಾಕ್ಷನುನ್ನತೈಶ್ವರ್ಯದ
ಕೋಣಿ ಪಂಪಾಂಬಿಕೆಮದೀಯ ಮತಿಗೀಗೆ ಪ್ರಸನ್ನತೆಯನುತ್ಸವ
ದೊಳು ॥ ೧:೭

. . . ಪಂಪಾಂಬಿಕೆಯ ತೋಱಿಸಿದನು.
ವಂದನೆಯ ಮಾಡಿಯೂ ಮೂರ್ತಿ ಮಹಿಷಾಸುರನ
ಕೊಂದಂದವೆನಲು ಮಾರ್ಕಂಡೆಯ ಪುರಾಣದೊಳ
ಗೆಂದುದೀ ರುದ್ರಶಕ್ತಿಯ ಶಿರಸ್ಸೆನಲು ಪಾರ್ವತಿಯರಭಿದಾನದಿಂದ
ನಿಂದಳೀಯೆಡೆಯಲ್ಲಿ ಕಾಶಿಯ ವಿಶಾಲಾಕ್ಷಿ
ಯೆಂದು ಕಂಚಿಯಲಿ ಕಾಮಾಕ್ಷಿಯಂದೆಂಬ ಪೆಸ
ಪೆಸರಿಂದಲಂಬಿಕೆಯೆಂದು ಪೇಳೆನಲುಸಲು ವಿರೂಪಾಕ್ಷನಂಕಾಣಿಸಿರನು
೫:೭೮ ಹರಿಶ್ಚಂದ್ರ ಕಾವ್ಯ

ಪಂಪಾಂಬಿಕೆ

ಮಿಸುಪ ಶಶಿಸೂರ್ಯಮಂಡಲ । ವಿಸರಮನೇಳಿಸುವ ನನೂನತೇಜ
ಮನಂದೆ । ಣ್ದೆಸೆಯೊಳ್ಪಸರಿಸುತುಂ ರಂ । ಜಿಸಿರುರು ಕಮನೀಯ
ಮೂರ್ತಿ ಪಂಪಾಂಬಿಕೆಯಾ III ೩೬
ವೇದಂಗಳಱಿವಿಗಳವಡ । ದಾದಿಪರಬ್ರಹ್ಮ ನೊಲ್ದು ರೂಪಂ
ತಾಳ್ದಾ ॥ ಹ್ಲಾದದಿ ನೊಪ್ಪುದೆವುದೆನಲಿಂ । ಬಾದುರು ನಿಡುಗಣ್ಣೆ
ಮೂರ್ತಿ ಪಂಪಾಂಬಿಕೆಯಾ ॥ ೩೭
ತೋಳಗುವ ಪಟ್ಟಕ್ರಾಬ್ಜಂಗಳನೊಡೆದುಱಿ ನಿಮಿರ್ದ
ಬಳ್ಳಿಮಿಂಚಿನತೆಜದಿಂ । ದಳವಟ್ಟು ವಿಜ್ರಂಭಿಪಚಿತ್ಕಳೆ

ಯೆನಗೊಪ್ಪಿದುರು ಮೂರ್ತಿ ಪಂಪಾಂಬಿಕೆಯಾ ॥ ೩೮ ॥

ನಿಜಭಕ್ತ ಜನದ ಭೀಷ್ಟ । ವ್ರಜಮಂ ಬಿಡದೊಲ್ದು ಪೊಂಗಿ

ಕೊಡುವ ಸುಪರ್ವ ॥ ವ್ರಜದಿನಿವೆಣ್ಣನೆ ನೇತ್ರಾಂ । ಬುಜ

ಕೆಡ್ಡಮದಾಯ್ತು ಮೂರ್ತಿಪಂಪಾಂಬಿಕೆಯಾ ॥ ೩೯ ॥

ಸುರಚಿರ ಭಕ್ತಿರಸಂ ಸ್ರುತಿ ।ಯುರುದುಃಖ ಮಸಜೆರು ನಿಜಸುಖ

ಮನೆರ್ದೆವನೆಯೊಳ್ ॥ ಪರುಶವಿಸುವ ಸುಜ್ಞಾನದ ತಿರುಳನರೆಸೆ

ದತ್ತು ಮೂರ್ತಿ ಪಂಪಾಂಬಿಕೆಯಾ ॥ ೪೦ ॥

ಪುದಿರಜ್ಞಾನದ ಪೆಂಪಂ । ಸದೆದೊಡಿಸಿಸಕಲ ಭಕ್ತಸಂಚಯ

ದಲಸ । ದ್ಧೃದಯಾಬ್ಜದೊಳೊಪ್ಪುವ ಚಿನ್ಮುದವೆನಲೆಸೆದತ್ತು

ಮೂರ್ತಿ ಪಂಪಾಂಬಿಕೆ ॥ ೪೧ ॥ ಉದ್ಭಟ ಕಾವ್ಯ

ಪಂಪಾಂಬಿಕೆ

ಹರಕಲ್ಪದ್ರುಲತಾಂಗಿ ನೀಲಗಳಮಾರ್ತಾಂಡಾಂಬುಜಾತಾಸ್ಯೆ ಶಂ ।

ಕರಪದ್ಮಾಕರ ಚಕ್ರವಾಕ ಕುಚೆ ಶರ್ವಾಂಚಚ್ಚರತ್ನಾಲ ಬಂ ।

ದುರಹಂಸೀ ಮೃದುಯಾನೆ ಚಂದ್ರಧರ ಪುಂದಿದರೋದ್ವೇಣಿಯೀ ।

ಶ್ವರ ಪೂರ್ಣೆಂದು ಚಕೋರ ನೇತ್ರೆ ಪೊರೆಗೆನ್ನಂ ಕೂರ್ತು ಪಂಪಾಂಬಿಕೆ ॥ ಉದ್ಭಟಕಾವ್ಯಂ

ಆಧಾರ ಗ್ರಂಥಗಳು

ಆಧಾರ ಗ್ರಂಥಗಳು

ನಿಯತಕಾಲಿಕೆಗಳು

೧. ಶಾಸನ ಅಧ್ಯಯನ ಸಂಪುಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ವಿಜಯನಗರ ಅಧ್ಯಯನ ಸಂಪುಟಗಳು ೧ ರಿಂದ ೧೩, ವಿಜಯನಗರ ವಿಚಾರ ಸಂಕೀರ್ಣದಲ್ಲಿ ಮಂಡಿಸಿದ ಪ್ರಬಂಧಗಳು, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೩. ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೪. ಕರ್ನಾಟಕ ಭಾರತಿ ಸಂಪುಟಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶಾಸನ ಸಂಪುಟಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ. ಸಂಪಾದಕರು: ದೇವರ ಕೊಂಡಾರೆಡ್ಡಿ, ಕಲವೀರ್‌ಮನ್ವಾಚಾರ್, ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ.

೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಕೊಪ್ಪಳ ಜಿಲ್ಲೆ. ಸಂಪಾದಕರು: ದೇವರ ಕೊಂಡಾರೆಡ್ಡಿ, ಕಲವೀರ್‌ಮನ್ವಾಚಾರ್, ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ.

೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಹಂಪಿ. ಸಂಪಾದಕರು: ದೇವರ ಕೊಂಡಾರೆಡ್ಡಿ, ಕಲವೀರ್‌ಮನ್ವಾಚಾರ್, ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಆಂಧ್ರ ಪ್ರದೇಶದ ಕನ್ನಡ ಶಾಸನಗಳು. ಸಂಪಾದಕರು: ಆರ್.ಶೇಷಶಾಸ್ತ್ರಿ, ಕೆ.ಆರ್.ಗಣೇಶ್.

೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ರಾಯಚೂರು ಜಿಲ್ಲೆ. ಸಂಪಾದಕರು: ದೇವರ ಕೊಂಡಾರೆಡ್ಡಿ, ಕಲವೀರ್‌ಮನ್ವಾಚಾರ್, ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ.

೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಬಾಗಲಕೋಟೆ ಜಿಲ್ಲೆ. ಸಂಪಾದಕರು: ದೇವರಕೊಂಡಾರೆಡ್ಡಿ, ಕಲವೀರ್‌ಮನ್ವಾಚಾರ್, ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ.

೭. ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು, ಸಂಪಾದಕರು: ಶಿವಾನಂದ.ವಿ., ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, ಉತ್ತರಪ್ರದೇಶ, ೧೯೯೨.

೮. ವಿಜಯನಗರದ ಹಂಪಿಯ ಶಾಸನಗಳು; ಸಂಪಾದಕರು: ಚೆನ್ನಬಸಪ್ಪ ಪಾಟೀಲ್ ಮತ್ತು ವಿನೋದ್ ಸಿ.ಪಾಟೀಲ್, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬.

೧. Andrapradesh Govt. Archaeological Series.

୧. Annual Report of Indian Epigraphy.

୨. Epigraphia Carnatica Vols.

୩. South Indian Inscriptions volume 11.

୪. South Indian Inscriptions volume 9, part one & two.

ಕನ್ನಡ ಗ್ರಂಥಋಣ

೧. ಶಿವತಾರಕ್ ಕೆ.ಬಿ.; ಕರ್ನಾಟಕದ ಪುರಾತತ್ವ ನೆಲೆಗಳು; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ; ೨೦೦೨.

೨. ಚಿದಾನಂದ ಮೂರ್ತಿ .ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಮೈಸೂರು ವಿಶ್ವವಿದ್ಯಾಲಯ, ಮೈಸೂರು; ೧೯೭೫.

೩. ಡಾ. ಚನ್ನಬಸವಯ್ಯ ಹಿರೇಮಠ; ಕುರುಗೋಡು ಸಿಂಧರು ಒಂದು ಅಧ್ಯಯನ; ಸಂಗಣ್ಣನವರ ಅಗಡಿ ಸಂಸ್ಕೃತಿ ಪ್ರತಿಷ್ಠಾನ ಕೊಪ್ಪಳ; ೧೯೯೫.

೪. ರ.ಹ.ರುದ್ರಪ್ಪ ಸಂಪಾದಕರು; ಕಂಪ್ಲಿ; ಬಂಗಿದೊಡ್ಡ ಮಂಜುನಾಥ; ಶ್ರೀ ಭುವನೇಶ್ವರಿ ಪ್ರಕಾಶನ, ಕನ್ನಡ ಹಿತರಕ್ಷಕ ಸಂಘ, ಕಂಪ್ಲಿ.

೫. ಸುರೇಶ್ ಕೆ.ಎಂ., ಡಾ. ವಾಸುದೇವ ಬಡಿಗೇರ, ಡಾ. ಸೋಮಶೇಖರ; ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ; ೧೯೯೯.

೬. ಸಂಡೂರು ಪರಿಸರದ ಕಾರ್ತಿಕೇಯ ತಪೋವನ ಚಾರಿತ್ರಿಕ ಅಧ್ಯಯನ; ವಾಸುದೇವ ಬಡಿಗೇರ; ಮಯ ಪ್ರಕಾಶನ; ಕಮಲಾಪುರ.

೭. ನೊಳಂಬ ಇತಿಹಾಸ ದರ್ಶನ; ಸಂಪಾದನೆ ನೊಳಂಬ ಇತಿಹಾಸ ಪರಿಷತ್, ಕೆ.ಆರ್.ಬಡಾವಣೆ, ತಿಪಟೂರು; ೧೯೭೬.

೮. ವೈ.ಹನುಮಂತರೆಡ್ಡಿ; ಬಲ್ಲಕುಂದೆ ೩೦೦ ನಾಡಿನ ರಾಜಧಾನಿ ಕುರುಗೋಡಿನ ಸಾಂಸ್ಕೃತಿಕ ಇತಿಹಾಸ.

೯. ಪರಮಶಿವಮೂರ್ತಿ.ಡಿ.ವಿ.; ಕನ್ನಡ ಶಾಸನ ಶಿಲ್ಪ; ಕನ್ನಡ ವಿಶ್ವವಿದ್ಯಾಲಯ; ೧೯೯೯.

೧೦. ಎಂ.ಎಂ.ಕಲ್ಬುರ್ಗಿ; ಕರ್ನಾಟಕದ ಕೈಫಿಯತ್ತುಗಳು (ಮೆಕೆಂಜಿ ಸಂಗ್ರಹ); ಕನ್ನಡ ವಿಶ್ವವಿದ್ಯಾಲಯ ಹಂಪಿ–ವಿದ್ಯಾರಣ್ಯ; ೧೯೯೪.

೧೧. ಎಚ್.ಎಸ್.ಗೋಪಾಲರಾವ್; ಕಲ್ಯಾಣಿ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ; ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು; ೧೯೯೩.

೧೨. ಡಾ. ವಸುಂದರ ಫಿಲಿಯೋಜಾ; ಅಳಿದುಳಿದ ಹಂಪೆ; ಪ್ರೇಮಸಾಯಿ ಪ್ರಕಾಶನ, ವಿಜಯನಗರ, ಬೆಂಗಳೂರು; ೧೯೮೨.

೧೩. ಡಾ. ಚನ್ನಬಸಪ್ಪ ಎಸ್.ಪಾಟೀಲ್; ಕರ್ನಾಟಕದ ಕೋಟೆಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ–ವಿದ್ಯಾರಣ್ಯ; ೧೯೯೯.

೧೪. ನಾಗಯ್ಯ ಜೆ.ಎಂ.; ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ; ಲೋಹಿಯಾ ಪ್ರಕಾಶನ, ಬಳ್ಳಾರಿ; ೨೦೦೨.

೧೫. ದೇವರಕೊಂಡಾರೆಡ್ಡಿ; ಭಾರತೀಯ ವಾಸ್ತುವಿದ್ಯೆ; ರೆಡ್ಡಿ ಪ್ರಕಾಶನ, ಬೆಂಗಳೂರು; ೧೯೯೪.
೧೬. ಕಲಬುರ್ಗಿ ಎಂ.ಎಂ.; ಶಾಸನ ವ್ಯಾಸಂಗ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ೧೯೭೫.
೧೭. ಚನ್ನಕ್ಕ ಎಲಿಗಾರ; "ಶಾಸನಗಳಲ್ಲಿ ಸ್ತ್ರೀ ಸಮಾಜ"; ಕರ್ನಾಟಕ ವಿಶ್ವವಿದ್ಯಾಲಯ; ೧೯೯೦.
೧೮. ಅ.ಸುಂದರ; ಪ್ರಧಾನ ಸಂಪಾದಕರು: ಪಿ.ಆರ್.ತಿಪ್ಪೇಸ್ವಾಮಿ, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ; ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು; ೧೯೯೪.
೧೯. ರಾಮಚಂದ್ರರಾವ್ ಎಸ್.ಕೆ.; ಮೂರ್ತಿಶಿಲ್ಪ ನೆಲೆ ಹಿನ್ನೆಲೆ; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ೧೯೭೫.
೨೦. ಶೇಷಶಾಸ್ತ್ರಿ .ಆರ್.; ಕರ್ನಾಟಕದ ವೀರಗಲ್ಲುಗಳು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೧೯೮೨.
೨೧. ಪ್ರೊ. ಲಕ್ಷ್ಮಣ ತೆಲಗಾವಿ; ಮೌರ್ಯ ಮತ್ತು ಶಾತವಾಹನರ ಯುಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೦೪.
೨೨. ಸಂ: ರಮೇಶ್ ನಾಯಕ; ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ; ಕನ್ನಡ ವಿಶ್ವವಿದ್ಯಾಲಯ ಹಂಪಿ; ೨೦೦೭
೨೩. ಸಂಪಾದಕರು: ತಂಬಂಡ ವಿಜಯ್ ಪೂಣಚ್ಚ; ಸಹ ಸಂಪಾದಕರು: ಸಿ.ಆರ್.ಗೋವಿಂದರಾಜ್, ಮೋಹನ್ ಕೃಷ್ಣ ರೈ, ಎನ್.ಚಿನ್ನಸ್ವಾಮಿ ಸೋಸಲೆ; ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಸಂಪುಟ ೪ ಚರಿತ್ರೆ; ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೪. ಸಂ: ಡಾ॥ ಬಿ.ಎ.ವಿವೇಕ ರೈ; ಪ್ರವಾಸಿ ಕಂಡ ವಿಜಯನಗರ; ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೦೫.
೨೫. ಸುಂದರ.ಅ.; ಕಿಷ್ಕಿಂದೆ ಹನುಮಂತನ ತವರು; ಹೊಸಪೇಟೆ; ೧೯೮೮.
೨೬. ಗಂಗಾವತಿ ತಾಲೂಕಿನ ಪ್ರಾಚ್ಯ ವಸ್ತುಗಳು; ಕರ್ನಾಟಕ ಭಾರತಿ ಸಂಪುಟ ೬, ಸಂಚಿಕೆ ೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ೧೯೭೩.
೨೭. ಮಹಾದೇವ ಸಿ.; ಹೊಸಪೇಟೆ ತಾಲೂಕ ದರ್ಶನ; ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೮. ವರದರಾಜ್‌ರಾವ್ .ಜಿ.; ಕುಮಾರರಾಮನ ಸಾಂಗತ್ಯಗಳು; ಮೈಸೂರು ವಿಶ್ವವಿದ್ಯಾಲಯ, ಮೈಸೂರು; ೧೯೬೬
೨೯. ಕೆ.ಬಿ.ಶಿವತಾರಕ್; ಕರ್ನಾಟಕದ ಪುರಾತತ್ವ ನೆಲೆಗಳು; ಕನ್ನಡ ವಿಶ್ವವಿದ್ಯಾಲಯ ಹಂಪಿ; ೨೦೦೨.
೩೦. ಡಾ. ಚಿದಾನಂದ ಮೂರ್ತಿ.ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಮೈಸೂರು ವಿಶ್ವವಿದ್ಯಾಲಯ, ಮೈಸೂರು; ೧೯೭೫.

೩೧. ಕರ್ನಾಟಕ ಶಾಸನಗಳಲ್ಲಿ ವರ್ತಕರು; ಹಿರೇಮಠ ಬಿ.ಆರ್.; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ೧೯೮೬.

೩೨. ಬಾಲಸುಬ್ರಮಣ್ಯಂ; ಕುರುಗೋಡು; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ದೇವರಕೊಂಡಾರೆಡ್ಡಿ; ಗಂಗ ಶಿಲ್ಪಕಲೆ; ಶಿಲ್ಪಕಲಾ ಅಕಾಡೆಮಿ, ಬೆಂಗಳೂರು; ೨೦೦೮.

೩೪. ದೇವರಕೊಂಡಾರೆಡ್ಡಿ; ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೧೯೯೪.

೩೫. ಟಿ.ಪರಮೇಶ್ವರಪ್ಪ; ಹಂಪಿ ಪರಂಪರೆ; ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗುಂದಿ-ಹೊಸಪೇಟೆ.

೩೬. ಶ್ರೀ ಗುರು ಓಂ ಸಿದ್ದಲಿಂಗೇಶ್ವರ ಸ್ವಾಮಿಗಳು; ಶ್ರೀ ಪಂಪ ಮಹಾತ್ಮೆ; ಜಯಶ್ರೀ ಬ್ಲಾಕ್ ಮೇಕರ್ಸ್, ಗದಗ್; ೧೯೮೩.

೩೭. ಗುರುರಾಜ್‌ರಾವ್.ಬಿ.ಕೆ.; ಕರ್ನಾಟಕದ ಶಿಲಾಯುಗ ಸಂಸ್ಕೃತಿಗಳು; ಮೈಸೂರು ವಿಶ್ವವಿದ್ಯಾಲಯ ಮೈಸೂರು; ೧೯೭೦.

೩೮. ಗೋಪಾಲ್.ಬಿ.ಆರ್.; ಕರ್ನಾಟಕದಲ್ಲಿ ನವಶಿಲಾಯುಗ; ಧಾರವಾಡ; ೧೯೭೧.

೩೯. ಅಪರ್ಣ ಕೂ.ಸ.; ದೇವಾಲಯ ವಾಸ್ತುಶಿಲ್ಪ; ಕನ್ನಡ ವಿಶ್ವವಿದ್ಯಾಲಯ, ಹಂಪಿ; ೧೯೯೯.

೪೦. ಕೊಟ್ರೇಶ್; ಬಳ್ಳಾರಿ ಜಿಲ್ಲೆಯ ಕೋಟೆ ಕೊತ್ತಲುಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಎಚ್.ಜಯಮ್ಮ; ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಗಾಗಿ ಸಲ್ಲಿಸಿದ ಮಹಾಪ್ರಬಂಧ (ಅಪ್ರಕಟಿತ).

೪೨. ವಿ.ಎಸ್.ಬಡಗೇರ; ಬಳ್ಳಾರಿ ಜಿಲ್ಲೆಯ ಸಂಸ್ಕೃತಿ ಮತ್ತು ಇತಿಹಾಸ; ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ: ೨೦೦೨ (ಅಪ್ರಕಟಿತ).

ಇಂಗ್ಲೀಷ್ ಗ್ರಂಥಋಣ

೧. Archaeology of Hampi Vijayanagara; C.T.M.Kotraiah; Bharatiya Kala Prakashana, New Delhi; 2008.

೨. Early Temples of Kurugod; M.S.Krishnamurthy; Article Q.J.M.S. Vol 68.

೩. Footprints of Artisans in History; S.Settar; 64 session of Indian History Congress, Mysore; 2003.

೪. Inscriptions of Asoka; D.S.Sircar; Govt. of India; 1975.

೫. Pre and Protohistory of India and Pakistan; H.D.Sankalia; Poona 1974.

೬. Prehistory of India; H.D.Sankalia; Delhi; 1977.

೭. Progress of Archaeology in Karnataka 1956-1972; M.S.Nagaraj Rao; Directorate of Archaeology and Museums, Mysore; 1978.

೮. Temples of Raichur and Bellary District; Channabasapp S.Patil; Directorate of Archaeology and museums, Mysore; 1992.

೯. The Nolamba's A political and cultural study C 750 to 1050; M.S.Krishnamurthy; Mysore University; 1980.


ರೇಖಾ ನಕ್ಷೆಗಳು ಮತ್ತು ಛಾಯಾ ಚಿತ್ರಗಳು



ಬಲ್ಲಕುಂದೆ ೩೦೦ ನಾಡಿನ ನಕ್ಷೆ


[illegible] ದೇವಾಲಯದ ತಳನಕ್ಷೆ. ಕುರುಗೋಡು

ಕೃಪೆ: ಡಾ. ಸಿ. ಎಸ್. ಪಾಟೀಲ




ಕಂಪಿಲರಾಯ ದೇವಾಲಯದ ತಳನಕ್ಷೆ, ಹಂಪಿ

ಕೃಪೆ: ಡಾ. ಸಿ. ಎಸ್. ಪಾಟೀಲ




ಈಶ್ವರ ದೇವಾಲಯದ ತಳವಿನ್ಯಾಸ, ತಾಳಗುಂದ

ಕೃಪೆ; ಡಾ: ಸಿ. ಎಸ್. ಪಾಟೀಲ





ಗಂಗಾಧರೇಶ್ವರ ದೇವಾಲಯ, ಕೋಳೂರು



ಗಂಗಾಧರೇಶ್ವರ ದೇವಾಲಯ, ಆದಿಷ್ಠಾನ, ಕೋಳೂರು



ಸೂರ್ಯ ನಾರಾಯಣ ದೇವಾಲಯ, ಕೋಳೂರು



ಸೂರ್ಯ ನಾರಾಯಣ ದೇವಾಲಯದ ಸೂರ್ಯವಿಗ್ರಹ, ಕೋಳೂರು



ಈಶ್ವರ ದೇವಾಲಯುದ ಮುಖಮಂಟಪದಲ್ಲಿರುವ ಸ್ತಂಭಗಳು
ಕುರುಗೋಡು



ಕುಮಾರಸ್ವಾಮಿ ದೇವಾಲಯ, ಸಂಡೂರು.




ಕುಮಾರಸ್ವಾಮಿ ದೇವಾಲಯ, ಸಂಡೂರು.



ಜೈನ ಬಸದಿ, ಕುರುಗೋಡು



ಕುಮಾರಸ್ವಾಮಿ ದೇವಾಲಯ, ಸಂಡೂರು



ಕುಮಾರಸ್ವಾಮಿ ದೇವಾಲಯ, ಸಂಡೂರು



ಕುಮಾರಸ್ವಾಮಿ ದೇವಾಲಯ, ಸಂಡೂರು



ಕುಮಾರಸ್ವಾಮಿ ದೇವಾಲಯ,ಕುಡುತಿನಿ



ಕುಮಾರಸ್ವಾಮಿ ದೇವಾಲಯದ ಒಳಗಿರುವ ಶಾಸನ, ಕುಡುತಿನಿ




ಕುಮಾರಸ್ವಾಮಿ ದೇವಾಲಯದ ಒಳಗಿರುವ ಸ್ತಂಭಗಳು, ಕುಡುತಿನಿ



ಕುಮಾರಸ್ವಾಮಿ ದೇವಾಲಯದ ಮುಖಮಂಟಪದೊಳಗಿರುವ ಸ್ತಂಭಗಳು, ಕುಡುತಿನಿ



ಸಂಗಮೇಶ್ವರ ದೇವಾಲಯದ ಹೊರನೋಟ, ಕುರುಗೋಡು.



ವಿರುಪಾಕ್ಷ ದೇವಾಲಯದ ಹಿಂಬದಿಯ ಪ್ರಾಚೀನ ಚಿತ್ರಗಳು,ಹಂಪೆ



ಸೂರ್ಯ ನಾರಾಯಣ ದೇವಾಲಯದಲ್ಲಿರುವ ಶಾಸನ



ನೀಲಕಂಠೇಶ್ವರ ದೇವಾಲಯದ ಹಿಂಭಾಗ, ಕೊಳಗಲ್ಲು



ನೀಲಕಂಠೇಶ್ವರ ದೇವಾಲಯದ ಗರ್ಭಗುಡಿ, ಕೊಳಗಲ್ಲು



ರಾಮಲಿಂಗೇಶ್ವರ ದೇವಸ್ಥಾನ, ಕೊಳೂರು



ರಾಮಲಿಂಗೇಶ್ವರ ದೇವಾಲಯದ ಶಿಖರ - ಹಿಂಭಾಗ



ರಾಮಲಿಂಗೇಶ್ವರ ದೇವಾಲಯದ ಅನ್ನಪೂರ್ಣೇಶ್ವರಿ ವಿಗ್ರಹ



ರಾಮಲಿಂಗೇಶ್ವರ ದೇವಾಲಯದ ಸಪ್ತಮಾತೃಕೆಯರು, ಕೊಳೂರು.



ಮಲ್ಲಯ್ಯಗುಡ್ಡದ ಹೊರನೋಟ, ತೆಕ್ಕಲಕೋಟೆ.



ಈಶ್ವರ ದೇವಾಲಯ, ಮಲ್ಲಯ್ಯನಗುಡ್ಡ, ತೆಕ್ಕಲಕೋಟೆ.



ಮಲ್ಲಯ್ಯನಗುಡ್ಡದ ಒಳಗಿರುವ ಮಲ್ಲಯ್ಯನ ವಿಗ್ರಹ



ಸುಬ್ರಮಣ್ಯ, ಮಲ್ಲಯ್ಯಗುಡ್ಡ, ತೆಕ್ಕಲಕೋಟೆ.




ಶಂಭುಲಿಂಗೇಶ್ವರ ದೇವಾಲಯ, ಸಿರಗುಪ್ಪ



ಮಲ್ಲಯ್ಯನ ಗುಡ್ಡದ ಒಳಗೆ ಇರುವ ಶಿವನ ದೇವಾಲಯ



ಅಶೋಕನ ಲಘು ಶಿಲಾಶಾಸನ, ನಿಟ್ಟೂರು



ಅಶೋಕನ ಲಘು ಶಿಲಾಶಾಸನ, ನಿಟ್ಟೂರು



ಬಲ್ಕುಂದೆ ಬೆಟ್ಟ, ಬಲ್ಕುಂದೆ



ಜಿನ ವಿಗ್ರಹ, ಬಲ್ಲಕುಂದೆ



ಅಮೃತ ಲಿಂಗೇಶ್ವರ ದೇವಾಲಯ, ವಿಪ್ರ ನಾರಾಯಣ




ದ್ಯಾಮವ್ವನ ದೇವಾಲಯ, ವಿಪ್ರ ನಾರಾಯಣ



ದ್ಯಾಮವ್ವನ ದೇವಾಲಯದ ಸ್ತಂಭ, ವಿಪ್ರ ನಾರಾಯಣ



ದುರ್ಗಾ ದೇವಾಲಯ, ಹಂಪಿ



ಜಿನ ವಿಗ್ರಹ, ಬಲ್ಲಕುಂದೆ



ಬನ್ನಿಮಹಾಂಕಾಳೆಮ್ಮ ದೇವಾಲಯದ ಪಕ್ಕದ ಪ್ರಾಚೀನ ಸ್ಮಾರಕಗಳು



ಸೋಮೇಶ್ವರ ದೇವಾಲಯ ಶಿಖರ, ಕಂಪ್ಲಿ



ಕಂಪ್ಲಿ-ಕೋಟೆ



ಸೋಮೇಶ್ವರ ದೇವಾಲಯದ ಹೊರನೋಟ, ಕಂಪ್ಲಿ.




ದೀಪಸ್ತಂಭ, ಕಲ್ಕಂಬ





ಭೈರವ ಸೋಮೇಶ್ವರ

ಕಂಪ್ಲಿಯ ಸೋಮೇಶ್ವರ ದೇವಸ್ಥಾನ



ಕಲ್ಲೇಶ್ವರ ದೇವಾಲಯದ ಅಧಿಷ್ಠಾನ, ಕಲ್ಕಂಬ



ಕಲ್ಲೇಶ್ವರ ದೇವಾಲಯ, ಕಲ್ಕಂಬ